ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 23 ಸಂಚಿಕೆ 1–2
ಜನವರಿ – ಜೂನ್ 1994

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University' Bangalore. Vol. 23 Nos. 1-2 January—June 1994

ವಾರ್ಷಿಕ ಚಂದಾ :	ರೂ. 15–00	
ವಿದ್ಯಾರ್ಥಿಗಳಿಗೆ	ರೂ. 10–00	(ದೃಢೀಕರಣ ಪತ್ರವನ್ನು ಕಳುಹಿಸಬೇಕು)
ಆಜೀವ ಸದಸ್ಯತ್ವ	ರೂ. 150–00	

ಪ್ರಕಾಶಕರು :

ಎಸ್. ಕೆಂಡಗಣ್ಣಸ್ವಾಮಿ
ನಿರ್ದೇಶಕ
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು

ಮುದ್ರಣ :

ಎಸ್. ಎಂ. ಹೊನ್ನಪ್ಪ
ಕಾರ್ಯನಿರ್ವಾಹಕ ನಿರ್ದೇಶಕ
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ

ಪರಿವಿಡಿ

ಜೈನ ಪರಂಪರೆಯಲ್ಲಿ ರಾಮಾಯಣದ ಆವಿಷ್ಕಾರಗಳು

ಡಾ. ಸರಸ್ವತಿ ವಿಜಯಕುಮಾರ್

ಭಾರತೀಯ ಪರಂಪರೆಯ ಮಹಾಕಾವ್ಯಗಳಾಗಿ ವಿಜೃಂಭಿಸುತ್ತಿರುವ ರಾಮಾಯಣ–ಮಹಾಭಾರತಗಳು ವಿಶ್ವಸಾಹಿತ್ಯದಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿಕೊಂಡಿವೆ. ಜನಸಮೂಹದಲ್ಲಿ ಮೂಡಿನಿಂತ ಈ ಕಥೆಯ ಮೂಲಗಳು ತಮ್ಮ ನೆಲೆಗಟ್ಟಿನಲ್ಲಿಯೇ ಕ್ರಮೇಣ ಕಾಲದಿಂದ ಕಾಲಕ್ಕೆ ಬೆಳೆಯುತ್ತಾ ಅವರವರ ಸಂಸ್ಕೃತಿ, ನಂಬಿಕೆ, ಆಶೋತ್ತರಗಳಿಗೆ ತಕ್ಕಂತೆ ಗರಿಗೆದರುತ್ತಾ, ಬೃಹದಾಕಾರವಾಗಿ ಬೆಳೆಯುತ್ತಾ ವಿಭಿನ್ನ ಪರಂಪರೆಯ ಆವಿಷ್ಕಾರದ ಗತಿಸಿದ್ಧಿಯನ್ನು ಪಡೆದಿರುವುದನ್ನು ಕಾಣುತ್ತೇವೆ. ಹೀಗೆ ಮೂಡಿ ಬಂದವುಗಳಲ್ಲಿ ಪ್ರಮುಖವಾಗಿ ಜೈನ, ಬೌದ್ಧ ಮತ್ತು ಹಿಂದೂ ಪರಂಪರೆಗಳು ನಿಲ್ಲುತ್ತವೆ. 'ವೈದಿಕ ಪರಂಪರೆಯೇ ಜೈನ ರಾಮಾಯಣಕ್ಕೆ ಮೂಲ. ಆ ಕಥೆಯನ್ನು ಜೈನರು ತಮ್ಮ ಮತಧರ್ಮಕ್ಕೆ ಅನುಸಾರವಾಗಿ ಅಳವಡಿಸಿಕೊಂಡಿರುವರೆಂಬ ಅಭಿಪ್ರಾಯವು ಹಲವು ವಿದ್ವಾಂಸರಲ್ಲಿ ಕಂಡುಬರುತ್ತದೆ'. ಆದರೆ ಮಹಾಕಾವ್ಯಧಾರಾವಾಹಿನಿಗೆ ಮೂಲಸ್ತ್ರೋತ್ರವಾಗಿ ಜಾನಪದೀಯವಾದ ನೆಲೆ ಪರಿಗಣಿತವಾಗುತ್ತದೆ ಎಂಬುದನ್ನು ನಾವು ಮರೆಯುವಂತಿಲ್ಲ. ಅದು ವಿವಿಧ ಮತಸಂಸ್ಕಾರದ ಜನಾಂಗದವರಿಂದ ಸಮಾನಾಂತರ ರೇಖೆಗಳಾಗಿ, ಅಲ್ಲಲ್ಲಿ ಮಿಶ್ರನಡೆಯನ್ನು ಪರಸ್ಪರ ಪ್ರಭಾವದಿಂದ ಪಡೆಯುತ್ತಾ ಸಾಗಿಬಂದವುಗಳಾಗಿವೆ ಎಂಬ ಅಭಿಪ್ರಾಯವು ಹೆಚ್ಚು ಸಮಂಜಸವಾಗಿ ತೋರುತ್ತದೆ.[2]

ಪ್ರಾಚೀನ ಬೌದ್ಧ ಸಾಹಿತ್ಯದಲ್ಲಿ ರಾಮ ಕಥೆಗೆ ಸಂಬಂಧಿಸಿದ ಕಥೆ ಜಾತಕಗಳಲ್ಲಿ ಕಂಡು ಬರುತ್ತದೆ. ಅವುಗಳಲ್ಲಿ 'ಜಾತಕಟ್ಠವಣ್ಣನಾ'ದಲ್ಲಿ ಬರುವ 'ದಶರಥ ಜಾತಕ', ಸುತ್ತಪಿಟಕದಲ್ಲಿ ಬರುವ 'ಖುದ್ಧಕನಿಕಾಯ', 'ಅನಾಮಕಂ ಜಾತಕಂ'ನಲ್ಲಿ ಬರುವ 'ದಶರಥಕಥಾನಂ' ಎಂಬಲ್ಲಿ ರಾಮಕಥೆಯ ವಿವಿಧ ರೂಪಗಳು ಬರುತ್ತವೆ.[3]

ಹಿಂದೂ ಸಾಹಿತ್ಯದಲ್ಲಿ ವಾಲ್ಮೀಕಿರಾಮಾಯಣ, ವ್ಯಾಸರಾಮೋಪಖ್ಯಾನದ ಭಾಗಗಳೇ ಅಲ್ಲದೆ ಅದ್ಭುತರಾಮಾಯಣ, ಅಧ್ಯಾತ್ಮ ರಾಮಾಯಣ, ವಾಸಿಷ್ಠ ರಾಮಾಯಣ, ಶೇಷ ರಾಮಾಯಣ ಮೊದಲಾದವು ಕಂಡು ಬರುತ್ತವೆ.

ಜೈನರಲ್ಲಿಯೂ ಇದು ಮುಖ್ಯವಾಗಿ ಎರಡು ಪರಂಪರೆಗಳಲ್ಲಿ ಕಂಡುಬರುತ್ತದೆ. ಕ್ರಿ.ಶ. 1ನೇಯ ಶತಮಾನದಲ್ಲಿದ್ದ ಯಾಪನೀಯ ಸಂಘದವನಿರಬಹುದಾದ ವಿಮಲ ಸೂರಿಯ ಪರಂಪರೆ ಹಾಗೂ ಕ್ರಿ.ಶ. 9–10ನೆಯ ಶತಮಾನದಲ್ಲಿದ್ದ ಗುಣಭದ್ರರ

ಪರಂಪರೆ; ಈ ಎರಡೂ ಪರಂಪರೆಗಳಿಗೆ ವಿಭಿನ್ನವಾಗಿ ನಿಲ್ಲುವ ಸಂಘದಾಸನ ವಸುದೇವ ಹಿಂಡಿಯನ್ನು ಮತ್ತು ಹರಿಷೇಣನ ಬೃಹತ್‌ಕಥಾಕೋಶವನ್ನು ಪ್ರತ್ಯೇಕ ಪರಂಪರೆಯು ವೆಂದು ಹೇಳಬಹುದಾಗಿದೆ. ಏಕೆಂದರೆ ವಾಲ್ಮೀಕಿರಾಮಾಯಣ–ವ್ಯಾಸರಾಮೋಪ ಖ್ಯಾನಗಳಲ್ಲಿ ಕಂಡುಬರುವ ಬಹುತೇಕವಾದ ಅಂಶಗಳು ಇಲ್ಲಿ ಸಮಾವೇಶಗೊಂಡಿವೆ.[4]

ವಿಮಲಸೂರಿಯ 'ಪಉಮಚರಿಯ' (ಪಾಕೃತ) ಪರಂಪರೆಯನ್ನನುಸರಿಸಿ ಪ್ರಾಕೃತದಲ್ಲಿ ಶೀಲಾಂಕನ 'ಚಉಪ್ಪನ್ನ ಮಹಾಪುರಿಸ ಚರಿಯ' (ಕ್ರಿ.ಶ. 868), ಹರಿ ಭದ್ರನ 'ಧೂರ್ತಾಖ್ಯಾನ' ಭದ್ರೇಶ್ವರನ (ಕ್ರಿ.ಶ. 11ನೇ ಶತಮಾನ) 'ಕಹಾವಲಿ' ಮೊದಲಾದವು ಮೂಡಿಬಂದಿವೆ. ಸಂಸ್ಕೃತದಲ್ಲಿ ರವಿಷೇಣನ (ಕ್ರಿ.ಶ. 678) 'ಪದ್ಮ ಪುರಾಣ', ಅಮಿಗತಿಯ (ಕ್ರಿ. ಶ. 1014) 'ಧರ್ಮ ಪರೀಕ್ಷಾ' ಹೇಮಚಂದ್ರನ (ಕ್ರಿಶ. 1160) 'ಯೋಗಶಾಸ್ತ್ರ ಸ್ವೋಪಜ್ಞವೃತ್ತಿ' ಮತ್ತು ತ್ರಿಶಷ್ಠಿಶಲಾಕಾ ಪುರುಷ ಚರಿತ್ರ', ಹಸ್ತಿಮಲ್ಲನ (ಕ್ರಿ. ಶ. 13ನೆಯ ಶತಮಾನ) 'ಮೈಥಿಲೀಕಲ್ಯಾಣ' ಮತ್ತು 'ಅಂಜನಾಪವನಂಜಯ ನಾಟಕ'ಗಳು ಧನೇಶ್ವರನ (ಕ್ರಿ. ಶ. 14ನೇಯ ಶತಮಾನ) 'ಶತ್ರುಂಜಯ ಮಹಾತ್ಮಾ' ಮೊದಲಾದವು ಕಂಡುಬರುತ್ತವೆ. ಅಪಭ್ರಂಶದಲ್ಲಿ ಸ್ವಯಂ ಭುವಿನ (ಕ್ರಿ.ಶ. 8ನೇಯ ಶತಮಾನ) 'ಪಉಮಚರಿಉ' ಪ್ರಮುಖವಾಗಿ ಕಂಡುಬರು ತ್ತದೆ. ಕನ್ನಡದಲ್ಲಿ ನಾಗಚಂದ್ರನ (ಕ್ರಿ.ಶ. 1043–ಕ್ರಿ.ಶ. 1100)[5] 'ರಾಮಚರಿತ ಪುರಾಣ' (ಪಂಪರಾಮಾಯಣ), ಕುಮುದೇಂದುವಿನ (ಕ್ರಿ. ಶ. 1275) 'ಕುಮುದೇಂದು ರಾಮಾಯಣ', ನಾಗರಾಜನ (ಕ್ರಿ.ಶ. 1331) ಪುಣ್ಯಾಸ್ರ ವಾಂತರ್ಗತವಾಗಿ ಬರುವ ಕೆಲವು ಕಥೆಗಳು ಈ ಪರಂಪರೆಗೆ ಸೇರಿದವುಗಳಾಗಿವೆ.

ಸಂಘದಾಸನ (ಕ್ರಿ. ಶ. 609ರ ಒಳಗೆ) ವಸುದೇವ ಹಿಂಡಿಯ (ಪ್ರಾಕೃತ) ವಾಲ್ಮೀರಾ,–ಕ್ಕೆ ಹೆಚ್ಚು ಒಲಿದಿದೆ. ವಿಮಲಸೂರಿಯ ಪ್ರಭಾವವು ಅಲ್ಲಲ್ಲಿ ಕಂಡು ಬರುತ್ತದೆ. ಅಲ್ಲದೆ ತನ್ನದೇ ಆದ ಕೆಲವು ಹೊಸ ಅಂಶಗಳೂ ಸಹ ಕಥೆಯಲ್ಲಿ ಸೇರ್ಪಡೆ ಯಾಗಿದ್ದು, ಇದು ಪ್ರತ್ಯೇಕವಾಗಿ ನಿಲ್ಲುತ್ತದೆ. ಹರಿಷೇಣನೂ ಸಹ 'ಬೃಹತ್ಕಥಾ ಕೋಶ' (ಸಂಸ್ಕೃತ)ದಲ್ಲಿ ವಾಲ್ಮೀರಾಕ್ಕೆ ಹೆಚ್ಚು ಒಲಿದಿದ್ದಾನೆ. ವಿಮಲಸೂರಿಯ ಪರಂಪರೆಗೂ ಋಣಿಯಾಗಿದ್ದಾನೆ. ಚಂದ್ರಸಾಗರವರ್ಣಿಯ ಶ್ರೀ ರಾಮಾಯಣ– ಜಿನರಾಮಾಯಣವು ಈ ಪರಂಪರೆಗಳ ಜೊತೆಗೆ ಇತರ ಪರಂಪರೆಯನ್ನೂ ಅನುಸರಿಸಿರುವುದು ಕಂಡುಬರುತ್ತದೆ.

ಗುಣಭದ್ರರ (ಸಂಸ್ಕೃತ, ಕ್ರಿ.ಶ. 10ನೇ ಶ) ಉತ್ತರ ಪುರಾಣದಲ್ಲಿ ಬರುವ ರಾಮಕಥೆಯನ್ನನುಸರಿಸಿ ಅಪಭ್ರಂಶ ಭಾಷೆಯಲ್ಲಿ ಪುಷ್ಪದಂತನ (ಕ್ರಿ.ಶ. 965) ಮಹಾಪುರಾಣಂತರ್ಗತವಾಗಿ ಬರುವ ರಾಮಕಥೆ, ಸಂಸ್ಕೃತದಲ್ಲಿ ಕೃಷ್ಣನ (ಕ್ರಿ. ಶ. 16 ಶ) 'ಪುಣ್ಯ ಚಂದ್ರೋದಯ ಪುರಾಣ' ಮೊದಲಾದವು ಕಂಡು ಬರುತ್ತದೆ.

ಕನ್ನಡದಲ್ಲಿ ಚಾಮುಂಡರಾಯನ (ಕ್ರಿ. ಶ. 978) ಮಹಾಪುರಾಣಾಂತರ್ಗತವಾಗಿ ಬರುವ ರಾಮಕಥೆ, ದೇವಪ್ಪ ಕವಿಯ (ಕ್ರಿ.ಶ. 16 ಶ) 'ರಾಮವಿಜಯ ಕಾವ್ಯ' ಇವುಗಳು ಈ ಪರಂಪರೆಗೆ ಸೇರುತ್ತವೆ.

ದೇವಚಂದ್ರನ (ಕ್ರಿ.ಶ. 1770–1841) ರಾಮಕಥಾವತಾರವು' ವಿಮಲ ಸೂರಿಯ ಪರಂಪರೆಯಲ್ಲಿ ಬಂದ ನಾಗರಾಜನ ರಾಚಪು.ದ ಪರಂಪರೆಯನ್ನು ಮತ್ತು ಗುಣಭದ್ರನ ಉತ್ತ ಪು.ದ ಪರಂಪರೆಯನ್ನು ಸೇರಿಸಿ ಹೆಣೆಯುವ ಪ್ರಯತ್ನವನ್ನು ಮಾಡಿದೆ.

ಈ ಮೇಲಿನ ಕೃತಿಗಳೇ ಅಲ್ಲದೆ ಇನ್ನೂ ಹಲವು ಕೃತಿಗಳು ಪ್ರಾಕೃತ, ಸಂಸ್ಕೃತ, ಕನ್ನಡ ಭಾಷೆಗಳಲ್ಲಿಯೂ ಹಿಂದಿ ಮೊದಲಾದ ಭಾಷೆಗಳಲ್ಲಿಯೂ ಕಂಡು ಬರುತ್ತವೆ. ಪದ್ಮನಾಭ (1750)[6] ಮತ್ತು ಚಂದ್ರಶೇಖರ ಕವಿಕೃತ 'ರಾಮಚಂದ್ರ ಚರಿತ್ರ' ಶಿಶುಮಾಯಣನ (ಕ್ರಿ.ಶ. 1232)[7] 'ಅಂಜನಾ ಚರಿತ್ರೆ' ಇವು ಕನ್ನಡದಲ್ಲಿ ದೊರೆಯುವ ಇನ್ನೂ ಕೆಲವು ಜೈನರಾಮಾಯಣಗಳಾಗಿವೆ. ಬಂಧುವರ್ಮನ ಜೀವ ಸಂಭೋದನೆಯಲ್ಲಿ 'ರಾವಣನ ಕಥೆ' ಕಂಡು ಬರುತ್ತದೆ.

ಜೈನ ಪರಂಪರೆಯಲ್ಲಿ ರಾಮಾಯಣದ ಆವಿಷ್ಕಾರದ ಸ್ಪಷ್ಟ ಹೆಜ್ಜೆ ನಮಗೆ ವಿಮಲಸೂರಿಯ 'ಪಉಮಚರಿಯ'ದಲ್ಲಿ ಕಂಡು ಬರುತ್ತದೆ. ವೈದಿಕ ಪರಂಪರೆಯ ರಾಮಾಯಣದ (ವಾಲ್ಮೀಕಿ ರಾಮಾಯಣ-ವ್ಯಾಸ ರಾಮೋಪಖ್ಯಾನ) ಕೆಲವು ನಂಬಲಸಾಧ್ಯವೆಂದೆನಿಸುವ ವಿಷಯಗಳನ್ನು ಗುರುತಿಸಿ, ವಿಮರ್ಶಿಸುವ, ಅದಕ್ಕೆ ಪ್ರತಿಯಾಗಿ ವಾಸ್ತವಿಕತೆಯತ್ತ ಹೊರಳುವ ವೈಚಾರಿಕತೆಯ ದೃಷ್ಟಿಕೋನ ಇಲ್ಲಿ ಕಂಡು ಬರುತ್ತದೆ.

ಶ್ರೇಣಿಕನು ಗೌತಮಗಣಧರನನ್ನು, ರಾಮಾಯಣದ ಕಥೆಯಲ್ಲಿ ಮೂಡಿಬರುವ ಕೆಲವು ವಿಷಯಗಳನ್ನು ಕುರಿತು ಪ್ರಶ್ನೆ ಮಾಡುತ್ತಾನೆ. 'ರಾಕ್ಷಸರು ಅತ್ಯಂತ ಬಲಶಾಲಿಗಳಾಗಿದ್ದರೂ ವಾನರರು ಅವರನ್ನು ಹೇಗೆ ಜಯಿಸಿದರು ? ರಾವಣನೇ ಮೊದಲಾದವರು ಜೈನರಾಗಿದ್ದರೂ ಮಹಾಕುಲದಲ್ಲಿ ಹುಟ್ಟಿದ್ದರೂ ಮಜ್ಜೆ-ಮಾಂಸ ಗಳನ್ನೇಕೆ ತಿಂದರು ? ರಕ್ತವನ್ನೇಕೆ ಕುಡಿಯುತ್ತಿದ್ದರು ? ಕುಂಭಕರ್ಣನು ಒಟ್ಟಿಗೆ ಆರು ತಿಂಗಳು ಯಾವ ಭಯವೂ ಇಲ್ಲದೆ ಹೇಗೆ ನಿದ್ರಿಸುತ್ತಿದ್ದ ? ಹಾಗೆ ನಿದ್ದೆ ಮಾಡುತ್ತಿದ್ದಾಗ ಕಾದೆಣ್ಣೆಯಿಂದ ಕಿವಿಗಳನ್ನು ತುಂಬಿದರೂ ಬೆಟ್ಟದಂತಿದ್ದ ಆನೆಗಳು ಬಂದು ಅವನನ್ನು ತುಳಿದರೂ ಶಂಖಭೇರಿ ಮೊದಲಾದ ಅನೇಕ ವಾದ್ಯಗಳು ಅವರ ಹತ್ತಿರ ಮೊಳಗುತ್ತಿದ್ದರೂ ಅವನಿಗೆ ಎಚ್ಚರವಾಗಲಿಲ್ಲವೇಕೆ ? ಆರು ತಿಂಗಳಿಗೊಂದು ಸಲ ನಿದ್ದೆ ತಿಳಿದಕೂಡಲೇ ಹಸಿವು ಇಂಗಿಸುವುದಕ್ಕಾಗಿ ಆನೆಗಳನ್ನೂ ಎಮ್ಮೆಗಳನ್ನೂ ಹೇಗೆ ನುಂಗಿ ಬಿಡುತ್ತಿದ್ದನು ? ರಾವಣನು ಇಂದ್ರನನ್ನು ಗೆದ್ದು ಅವನಿಗೆ ಬೇಡಿ ಹಾಕಿ

ಲಂಕಾನಗರಿಗೆ ಎಳೆದುಕೊಂಡು ಬಂದನೆಂದು ಹೇಳುತ್ತಾರೆ. ಇಂದ್ರನನ್ನು ಗೆಲ್ಲಲು ಯಾರು ಸಮರ್ಥರು ?[8] ಅವನ ಐರಾವತವನ್ನು ವಜ್ರಾಯುಧವನ್ನು ತಡೆಯಲು ಯಾರಿಗೆ ಸಾಧ್ಯ ? 'ಏನೋ ಎಲ್ಲಾ ವಿಪರೀತವಾಗಿ ಕಾಣುತ್ತಿದೆಯಲ್ಲಾ ? ಇದೆಲ್ಲಾ ಶುದ್ಧ ಸುಳ್ಳು, ಉಪಪತ್ತಿ ವಿರುದ್ಧವಾದುದು' ವಿಮಲಸೂರಿ ಅಸಮಾಧಾನ ವ್ಯಕ್ತಪಡಿಸಿರುವ ರಾಮಾಯಣದ ಈ ಕೆಲವು ವಿಚಾರಗಳು ಪ್ರಚಲಿತವಿದ್ದ ವಾಲ್ಮೀಕಿ ರಾಮಾಯಣ–ವ್ಯಾಸ ರಾಮೋಪಾಖ್ಯಾನದ ಕತೆಯದೆಂದು ತಿಳಿಯಬಹುದಾಗಿದೆ.

ಈ ಮೇಲಿನ ಮಾತುಗಳಿಗೆ ಅನುಸಾರವಾಗಿ ಕೆಲವು ವಿದ್ವಾಂಸರು, ವಿಮಲಸೂರಿಗೆ ವಾಲ್ಮೀಕಿ ರಾಮಾಯಣದ ಪರಿಚಯವಿತ್ತೆಂದೂ, ಅವನು ಅದರಲ್ಲಿರುವುದನ್ನೆಲ್ಲಾ ನಂಬಿಕೊಳ್ಳದೆ ಜೈನಧರ್ಮಕ್ಕನುಸಾರವಾಗಿ ಅದನ್ನು ತಿದ್ದಲು ತೊಡಗಿದನೆಂದೂ ಹೇಳಬಹುದಾಗಿದೆ ಎಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ.[10] ಆದರೆ ಹಿಂದೆಯೇ ಹೇಳಿರುವಂತೆ ಯಾವುದೇ ಮಹಾಕಾವ್ಯಧಾರೆಗಳ ಮೂಲಕ್ಕೆ ಈ ರೀತಿಯಾಗಿ ಮತೀಯವಾದ ಹಣೆಪಟ್ಟಿಯನ್ನು ಲಗತ್ತಿಸುವುದು ಸೂಕ್ತವಾಗಿ ಕಾಣುವುದಿಲ್ಲ. ಅಲ್ಲದೆ ರಾಮಕಥೆಯು ಈ ಹಿಂದಿನಿಂದಲೇ ಜೈನಪರಂಪರೆಯಲ್ಲಿ ಇದ್ದಿತೆಂಬುದಕ್ಕೆ ನಮಗೆ ಹಲವಾರು ಸಾಕ್ಷಿಗಳು ದೊರೆಯುತ್ತವೆ. ವಿಮಲಸೂರಿ ತನ್ನ ಕಾಲದಲ್ಲಿ ಜನಪ್ರಿಯವಾಗಿದ್ದ ರಾಮಾಯಣದ ಬಗೆಗೆ ಮೂಗೆಳೆಯಲು ಕಾರಣ ಆತನು ತಾನು ನಂಬಿದ್ದ ಧರ್ಮದ ನೆಲೆಗಟ್ಟು. ಅದರ ಹಿನ್ನೆಲೆಯಲ್ಲಿ ಈಗಾಗಲೇ ಆವಿಷ್ಕಾರಗೊಂಡು ಬಂದಿರಬಹುದಾದ ರಾಮಾಯಣದ ಕಥಾರೂಪವೂ ಅವನಿಗೆ ಪರಿಚಯವಿದ್ದು ಅದರಲ್ಲಿ ಆತ ಹೆಚ್ಚಿನ ವಿಶ್ವಾಸಾರ್ಹವಾದ ವಿಷಯಗಳನ್ನು ಕಂಡುಕೊಂಡಂತೆ ತೋರುತ್ತದೆ. ನಂಬಲರ್ಹವಾದ್ದೆಂದು ಬಗೆದ ಕಥಾಪರಂಪರೆಯ ಚಿತ್ರಣವನ್ನು ಕೊಡುವ ತುಡಿತ ವಿಮಲಸೂರಿಯಲ್ಲಿದ್ದುದರಿಂದ 'ಪಉಮಚರಿಯ' ರೂಪಗೊಂಡುದಾಗಿ ಕಂಡು ಬರುತ್ತದೆಯೇ ಹೊರತು, ವಾಲ್ಮೀಕಿ ರಾಮಾಯಣವನ್ನು ತಿದ್ದಿ ಬರೆದುದರಿಂದಲ್ಲವೆಂದು ತಿಳಿಯಬಹುದಾಗಿದೆ.

ವಿಮಲಸೂರಿಯೇ ತಾನು ಪರಂಪರಾನುಗತವಾಗಿ ಬಂದ ನಾಮಾವಲಿಯ ಆಧಾರದ ಮೇಲೆ ಈ ಕಾವ್ಯವನ್ನು ಬರೆದುದಾಗಿ ಹೇಳಿದ್ದಾನೆ.[11] ಪೂರ್ವಗಳಲ್ಲಿ ವರ್ಣಿತವಾಗಿರುವ ನಾರಾಯಣ (ಲಕ್ಷ್ಮಣ) ಬಲದೇವ (ರಾಮ)ರ ಕಥೆಯನ್ನು ಕೇಳಿ ರಾಘವ ಚರಿತವನ್ನು ಬರೆದುದಾಗಿ ಹೇಳಿದ್ದಾನೆ.[12] ಈ ಕಥೆಯನ್ನು ಮಹಾವೀರನು ಗೌತಮನಿಗೆ ಹೇಳಿದನೆಂದೂ ಅಲ್ಲಿಂದ ಮುಂದೆ ಅದು ಗುರುಪರಂಪರೆಯಿಂದ ಬಂದಿದೆಯೆಂದೂ ಹೇಳುವ ವಿಮಲಸೂರಿಯ ಈ ಮಾತುಗಳು ಕಲ್ಪಿತವಾದವುಗಳೆಂದೂ ಪುರಾಣಕ್ಕೊಂದು ಪವಿತ್ರ ವಾತಾವರಣವನ್ನು ತರಲು ಮಾತ್ರ ಹೇಳಿದುದೆಂದೂ ಕಲ್ಪಿಸಲಾಗುವುದಿಲ್ಲ. ಜೈನಾಗಮದ ಆಗಮ ಪರಂಪರೆಯನ್ನು ಗಮನಿಸಿದಾಗ ಈ ಅಂಶವು ತಿಳಿದು ಬರುತ್ತದೆ.[13]

ಕ್ರಿ.ಶ. ಆರಂಭದಲ್ಲಿದ್ದ ಶ್ರೀ. ಕುಂದ ಕುಂದಾಚಾರ್ಯರು ತಮ್ಮ ದೇಶಭಕ್ತಿಯಲ್ಲಿ ಕೆಲವು ಮಹಾಪುರುಷರ ನಿರ್ವಾಣ ಸ್ಥಾನವನ್ನು ಉಲ್ಲೇಖಿಸಿದ್ದಾರೆ. ಅವರಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ರಾಮ, ಸುಗ್ರೀವ, ಹನುಮಾನ್, ಗವಯ, ಗವ, ನೀಲ, ಮಹಾನೀಲ ಮೊದಲಾದವರು ತುಂಗಿ ಪರ್ವತದಲ್ಲಿ ತಪವನ್ನು ಆಚರಿಸಿ ಸಿದ್ಧರಾದರೆಂದು ಹೇಳಿದ್ದಾರೆ.[14] ಹೀಗೆಯೇ ಕೈಲಾಸದಲ್ಲಿ ವಾಲಿಯೂ ಪಾವಾಗಿರಿಯಲ್ಲಿ ಲವ-ಕುಶರೂ ಮುಕ್ತಿಯನ್ನು ಹೊಂದಿದ್ದಾರೆ. ಜೈನಪರಂಪರೆಯ ರಾಮಕಥೆಯ ರಾಮ, ಸುಗ್ರೀವ, ಹನುಮಂತ, ಇಂದ್ರಜಿತು, ಕುಂಭಕರ್ಣ ಮೊದಲಾದವರು ಮುನಿದೀಕ್ಷೆಯನ್ನು ತೆಗೆದುಕೊಂಡು ತಪವನ್ನಾಚರಿಸಿ ನಿರ್ವಾಣವನ್ನು ಪಡೆದ ಸಂಗತಿಯನ್ನು ಹೇಳುತ್ತದೆ. ಜೈನ ಪರಂಪರೆಯಲ್ಲಿ ರಾಮನ ಮುಕ್ತಿಸ್ಥಾನವಾದ ಮಾಂಗೀ ತುಂಗೀ ಮೊದಲಾದ ಪುಣ್ಯಕ್ಷೇತ್ರಗಳು ಇಂದಿಗೂ ಜೈನರಿಗೆ ಯಾತ್ರಾಸ್ಥಳವಾಗಿದೆ. ಎರಡು ಸಾವಿರ ವರ್ಷಗಳ ಹಿಂದಿನ ಐತಿಹ್ಯವು ಈ ಸ್ಥಾನಗಳಿಗಿದೆ.[15]

ಜೈನ ಪರಂಪರೆಯಲ್ಲಿ ರಾಮನು ತ್ರಿಷಷ್ಟಿಶಲಾಕಾಪುರುಷರಲ್ಲಿ ಎಂಟನೆಯ ಬಲಭದ್ರ. ಇವನು ಇಪ್ಪತ್ತನೆಯ ತೀರ್ಥಂಕರನಾದ ಮುನಿಸುವ್ರತನ ಕಾಲದಲ್ಲಿ ಬಾಳಿದ ಮಹಾಪುರುಷ. ತ್ರೇತಾಯುಗದಲ್ಲಿ ಈ ಚರಿತ್ರೆಯು ನಡೆಯಿತೆಂಬುದು ಸಾಮಾನ್ಯವಾದ ನಂಬಿಕೆಯಾಗಿದೆ. ಸಾಂಪ್ರದಾಯಿಕ ದೃಷ್ಟಿಯಿಂದ ಈ ತ್ರೇತಾಯುಗದ ಕಾಲಾವಧಿ ಅಳತೆಗೆ ಮೀರಿ ನಿಲ್ಲುವಂಥದ್ದು. ಆದರೆ ಐತಿಹಾಸಿಕ ದೃಷ್ಟಿಯಿಂದ, ತ್ರೇತಾಯುಗದ ಕಾಲವು ಕ್ರಿ. ಪೂ. 2700 ರಿಂದ 2200ರವರೆಗೆ ಎಂದು ಸ್ಥೂಲವಾಗಿ ಅನೇಕ ಆಧಾರಗಳಿಂದ ಪರಿಗಣಿಸಲಾಗಿದೆ.[16]

ಪರಂಪರಾನುಗತವಾಗಿ ಬಹಳ ಹಿಂದಿನಿಂದಲೂ ಬೆಳೆದು ಬಂದಿರುವ ರಾಮಕಥೆಯ ಮುಖ್ಯ ಎಳೆ ವೈದಿಕ—ಜೈನ ಪರಂಪರೆಗಳಲ್ಲಿ ಹೀಗಿದೆ :

ಅಯೋಧ್ಯಾನಗರಿಯ ದಶರಥ ರಾಜನಿಗೆ ರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂಬ ಮಕ್ಕಳು ; ರಾಮನು ಸೀತೆಯನ್ನು ಸ್ವಯಂವರದಲ್ಲಿ ಮದುವೆಯಾದನು ; ರಾವಣ ಸೀತೆಯನ್ನು ಲಂಕೆಗೆ ಕದ್ದೊಯ್ದನು ; ಸುಗ್ರೀವಾದಿಗಳ ಸಹಾಯದಿಂದ ರಾಮಲಕ್ಷ್ಮಣರು ಸೀತಾನ್ವೇಷಣೆಗೆ ತೊಡಗಿದರು ; ರಾವಣನ ಸಂಹಾರವಾಯಿತು; ಸೀತೆಯನ್ನು ಕರೆತಂದರು ; ರಾಮ ಪಟ್ಟಾಭಿಷೇಕವಾಯಿತು ; ಪುರಜನರ ಮಾತಿನ ಮೇರೆಗೆ ರಾಮ ಸೀತೆಯನ್ನು ತ್ಯಜಿಸಿದ, ಸೀತೆ ಲವ-ಕುಶ (ಲವಣ ಅಂಕುಶ)ರಿಗೆ ಜನ್ಮವಿತ್ತಳು ; ಮುಂದೆ ಲವ-ಕುಶರು ರಾಮಲಕ್ಷ್ಮಣರನ್ನು ಮೀರಿಸುವ ಮಕ್ಕಳಾದರು ; ಸೀತೆ ತನ್ನ ಪಾವಿತ್ರ್ಯವನ್ನು ನಿರೂಪಿಸಿದಳು. (ವಿಮಲಸೂರಿಯ ಕಥಾ ಪರಂಪರೆಯಲ್ಲಿ, ಉತ್ತರ ರಾಮಾಯಣದ ನಿರೂಪಣೆ ಬರುತ್ತದೆ. ಉಳಿದ ಜೈನ ಪರಂಪರೆಗಳಲ್ಲಿ ಇದು ಕಂಡು ಬರುವುದಿಲ್ಲ.)

ಈ ಮೂಲ ರೇಖೆಯ ಹಂದರದೊಳಗೇ ಆಯಾ ಸಂಸ್ಕೃತಿಯಲ್ಲಿ ರಾಮಕಥೆಯು ಕೆಲವು ವ್ಯತ್ಯಾಸಗಳನ್ನೊಳಗೊಂಡು ಮೂಡಿ ನಿಂತಿದೆ. ಈಗ ಜೈನ ಪರಂಪರೆಯಲ್ಲಿ ಕಂಡುಬರುವ ರಾಮಕಥೆಯಲ್ಲಿ ವಾಲ್ಮೀಕಿ ರಾಮಾಯಣಕ್ಕಿಂತ ಭಿನ್ನವಾಗಿ ನಿಲ್ಲುವ ಹಾಗೂ ಪರಸ್ಪರ ಜೈನ ಪರಂಪರೆಯಲ್ಲಿಯೇ ವ್ಯತ್ಯಾಸಗೊಂಡು ನಿಲ್ಲುವ ಕೆಲವು ಅಂಶಗಳನ್ನು ಪರಿಶೀಲಿಸಬಹುದಾಗಿದೆ.

ಜೈನ ಪರಂಪರೆಯಲ್ಲಿ ಬರುವ 63 ಶಲಾಕಾ ಪುರುಷರೆಲ್ಲರೂ[17] ಮಹಾ ಪುರುಷರು. ಹಿಂದುಗಳಲ್ಲಿ ನಾರಾಯಣನು ವಿಷ್ಣು ಕೃಷ್ಣನ ಅವತಾರವೆಂಬ ಕಲ್ಪನೆ ಇದೆ. ಬಲಭದ್ರ ಅಥವಾ ಬಲದೇವ (ಬಲರಾಮ) ಕೃಷ್ಣನ ಹಿರಿಯಣ್ಣನ ಹೆಸರು ನಾರಾಯಣನೇ ಸರ್ವಶಕ್ತ, ಬಲದೇವನನ್ನು ಆದಿಶೇಷನ ಅವತಾರವೆಂದು ಮನ್ನಿಸಿದೆ. ಕೆಲವೊಮ್ಮೆ ವಿಷ್ಣುವಿನ 8ನೇ ಅವತಾರವೆಂದೂ ಪರಿಗಣಿಸಿದೆ. (ಭಾರ, ಆದಿ 98) ಹಾಗೆಯೇ ಕೆಲವೆಡೆ ರಾಮನನ್ನು ನಾರಾಯಣನೆಂದೂ. ಲಕ್ಷ್ಮಣನನ್ನು ಆದಿಶೇಷನ ಅವತಾರವೆಂದೂ ಪರಿಗಣಿಸಿರುವುದುಂಟು. (ರಾಮಾ, ಬಾಲ 18, ಭಾರವನ 225) ಜೈನ ಪರಂಪರೆಯು ಕೃಷ್ಣನನ್ನು ನಾರಾಯಣನೆಂದೂ, ಬಲರಾಮನನ್ನು ಬಲದೇವ ನೆಂದೂ ಪರಿಗಣಿಸಿದೆ. ಇಲ್ಲಿ ರಾಮನೇ ಬಲದೇವ, ನಾರಾಯಣನೇ ಲಕ್ಷ್ಮಣ. ಹಿಂದೂ ಪರಂಪರೆಯ ಪ್ರಕಾರ ರಾಮನೇ ನಾರಾಯಣ ; ಜೈನ ಪರಂಪರೆಯ ಪ್ರಕಾರ ರಾಮ, ಲಕ್ಷ್ಮಣ, ರಾವಣರು 8ನೇ ಬಲದೇವ, ವಾಸುದೇವ ಮತ್ತು ಪ್ರತಿ ವಾಸುದೇವರು.

ವಾಸುದೇವನು ಬಲದೇವನ ಬಲತಮ್ಮ. ಈತ ಪುರಾಣಗಳಲ್ಲಿ ಹೆಚ್ಚಿನ ಸ್ಥಾನಗಳಿಸುತ್ತಾನೆ. ಈತನ ಕಾರ್ಯಭಾರದ ವೈಶಾಲ್ಯದಿಂದಾಗಿ ಈತನೇ ನಾಯಕ ನಾಗಿ ಕಂಡುಬರುವುದುಂಟು. (ಈತನೇ ಪ್ರತಿವಾಸುದೇವನನ್ನು ಕೊಲ್ಲುವವನು.) ಪ್ರತಿವಾಸುದೇವನೂ ಕೂಡ ಬಲಶಾಲಿ. ಬಲದೇವ—ವಾಸುದೇವರು ಅತ್ಯಂತ ಆತ್ಮೀಯರು. ಪ್ರತಿವಾಸುದೇವರಲ್ಲಿ ವೈರವುಳ್ಳವರು. ಯುದ್ಧದಲ್ಲಿ ಪ್ರತಿವಾಸು ದೇವನನ್ನು ಕೊಲ್ಲುವವನು ವಾಸುದೇವ. ಬಲದೇವ ಅದೇ ಭವದಲ್ಲಿ ಮೋಕ್ಷಕ್ಕೆ ಹೋಗುವವನು. ವಾಸುದೇವ—ಪ್ರತಿವಾಸುದೇವರು ಆ ಭವದ ನಂತರ ನರಕ ವಾಸಿಗಳಾದರೂ ಮುಂದೆ ಮುಕ್ತರಾಗುವ ಭವ್ಯಜೀವಿಗಳು. ಈ ಮುಕ್ಕೂಟದವರಲ್ಲಿ ಲಕ್ಷ್ಮಣ—ರಾವಣರು ಭವಿಷ್ಯತ್ಕಾಲದ ತೀರ್ಥಂಕರರು. ಹೀಗೆ ಇಲ್ಲಿಯ ನಡೆ ವಾಲ್ಮೀಕಿ ಸಂಸ್ಕೃತಿಗಿಂತ ಭಿನ್ನವಾಗಿ ಬರುತ್ತದೆ.

ರಾಕ್ಷಸರು ಹಾಗೂ ವಾನರರು ಇಲ್ಲಿ ವಿದ್ಯಾಧರರು ; ಇವರು ಕೆಲವು ಅತಿಮಾನುಷ ಶಕ್ತಿಗಳನ್ನು ಪಡೆದವರು ; ಅಹಿಂಸಾವ್ರತಧಾರಿಗಳು. ರಾಕ್ಷಸರು ನರಭಕ್ಷಣೆಯನ್ನು ಮಾಡುವವರಲ್ಲ ; ಭಯಾನಕ ರೂಪಧಾರಿಗಳಿಲ್ಲ. ವಾನರರು

ನಮ್ಮ ಕಲ್ಪನೆಯ ಕಪಿಗಳಲ್ಲ, ವಾಲಿ ಸುಗ್ರೀವಾದಿಗಳು ಕಪಿಧ್ವಜರು.ರಾವಣನ ಮುಖವು ರತ್ನದಲ್ಲಿ ಒಂಬತ್ತು ಮುಖಗಳಾಗಿ ಪ್ರತಿಬಿಂಬಿಸಿದುದರಿಂದ ಆತ ದಶಮುಖ ನೆನಸಿದ. ರಾವಣ ಮೊದಲಾದವರು ಭೀಮ ರಾಕ್ಷಸನ ವಂಶದವರು : ರಾಕ್ಷಸರಲ್ಲ. ಆಂಜನೇಯ ಬ್ರಹ್ಮಚಾರಿಯಲ್ಲ. ರಾಮ ಏಕಪತ್ನೀ ವ್ರತಸ್ಥನಲ್ಲ. ಇಲ್ಲಿ ಬರುವ ರಾಮ, ಲಕ್ಷ್ಮಣ, ಹನುಮಂತರು ಕ್ರಮವಾಗಿ 8000. 1600 ಮತ್ತು 1000 ಪತ್ನಿಯರನ್ನುಳ್ಳವರು. ಸೀತೆ ಜೈನ ಸಂನ್ಯಾಸಿನಿಯಾಗಿ ಸ್ವರ್ಗದಲ್ಲಿ ಇಂದ್ರ ಪದವಿಯನ್ನು ಪಡೆದಳು. ಮುಂದೆ ಮುಕ್ತಳಾಗುವವಳು. ಹೀಗೆ ಹಲವಾರು ವಿಷಯಗಳಿಂದ ವೈದಿಕ ಪರಂಪರೆಯಿಂದ ಇದು ವಿಶಿಷ್ಟವಾಗಿ ನಿಲ್ಲುತ್ತವೆ. ಇಲ್ಲಿಯ ನೆಲೆಗಟ್ಟು, ಸಂಸ್ಕೃತಿಗಳೇ ಬೇರೆ.

ಜೈನ ಪರಂಪರೆಯಲ್ಲಿ ರಾಮಕಥೆಯ ವಿವಿಧ ಸ್ವರೂಪಗಳು ಮತ್ತು ಸಂಬಂಧಗಳು

ಜೈನರಲ್ಲಿ ಕಥಾಸಾಹಿತ್ಯ ಪರಂಪರೆಯ ಹಲವು ವಿಸ್ತಾರವಾದುದು. ಈ ಕಥಾ ಸಾಹಿತ್ಯ ಪರಂಪರೆಯನ್ನೊಳಗೊಂಡ ಸಾಹಿತ್ಯವನ್ನು ಮುಖ್ಯವಾಗಿ ನಾಲ್ಕು ವಿಭಾಗಗಳಲ್ಲಿ ವಿಂಗಡಿಸಲಾಗಿದೆ.[18]

1. ಪುರಾಣ ಮತ್ತು ಮಹಾ ಪುರಾಣಗಳು.
2. ಚರಿತ್ರೆಗಳು, ಕಥೆಗಳು ಮತ್ತು ಆಖ್ಯಾನಗಳು.
3. ಪ್ರಬಂಧಗಳು ಮತ್ತು
4. ಕಥಾ ಕೋಶಗಳು.

ಈ ಕಥಾಸಾಹಿತ್ಯದಲ್ಲಿ ಮೂಡಿ ನಿಂತಿರುವ ಜೈನ ರಾಮಾಯಣ ಪರಂಪರೆ ವೈವಿಧ್ಯವೂ ವೈಶಾಲ್ಯವೂ ಆದುದಾಗಿದೆ. ಈಗ ಕಥಾಂಶಗಳನ್ನು ದೃಷ್ಟಿಯಲ್ಲಿಟ್ಟು ಕೊಂಡು ಅವುಗಳ ಪರಸ್ಪರ ಸಂಬಂಧ ಸ್ವರೂಪಗಳನ್ನು ಮುಂದೆ ಗುರುತಿಸಲಾಗಿದೆ.

ವಿಮಲಸೂರಿಯ ಪರಂಪರೆ :[19] ಪಉಮಚರಿಯ[20]ದಲ್ಲಿ ಕರ್ತೃವಿನ ಹೇಳಿಕೆಗನುಸರಿಸಿ ಏಳು ಅಧಿಕಾರಗಳಿವೆ. ಸ್ಥಿತಿ, ವಂಶೋತ್ಪತ್ತಿ ಪ್ರಸ್ಥಾನ, ರಣ, ಲವಂಕುಶ (ಲವಣಾಂಕುಶ) ಉತ್ಪತ್ತಿ ನಿರ್ವಾಣ ಮತ್ತು ಅನೇಕಭವ. ಈ ಅಧಿಕಾರಗಳಲ್ಲಿ 118 ಉದ್ದೇಶಗಳಿವೆ.

ಸೀತೆಯು ಜನಕನ ಔರಸ ಪುತ್ರಿ : ಅವಳಿಗೆ ಭಾಮಂಡಲನೆಂಬ ಅಣ್ಣನಿದ್ದನು, ಜನಕನ ರಾಜ್ಯದ ಮೇಲೆ ಕಾಡು ಜನರು ಧಾಳಿಯನ್ನು ಮಾಡಿದಾಗ ರಾಮನು ಸಹಾಯ ಮಾಡಿದನು. ಇದನ್ನೇ ಗಮನದಲ್ಲಿ ಇಟ್ಟುಕೊಂಡು ಸೀತೆಯನ್ನು ರಾಮನೊಡನೆ ವಿವಾಹ ಮಾಡಲು ಜನಕನು ನಿಶ್ಚಯಿಸಿದನು. ಸೀತೆಯ ಅಣ್ಣನಾದ

ಭಾಮಂಡಲನನ್ನು ಅವನ ಬಾಲ್ಯದಲ್ಲಿಯೇ ಒಬ್ಬ ವಿದ್ಯಾಧರನು ಎತ್ತಿಕೊಂಡು ಹೋಗಿದ್ದನು. ತನ್ನ ನಿಜವಾದ ತಂದೆ-ತಾಯಿಗಳಾರೆಂದು ತಿಳಿಯದ ಇವನು ಸೀತೆಯ ಚಿತ್ರಪಟವನ್ನು ನೋಡಿ, ಅವಳಲ್ಲಿ ಮೋಹಾಸಕ್ತನಾದನು. ಅವಳೊಡನೆ ವಿವಾಹವಾಗುವ ಉತ್ಕಟ ಅಪೇಕ್ಷೆಯನ್ನು ತಾಳಿದನು. ಬಿಲ್ವಿದ್ಯಾ-ಯೋಜನೆಯನ್ನು ಜನಕನು ರೂಪಿಸುವಂತೆ ಈತನ ಸಾಕು ತಂದೆ ಮಾಡಿದನು. ಇದರಲ್ಲಿ ರಾಮನು ವಿಜಯಿಯಾದನು. ದಶರಥನು ರಾಜ್ಯಭಾರದಿಂದ ಮುಕ್ತನಾಗಿ ತಪೋಧಾರಣೆ ಮಾಡುವ ವಿಚಾರ ಮಾಡಿದನು. ಅದನ್ನು ಕಂಡು ಗಂಭೀರ ಸ್ವಭಾವದ ಭರತನಿಗೂ ವೈರಾಗ್ಯವು ಉತ್ಪನ್ನವಾಯಿತು. ಈ ಪ್ರಕಾರ ತನ್ನ ಪತಿ ಹಾಗೂ ಪುತ್ರರನ್ನು ಏಕಕಾಲದಲ್ಲಿ ಅಗಲುವ ಸಂದರ್ಭ ಒದಗಿದುದರಿಂದ ಕೈಕೇಯಿಯು ಭಯಭೀತಳಾದಳು. ತನ್ನ ಮಗನನ್ನು ಗೃಹಸ್ಥಾಶ್ರಮ ಧರ್ಮದಲ್ಲಿರಿಸಲು ಅವರಿಗೇ ರಾಜ್ಯ ಪದವಿ ದೊರೆಯಬೇಕೆಂದು ತಾನು ಈ ಹಿಂದೆ ಗಳಿಸಿಕೊಂಡ ಒಂದೇ ಒಂದು ವರವನ್ನು ದಶರಥನ ಬಳಿ ಕೇಳಿದಳು. ರಾಮನು ದಶರಥನ ಆಜ್ಞೆಯಿಂದಲ್ಲ, ಸ್ವೇಚ್ಛೆಯಿಂದ ವನಕ್ಕೆ ತೆರಳಿದನು. ರಾಮನ ವನವಾಸದಲ್ಲಿ ಕೈಕೆಯ ಕೈವಾಡವಿರಲಿಲ್ಲ.

ರಾವಣನಿಗೆ ನಮಸ್ಕಾರ ಮಾಡಲು ಒಪ್ಪದೆ ವಾಲಿಯು ' ತನ್ನ ತಮ್ಮನಾದ ಸುಗ್ರೀವನಿಗೆ ರಾಜ್ಯವನ್ನು ಒಪ್ಪಿಸಿ ಪ್ರವಜ್ಯೆಯನ್ನು ಸ್ವೀಕರಿಸಿದನು. (ರಾಮನು ಇವನನ್ನು ಕೊಲ್ಲಲಿಲ್ಲ).

ರಾವಣನು ವ್ರತಿಕನಾದ ಜಿನಭಕ್ತ; ಅವನು ಸೀತೆಯನ್ನು ಅಪಹರಿಸಿದನು. ಆದರೆ ಅವಳ ಇಚ್ಛೆಯ ವಿರೋಧವಾಗಿ ಬಲತ್ಕಾರವನ್ನು ಮಾಡುವ ವಿಚಾರವನ್ನು ಸಹ ಮಾಡಲಿಲ್ಲ. ಪ್ರೇಮಕ್ಕೆ ವಶನಾಗಿ ತನಗೆ ತಾನೇ ಕೊರಗುತ್ತಿದ್ದನು. ಸ್ವತಃ ರಾವಣನ ಪತ್ನಿ ಮಂಡೋದರಿ ತನ್ನ ಪತಿಯನ್ನು ಸುಧಾರಿಸಲು ಬೇರೆ ಉಪಾಯವೇ ಕಾಣದಾದಾಗ ಸೀತೆಯನ್ನು ಬಲತ್ಕಾರದಿಂದ ವಶಪಡಿಸಿಕೊಳ್ಳಲು ಸೂಚಿಸಿದಳು. ಆದರೆ ರಾವಣನು ಯಾವ ಸ್ತ್ರೀಯ ಜೊತೆಯಲ್ಲಿಯೂ ಸಹ ಅವಳ ಇಚ್ಛೆಗೆ ವಿರೋಧ ವಾಗಿ ಸೇರುವುದಿಲ್ಲವೆಂಬ ವ್ರತವನ್ನು ಕೈಗೊಂಡಿದ್ದನು. ಅದರಂತೆ ನಡೆದುಕೊಂಡನು. ಇಲ್ಲಿ ರಾವಣನ ಪಾತ್ರ ಉದಾತ್ತವಾದುದು.

ಸಮುದ್ರವನ್ನು ಗಗನಗಾಮಿನೀ ವಿದ್ಯಾಬಲದಿಂದ ದಾಟಲಾಯಿತು. ಲಕ್ಷ್ಮಣ ರಾವಣನನ್ನು ಕೊಂದನು. ರಾಮನು ಗರ್ಭಿಣಿಯಾದ ಸೀತೆಯನ್ನು ಪರಿತ್ಯಜಿಸಿದ ಮೇಲೆ ಅವಳನ್ನು ವಜ್ರಜಂಘನೆಂಬ ವಿದ್ಯಾಧರನು ನೋಡಿಕೊಂಡನು. ಲವಣ ಅಂಕುಶರು ರಾಮನನ್ನು ಸೇರಿದ ಮೇಲೆ ಸೀತೆ ಅಗ್ನಿ ಪ್ರವೇಶ ಮಾಡಿ ದಹನ ಕ್ರಿಯೆಗೊಳಗಾಗದೆ ಹೊರಬಂದು ತನ್ನ ಪಾತಿವ್ರತ್ಯವನ್ನು ತೋರಿ ದೀಕ್ಷಿತಳಾದಳು. ಲಕ್ಷ್ಮಣನ ಸಾವಿನ ನಂತರ ರಾಮ ದೀಕ್ಷಿತನಾಗಿ ತಪವನ್ನು ಆಚರಿಸಿ ಮುಕ್ತಿಯನ್ನು ಗಳಿಸಿದನು.

ವಾಲ್ಮೀಕಿ ರಾಮಾಯಣಕ್ಕಿಂತ ಬೇರೆಯಾದ ಕೆಲವು ಕಥಾಸರಣಿ ಇಲ್ಲಿ ಇರುವುದರಿಂದ ಕತೆಯಷ್ಟೇ ಅಲ್ಲದೆ ಕೆಲವು ಪಾತ್ರಗಳೂ ಬೇರೆಯ ಸ್ವರೂಪವನ್ನು ಪಡೆಯುತ್ತವೆ. ವಾಲ್ಮೀಕಿ ರಾಮಾಯಣದ ಪ್ರಕಾರ ಕೈಕೆ ಸ್ವಾರ್ಥಿ. ಅತಿಲೋಭಿ, ಒಳಸಂಚು ನಡೆಸುವವಳು. ರಾಮ ವಾಲಿಯನ್ನು ಮೋಸದಿಂದ ಕೊಂದವನು. ರಾವಣ ಕ್ರೂರಿ. ಆತ ಯಜ್ಞ ಯಾಗಗಳಿಗೆ ವಿಘ್ನವನ್ನು ತಂದೊಡ್ಡುವವನು. ಮಾನವ ಕುಲ ವಿಧ್ವಂಸಕ, ಸ್ತ್ರೀವ್ಯಾಮೋಹಿ. ವಾಲಿಯು ಮೋಸದಿಂದ ಸುಗ್ರೀವನ ಹೆಂಡತಿ ಹಾಗೂ ರಾಜ್ಯವನ್ನು ಕಸಿದುಕೊಂಡವನು. ಆದರೆ ಈ ಎಡೆಗಳಲ್ಲೆಲ್ಲಾ ವಿಮಲಸೂರಿ ಬೇರೆಯಾಗಿ ನಿಲ್ಲುತ್ತಾನೆ. ಇಲ್ಲಿ ಕೈಕೇಯಿ ಮಗನು ವೈರಾಗ್ಯ ಪರನಾಗಿ ತಪಸ್ಸಿಗೆ ತೆರಳುವ ಸಂದರ್ಭ ಬಂದಾಗ ಕೈಕೇಯಿ ಆತನನ್ನು ಗೃಹಸ್ಥನನ್ನಾಗಿ ಉಳಿಸಿ ಕೊಳ್ಳಲು ಒಂದು ವರವನ್ನು ಬೇಡುತ್ತಾಳೆ. ರಾಮನು ದೇಶವನ್ನು ಬಿಟ್ಟು ಹೋಗ ಬೇಕೆಂದು ಒತ್ತಾಯಿಸುವುದಿಲ್ಲ. ಗಂಡನು ಮುನಿದೀಕ್ಷೆಯನ್ನು ತೆಗೆದುಕೊಂಡ ಕೆಲವು ಕಾಲದ ನಂತರ ತಾನೂ ಆ ಧರ್ಮವನ್ನು ಮುಂದೆ ಸ್ವೀಕರಿಸಿದಳು. ವಿದ್ಯಾಧರನಾದ ಪರಾಕ್ರಮಿಯಾದ ವಾಲಿಯು ಜಿನೇಶ್ವರನಿಗಲ್ಲದೆ ಮತ್ತಾರಿಗೂ ಬಾಗುವುದಿಲ್ಲವೆಂಬ ವ್ರತವಿದ್ದನು. ರಾವಣನ ಇಚ್ಛೆಯ ಪ್ರಕಾರ ತನ್ನ ಮಗಳನ್ನು ಆತನಿಗೆ ವಿವಾಹ ಮಾಡಿಕೊಟ್ಟರೆ ಆತನಿಗೆ ನಮಸ್ಕರಿಸಬೇಕಾಗುವುದೆಂದು ತಿಳಿದು ದೀಕ್ಷಿತನಾದವನು. ರಾವಣ ಧಾರ್ಮಿಕ ಶ್ರದ್ಧೆಯನ್ನುಳ್ಳ ಜಿನಭಕ್ತನೂ ಜಿನಚೈತ್ಯಾಲಯಗಳ ಜೀರ್ಣೋದ್ಧಾರಕನೂ ಆದವನು. ಆದಷ್ಟು ಹಿಂಸೆಯಿಂದ ದೂರ ನಿಂತವನು. ತನ್ನ ದಿಗ್ವಿಜಯ ಸಾಧನೆಯ ಶತ್ರುಗಳನ್ನು ಬಗ್ಗಿಸಿ ಅವರನ್ನು ಕೊಲ್ಲದೆ ಮತ್ತೆ ಅವರ ರಾಜ್ಯವನ್ನು ಹಿಂದಿರುಗಿಸಿ ಕೊಟ್ಟವನು. ಆತನ ಒಂದೇ ದೌರ್ಬಲ್ಯವೆಂದರೆ ಸ್ತ್ರೀ ವ್ಯಾಮೋಹ, ರಾವಣನ ಇಂತಹ ಚಿತ್ರಣದಲ್ಲಿ ದುರಂತನಾಯಕನ ಚಿತ್ರಣವನ್ನು ಕೆಲವು ವಿದ್ವಾಂಸರು ಗುರುತಿಸಿದ್ದಾರೆ.[21] ಇಲ್ಲಿ ಬರುವ ಪಾತ್ರಗಳೆಲ್ಲವೂ ದೀಕ್ಷೆಯನ್ನು ಧರಿಸಿ ಸ್ವರ್ಗಾಪವರ್ಗಗಳನ್ನು ಪಡೆಯುತ್ತವೆ. (ರಾವಣ ಲಕ್ಷ್ಮಣರು ಈ ಭವದಲ್ಲಿ ದೀಕ್ಷಿತರಾಗಲಿಲ್ಲ. ನರಕಗಾಮಿಗಳಾದ ಇವರು ಮುಂದೆ ಸ್ವರ್ಗಾಪವರ್ಗಗಳನ್ನು ಪಡೆಯುತ್ತಾರೆ.)

ವಿಮಲಸೂರಿ ಪರಂಪರೆಯ ಗ್ರಂಥಗಳು : 1. ರವಿಷೇಣನ ಪದ್ಮಪುರಾಣ : ಮೇಲಿನ ಪರಂಪರೆಯನ್ನೇ ಅನುಸರಿಸಿ ಬರುವ ರವಿಷೇಣನ ಪದ್ಮ ಪುರಾಣವು (ಕ್ರಿ.ಶ. 678) ಸಂಸ್ಕೃತದಲ್ಲಿದ್ದು 123 ಸಂಧಿಗಳಿಂದ ವಿಭಾಜಿತವಾಗಿದೆ. ಈತನ ಪದ್ಮಪುರಾಣ ಸಂಸ್ಕೃತ ರಾಮ ಕಥಾಸಾಹಿತ್ಯದಲ್ಲಿ ಮೊದಲನೆಯದಾಗಿ ಕಂಡುಬರುತ್ತದೆ. ಕೆಲವು ವಿಷಯಗಳಲ್ಲಿ ರವಿಷೇಣನ 'ಪದ್ಮಪುರಾಣವು' ವಿಮಲ ಸೂರಿಯ 'ಪಉಮಚರಿಯ'ಕ್ಕಿಂತ ಭಿನ್ನವಾಗಿ ನಿಲ್ಲುತ್ತದೆ. ದಶರಥನ ಪತ್ನಿಯರಾದ ಅಪರಾಜಿತ, ಸುಮಿತ್ರಾ, ಕೈಕೇಯ ಮತ್ತು ಸುಪ್ರಭೆಯರು ಕ್ರಮವಾಗಿ ಪದ್ಮ

(ರಾಮ), ಲಕ್ಷ್ಮಣ, ಭರತ ಮತ್ತು ಶತ್ರುಘ್ನರಿಗೆ ಜನ್ಮವನ್ನು ನೀಡುವರು. ಪಉಚ ದಲ್ಲಿ ದಶರಥನ ಪತ್ನಿಯರು ಮೂವರು (ಅಪರಾಜಿತಾ, ಸುಮಿತ್ರಾ ಮತ್ತು ಕೈಕೇಯಿ) ಭರತ ಶತ್ರುಘ್ನರು ಕೈಕೇಯಿಯ ಮಕ್ಕಳು.

ಸೀತಾಸ್ವಯಂವರದಲ್ಲಿ ವಜ್ರಾವರ್ತ ಮತ್ತು ಸಾಗರಾವರ್ತಗಳೆಂಬ ಎರಡು ಬಿಲ್ಲುಗಳನ್ನು ರಾಮ ಲಕ್ಷ್ಮಣರು ಕ್ರಮವಾಗಿ ಬಾಗಿಸಿದರು. ವಿಮಲಸೂರಿಯ ಪ್ರಕಾರ ಸಾಗರಾವರ್ತವೆಂಬ ಬಿಲ್ಲನ್ನೇ ಇಬ್ಬರೂ ಬಾಗಿಸಿದರು.

ರವಿಷೇಣನ ಪ್ರಕಾರ ಕನಕನ ಪುತ್ರಿಯಾದ ಲೋಕಾಸುಂದರಿ ಭರತನ ಪತ್ನಿ. ವಿಮಲಸೂರಿಯ ಪ್ರಕಾರ ಆಕೆ ಸುಭದ್ರೆ.

ರವಿಷೇಣನ ಪ್ರಕಾರ ಅತಿವೀರನನ್ನು ಗೆಲ್ಲುವಾಗ ರಾಮಲಕ್ಷ್ಮಣರು ಸ್ವತಃ ಸ್ತ್ರೀ ವೇಷಧಾರಿಗಳಾದರು. ವಿಮಲಸೂರಿಯ ಪ್ರಕಾರ ದೇವತೆಯೊಬ್ಬಳಿಂದ ಆ ರೂಪವನ್ನು ಧರಿಸಿದರು.

ರವಿಷೇಣನ ಪ್ರಕಾರ, ಲವಣಾಂಕಶರ ಜನ್ಮದ ಸುದ್ದಿಯನ್ನು ಕೇಳಿದ ಹನುಮಂತನು ರಾಮನನ್ನು ಬಿಟ್ಟು ಯುದ್ಧ ಸನ್ನದ್ಧರಾದ ಲವಶಾಂಕುಶರನ್ನು ಸೇರಿಸಿದನು. ವಿಮಲಸೂರಿಯ ಪ್ರಕಾರ ಅವನು ಯಾವ ಪಕ್ಷವನ್ನೂ ವಹಿಸದೆ ಇದ್ದನು.

ರವಿಷೇಣನ ಪ್ರಕಾರ ಸೀತೆಯ ಅಗ್ನಿಪ್ರವೇಶ ಕಾಲದಲ್ಲಿ ಸಹಾಯಕನಾದವನು ಮೇಷಕೇತನ. ವಿಮಲಸೂರಿಯ ಪ್ರಕಾರ ಹರಿನೈಗಮೈಶಿ.

ಈ ಕೆಲವು ವ್ಯತ್ಯಾಸಗಳನ್ನು ಬಿಟ್ಟರೆ ಹರಿಷೇಣನ 'ಪದ್ಮಪುರಾಣವು' ವಿಮಲ ಸೂರಿಯ ಪಉಚ.ಕ್ಕೆ ಋಣಿಯಾಗಿರುವುದು ಕಂಡುಬರುತ್ತದೆ. ಹರಿಷೇಣನು ಪಉಚ.ವೇ ತನ್ನ ಕೃತಿಗೆ ಮೂಲವೆಂದುನೂ ಬಾಯ್ಬಿಟ್ಟು ಹೇಳದಿದ್ದರೂ, ಅದನ್ನು ಆತನು ಅನುಸರಿಸಿರುವುದನ್ನು ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ. ವಿಮಲ ಸೂರಿಯ ಪಉಚ.ವು ಈತನಿಗೆ ಮೂಲವಲ್ಲದಿದ್ದರೆ ಇವರಿಬ್ಬರಿಗೂ ಸಮಾನವಾಗಿದ್ದ ಮತ್ತಾವುದೋ ಆಕರವು ಇದ್ದಿರಬೇಕು.[22]

2. ಶೀಲಾಂಕನ (ಕ್ರಿ.ಶ. 868) 'ಚಉಪ್ಪನ್ನ ಮಹಾಪುರಿಸಚರಿಯ.[2], ಇದರಲ್ಲಿ ಬರುವ ರಾಮಕಥೆಯನ್ನು 'ರಾಮಲಕ್ಷ್ಮಣಚರಿಯಂ' ಎಂದು ಕರೆದಿದ್ದಾನೆ (ವಿ-27).

ಪಉಮಚರಿಯವನ್ನನುಸರಿಸಿ ತಾನು ರಾಮಲಕ್ಷ್ಮಣರ ಕಥೆಯನ್ನು ಸಂಗ್ರಹ ವಾಗಿ ಹೇಳಿರುವುದಾಗಿ ಹೇಳಿದ್ದಾನಾದರೂ ಈತನು ತನ್ನ ಮುಂದಿದ್ದ ವಾಲ್ಮೀಕಿ ರಾಮಾಯಣ ಹಾಗೂ ಸಂಘದಾಸನ ವಸುದೇವ ಹಿಂಡಿಯಲ್ಲಿ ಬರುವ ರಾಮಾಯಣದ ಪ್ರಭಾವಕ್ಕೆ ಒಳಗಾಗಿರುವಂತೆ ಕಂಡುಬರುತ್ತದೆ.

ಇಲ್ಲಿ ಬರುವ ಮಾಯಾಜಿಂಕೆಯ ಪ್ರಸಂಗ, ವಾಲಿವೃತ್ತಾಂತ, ತ್ರಿಜಟೆಯ ಕಾರ್ಯಭಾರ ಇವುಗಳನ್ನು ನಿರೂಪಿಸುವಲ್ಲಿ ಸಂಘದಾಸನಂತೆ ವಾಲ್ಮೀಕಿ ರಾಮಾಯಣಕ್ಕೆ ಹತ್ತಿರನಾಗುತ್ತಾನೆ. ಸಂಘದಾಸನಂತೆ ಈತನೂ ಉತ್ತರ ರಾಮಾಯಣ ಕಥೆಯನ್ನು ಕೈಬಿಟ್ಟಿದ್ದಾನೆ.

3. ಭದ್ರೇಶ್ವರನ (ಕ್ರಿ.ಶ. 1064) ಕಹಾವಲಿ : ಇದು ಪ್ರಾಕೃತ ಗದ್ಯದಲ್ಲಿದೆ. (ಜೈನ ಮಹಾರಾಷ್ಟ್ರೀ) ವಿಮಲಸೂರಿಯ ಪರಂಪರೆಗೆ ಸೇರಿದ ಈತ ರಾಮಕಥೆಗೆ ಕೊಡುವ ಅಂಶಗಳು ಇವು—

ರಾಮಾದಿಗಳು ವನವಾಸದಿಂದ ಅಯೋಧ್ಯೆಗೆ ಹಿಂದಿರುಗಿ ಸುಖವಾಗಿ ಇರುವ ಸಂದರ್ಭದಲ್ಲಿ ಸೀತೆ ಕನಸೊಂದನ್ನು ಕಂಡಳು. ಆ ಕನಸಿನ ಪ್ರಕಾರ ತಾನು ಮುಂದೆ ಮಹಾನ್ ವ್ಯಕ್ತಿಗಳನ್ನು ಪಡೆಯುವುದನ್ನು ತಿಳಿದು ಆಕೆ ಸಂತೋಷದಿಂದಿದ್ದಳು. ಆಕೆಯ ಸವತಿಯರು ಸೀತೆಯ ಮೇಲೆ ಅಸೂಯೆಗೊಂಡು ಸೀತೆಯಿಂದ ರಾವಣನ ಚಿತ್ರ ಬರೆಸುವ ಒಳಸಂಚನ್ನು ಮಾಡಿ ರಾಮನ ಮನಸ್ಸನ್ನು ಕೆಡಿಸಲು ಪ್ರಯತ್ನಿಸಿದರು. ಆ ಸಂದರ್ಭದಲ್ಲಿ ರಾಮನು ಯಾವ ಪ್ರತಿಕ್ರಿಯೆ ತೋರದಿದ್ದರೂ ಮುಂದೆ ರಾವಣನ ಬಳಿ ಇದ್ದು ಬಂದ ಸೀತೆಯನ್ನು ತ್ಯಜಿಸಲು ಪುರಜನರು ಹೇಳಿದಾಗ ರಾಮ ಸೀತೆಯನ್ನು ತ್ಯಜಿಸಿದನು. ರಾವಣನ ಚಿತ್ರವನ್ನು ಬರೆಯುವ ಒಂದು ಹೊಸ ಪದೀಯ ಆಶಯದ ಎಳೆ ಭದ್ರೇಶ್ವರನ ಕಥೆಯಲ್ಲಿ ಹೊಸದಾಗಿ ಸೇರ್ಪಡೆಯಾಗಿದೆ. ಸವತಿ ಮತ್ಸರದ ವಿಚಾರವೂ ಈತನಲ್ಲಿ ರಾಮಕಥೆಯ ಅಂಶವಾಗಿ ಮೊದಲ ಬಾರಿಗೆ ಸೇರಿದಂತೆ ತೋರುತ್ತದೆ. ಈ ಕೆಲವು ವಿಚಾರವನ್ನು ಬಿಟ್ಟರೆ ಈತ ವಿಮಲ ಸೂರಿಯನ್ನೇ ಅನುಸರಿಸಿದ್ದಾನೆ. ಅಲ್ಲಲ್ಲಿ ಶಾಬ್ದಿಕವಾದ ಅನುಕರಣೆಯೂ ಇದೆ.

4. ಧನೇಶ್ವರ ಸೂರಿಯ (ಕ್ರಿ.ಶ. 1100) ಶತ್ರುಂಜಯ ಮಹಾತ್ಮದಲ್ಲಿ ರಾಮಕಥೆಯ ನಿರೂಪಣೆಯನ್ನು ಪಉಚ. ಮಾದರಿಯಲ್ಲಿ ನೀಡಿದ್ದಾನೆ. ಇಲ್ಲಿ ಉಪಾಖ್ಯಾನಗಳಿಲ್ಲ. ರಾಮಕಥೆಯ ಸರಳ ನೇರ ನಿರೂಪಣೆ ಇದೆ.

5. ಹೇಮಚಂದ್ರ (ಕ್ರಿ.ಶ. 1089–1172)ನ 'ತ್ರಿಷಷ್ಟಿಶಲಾಕಪುರುಷ ಚರಿತ್ರ'ದಲ್ಲಿ ಬರುವ ರಾಮಕಥೆಯಲ್ಲಿ ವಿಮಲಸೂರಿ ಹಾಗೂ ರವಿಷೇಣರ ಪ್ರಭಾವವು ಕಂಡು ಬರುತ್ತದೆ. ರವಿಷೇಣನಂತೆ ದಶರಥನ 4ನೇ ಪತ್ನಿ ಹಾಗೂ ಶತ್ರುಘ್ನನ ತಾಯಿ ಸುಪ್ರಭೆ ಎಂದು ಹೆಸರಿಸಿದ್ದಾನೆ.

ರಾಮಕಥೆಗೆ ಹೇಮಚಂದ್ರನ ಕೊಡುಗೆ ಈ ರೀತಿ ಕಂಡು ಬರುತ್ತದೆ.

ವಾಲಿ ರಾವಣನೊಂದಿಗೆ ಯುದ್ಧಮಾಡಿ ಆತನನ್ನು ಗೆದ್ದನು. ಆತನನ್ನು ತನ್ನ ತೋಳಿನಲ್ಲಿ ಹಿಡಿದು ಅಮುಕಿ ತನ್ನ ಶಕ್ತಿ ಪ್ರದರ್ಶನಮಾಡುವ ಸಂದರ್ಭದಲ್ಲಿ ವೈರಾಗ್ಯಪರನಾಗಿ ದೀಕ್ಷಿತನಾದನು.

ದಶರಥನು ಕೈಕೇಯಿಯನ್ನು ಮದುವೆಯಾದ ನಂತರ ಅಯೋಧ್ಯೆಗೆ ಬಾರದೆ ರಾಜಗೃಹಕ್ಕೆ ಹೋದನು. ಮಗಧರಾಜನನ್ನು ಗೆದ್ದು ಅಲ್ಲಿ ಕೆಲವು ಕಾಲವಿದ್ದು ಅಲ್ಲಿಗೆ, ತನ್ನ ಸಂಸಾರವನ್ನು ಕರೆಸಿಕೊಂಡನು. ರಾವಣನ ಮೇಲಿನ ಭೀತಿಯಿಂದ ಅಲ್ಲಿಯೇ ಬಹಳಕಾಲ ಉಳಿದನು. ರಾಮಲಕ್ಷ್ಮಣರು ಹುಟ್ಟಿದ್ದು ಅಲ್ಲಿಯೇ ಅನಂತರ ತನ್ನ ಅತಿ ಬಲಾಢ್ಯರಾದ ಮಕ್ಕಳಿಂದ ಬೇರೆಯಾಗಲು ಯೋಚಿಸಿ ತನ್ನ ಪತ್ನಿಯ ರೊಂದಿಗೆ ಅಯೋಧ್ಯೆಗೆ ತೆರಳಿದನು. ಅಯೋಧ್ಯೆಯಲ್ಲಿ ಭರತ-ಶತ್ರುಘ್ನರು ಜನಿಸಿದರು.

ಈ ಮೇಲಿನವುಗಳೇ ಅಲ್ಲದೆ, ಬಲದೇವ ವಾಸುದೇವರನ್ನು ಪಡೆಯುವ ಪೂರ್ವ ಭಾವಿಯಾಗಿ ಅವರ ತಾಯಂದಿರು ಕಾಣುವ ಸ್ವಪ್ನಸಂಖ್ಯೆ ಮೊದಲಾದ ವಿಚಾರಗಳಲ್ಲಿಯೂ ಹೇಮಚಂದ್ರನು ವಿಮಲಸೂರಿಗಿಂತ ಸ್ವಲ್ಪ ಭಿನ್ನವಾಗಿ ನಿಲ್ಲು ತ್ತಾನೆ. ಭದ್ರೇಶ್ವರನು ಸೂಚಿಸುವ ಸವತಿಮತ್ಸರದ ವಿಚಾರ, ರಾವಣನ ಚಿತ್ರವನ್ನು ಬರೆಯುವ ಪ್ರಸಂಗಗಳು ಇಲ್ಲಿಯೂ ಸೇರ್ಪಡೆಯಾಗಿವೆ.

ಸೀತೆಯನ್ನು ಪರಿತ್ಯಜಿಸಿದನಂತರ, ರಾಮ ಮತ್ತೆ ಅವಳನ್ನು ಹುಡುಕಿಕೊಂಡು ಹೋದನು. ಆದರೆ ಸೀತೆಯನ್ನು ಕಾಣದೆ ಹಿಂದಿರುಗಿ ಬಂದ ರಾಮ, ಅವಳು ಕ್ರೂರ ಮೃಗಗಳಿಗೆ ತುತ್ತಾಗಿರಬೇಕೆಂದು ತಿಳಿದು ಅವಳ ಅಪಕರ್ಮವನ್ನು ನಡೆಸಿದನು. (ಈ ಪ್ರಸಂಗ ರಾಮನ ಪಾತ್ರದಲ್ಲಿನ ಕಳಂಕವನ್ನು ನೀಗಲು ಪ್ರಯತ್ನ ಮಾಡಿದಂತಿದೆ. ತನ್ನ ಕ್ರಿಯೆಯಿಂದ ಪಶ್ಚಾತ್ತಾಪಗೊಂಡ ರಾಮ ಸೀತೆಯನ್ನು ಹುಡುಕಿಕೊಂಡು ಹೋದುದು, ಆತ ಸೀತೆಯಲ್ಲಿಟ್ಟಿದ್ದ ವಿಶೇಷವಾದ ಪ್ರೀತಿಯ ದ್ಯೋತಕವೆಂಬಂತೆ ಕವಿ ತಂದಿದ್ದಾನೆ).

6. ಹೇಮಚಂದ್ರನ ಸ್ವೋಪಜ್ಞ ಟೀಕೆಯಾದ ಯೋಗಶಾಸ್ತ್ರದಲ್ಲಿಯೂ ರಾಮಕಥೆ ಬರುತ್ತದೆ. ಇಲ್ಲಿ 'ಸೀತಾರಾವಣರ ಕಥಾನಕ' ಎಂಬುದು ಕಥೆಯ ಶೀರ್ಷಿಕೆ. ರಾಮಾಯಣದ ಕಥೆಗೆ ಕಾರಣಕರ್ತರಾದವರು ಇವರಿಬ್ಬರೇ ಎಂಬ ದೃಷ್ಟಿಯಿಂದ ಅವರಿಗೇ ಪ್ರಾಮುಖ್ಯನೀಡಿ ಈ ಶೀರ್ಷಿಕೆ ಇಟ್ಟಂತೆ ತೋರುತ್ತದೆ. ಇಲ್ಲಿ ಉತ್ತರ ರಾಮಚರಿತೆಯನ್ನು ಬಿಟ್ಟು ಸಂಕ್ಷೇಪಿಸಿ ಕಥೆಯನ್ನು ಹೇಳಿದ್ದಾನೆ.

ಅಲ್ಲಲ್ಲಿಯೇ ತ್ರಿಶಪುಚಕ್ಕಿಂತ ಬೇರೆಯಾದ ಕೆಲವು ವಿಷಯಗಳು ಬರುತ್ತವೆ, ರಾವಣ ಪಾತಾಳ ಲಂಕೆಗೆ ಹೋಗಿ ಚಂದ್ರೋದಯರನ್ನು ಜಯಿಸಿ ಖರನಿಗೆ ಪಾತಾಳ ಲಂಕೆಯನ್ನು ತಂಗಿ ಚಂದ್ರನಖಿಯನ್ನು ಕೊಟ್ಟನು. ತ್ರಿಶಪುಚ. ಪ್ರಕಾರ ರಾವಣನು ಮೇರುವಿನ ಚೈತ್ಯಾಲಯಗಳ ದರ್ಶನಕ್ಕಾಗಿ ಹೋಗಿದ್ದಾಗ ಖರನು ಚಂದ್ರನಖಿಯನ್ನು ಅಪಹರಿಸಿದನು. ತ್ರಿಶಪುಚ. ದಲ್ಲಿ ಇಲ್ಲದ ಮಂದರೆಯ ವೃತ್ತಾಂತ ಇಲ್ಲಿ ಕಂಡು ಬರುತ್ತಿದೆ. ಕೈಕೆ ಪಡೆದುದು ಒಂದೇ ವರವೆಂದು ಬರುತ್ತದೆ.[25] ಬಹುಶಃ ತಾನೇ ಬರೆದ ಈ ಎರಡು ಕಾವ್ಯಗಳಲ್ಲಿ ಕವಿ ಬೇರೆ ಬೇರೆಯಾದ ಆಕರಗಳನ್ನನುಸರಿಸಿರಬೇಕು.

ವಿಮಲಸೂರಿ ಪರಂಪರೆಯ ಕನ್ನಡ ಕೃತಿಗಳು 7.1 ನಾಗಚಂದ್ರನ (ಕ್ರಿ. ಶ. 1043-1100) 'ರಾಮಚಂದ್ರ ಚರಿತ ಪುರಾ'ಣವು ಕನ್ನಡದಲ್ಲಿ ರಾಮಕಥೆಯನ್ನು ನಿರೂಪಿಸುವ ಪ್ರಪ್ರಥಮ ಸ್ವತಂತ್ರ ಕೃತಿಯಾಗಿದೆ. ಇಲ್ಲಿ... ಉತ್ತರ ರಾಮಕಥೆ ಕನ್ನಡದಲ್ಲಿ ಮೊಟ್ಟಮೊದಲ ಬಾರಿಗೆ ಕಾಣಿಸಿಕೊಳ್ಳುತ್ತದೆ.

ಇಲ್ಲಿ ಕವಿಯುವಿಮಲಸೂರಿ - ಹರಿಷೇಣರಿಗೆ ಋಣಿಯಾಗಿದ್ದಾನೆ,[27] ತನ್ನದೇ ಆದ ಕಾವ್ಯಸೌಂದರ್ಯವನ್ನು ಕನ್ನಡದಲ್ಲಿ ರಾಮಕಥೆಗೆ ಒದಗಿಸಿದವನು ಈತ. ಪುರಾಣ- ಕಾವ್ಯಗಳೆರಡರ ಸಮಿಲನದಲ್ಲಿ ಕಥೆ ಬಂದಿರುವುದು ಇಲ್ಲಿಯ ವೈಶಿಷ್ಟ್ಯ.

ರಾಮಕಥೆಗೆ ನಾಗಚಂದ್ರನ ಕೊಡುಗೆ ಕಥಾ ಘಟ್ಟಗಳಲ್ಲಿ ಕಂಡುಬಾರದು. ತಾನು ಅನುಸರಿಸಿರುವ ಕಾವ್ಯಪರಂಪರೆಯಲ್ಲಿ ಬರುವ ಎಷ್ಟೋ ಪ್ರಸಂಗಗಳನ್ನು ಉಚಿತರೀತಿ ಯಲ್ಲಿ ಸಂಗ್ರಹಿಸುವ ಅಲ್ಲಿ ಕಂಡುಬಾರದ ಎಷ್ಟೋ ವರ್ಣನಾಂಶ, ನಾಟಕೀಯತೆ ಮೊದಲಾದವುಗಳನ್ನು ಸೇರಿಸುವ, ಬೇಡದ ಅಂಶಗಳನ್ನು ಕೈಬಿಡುವ, ಮೂಲದಲ್ಲಿರುವ ವಿಷಯಗಳನ್ನು ಸ್ಥಳಾಂತರಿಸುವ ಕ್ರಿಯೆಗಳಲ್ಲಿ ಕವಿ ಬಹುತೇಕವಾಗಿ ಕಾವ್ಯಕುಸುರಿಯ ನಿಪುಣನೆನಿಸುತ್ತಾನೆ.

ಕಥಾ ಘಟ್ಟದಲ್ಲಿ ಹೆಚ್ಚಿನ ಯಾವ ಸೇರ್ಪಡೆಯನ್ನು ನಾಗಚಂದ್ರ ಮಾಡದೇ ಹೋದರೂ ರಾವಣನ ಪಾತ್ರವನ್ನು ಉತ್ತಪ್ರಕ್ಕಿಂತ ಭಿನ್ನವಾಗಿ ನೋಡಿರುವುದು ಸಹಜವಾಗಿಯೇ ಇದೆ. ಏಕೆಂದರೆ ಈತ ಆರಿಸಿಕೊಂಡಿರುವ ಮೂಲದಲ್ಲಿ ರಾವಣನ ಪಾತ್ರ ಉದಾತ್ತವಾಗಿ ಬಂದಿದೆ. ಅಲ್ಲಿಯ ಎತ್ತರಕ್ಕೆ ರಾವಣ ಇಲ್ಲಿ ಏರದಿದ್ದರೂ ಉತ್ತಪು.ಕ್ಕಿಂತಲೂ ಇಲ್ಲಿಯ ರಾವಣ ಮೇಲ್ಮಟ್ಟದವನಾಗಿ ನಿಲ್ಲುತ್ತಾನೆ. ರಾವಣನ ಕದಡಿದ ಚಿತ್ತ ತಿಳಿಗೊಂಡ ಚಿತ್ರಣ ಇಲ್ಲಿ ಬರುತ್ತದೆ.

ತಾನು ಅನುಸರಿಸಿರುವ ಮೂಲದಿಂದ ಕೆಲವು ಸನ್ನಿವೇಶಗಳಲ್ಲಿ ನಾಗಚಂದ್ರನು ವ್ಯತ್ಯಾಸಮಾಡಿಕೊಂಡಿದ್ದಾನೆ. ರಾಚಪು.ದಲ್ಲಿ ದಶರಥನ ಸಾರಥಿ ಮೂರ್ಛೆ ಹೋದಾಗ ಕೈಕೆ ರಥ ನಡೆಸುತ್ತಾಳೆ. ವಿಮಲಸೂರಿ ಪರಂಪರೆಯ ಪ್ರಕಾರ ಯುದ್ಧದ ಪ್ರಾರಂಭದಲ್ಲೇ ಕೈಕೆ ಸಾರಥ್ಯ ವಹಿಸುತ್ತಾಳೆ. ಅನಿವಾರ್ಯವಾದಾಗ ಮಾತ್ರ ಎಂಬಂತೆ ಅಲ್ಲಿ ಕೈಕೆ ಸಹಾಯಕ್ಕೆ ಬಂದಿದ್ದಾಳೆ.

ಲಕ್ಷ್ಮಣ ಚಂದ್ರನಖಿಯ ರೂಪಕ್ಕೆ ಮನಸೋತು ಅವಳನ್ನು ಹುಡುಕಲು ಹೋಗುತ್ತಾನೆ ಎಂಬ ಮೂಲದಲ್ಲಿ ಬರುವ ಈ ವಿಷಯವನ್ನು ಲಕ್ಷ್ಮಣನ ಪಾತ್ರಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಲು ನಾಗಚಂದ್ರ ಕೈಬಿಟ್ಟಂತೆನಿಸುತ್ತದೆ.

ಮೂಲದಲ್ಲಿಲ್ಲದ ಲಂಕಾದಹನ ವಿಚಾರವನ್ನು ಸೇರಿಸಿಕೊಂಡಿದ್ದಾನೆ. ಬಹುಶಃ ಆ ವಿಚಾರದ ಜನಪ್ರಿಯತೆಯಿಂದ ಇರಬಹುದು.

ಲವಕುಶರ ಜನ್ಮವೃತ್ತಾಂತವನ್ನು ಕೇಳಿ ಹನುಮಂತನು ರಾಮನ ಪಕ್ಷಬಿಟ್ಟು ಲವಕುಶರ ಪಕ್ಷ ಸೇರಿದ ಎಂಬ ಅಂಶವನ್ನು ಹನುಮಂತನ ಸ್ವಾಮಿಭಕ್ತಿಯನ್ನು ಕಾಯ್ದಿರಿಸಲೆಂದು ನಾಗಚಂದ್ರ ಕೈಬಿಟ್ಟಿದ್ದಾನೆ.

8-2 ಕುಮುದೇಂದುವಿನ (ಸು. 1275) ರಾಮಕಥೆ. 'ಕುಮುದೇಂದು ರಾಮಾಯಣವೆಂದೇ ಪ್ರಸಿದ್ಧಿಯಾಗಿದೆ. ಕವಿಯು...ವರ್ಣಿಸಲು ಬಗೆದೆಂ ರಘುವಂಶ ಚರಿತ ಸುಧಾಂಬುಧಿಯಂ' (1-32) ಎಂದು ಹೇಳಿದ್ದರೂ ಅದೇ ಆ ಕೃತಿಯ ಹೆಸರೆಂದು ಸ್ಪಷ್ಟವಾಗಿ ತಿಳಿದು ಬರುವುದಿಲ್ಲ.

'ಕುಮುದೇಂದು ರಾಮಾಯಣವು-ನಾಗಚಂದ್ರನ ರಾಚಪುವನ್ನನುಸರಿಸಿದರೂ ರಾಮಪಟ್ಟಾಭಿಷೇಕದವರೆಗಿನ ಕಥೆ ಮಾತ್ರ ಅಡಕವಾಗಿದೆ. ಈ ಪರಂಪರೆಯಲ್ಲಿ ಬರುವ ಸೀತಾ-ಪರಿತ್ಯಾಗ, ಲವಕುಶ ವೃತ್ತಾಂತ, ರಾಮಪರಿನಿರ್ವಾಣ ಇಲ್ಲಿಲ್ಲ.

ಕುಮುದೇಂದು ರಾಮಾಯಣಕ್ಕೆ ಹಲವಾರು ದೃಷ್ಟಿಗಳಿಂದ ಮಹತ್ವವಿದೆ. ಇದು ವರ್ಣಕ ಕಾವ್ಯ. ನಾಲ್ಕು ಬಗೆಯ ಷಟ್ಪದಿಗಳಲ್ಲಿ ಕಾವ್ಯವನ್ನು ಕವಿ ಬರೆದಿದ್ದಾನೆ.[29] ಬಹುಶಃ ರಾಮಾಯಣವನ್ನು' ಹಾಡುಗಬ್ಬವಾಗಿ ಕಾಣಬೇಕೆಂಬ ಉದ್ದೇಶ ಈತನಿಗಿತ್ತೆಂದು ತೋರುತ್ತದೆ. ಕವಿ ಸೂಚಿಸಿರುವ ರಾಗ ತಾಳಗಳಿಂದ ಇದು ಸ್ಪಷ್ಟವಾಗುತ್ತದೆ.[30]

ನಾಗಚಂದ್ರನ ಕೃತಿ ಪ್ರೌಢ ; ಕುಮುದೇಂದುವಿನ ಕೃತಿ ಸರಳ-ಲಲಿತ, ಷಟ್ಪದಿಯಲ್ಲಿ ರಾಮಕಥೆಯನ್ನು ಬರೆದವರಲ್ಲಿ ಈತ ಮೊದಲಿಗ.

ಕವಿ ನಾಗಚಂದ್ರನನ್ನು ಪ್ರತಿ ಕಥಾಸರಣಿಯ ಉದ್ದಕ್ಕೂ ಅನುಸರಿಸದಿದ್ದರೂ ಅಲ್ಲಲ್ಲಿಯೇ ಕೆಲವೆಡೆ ವರ್ಣನಾ ವಿಧಾನದಲ್ಲಿ, ಕೆಲವೆಡೆ ಕಥಾಂಶಗಳ ವ್ಯತ್ಯಾಸದಲ್ಲಿನ ರಾಚಪುಕ್ಕಿಂತ ಪ್ರತ್ಯೇಕವಾಗಿ ನಿಲ್ಲುತ್ತಾನೆ.

ಉದಾಹರಣೆಗೆ, ರಾಚಪು.ದಲ್ಲಿ ಸೀತೆಯ ಚಿತ್ರವನ್ನು ನಾರದನು ಉದ್ಯಾನ ವನದಲ್ಲಿರಿಸಿ ಹೋಗುತ್ತಾನೆ. ಆ ಚಿತ್ರವನ್ನು ನೋಡಿ ಆಕರ್ಷಿತನಾದ ಪ್ರಭಾಮಂಡಲ ಮೂರ್ಛಿತನಾಗುತ್ತಾನೆ. ಪ್ರಭಾಮಂಡಲನ ತಂದೆ ಇಂದುಗತಿ, ಚಿತ್ರದ ಬಗೆಗೆ ಕೇಳುತ್ತಿದ್ದಾಗ ನಾರದನು ಅದನ್ನು ತಾನಿರಿಸಿರುವುದಾಗಿ ಹೇಳಿ ಸೀತೆಯ ವಿಷಯ ವನ್ನು ತಿಳಿಸುತ್ತಾನೆ. ಆದರೆ ಕುಮುದೇಂದು ಈ ಒಂದು ಜಾನಪದೀಯ ಧಾಟಿಗೆ ಹೋಗದೆ ನಾರದನು ನೇರವಾಗಿ ಇಂದುಗತಿಯ ಬಳಿಗೆ ಹೋಗಿ ಚಿತ್ರವನ್ನು ತೋರಿಸಿ ಈಕೆ ಪ್ರಭಾಮಂಡಲನಿಗೆ ಯೋಗ್ಯಳಾದ ಕನ್ನೆ ಎನ್ನುತ್ತಾನೆ.

ಕಲ್ಯಾಣಮಾಲೆ ಹಾಗೂ ಲಕ್ಷ್ಮಣರು ಕುಮುದೇಂದುವಿನಲ್ಲಿ ಸರಳ ನೇರ ಸ್ವಭಾವದವರಾಗಿ ಕಂಡುಬರುತ್ತಾರೆ. ಮೂಲದಲ್ಲಿ, ನೀರನ್ನು ತೆಗೆದುಕೊಂಡು ಹೋಗಲು ಬಂದ ಲಕ್ಷ್ಮಣನನ್ನು ಕಂಡ ಕಲ್ಯಾಣಮಾಲೆ ಆತನಲ್ಲಿ ಮೋಹಗೊಳ್ಳು

ತ್ತಾಳೆ. ಸೀತೆಯಲ್ಲಿಗೆ ನೀರನ್ನು ಕಳುಹಿಸಲು ತನ್ನ ಸಖಿಯನ್ನು ಕಳಿಸುತ್ತಾಳೆ. ಅವರಿಬ್ಬರೂ ಅಲ್ಲಿರುವಾಗ ಸೀತಾರಾಮರೇ ಅಲ್ಲಿಗೆ ಹುಡುಕಿಕೊಂಡು ಬರುತ್ತಾರೆ. ಇಲ್ಲಿ ಇವರಿಬ್ಬರೂ ನಿರ್ಭಿಡೆಯಿಂದ ಹಿರಿಯರ ಬಗ್ಗೆ ಕಾಳಜಿ ಇಲ್ಲದವರಂತೆ ನಡೆದು ಕೊಳ್ಳುತ್ತಾರೆ. ಆದರೆ ಕುಮುದೇಂದುವಿನಲ್ಲಿ ಹಾಗಲ್ಲ. ಕಲ್ಯಾಣವಾಲೆ ಪುರಕ್ಕೆ ಬರಬೇಕೆಂದು ಕೇಳಿಕೊಂಡಾಗ ಆತ ನನ್ನ ಅಣ್ಣನಿಗೆ ಹೇಳಿ ಬರುತ್ತೇನೆ ಎನ್ನುತ್ತಾನೆ.

ಚಂದ್ರನಖಿಯು ರಾಮಲಕ್ಷ್ಮಣರನ್ನು ಗಾಂಧರ್ವ ವಿವಾಹ ಮಾಡಿಕೊಳ್ಳ ಬೇಕೆಂದು ಕೇಳಿಕೊಂಡಾಗ ಸೀತೆ ಮುಗುಳನಗೆಯನ್ನು ಸೂಸುತ್ತಾಳೆ. ಅದನ್ನು ಕಂಡು ಚಂದ್ರನಖಿ ಅಪಮಾನಿತಳಾಗುತ್ತಾಳೆ, ಕುಮುದೇಂದುವಿನಲ್ಲಿ ಲಕ್ಷ್ಮಣ ಆಕೆಯನ್ನು ಕಂಡು 'ನರರಾಕೃತಿಯಲ್ಲಿಂತಿವಳ್ ಠಕ್ಕಿಂದಿರ್ಪಳ್' ಎಂದು ಆಕೆಯನ್ನು ನಿರಾಕರಿಸುವ ಮಾತು ಬರುತ್ತದೆ.

ಸೀತಾಪಹರಣದ ಸುದ್ದಿಯನ್ನು ಇಲ್ಲಿ ಲಕ್ಷ್ಮಣನು ಮರದ ಮೇಲಿದ್ದ ಗಿಳಿಗಳಿಂದ ತಿಳಿದುಕೊಳ್ಳುತ್ತಾನೆ. ಆ ಗಿಳಿಗಳು ರಾವಣನು ಸೀತೆಯನ್ನು ಅಪಹರಿಸಿ ಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ಆಕೆಯು ಆಡುತ್ತಿದ್ದ ಮಾತುಗಳನ್ನು ಹೇಳಿದವು. ಬಹುಶಃ ವನವಾಸದ ಸಂದರ್ಭದಲ್ಲಿ ಪ್ರಕೃತಿಯ ಮಡಿಲಿನಲ್ಲಿದ್ದ ಅವರಿಗೆ ಈ ಬಗೆಯಾದ ಪ್ರಾಣಿಗಳ ತುಡಿತ ಉಚಿತವೆಂಬುತೆ ಕವಿ ಜಾನಪದೀಯ ನಡೆಯ ಮಾಧುರ್ಯವನ್ನು ತಂದಿದ್ದಾನೆ.

ಮಾಯಾ ಸುಗ್ರೀವನಿಂದ ವಂಚಿತನಾದ ಸುಗ್ರೀವನೂ ರಾಮಲಕ್ಷ್ಮಣರಿಂದ ಬಗ್ಗೆ ತಿಳಿಯುವುದು ಕಿನ್ನರರ ಹಾಡುಗಳಿಂದ ; ಮೂಲದಲ್ಲಿ ಸುಗ್ರೀವನು ನಾರದನಿಂದ ಅವರ ವಿಚಾರವನ್ನು ತಿಳಿಯುತ್ತಾನೆ.

ವಾಲ್ಮೀಕಿ, ಹರಿಷೇಣಾದಿಗಳಲ್ಲಿ ಕಂಡುಬರುವ ಸೇತುಬಂಧದ ವಿಚಾರ ಇಲ್ಲಿ ಕಂಡುಬರುತ್ತದೆ. ಕುಮುದೇಂದು ರಾಮಾಯಣದಲ್ಲಿ ಧರಣೀಶರೆಲ್ಲಾ ಧರಣಿಮಾರ್ಗದಲ್ಲಿಯೂ ಖೇಚರರು ಅಂಬರಮಾರ್ಗದಲ್ಲಿಯೂ ನಡೆದರೆಂದಿದ್ದರೆ, ರಾಜಪು. ದಲ್ಲಿ ಗಗನಗಾಮಿನೀ ವಿದ್ಯೆಯಿಂದ ಅವರೆಲ್ಲರೂ ಸಮುದ್ರವನ್ನು ದಾಟಿದ ವಿಚಾರ ಬರುತ್ತದೆ.

ಈ ಕೆಲವು ವಿಷಯಗಳನ್ನು ಬಿಟ್ಟರೆ ಕವಿ ಮೂಲಕ್ಕೆ ನಿಷ್ಠಾವಂತನಾಗಿ ಸಂಗ್ರಹ ವಾಗಿ ಸುಲಲಿತವಾಗಿ ರಾಮಕಥೆಯನ್ನು ನಿರೂಪಿಸಿದ್ದಾನೆ. ರಾಮಪಟ್ಟಾಭಿಷೇಕದ ಈ ಕಾವ್ಯ ಮುಕ್ತಾಯವಾಗಿದೆ. ಉತ್ತರರಾಮಕಥೆ ಇಲ್ಲಿ ಬಂದಿಲ್ಲ.

9-3 : ನಾಗರಾಜನ (ಕ್ರಿ.ಶ. 1331) 'ಪುಣ್ಯಾಸ್ರವ'ದಲ್ಲಿ ಬರುವ ಸುಗ್ರೀವನ ಕಥೆ (ಆ. IV) ಬಾಲಿಯ ಕಥೆ (ಆ. V) ಪ್ರಭಾಮಂಡಲನ ಕಥೆ (ವಂ.ಆ) ಸೀತಾ ದೇವಿಯ ಕಥೆ (ಆ. XI) ನಳನೀಳರ ಕಥೆ (ಆ. VII) ಲವಕುಶರ ಕಥೆ ಆ. XI

(ಏಕಾದಶ ಅ) ವಜ್ರಕರ್ಣನ ಕಥೆ ಆ. VII (ಸ.ಅ) ಧಾರಣನ ಕಥೆ ಆ. XI (ಏಕದಶ ಅ) ಪ್ರಭಾಮಂಡಲನ ಕಥೆ (ವ್ಯಾದ.ಅ) ಹೀಗೆ ಒಂಬತ್ತು ಕತೆಗಳಲ್ಲಿ ವಿಮಲಸೂರಿ ಪರಂಪರೆಯಲ್ಲಿ ಬಂದ ರಾಚಪು. ಪರಂಪರೆಯನ್ನು ಪ್ರಮುಖವಾಗಿ ಅನುಸರಿಸಿ ರಾಮಕಥೆಯ ಉಪಕಥೆಗಳನ್ನು ಸಮಾವೇಶಗೊಳಿಸಿದ್ದಾರೆ.[31] ಶ್ರಾವಕರ ಷಟ್ಕರ್ಮದ ಮಹಿಮೆಯನ್ನು ನಿರೂಪಿಸುವಲ್ಲಿ ಈ ಕಥೆಗಳು ಅಲ್ಲಲ್ಲಿ ಚದುರಿ ಬರುತ್ತವೆ.

ಬಾಲಿಯ ಕಥೆಯಲ್ಲಿ ಅಲ್ಪ ವ್ಯತ್ಯಾಸವಿದೆ. ಮೂಲದಲ್ಲಿ ರಾವಣನು ವಾಲಿಯ ಮಗಳನ್ನು ಮದುವೆಯಾಗಲು ಇಚ್ಛಿಸಿದಾಗ, ಬಾಲಿಯು ಆತನಿಗೆ ಎರಗಬೇಕಾಗುವುದೆಂದು ಬಗೆದು ತನ್ನ ವ್ರತಕ್ಕೆ ಭಂಗವುಂಟಾಗುವುದೆಂದು ದೀಕ್ಷಿತನಾಗುವ ವೃತ್ತಾಂತವು ಬರುತ್ತದೆ." ಆದರೆ ಇಲ್ಲಿ ವಾಲಿಯ ಮಗಳನ್ನು ರಾವಣನು ಮದುವೆಯಾಗಬೇಕೆಂದು ಇಚ್ಛಿಸಿದ ಪ್ರಸಂಗ ಬರುವುದಿಲ್ಲ. ರಾವಣ ವಾಲಿಯ ಮೇಲೆ ಎರಗಿದಾಗ ರಾವಣನನ್ನು ಸೋಲಿಸಿದ ಪ್ರಸಂಗದ ಅನಂತರ ವಾಲಿಯು ದೀಕ್ಷಿತನಾಗುವ ಪ್ರಸಂಗವು ಬರುತ್ತದೆ. (ಹೇಮಚಂದ್ರನ ಪ್ರಭಾವ ಇಲ್ಲಿ ಕಂಡು ಬರುತ್ತದೆ).

ಸಂಘದಾಸನ ವಸುದೇವ ಹಿಂಡಿಯಲ್ಲಿ ಬರುವ ರಾಮಕಥೆಯ ಪರಂಪರೆ :-

(ಕಾಲ ; 609 ರ ಒಳಗೆ) (ಭಾಷೆ : ಜೈನ ಮಹಾರಾಷ್ಟ್ರಿ) 'ವಸುದೇವ ಹಿಂಡಿ'ಯ ಪ್ರಥಮ ಖಂಡದ 14ನೇ ವಿಭಾಗದಲ್ಲಿ ರಾಮಕಥೆಯು ಸಂಕ್ಷಿಪ್ತವಾಗಿ ದೊರೆಯುತ್ತದೆ. ಇದರಲ್ಲಿ ಉತ್ತರ ರಾಮಾಯಣ ಕಂಡುಬರುವುದಿಲ್ಲ.

ಸಂಘದಾಸನ ರಾಮಕತೆ ಹೆಚ್ಚು ವಾಲ್ಮೀಕಿರಾಮಾಯಣಕ್ಕೆ—ವ್ಯಾಸರಾಮೋಪಖ್ಯಾನಕ್ಕೆ ಹೋಲುತ್ತದೆ. ಕೆಲವೆಡೆಯಲ್ಲಿ ವಾಲ್ಮೀಕಿ ರಾಮಾಯಣ ಪರಂಪರೆಗೂ, ಪಉಮಚ ಪರಂಪರೆಗೂ ವಿಭಿನ್ನವಾಗಿ ನಿಲ್ಲುವುದುಂಟು.

ದಶಗ್ರೀವನ ವಂಶಪರಂಪರೆಯನ್ನು ಕೊಡುವಲ್ಲಿ ಈತ ಪಉಮಚ, ಹಾಗೂ ವಾಲ್ಮೀರಾ,ಕ್ಕಿಂತ ಬೇರೆಯಾಗಿ ನಿಲ್ಲುತ್ತಾನೆ. ಸಂಘದಾಸನು—ಬಲಿ ಸಹಸ್ರಗ್ರೀವ ಪಂಚಗ್ರೀವ, ವಿಂಶತಿಗ್ರೀವರ ಹೆಸರನ್ನು ಕೊಟ್ಟಿದ್ದಾನೆ. ವಿಂಶತಿಗ್ರೀವನ ಪತ್ನಿಯರು ಇಬ್ಬರು. ಅವರಲ್ಲಿ ಕೈಕೇಯಿಯಲ್ಲಿ ಜನಿಸಿದವನು ರಾವಣ ಎಂದಿದ್ದಾನೆ.[33]

ಮೊಟ್ಟಮೊದಲ ಬಾರಿಗೆ ಜೈನ ಪರಂಪರೆಯಲ್ಲಿ ಸೀತೆಯನ್ನು ಮಂಡೋದರಿಯ ಮಗಳೆಂದು ಹೇಳಿರುವ ವಿಷಯ ಇಲ್ಲಿ ದೊರೆಯುತ್ತದೆ. ರಾವಣನಿಗೆ ಮಂಡೋದರಿಯಲ್ಲಿ ಹುಟ್ಟುವ ಪ್ರಥಮ ಪುತ್ರಿಯಿಂದ ವಂಶನಾಶವಾಗುತ್ತದೆಂಬುದನ್ನು ಲಾಕ್ಷಣಿಕರಿಂದ ತಿಳಿದುಬರುತ್ತದೆ. ರಾವಣ ಮಂಡೋದರಿಯರಿಂದ ತಿರಸ್ಕೃತಳಾದ ಸೀತೆ,

ಜನಕನ ಉದ್ಯಾನವನದ ನೇಗಿಲ ಬಳಿ ಪೆಟ್ಟಿಗೆಯಲ್ಲಿ ಕಂಡುಬರುತ್ತಾಳೆ. ಜನಕ ಮತ್ತು ಧಾರಿಣಿಯರು ಆಕೆಯನ್ನು ಪೋಷಿಸುತ್ತಾರೆ. ಲಾಕ್ಷಣಿಕರು ಹೇಳುವ ವೃತ್ತಾಂತ ವಾಲ್ಮೀರಾ.ದಲ್ಲಾಗಲೀ ವಿಮಲಸೂರಿಯ ಪರಂಪರೆಯಲ್ಲಾಗಲೀ ದೊರೆಯುವುದಿಲ್ಲ. ವಾಲ್ಮೀರಾ.ದಲ್ಲಿ ಸೀತೆ ಸಾಮಾನ್ಯದವಳಲ್ಲ. ಭೂಮಿಯಿಂದ ಉದ್ಭವಿಸಿ ಬಂದವಳು. ಅಲ್ಲಿ ಆಕೆ 'ಅಯೋನಿಜೆ' ವಿಮಲಸೂರಿಯ ಪ್ರಕಾರ ಈಕೆ ಜನಕ ಹಾಗೂ ವಿದೇಹರಿಗೆ ಸ್ವಾಭಾವಿಕವಾಗಿ ಜನಿಸಿದವಳು.

ಸೀತಾ ಸ್ವಯಂವರದ ಪ್ರಸಂಗದಲ್ಲಿ ಸೀತೆ ಅನೇಕ ಮಂದಿ ರಾಜಪುತ್ರರಲ್ಲಿ ರಾಮನನ್ನು ವರಿಸುತ್ತಾಳೆ. ವಾಲ್ಮೀರಾ. ಹಾಗೂ ಪಉಚ.ದಲ್ಲಿ ಬರುವ (ಈ ಎರಡರಲ್ಲಿಯೂ ಬಿಲ್ಲಿನ ಹಿನ್ನೆಲೆಯ ವೃತ್ತಾಂತ ಬೇರೆಯಾಗಿದೆ). ಬಿಲ್ಲಿನ ವೃತ್ತಾಂತ ಬರುವುದಿಲ್ಲ.

ಸಂಘದಾಸನ ಪ್ರಕಾರ ಮತ್ತು ವಿಮಲಸೂರಿಯ ಪ್ರಕಾರ ಶತ್ರುಘ್ನ ಕೈಕೆಯ ಮಗ, ವಾಲ್ಮೀರಾ.ದ ಪ್ರಕಾರ ಸುಮಿತ್ರೆಯ ಮಗ.

ಸಂಘದಾಸನ ಪ್ರಕಾರ ದಶರಥ ಕೈಕೇಯಿಗೆ ಎರಡು ಬಾರಿ ವರವನ್ನು ನೀಡುತ್ತಾನೆ. ಒಮ್ಮೆ ಕೈಕೇಯಿ ಆತನ ಬಂಧುಗಳನ್ನು ಚೆನ್ನಾಗಿ ಸತ್ಕರಿಸಿದ್ದಕ್ಕಾಗಿ, ಮತ್ತೊಮ್ಮೆ ಶತ್ರುಗಳಿಂದ ತನ್ನನ್ನು ಬಿಡುಗಡೆ ಮಾಡಿಸಿದುದಕ್ಕಾಗಿ.[34]

ರಾಮನು ರಾವಣನೊಂದಿಗೆ ಯುದ್ಧಕ್ಕೆ ಹೊರಟಾಗ ರಾಮನ ಸಹಾಯಕ್ಕಾಗಿ ಭರತನು ಚತುರಂಗ ಬಲವನ್ನು ಕಳಿಸುತ್ತಾನೆ. ವಾಲ್ಮೀರಾ. ಹಾಗೂ ಪಉಚಗಳಲ್ಲಿ ಈ ಪ್ರಸಂಗವಿಲ್ಲ.

ವಾಲ್ಮೀರಾ.ದಂತೆ ಸಂಘದಾಸನಲ್ಲಿಯೂ ಮಂಥರೆಯ ಪಾತ್ರ ಬರುತ್ತದೆ. ಸಂಘದಾಸ ವಾಲ್ಮೀರಾ.ದಂತೆ ವನವಾಸದ ನಿರ್ದಿಷ್ಟ ಅವಧಿಯನ್ನು ಸೂಚಿಸಿಲ್ಲ.

ವಾಲ್ಮೀಕಿ ಹಾಗೂ ಸಂಘದಾಸರ ಪ್ರಕಾರ ದಶರಥ ರಾಮನ ಅಗಲಿಕೆಯನ್ನು ಸಹಿಸಲಾರದೆ ಸಾಯುತ್ತಾನೆ. ವಿಮಲಸೂರಿಯ ಪ್ರಕಾರ ದಶರಥ ಜೈನಮುನಿಯಾಗುತ್ತಾನೆ.

ವಾಲ್ಮೀರಾ. ದಂತೆ ಪಾದುಕೆಯ ವಿಷಯ ಸಂಘದಾಸನಲ್ಲಿಯೂ ಬರುತ್ತದೆ. ರಾಮ ಹಿಂದಿರುಗಿ ಬರುವವರೆಗೆ ಪಾದುಕೆಗಳನ್ನು ರಾಮನ ಪ್ರತಿನಿಧಿಯನ್ನಾಗಿ ಸಿಂಹಾಸನದ ಮೇಲಿಟ್ಟು ದೇಶವನ್ನು ರಕ್ಷಿಸುತ್ತಾನೆ. ವಿಮಲಸೂರಿಯ ಪ್ರಕಾರ, ರಾಮನನ್ನು ಹಿಂದಕ್ಕೆ ಕರೆದುಕೊಂಡು ಬರಲು ವಿಫಲನಾದ ಭರತ, ರಾಮನ ಆಜ್ಞೆಯ ಪ್ರಕಾರ ರಾಮನು ಬರುವವರೆಗೆ ರಾಜ್ಯಭಾರವನ್ನು ನೋಡಿಕೊಳ್ಳುವುದಾಗಿಯೂ ರಾಮನ ಆಗಮನದ ಅನಂತರ ತಾನು ದೀಕ್ಷೆಯನ್ನು ತೆಗೆದುಕೊಳ್ಳುವುದಾಗಿಯೂ ಹೇಳಿ ಉತ್ತಮ ಶ್ರಾವಕನಾಗಿ ರಾಜ್ಯವನ್ನು ಆಳುತ್ತಾನೆ.

ಶೂರ್ಪನಖಿಯ ವೃತ್ತಾಂತ, ಮಾಯಾಜಿಂಕೆ, ವಾಲಿಪ್ರಸಂಗ, ಸಮುದ್ರಕ್ಕೆ ಸೇತುವೆ ಕಟ್ಟುವ ವೃತ್ತಾಂತ ಇವೆಲ್ಲವೂ ವಾಲ್ಮೀರಾದಂತೆ ಬರುತ್ತದೆ.

ಮೇಲಿನ ವಿವರಣೆಗಳನ್ನು ಗಮನಿಸಿದಾಗ ಸಂಘದಾಸನು ಜೈನ ಪ್ರಕ್ರಿಯೆಯ ಮುಖ್ಯವಾದ ಸೂತ್ರಗಳನ್ನು ಹಿಡಿದು ತನ್ನ ಕಾಲದಲ್ಲಿ ಪ್ರಚಾರದಲ್ಲಿದ್ದ ಜನಪ್ರಿಯ ವಾಗಿದ್ದ ವಾಲ್ಮೀರಾ, ವನ್ನು ಅನುಸರಿಸಿದ್ದಾನೆಂದು ವ್ಯಕ್ತವಾಗುತ್ತದೆ. ಇತರ ಜೈನ ರಾಮಾಯಣಗಳಲ್ಲಿ ಕಂಡು ಬರುವಂತೆ, ವಾಲ್ಮೀರಾದ ಎಷ್ಟೋ ಅಲೌಕಿಕ ಅಂಶಗಳು ಇಲ್ಲಿ ಕಂಡುಬರುವುದಿಲ್ಲ. (ಉದಾ. ದಶರಥನು ಕೈಕೇಯಿಗೆ ವರಗಳನ್ನು ಕೊಟ್ಟ ಸಂದರ್ಭ, ರಾಮ ನರನಾಯಕನೇ ಹೊರತು ಅವತಾರ ಪುರುಷನಲ್ಲ)

ಸಂಘದಾಸನ ಕಥೆ ನೇರ ಮುಖ್ಯ ಕಥೆಗೆ ಮಾತ್ರ ಪ್ರಾಧಾನ್ಯಕೊಟ್ಟಿದ್ದಾನೆ. ಉಪಕಥೆಗಲ್ಲ.

ಹರಿಷೇಣನ (ಕ್ರಿ.ಶ. 932) ಬೃಹತ್ಕಥಾಕೋಶವನ್ನು 35 ಸಂಘದಾಸನ ಇದೇ ಪರಂಪರೆಗೆ ಸೇರಿಸಬಹುದಾಗಿದೆ, ಸಂಘದಾಸನಂತೆ ವಾಲ್ಮೀಕಿರಾಮಾಯಣಕ್ಕೆ ಹೆಚ್ಚು ಒಲಿದಿರುವ ದೃಷ್ಟಿಯಿಂದ ಬೃಹತ್ಕಥಾಕೋಶದಲ್ಲಿಯು 84 ಮತ್ತು 89ನೇ ಕಥಾನಕಗಳಲ್ಲಿ ರಾಮಕಥೆಯು ಬರುತ್ತದೆ. 76ನೇ ಕಥಾನಕದಲ್ಲಿ ನಾರದ-ಪರ್ವತರ ಕಥೆ ಯಾಗಮೂಲದ ವಿಷಯಗಳು ಬರುತ್ತವೆ. ಈ ವಿಷಯವು ಇತರ ಕೆಲವು ಜೈನ ರಾಮಾಯಣಗಳಲ್ಲಿ ಕಂಡುಬರುತ್ತದೆ. ಉತ್ತರ ರಾಮಕಥೆ 89ನೇ ಕಥಾನಕದಲ್ಲಿ ಬರುತ್ತದೆ ಸಂಘದಾಸನಲ್ಲಿ ಉತ್ತರರಾಮಾಯಣದ ಕಥೆ ಇಲ್ಲ. ಇಲ್ಲಿ ಬರುವ ಕಥೆಯು ದಿಗಂಬರ ಪರಂಪರೆಗೆ ಸೇರಿದ ಪಉಚ ಮತ್ತು ಗುಣಸೇನರ ಪರಂಪರೆಗಿಂತ ಭಿನ್ನವಾಗಿ ನಿಲ್ಲುತ್ತದೆಯಲ್ಲದೆ, ಎಷ್ಟೋ ವಿಷಯಗಳಲ್ಲಿ ವಾಲ್ಮೀರಾಕ್ಕೆ ಅವುಗಳಿಗಿಂತ ಹತ್ತಿರವಾಗಿ ನಿಲ್ಲುತ್ತದೆ. ಹರಿಷೇಣನು ನೇರವಾಗಿ ಸಂಘದಾಸನನ್ನು ಅನುಸರಿಸದಿದ್ದಲ್ಲಿ ಸಂಘ ದಾಸ ಮತ್ತು ಹರಿಷೇಣನ ರಾಮಕಥೆಗೆ ಹತ್ತಿರವಾಗಿ ನಿಲ್ಲುವ ಒಂದು ಮೂಲವು ಇದ್ದಿರಬೇಕೆನಿಸುತ್ತದೆ.

ಕೌಸಲ್ಯಾ, ಸುಮಿತ್ರ, ಕೈಕೆ ಹಾಗೂ ಸುಪ್ರಜಾ ಎಂಬುವರು ದಶರಥನ ರಾಣಿಯರು, ಇವರಿಗೆ ಕ್ರಮವಾಗಿ ರಾಮ, ಲಕ್ಷ್ಮಣ, ಭರತ ಶತ್ರುಘ್ನರು ಜನಿಸಿದರು. ಪಉಚ. ಪ್ರಕಾರ ಅಪರಾಜಿತಾ ಸುಮಿತ್ರಾ ಕೈಕೇಯಿ ಇವರು ದಶರಥನ ರಾಣಿಯರು, ಇವರಲ್ಲಿ ಮೊದಲಿಬ್ಬರಲ್ಲಿ ರಾಮ ಲಕ್ಷ್ಮಣರೂ ಕೈಕೇಯಿಯಲ್ಲಿ ಭರತಶತ್ರುಘ್ನರೂ ಜನಿಸಿದರು. ಉತ್ತರ ಪುರಾಣದ ಪ್ರಕಾರ ಸುಬಲಾ ರಾಮನ ತಾಯಿ, ಕೈಕೇಯಿಯು ಲಕ್ಷ್ಮಣನ ತಾಯಿ. (ಉಳಿದ ತಾಯಂದಿರ ಹೆಸರು ಬರುವುದಿಲ್ಲ).

ಬೃಹಕೋ. ರಾಮಕಥೆಯಲ್ಲಿ ಸೀತಾ ಸ್ವಯಂವರದ ಸಂದರ್ಭದಲ್ಲಿ ಬಿಲ್ಲಿನ ವೃತ್ತಾಂತ ಬರುವುದಿಲ್ಲ ಸ್ವಯಂವರದಲ್ಲಿ ಸೀತೆ ಆ ಪ್ರಸಂಗವಿಲ್ಲದೇ ರಾಮನನ್ನು ವರಿಸಿದ ವೃತ್ತಾಂತ ಬರುತ್ತದೆ.

ಕೈಕೆ ರಾಮನಿಗೆ ವನವಾಸವನ್ನು ಬೇಡಿದುದು, ಶೂರ್ಪಣಕಿ ಪ್ರಸಂಗ, (ವಸುದೇವ ಹಿಂಡಿಯಲ್ಲಿ ರಾಮ ಶೂರ್ಪಣಖಿಯು ಕಿವಿ ಮೂಗುಗಳನ್ನು ಕತ್ತರಿಸುತ್ತಾನೆ), ಸೀತೆ ಕಟುನುಡಿಗಳಿಂದ ಲಕ್ಷ್ಮಣನನ್ನು ರಾಮನ ಸಹಾಯಕ್ಕೆ ಕಳುಹಿಸಿದ ಪ್ರಸಂಗ, ಸೇತುಬಂಧದ ವಿಚಾರಗಳು ವಾಲ್ಮೀಕಿ ರಾಮಾಯಣದಂತೆ ಬರುತ್ತವೆ. ವಸುದೇವ ಹಿಂಡಿಯಲ್ಲಿಯೂ ಇವು ಸಮಾವೇಶಗೊಂಡಿದೆ. ಹರಿಷೇಣನೂ ಜಟಾಯು ಹಾಗೂ ವಾಲಿಯ ಪ್ರಸಂಗಗಳನ್ನು ಕೈ ಬಿಟ್ಟಿದ್ದಾನೆ.

ಇಲ್ಲಿ ಖರ ದೂಷಣ ಮೊದಲಾದ 14,000 ರಾಕ್ಷಸರನ್ನು ಕೊಂದವನು. ರಾಮ ರಾವಣನನ್ನು ಕೊಲ್ಲುವವನು. ರಾಮ ಜೈನ ಪರಂಪರೆಗಳೆಲ್ಲದರಲ್ಲಿಯೂ ರಾವಣನನ್ನು ಕೊಲ್ಲುವವನು ಲಕ್ಷ್ಮಣನೆಂದು ಬಂದರೆ ಇಲ್ಲಿ ಮಾತ್ರ ರಾಮನೆಂದು ಬರುತ್ತದೆ. ವಾಲ್ಮೀಕಿರಾ. ಪ್ರಭಾವದ ಪ್ರಾಚುರ್ಯ ಗಮನಿಸಬಹುದು.

ಈ ಮೇಲಿನ ಪ್ರಸಂಗಗಳು, ಜೈನ ಪರಂಪರೆಯಲ್ಲಿ ಸ್ವತಂತ್ರವಾದ ಸ್ಥಾನವನ್ನು ಗಳಿಸಿಕೊಂಡಿರುವ ಪಉಪ ಪರಂಪರೆ ಹಾಗೂ ಉತ್ತಮ ಪರಂಪರೆಗಿಂತ ಬೇರೆಯಾಗಿರುವುದನ್ನು ಗಮನಿಸಬಹುದಾಗಿದೆ. ದಶರಥರಾಣಿಯರ ಸಂಖ್ಯೆ, ಹೆಸರು ಮೊದಲಾದೆಡೆಗಳಲ್ಲಿ ಇದು ವಾಲ್ಮೀರಾ. ಕ್ಕಿಂತ ಭಿನ್ನವಾಗಿ ನಿಲ್ಲುತ್ತದೆ. ಜೈನಪ. ಯಂತೆ ಸೀತೆ ಸಂನ್ಯಾಸಿನಿಯಾದ ವಿಚಾರವು ಬರುತ್ತದೆ.

ಜೈನ ಪರಂಪರೆಯಲ್ಲಿ ಸಂಘದಾಸನ 'ವಸುದೇವ ಹಿಂಡಿ' ಹಾಗೂ ಹರಿಭದ್ರನ 'ಬೃಹತ್ಕಥಾಕೋಶ'ದಲ್ಲಿ ಬರುವ ರಾಮಕಥೆಗಳು ಉಳಿದ ಎರಡು ಪ್ರಚಲಿತವಾದ ವಿಮಲಸೂರಿ ಹಾಗೂ ಗುಣಭದ್ರರ ಪರಂಪರೆಗಿಂತ ಪ್ರತ್ಯೇಕವಾಗಿ ನಿಲ್ಲುತ್ತವೆ.

ಗುಣಭದ್ರ ಪರಂಪರೆ :

ಗುಣಭದ್ರ (ಕ್ರಿ.ಶ. 897) ಉತ್ತರ ಪುರಾಣದಲ್ಲಿ ದೊರೆಯುವ ರಾಮಕಥೆ[14].

ಮುನಿಸುವ್ರತ ಜೀವನ ಚರಿತ್ರೆಯನ್ನು ನಿರೂಪಿಸುವಾಗ ರಾಮಕಥೆಯು ಉತ್ತಪು.ದಲ್ಲಿ ಬರುತ್ತದೆ. ಅದರ ಕಥಾಸಾರ ಹೀಗಿದೆ :—

ವಾರಣಾಸೀ ಪುರವನ್ನು ಆಳುತ್ತಿದ್ದ ದಶರಥನಿಗೆ ರಾಮಲಕ್ಷ್ಮಣರೆಂಬ ಮಕ್ಕಳಾದರು. ದಶರಥನು ರಾಜಧಾನಿಯನ್ನು ಸಾಕೇತಪುರಕ್ಕೆ ಬದಲಾಯಿಸಿದನು. ಅಲ್ಲಿಯೇ ಭರತ ಶತ್ರುಘ್ನರ ಜನನವಾಯಿತು. ಇತ್ತ ಮಿಥಿಲೆಯ ರಾಜನಾದ ಜನಕನಿಗೂ ಅವನ ಹೆಂಡತಿ ವಸುಧಾದೇವಿಗೂ ಒಂದು ಹೆಣ್ಣುಮಗು ಸಿಕ್ಕಿತು. ಅದಕ್ಕೆ ಸೀತೆಯೆಂದು ಹೆಸರಾಯಿತು.

ಲಂಕಾಧಿಪತಿಯಾದ ಪುಲಸ್ತ್ಯ ಹಾಗೂ ಮೇಘಶ್ರೀಯವರ ಮಗನೇ ರಾವಣ. ಒಮ್ಮೆ ತಪಸ್ಸು ಮಾಡುತ್ತಿದ್ದ ಮಣಿಮತಿ ಎಂಬುವವಳನ್ನು ರಾವಣನು ಕಂಡು

ಮೋಹಿಸಲು ಅವಳು ಕೋಪಗೊಂಡು ಅವನನ್ನು ಕೊಲ್ಲಬೇಕೆಂದು ಸಂಕಲ್ಪಿಸಿ ಮಂಡೋದರಿಯ ಗರ್ಭವನ್ನು ಹೊಕ್ಕು ಮಗಳಾಗಿ ಹುಟ್ಟಿದಳು. ಈ ಕೂಸು ಹುಟ್ಟು ತ್ತಲೇ ಅನೇಕ ಅಪಶಕುನಗಳಾದವು. ಮಂಡೋದರಿ ಹೆದರಿ ಅದನ್ನು ಪೆಟ್ಟಿಗೆಯಲ್ಲಿ ಹಾಕಿಟ್ಟು ಮರೀಚನ ಕೈಗೆ ಎಲ್ಲಿಯಾದರೂ ದೂರ ಎಸೆದು ಬರಲು ಕೊಟ್ಟಳು. ಅವನು ಮಿಥಿಲೆಯ ಸಮೀಪದಲ್ಲಿರುವ ಒಂದು ತೋಟದಲ್ಲಿ ಆ ಪೆಟ್ಟಿಗೆಯನ್ನು ಹೂತಿಟ್ಟು ಹೋದನು. ಯಜ್ಞಕ್ಕಾಗಿ ಭೂಶೋಧನೆ ನಡೆಸುತ್ತಿದ್ದ ಮಿಥಿಲೆಯ ರಾಜ ಜನಕನಿಗೆ ಅದು ದೊರೆಯಿತು. ಜನಕನೂ ರಾಣಿ ವಸುಂಧರೆಯೂ ಆ ಮಗುವಿಗೆ ಸೀತೆ ಎಂದು ಹೆಸರಿಟ್ಟು ಅದನ್ನು ಬೆಳೆಸಿದರು.

ರಾಮನು ಸೀತೆಯನ್ನು ಮದುವೆಯಾದನು. ಲಕ್ಷ್ಮಣ, ಸೀತೆಯರೊಡನೆ ರಾಮನು ವಾರಣಾಸೀಪುರಕ್ಕೆ ಬಂದು ಸುಖವಾಗಿದ್ದನು. ನಾರದನು ರಾವಣನ ಬಳಿಗೆ ಹೋಗಿ ಸೀತೆಯ ಸೌಂದರ್ಯವನ್ನು ವರ್ಣಿಸಿ ಅವಳಲ್ಲಿ ಅನುರಕ್ತನಾಗುವಂತೆ ಮಾಡಿದನು. ರಾವಣನು ಶೂರ್ಪಣಖಿಯನ್ನು ಕರೆದು ಸೀತೆಯ ಮನಸ್ಸನ್ನು ತಿಳಿದುಕೊಂಡು ಬರುವಂತೆ ಆಜ್ಞಾಪಿಸಲು ಅವಳು ವಾರಣಾಸಿಯ ಹತ್ತಿರವಿದ್ದ ಚಿತ್ರಕೂಟೋದ್ಯಾನಕ್ಕೆ ಬಂದು ಅಲ್ಲಿ ರಾಮನೊಡನೆ ವಿಹರಿಸುತ್ತಿದ್ದ ಸೀತೆಯನ್ನು ನೋಡಿ ಮುದುಕಿಯ ವೇಷಹಾಕಿಕೊಂಡು ಅವಳೊಡನೆ ಮಾತಾಡಿ ಪ್ರಯೋಜನ ವಾಗದೆ ತಿರಸ್ಕೃತಳಾಗಿ ಹಿಂದಕ್ಕೆ ಹೊರಟುಬಂದಳು. ರಾವಣನೇ ಮಾರೀಚನೊಂದಿಗೆ ಅಲ್ಲಿಗೆ ಬಂದನು. ಮಾರೀಚನನ್ನು ಮಣಿಹರಿಣಪೋತಕವನ್ನಾಗಿ ಮಾಡಿ ಸೀತೆಯ ಎದುರಿನಲ್ಲಿ ಸುಳಿಯುವಂತೆ ಬಿಟ್ಟನು. ರಾಮನು ಅದನ್ನು ಅಟ್ಟಿಕೊಂಡು ಬಹುದೂರ ಹೋಗಿದ್ದಾಗ ರಾವಣನು ಮಾಯಾ ವಿದ್ಯೆಯಿಂದ ರಾಮನ ರೂಪ ತಳೆದು ಪುಷ್ಪಕ ವಿಮಾನವನ್ನು ಪಲ್ಲಕ್ಕಿಯನ್ನಾಗಿ ಮಾರ್ಪಡಿಸಿಕೊಂಡು, ಅಶ್ವಾರೂಢನಾಗಿ ಬಂದು ಸೀತೆಯನ್ನು ಅಪಹರಿಸಿಕೊಂಡು ಹೋದನು. ಆಮೇಲೆ ಸೀತೆಗೆ ತನ್ನ ಎಲ್ಲ ವಿಷಯ ಗಳನ್ನು ತಿಳಿಸಿ ತನ್ನನ್ನು ಸ್ವೀಕರಿಸುವಂತೆ ಒತ್ತಾಯಪಡಿಸಿದನು. ಸೀತೆ ರಾಮನ ವೃತ್ತಾಂತವನ್ನು ತಿಳಿಯುವವರೆಗೆ ಅನಶನವ್ರತವನ್ನು ಹಿಡಿದಳು.

ರಾಮಲಕ್ಷ್ಮಣರು ಸೀತೆಯನ್ನು ಹುಡುಕಿಕೊಂಡು ಬರುವಾಗ ಸುಗ್ರೀವ ಆಂಜನೇಯರ ಸ್ನೇಹವಾಯಿತು. ಲಕ್ಷ್ಮಣ ವಾಲಿಯನ್ನು ಕೊಂದನು. ಹನುಮಂತನು ಸೀತಾನ್ವೇಷಣೆಯನ್ನು ಮಾಡಿಕೊಂಡು ಬಂದನು. ಈ ನಡುವೆ ಮಂಡೋದರಿ ಅಜ್ಞಾತವಾದ ಹೃದಯವಾಣಿಯಿಂದ ಸೀತೆ ತನ್ನ ಪರಿತ್ಯಕ್ತ ಪುತ್ರಿ ಎಂದು ತಿಳಿದು ಅವಳನ್ನು ರಾಮನಿಗೆ ಒಪ್ಪಿಸಿಬಿಡಬೇಕೆಂದು ರಾವಣನನ್ನು ಕೇಳಿಕೊಂಡಳು. ಆದರೆ ಅದು ವ್ಯರ್ಥವಾಯಿತು, ವಿಭೀಷಣ ರಾಮನ ಕಡೆ ಸೇರಿದ. ರಾವಣನು ಯುದ್ಧ ಭೂಮಿಗೆ ಬರುವಂತೆ ಮಾಡಲು ಹನುಮಂತನು ಲಂಕಾದಹನ ಮಾಡಿದ, ಆದರೆ ರಾವಣನು ಶಕ್ತಿ ಸಾಧನೆಗಾಗಿ ಅವಿಚಲನಾಗಿ ನಿರತನಾಗಿದ್ದನು ಮುಂದೆ ನಡೆಯುವ

ಯುದ್ಧದಲ್ಲಿ ರಾವಣ ಮಾಯಾಸೀತೆಯ ಶಿರಸ್ಸನ್ನು ಕತ್ತರಿಸಿದನು. ಆದರಿಂದ ರಾಮನಿಗೆ ಬಹಳ ವ್ಯಥೆಯಾಯಿತು. ಇದು ರಾವಣನ ಮಾಯೆಯೆಂದು ಸುಗ್ರೀವ ನಿಂದ ತಿಳಿಯಿತು. ಕೊನೆಗೆ ಲಕ್ಷ್ಮಣನು ಚಕ್ರಾಯುಧದಿಂದ ರಾವಣನನ್ನು ಕೊಂದನು. ವಾರಣಾಸಿಗೆ ಹಿಂದಿರುಗಿ ಬಂದು ಕೆಲವು ಕಾಲದ ಮೇಲೆ ರಾಮನು ವೈರಾಗ್ಯಪರನಾಗಿ ದೀಕ್ಷಿತನಾದನು. ಲಕ್ಷ್ಮಣನು ಪಂಕಪ್ರಭೆಯೆಂಬ ನರಕಕ್ಕೆ ಹೋದನು.

ಈ ಕಥೆಯು ಪಉಚ.ಕ್ಕಿಂತ ಬೇರೆಯಾಗಿರುವುದನ್ನು ಕಾಣುತ್ತೇವೆ. ಪಉಚ. ದಲ್ಲಿರುವ ಕೆಲವು ವಿಷಯಗಳು ಉತ್ತಪು.ದಲ್ಲಿ ಕಂಡುಬಾರದು. ಭರತನು ತಾಯಿ ತನ್ನ ಮಗನಿಗಾಗಿ ರಾಜ್ಯವನ್ನೇ ಕೊಡಿಸಿಕೊಡಲು ಯತ್ನಿಸಿದುದು, ರಾಮನ ವನವಾಸ, ವೀತಸುಗ್ರೀವನ ವೃತ್ತಾಂತ, ರಾವಣನ ಶಕ್ತಿಯಿಂದ ಲಕ್ಷ್ಮಣನ ಮೂರ್ಛೆ, ಉತ್ತರ–ರಾಮಾಯಣದ ಕಥೆ ಈ ಮೊದಲಾದವು ಇಲ್ಲಿ ಕಂಡುಬರುವುದಿಲ್ಲ.

ಕೆಲವು ವಿಷಯಗಳು ಇಲ್ಲಿ ವ್ಯತ್ಯಾಸಗೊಂಡು ಬಂದಿವೆ. ದಶರಥನ ಮೊದಲಿನ ರಾಜಧಾನಿ ವಾರಣಾಸಿ, ಅನಂತರ ಅವನು ಅಯೋಧ್ಯೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡ.

ಸೀತೆ ವಾಸ್ತವವಾಗಿ ರಾವಣ–ಮಂಡೋದರಿಯರ ಮಗಳು, ಆದರೆ ಅಶುಭ ಮುನ್ಸೂಚನೆಯಿಂದಾಗಿ ಅವಳನ್ನು ತ್ಯಜಿಸಲಾಗಿ ಜನಕನಿಂದ ಪೋಷಿತೆಯಾದಳು. (ವಸುದೇವ ಹಿಂಡಿ–ಬೃಹತ್ಕಥಾಕೋಶ ಪರಂಪರೆಯಂತೆ).

ಯಾಗ ರಕ್ಷಣೆ ಮಾಡಿದುದರಿಂದ ಜನಕನು ರಾಮನಿಗೆ ಸೀತೆಯನ್ನು ಕೊಟ್ಟನು. ರಾಮಾದಿಗಳು ದಶರಥನ ಪೂರ್ವರಾಜಧಾನಿಯಾಗಿದ್ದ ವಾರಣಾಸಿಗೆ ಹೋದರು, ವನವಾಸಕ್ಕಲ್ಲ.

ನಾರದನ ಪ್ರಚೋದನೆಯಿಂದ ರಾವಣನು ಸೀತೆಯನ್ನು ಮೋಹಿಸಿದನು ಮಾಯಾ ಜಿಂಕೆಯನ್ನು ತೋರಿ ಆಕೆಯನ್ನು ಅಪಹರಿಸಿದನು.

ದಶರಥನ ಪತ್ರದಿಂದಾಗಿ ರಾಮ ಸೀತಾಪಹರಣದ ವೃತ್ತಾಂತವನ್ನರಿತನು. ಹನುಮಂತ ಎರಡುಬಾರಿ ಲಂಕೆಗೆ ಹೋದನು. (ಒಮ್ಮೆ ಸೀತಾನ್ವೇಷಣೆಗಾಗಿ, ಮತ್ತೊಮ್ಮೆ ರಾಮನ ದೌತ್ಯವನ್ನು ತೆಗೆದುಕೊಂಡು).

ಇಲ್ಲಿ ವಾಲಿಯನ್ನು ಕೊಲ್ಲುವವನು ಲಕ್ಷ್ಮಣ, ಮಾಯಾಸೀತೆಯ ತಲೆಯನ್ನು ರಾವಣನು ರಾಮನ ಮುಂದೆ ಈಡಾಡುತ್ತಾನೆ. (ವಾಲ್ಮೀರಾ.ದಲ್ಲಿ ರಾಮನ ಮಾಯಾ ತಲೆಯನ್ನು ಕತ್ತರಿಸಿ ಸೀತೆಗೂ ಸೀತೆಯ ಮಾಯಾತಲೆಯನ್ನು ಕತ್ತರಿಸಿ ರಾಮನಿಗೂ ತೋರಿಸುವ ಪ್ರಸಂಗ ಬರುತ್ತದೆ, 31–81ನೇ ಅಧ್ಯಾಯ), ಈ ಹಲವಾರು ಪ್ರಸಂಗ ಗಳಲ್ಲಿ ಇದು ಬೇರೆಯಾಗಿ ನಿಲ್ಲುತ್ತದೆ.

ಉತ್ತಪು.ದಲ್ಲಿ ರಾವಣನನ್ನು ಕ್ರೂರಿಯಾದ ಮನುಷ್ಯನನ್ನಾಗಿ ಚಿತ್ರಿಸಲಾಗಿದೆ. ಕೈಕೇಯಿಯನ್ನು ದಶರಥನ ಪತ್ನಿಯೆಂದೂ, ಲಕ್ಷ್ಮಣನ ತಾಯಿಯೆಂದೂ ಹೇಳಲಾಗಿದೆ. ರಾಮ ಶಾಂತ ಸ್ವಭಾವದವನು. ಭವ್ಯಾತ್ಮ ರಾವಣನ ವಿದ್ಯಾಸಾಧನೆಗೆ ಭಂಗ ಮಾಡುವುದಿಲ್ಲ. ರಾವಣನನ್ನು ಕೊಲ್ಲುವವನು ಲಕ್ಷ್ಮಣ. ಇಲ್ಲಿ ಮಂಡೋದರಿ ಯನ್ನು ಗೌರವಾನ್ವಿತ ವ್ಯಕ್ತಿಯನ್ನಾಗಿ ಚಿತ್ರಿಸಲಾಗಿದೆ. ಅಸಫಲಳಾದರೂ ಸೀತೆಯನ್ನು ಬಿಟ್ಟುಬಿಡೆಂದು ರಾವಣನಿಗೆ ಸಲಹೆ ಮಾಡುತ್ತಾಳೆ. ಸೀತೆಗೂ ರಾಮನ ಕಾಮನೆಗೆ ಈಡಾಗದಿರಲು ಉಪದೇಶಿಸುತ್ತಾಳೆ. ಪಉಚ.ದಲ್ಲಿ ರಾವಣನನ್ನು ಪ್ರವರ ಪುರುಷ ನನ್ನಾಗಿ ಚಿತ್ರಿಸಲಾಗಿದೆ. ಆತನ ಒಂದೇ ಒಂದು ದೌರ್ಬಲ್ಯವೆಂದರೆ ಸೀತೆಯ ಬಗೆಗೆ ಅವನಿಗಿದ್ದ ಕಾಮನೆ, ಕೈಕೇಯಿಯ ಪಾತ್ರವೂ ಪಉಚ.ದಲ್ಲಿ ಹಿರಿದು. ರಾಮನ ವನವಾಸದಲ್ಲಿ ಆಕೆಯ ಕೈವಾಡವಿಲ್ಲ. ಭರತನು ದೀಕ್ಷಿತನಾಗಲು ಹೊರಟಾಗ ಅವನನ್ನು ಗೃಹಸ್ಥನನ್ನಾಗಿಯೆ ನೋಡಬಯಸಿ ರಾಜ್ಯವನ್ನು ಆತನಿಗಾಗಿ ಬೇಡುತ್ತಾಳೆ. ರಾಮನು ರಾವಣನ ವಿದ್ಯಾಸಾಧನೆಗೆ ಭಂಗಮಾಡಲು ಅನುಮತಿ ನೀಡುತ್ತಾನೆ, ವೀತ ಸುಗ್ರೀವನನ್ನು ರಾಮನೇ ಕೊಲ್ಲುತ್ತಾನೆ. ಮಂಡೋದರಿ ಸೀತೆಯನ್ನು ಒಲಿಸಿ ಕೊಳ್ಳಲು ರಾವಣನಿಗೆ ಪ್ರಚೋದಿಸುತ್ತಾಳೆ. ಸೀತೆಯನ್ನು ರಾವಣನೆಡೆಗೆ ತಿರುಗಿಸಲು ದೌತ್ಯವನ್ನು ವಹಿಸುತ್ತಾಳೆ. (ಮಂಡೋದರಿಗೆ ಸವತಿ ಮತ್ಸರವಿರಲಿಲ್ಲ ಎಂಬ ದೃಷ್ಟಿ ಯಿಂದ ಈ ಪಾತ್ರ ಇಲ್ಲಿ ಉದಾತ್ತವಾಗಿದೆ). ಪಉಚ. ಪ್ರಕಾರ ಹನುಮಂತ, ಸುಗ್ರೀವ ರಾವಣರು ಪರಸ್ಪರ ಬಂಧುಗಳು, ರಾವಣನು ವರುಣನೊಂದಿಗೆ ಯುದ್ಧ ಮಾಡಿದಾಗ ಹನುಮಂತ ಸಹಾಯ ಮಾಡಿದ್ದ. ಅಲ್ಲದೆ ಇದು ರಾಕ್ಷಸ ವಾನರ ಮತ್ತು ಇಕ್ಷ್ವಾಕು ವಂಶ ಪರಂಪರೆಯನ್ನು ಹೇಳುತ್ತದೆ. ಈ ವ್ಯತ್ಯಾಸಗಳು ಇರುವುದರಿಂದ ಉತ್ತಪು.ವನ್ನು ಮತ್ತೊಂದು ಪರಂಪರೆಗೆ ಸೇರಿಸಲಾಗುತ್ತದೆ.

ಗುಣಭದ್ರರು ಪ್ರತ್ಯೇಕವಾಗಿ ನಿಲ್ಲಲು ಅನೇಕ ಕಾರಣಗಳನ್ನು ಊಹಿಸಬಹು ದಾಗಿದೆ. ವಾಲ್ಮೀಕಿ, ವಿಮಲಸೂರಿಗಳು ಈತನಿಗಿಂತಲೂ ಹಿಂದಿನವರು. ಈ ದೀರ್ಘಾವಧಿಯಲ್ಲಿ ರಾಮಕಥೆ ತನ್ನದೇ ಆದ ಮತ್ತೊಂದು ಸ್ವರೂಪವನ್ನು ಪಡೆದು ಕೊಂಡಿರಬಹುದು.[37] ತನ್ನ ಕಾಲಕ್ಕೆ ರಾಮಕಥೆಯ ವಿಭಿನ್ನ ಧಾರೆಗಳು ಗ್ರಂಥಸ್ಥವಾಗಿ ದ್ದಾಗ್ಯೂ ಅವುಗಳಿಗೆ ಗುಣಭದ್ರರು ಒಲಿದಿಲ್ಲವೆಂದು ತೋರುತ್ತದೆ. ಬಹುಶಃ ಇವನಿಗೆ ತಮ್ಮ ಗುರು ಪರಂಪರೆಯಿಂದ ಬಂದ ಮತ್ತಾವುದೋ ಕೃತಿ ಮೂಲವಾಗಿರಬೇಕು. ಗುಣಭದ್ರರು ತನ್ನ ಗುರು ಜೀನಸೇನನಂತೆ ಕವಿಪರಮೇಷ್ಠಿಗೆ (ಕವಿ ಪರಮೇಶ್ವರನಿಗೆ) ಋಣಿಯಾಗಿರಬೇಕು. ಈತ 63 ಶಲಾಕಾ ಪುರುಷರನ್ನೊಳಗೊಂಡ ಗದ್ಯ ಕೃತಿಯನ್ನು ಬರೆದಿದ್ದಾನೆ. ಆದಿಪುರಾಣ ರಚನೆಯಲ್ಲಿ ಇದನ್ನು ಜಿನಸೇನರು ಬಳಸಿಕೊಂಡಿದ್ದಾರೆಂದು ಗುಣಭದ್ರನೇ ತಿಳಿಸಿದ್ದಾನೆ. (ಕವಿ ಪರಮೇಶ್ವರ ನಿಗಧಿತ ಗದ್ಯಕಥಾ ಮಾತೃಕ- ಪುರೋಶ್ಚರಿತಂ-ಉತ್ತಪು. ಪ್ರಶಸ್ತಿ) ಜಿನಸೇನರು ಇದನ್ನು ವಾಗಾರ್ಥ ಸಂಗ್ರಹ ಎಂದಿದ್ದಾರೆ. ಆದಿಪು. 1.60) ಮಹಾಪುರಾಣವನ್ನು ಪೂರ್ಣಗೊಳಿಸಿದ ಗುಣ

ಭದ್ರರೂ ಇದೇ ಪರಂಪರೆಯನ್ನು ಅನುಸರಿಸಿರಲು ಸಾಧ್ಯ. ಅಲ್ಲದೆ ಚಾವುಂಡ ರಾಯನು ಆದಿಪುರಾಣಭಾಗದಲ್ಲಿ ಯತಿಪರಂಪರೆಯನ್ನು ಕೊಡುತ್ತಾ ಕೂಚಿ ಭಟ್ಟಾ ರಕರು ಮತ್ತು ಶ್ರೀನಂದಿಮುನೀಶ್ವರರನ್ನುಮಹಾಪುರಾಣ ಕರ್ತೃಗಳೆಂದು ಹೇಳಿದ್ದಾನೆ. (ಜಾವುಂಪು ಆದಿಪು. 3–18 ಮತ್ತು 24) ಅವರನ್ನು ಜಿನಸೇನ ಗುಣಭದ್ರರಿಗೂ ಮೊದಲು ಹೆಸರಿಸಿದ್ದಾನೆ. ಈ ಕಾರಣಗಳಿಂದಾಗಿ ಬಹುಶಃ ಗುಣಭದ್ರನ ರಾಮಕಥೆಯು ಆಕರ ಮೇಲೆ ಹೆಸರಿಸಿದ ಮಹಾಪುರಾಣ ಕರ್ತೃಗಳಾದ ಕವಿ ಪರಮೇಶ್ವರ, ಕೂಚಿ ಭಟ್ಟಾರಕ, ಶ್ರೀ ನಂದಿಮುನಿಗಳ ಪರಂಪರೆಯಿಂದ ಬಂಧುದಾಗಿರಬೇಕು.

ಗುಣಭದ್ರರ ರಾಮಕಥೆಯ ಮೇಲೆ ದಶರಥ ಜಾತಕ ಮತ್ತು ಅದ್ಭುತ ರಾಮಾಯಣಗಳ ಪ್ರಭಾವವಿದೆ-ಎಂಬ ಅಭಿಪ್ರಾಯವಿದೆ[38] ಈ ಊಹೆಗೆ ಗುಣಭದ್ರರ ಉತ್ತ.ಪು.ದ ಕಥಾಹರವು ಹಾಗೂ ಅದರಲ್ಲಿಯ ಕೆಲವು ವಿವರಗಳು ಕಾರಣವಾಗಿವೆ. ದಶರಥನ ರಾಜ್ಯಭಾರಕ್ರಮ ವಾರಣಾಸಿಯಲ್ಲಾಯಿತೆಂಬ ವಿಷಯ, ವನವಾಸಾದಿ ಪ್ರಸಂಗಗಳು ಇಲ್ಲದಿರುವುದು ಇವುಗಳು ಉತ್ತ.ಪು.ವನ್ನು ಜಾತಕ ಕಥೆಗಳತ್ತ ತಿರುಗಿಸು ವಂತೆ ಮಾಡುತ್ತದೆ[39]. ಅದ್ಭುತ ರಾಮಾಯಣದಂತೆ ಇಲ್ಲಿಯೂ ಸೀತೆಯನ್ನು ಮಂಡೋದರಿಯ ಮಗಳೆಂದು ಹೇಳಿದೆ. ಆದರೆ ಇವು ಪ್ರಾಸಂಗಿಕವಾಗಿ ಬಂದಿರುವ ವಿಚಾರಗಳೇ ಹೊರತು ಅವುಗಳೇ ಗುಣಭದ್ರರಿಗೆ ಮೂಲವಾಗಿತ್ತೆಂದು ಹೇಳುವುದು ಅಷ್ಟು ಸಮಂಜಸವಾಗಲಾರದು. ಅದ್ಭುತ ರಾಮಾಯಣದ ಕಲ್ಪನೆ ಬೆಳೆದು ಬಂದುದು 14-15ನೇ ಶತಮಾನಗಳಲ್ಲಿ.[40] ಅಲ್ಲದೆ ಸೀತೆಯ ಹುಟ್ಟಿನ ಚಿತ್ರಣ ಅಲ್ಲಿ ಅದ್ಭುತದ್ದಾಗಿದೆ[41]. ದಶರಥನನ್ನು ವಾರಣಾಸಿಯ ರಾಜನೆಂದರೂ ರಾಮಸೀತೆ ಯರನ್ನು ಅಣ್ಣತಂಗಿಯರೆಂದು ಹೇಳುತ್ತದೆ. ದಶರಥನ ಸಲಹೆಯ ಮೇರೆಗೆ ಹಿಮಾಲಯದ ಬಳಿ ಅವರು ಅನೇಕ ವರ್ಷ ವಾಸಿಸುವುದು, ಅನಂತರ ಅವರಿಬ್ಬರ ವಿವಾಹ ಇವೆಲ್ಲವೂ ಜೈನ ಪರಂಪರೆಯಲ್ಲಿ ಕಂಡು ಬರುವುದಿಲ್ಲ. ಹೀಗಾಗಿ ಉತ್ತ.ಪು.ವು ರಾಮಕಥಾ ಧಾರೆಯಲ್ಲಿ ತನ್ನದೇ ಆದ ಪ್ರತ್ಯೇಕವಾದ ಸ್ಥಾನವನ್ನು ಗಳಿಸಿಕೊಳ್ಳುತ್ತದೆ.

ಪುಷ್ಪದಂತನ (ಕಾಲ 959) 'ಮಹಾಪುರಿಸ–ಗುಣಾಲಂಕಾರು' ಅಪಭ್ರಂಶ ಭಾಷೆಯಲ್ಲಿದೆ. ಇಲ್ಲಿ ಬರುವ ರಾಮಕಥೆ, ಕವಿಬಾಯಿಬಿಟ್ಟು ಹೇಳದಿದ್ದರೂ ಉತ್ತ.ಪು. ವನ್ನು ಅನುಸರಿಸಿದೆ. ಆದರೂ ಇದರ ಕಥಾಭಾಗವೂ ಪಉಚ.ದಂತೆ ವಾಲ್ಮೀರಾ.ದ ಟೀಕೆಯಿಂದ ಪ್ರಾರಂಭವಾಗುತ್ತದೆ. ಇಂದ್ರಜಿತ್‌ನನ್ನು ರಾವಣನ ಮಗನೆಂದು ಹೇಳಿ, ಅವನು ರಾವಣನಿಗಿಂತ ವಯಸ್ಸಿನಲ್ಲಿ ಹಿರಿಯವನೆಂದೂ, ವಿಭೀಷಣನನ್ನು ಚಿರಂಜೀವಿ ಯೆಂದು ಹೇಳಿದ್ದಾನೆ[42] ಜಾನಪದೀಯ ನಂಬಿಕೆಗಳು ಈ ಕಥೆಗಳಲ್ಲಿ ಹೆಣೆದುಕೊಂಡಂತೆ ತೋರುತ್ತದೆ.

ಗುಣಭದ್ರರ ಪರಂಪರೆಯ ಕನ್ನಡ ಕೃತಿಗಳು :

ಕನ್ನಡದ ಏಕೈಕ ಪುರಾಣವಾದ ಚಾಮುಂಡರಾಯನ ಚಾವುಂಪು.[43] (ಕಾಲ ಕ್ರಿ.ಶ. 980)ದಲ್ಲಿ ಮುನಿಸುವ್ರತ ತೀರ್ಥಂಕರ ಚರಿತ್ರೆಯ ನಿರೂಪಣೆಯಲ್ಲಿ ರಾಮ ಕತೆಯು ಬರುತ್ತದೆ. ಕನ್ನಡದಲ್ಲಿ ರಾಮಾಯಣದ ಕಥೆಯನ್ನು ಬರೆದವರಲ್ಲಿ ಈತನೇ ಮೊದಲಿಗ ಈತನು ಕಥಾ ಘಟ್ಟಗಳಲ್ಲಿ ಯಾವ ವ್ಯತ್ಯಾಸಗಳನ್ನು ಮಾಡಿಕೊಳ್ಳದೆ ಸಂಗ್ರಹರೂಪವಾಗಿ ಉತ್ತಪು.ದ ರಾಮಕಥೆಯನ್ನು ಗದ್ಯದಲ್ಲಿ ನೀಡಿದ್ದಾನೆ. ಅಲ್ಲಲ್ಲಿ ನಾಮ-ವ್ಯತ್ಯಾಸಗಳು ಕಂಡುಬರುತ್ತವೆ ಅಷ್ಟೇ. ಉತ್ತಪು. ಪ್ರಕಾರ ಲಕ್ಷ್ಮಣನ ತಾಯಿ ಕೈಕೆ, ಇಲ್ಲಿ ಸುಮಿತ್ರಾ ,ಭರತ, ಶತ್ರುಘ್ನರ ತಾಯಿಯ ಹೆಸರು ಉತ್ತಪು. ದಂತೆಯೇ ಇಲ್ಲಿಯೂ ಬರುವುದಿಲ್ಲ.

ದೇವಪ್ಪ ಕವಿಯ (ಕ್ರಿ.ಶ. ಸುಮಾರು 16 ಶ.) ರಾಮವಿಜಯ ಕಾವ್ಯ 20 ಸಂಧಿಗಳಿಂದ ಕೂಡಿದ ಕಾವ್ಯ ದೇಶೀ ಛಂದಸ್ಸಾದ ಸಾಂಗತ್ಯದಲ್ಲಿ ಮೊಟ್ಟಮೊದಲ ಬಾರಿಗೆ ರಾಮಕತೆಯನ್ನು ನೀಡಿದ್ದಾನೆ. ಉತ್ತಪು. ಚಾವುಂಡರಾಯ ಪುರಾಣಾಂತ ರ್ಗತವಾಗಿ ಬರುವ ರಾಮಕಥೆಯನ್ನು ಅನುಸರಿಸಿ ಅದನ್ನು ಸಮಗ್ರ ಕಾವ್ಯರೂಪದಲ್ಲಿ ಕೊಟ್ಟವರಲ್ಲಿ ಈತನೇ ಮೊದಲಿಗ, ತಿಳಿಗನ್ನಡದಲ್ಲಿ ರಾಮಕಥೆ ಇಲ್ಲಿ ಬಂದಿದೆ.

ಇಲ್ಲಿ ಕಂಡು ಬರುವ ಕೆಲವು ಸಣ್ಣ-ಪುಟ್ಟ ವ್ಯತ್ಯಾಸಗಳು ಹೀಗಿವೆ. ಉತ್ತಪು.ದಲ್ಲಿ ದಶರಥನನ್ನು 'ವಾರಣಾಸೀನಾಥ'ನೆಂದು ಹೇಳಿದ್ದರೆ ಇಲ್ಲಿ ಅಯೋಧ್ಯಾದೀಪ ಎಂದು ಹೇಳಲಾಗಿದೆ. ಇಲ್ಲಿ ಲಕ್ಷ್ಮಣನು ಕೈಕೆಯ ಮಗನೆಂದು ಹೇಳಿದ್ದರೂ (ಕೆಲವೆಡೆ ಸುಮಿತ್ರೆಯ) ಮಗನೆಂದು ಬರುತ್ತದೆ. (ಬಹುಶಃ ಪ್ರಚಲಿತ ರಾಮಾಯಣ ಕತೆಯ ಪ್ರಭಾವವಿರಬೇಕು).

ಉತ್ತಪು.ದ ಪ್ರಕಾರ, ಶ್ರೀರಾಮನು ಯುದ್ಧಮುಗಿದ ನಂತರ ಸೀತೆಯನ್ನು ಕರೆದುಕೊಂಡು ಬರುವಾಗ ದೇವತೆಗಳೂ ವಿದ್ಯಾಧರರೂ ಶ್ರೀರಾಮನಿಗೆ ಶೀವಗಿರಿ ಯಲ್ಲಿ ಅಭಿಷೇಕ ಮಾಡಿದರು. ರಾಮವಿಜಯ ಕಾವ್ಯದ ಪ್ರಕಾರ ರಾಮ ಸೀತೆಗೆ ಅಭಿಷೇಕ ಮಾಡಿದನು.[44] ಇಲ್ಲಿ ಇತರ ಕಾವ್ಯಗಳಲ್ಲಿ ಕಂಡುಬಾರದ ಸೀತೆಗೆ ನೀಡುವ ಪ್ರಾಮುಖ್ಯ ಕಂಡುಬರುತ್ತದೆ. ಆದರೆ ಕವಿ ಇದಕ್ಕೆ ಹಿನ್ನೆಲೆಯಾಗಿ ಯಾವ ಕಾರಣ ವನ್ನೂ ನೀಡಿಲ್ಲ.

ಪ್ರತಿಯೊಂದು ಸಂಧಿಯಲ್ಲಿಯೂ ರಸಿಕ ದಂಪತಿಗಳಾದ ಶ್ರೇಣಿಕ ಚೇಳಿನಿಯರ ಸರಸ ಸಂವಾದ ಬಂದು ಕಾವ್ಯದಲ್ಲಿ ಒಂದು ರೀತಿಯ ಇಂಪು ಮೈಗೂಡಿ ಬಂದಿದೆ.

ರಚನಾ ದೃಷ್ಟಿಯಿಂದ ಗುಣಭದ್ರಾಚಾರ್ಯರದು ಪುರಾಣ, ದೇವಪ್ಪ ಕವಿ ಯದು ಕಾವ್ಯ. ಆದುದರಿಂದ ಪುರಾಣದಲ್ಲಿ ಬರುವ ಹಲವಾರು ಪ್ರಾಸಂಗಿಕ ಧರ್ಮಕಥೆಗಳನ್ನು ದೀರ್ಘವಾದ ಧರ್ಮೋಪದೇಶವನ್ನು ದೇವಪ್ಪನು ಕಡಿಮೆ ಮಾಡಿದ್ದಾನೆ.

ಕನ್ನಡದಲ್ಲಿ ಈ ಮೇಲೆ ಹೇಳಿದ ಪರಂಪರೆಗಳಲ್ಲಿಯೇ ಅಲ್ಲದೆ, ಜೈನ ಪರಂಪರೆಯಲ್ಲಿ ಕಂಡುಬರುವ ಮೂರು ಪರಂಪರೆಗಳ ತ್ರಿವೇಣಿಸಂಗಮದಂತಿರುವ ಚಂದ್ರಸಾಗರವರ್ಣಿಯ ಶ್ರೀ ರಾಮಾಯಣ, ರಾಚಪ್ಪ. ಹಾಗೂ ಉತ್ತಪ್ಪ. ಗಳಿಗೆ ಸೇತುವೆ ಕಟ್ಟುವಂತೆ ಕಂಡುಬರುವ 'ರಾಮಕಥಾವತಾರ'ಗಳನ್ನು ಪ್ರತ್ಯೇಕವಾಗಿ ಪರಿಗಣಿಸಬಹುದಾಗಿದೆ. ಭಾಷಿಕವಾಗಿ ಇವರ ಕೃತಿಗಳು ಹೆಚ್ಚಿನ ಮೌಲ್ಯಗಳನ್ನು ಗಳಿಸಿಕೊಳ್ಳದೇ ಹೋದರೂ ರಾಮಕಥೆಯ ದೃಷ್ಟಿಯಿಂದ ಹಲವಾರು ಹೊಸ ದೃಷ್ಟಿಕೋನಗಳನ್ನು ಕಾಣುತ್ತೇವೆ.

ಮಿಶ್ರಪರಂಪರೆಯ ಕನ್ನಡ ಕೃತಿಗಳು

ಚಂದ್ರಸಾಗರವರ್ಣಿಯ (ಕ್ರಿ.ಶ. 1760-1835)[45] ಶ್ರೀ ರಾಮಾಯಣ (ಜಿನರಾಮಾಯಣ)[46]. ಇದು ಕನ್ನಡ ಸಾಹಿತ್ಯ ರಾಮಕಥಾ ಪರಂಪರೆಗಷ್ಟೇ ಅಲ್ಲದೆ ಇಡೀ ರಾಮಾಯಣ ಕಥಾ ಪರಂಪರೆಗೇ ಹೊಸ ಅಂಶಗಳನ್ನು ಸೇರಿಸಿ ವಿಶಿಷ್ಟವಾಗಿ ನಿಲ್ಲುತ್ತದೆ.

85 ಸಂಧಿಗಳಲ್ಲಿ ಷಟ್ಪದಿಯಲ್ಲಿ ಕಾವ್ಯರಚನೆ ಆಗಿದೆ. ಕವಿ ಒಂದೊಂದು ಕಥಾ ಘಟ್ಟವನ್ನೂ ಬೇರೆಬೇರೆ ನಿಲ್ಲಿಸಿ ಹೇಳುವುದರಿಂದ ಅಲ್ಲದೆ ಕೆಲವು ಹೊಸ ವಿಷಯಗಳ ಸೇರ್ಪಡೆ ಮಾಡಿರುವುದರಿಂದ ಈ ಸಂಧಿಗಳ ಸಂಖ್ಯೆ ಹಿಗ್ಗಿದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದಾಗಿದೆ.

ಮಂಗಳನಗರದ ಅರಸ ಹೇಮಪ್ರಭ ಹಾಗೂ ವಿಜಯಾಂಗನಾ ರಾಣಿಯರ ಮಗಳು ಕೈಕಿಲೆ, ಯೌವನಸ್ಥೆಯಾದಾಗ ತಂದೆ ಸ್ವಯಂವರ ಏರ್ಪಡಿಸುವುದಾಗಿ ಮಗಳಿಗೆ ಹೇಳಿದಾಗ, ಆಕೆ 'ಸಕಲ ವಿದ್ಯಪ್ರಸಿದ್ಧದೊಳು ವೀಣೆಯನು ಬಾಜಿಸಿ ಮುದ್ದುಗೊಳಿಸಿದಗೊಲಿವ ಶಪಥುಂಟು' ಎಂದು ನುಡಿದಳು. ಅರಸ ಅದೇರೀತಿ ಮಾಡಿದ ವೀಣಾವಾದನದಲ್ಲಿ ದಶರಥ ಅವಳ ಮನಸ್ಸನ್ನು ಗೆದ್ದ.

ದಶರಥ ಕೈಕಿಲೆಯನ್ನು ಮದುವೆಯಾಗಿ ಬರುವ ಸಂದರ್ಭದಲ್ಲಿ, ಮಯೂರಕೇಶನ ಮಗಳು ಲಕ್ಷ್ಮಣಿಯನ್ನು ಮದುವೆಯಾಗಿ ಅಯೋಧ್ಯೆಗೆ ಮರಳಿದ.

ಒಮ್ಮೆ ಕೈಕಿಲೆಯು ವೀಣಾವಾದನದಿಂದ ದಶರಥನನ್ನು ಸಂತೋಷಪಡಿಸಿದಳು. ಆಗ ದಶರಥ ಕೈಕಿಲೆಗೆ ಎರಡು ಬೇಡಿಕೆಗಳನ್ನು ಈಡೇರಿಸಿಕೊಡುವುದಾಗಿ ಮಾತುಕೊಟ್ಟ.

ಕೌಸಲ್ಯೆ ಇನ್ನೂ ತನಗೆ ಸಂತಾನಪ್ರಾಪ್ತಿ ಆಗಲಿಲ್ಲವೆಂದು ದುಃಖಿತೆಯಾಗಿದ್ದಾಗ ಯಮಧರ ಮುನಿಗಳ ಆದೇಶದಂತೆ ಪುತ್ರಪ್ರಾಪ್ತಿಗಾಗಿ ಅನಂತನೋಂಪಿ ವ್ರತವನ್ನು ಕೈಕೊಂಡಳು. ವ್ರತದ ಫಲದಿಂದಾಗಿ ರಾಣಿಯರು ರಾಮಾದಿಗಳನ್ನು ಪಡೆದರು. (ಕವಿ ಜನಸಾಮಾನ್ಯರ ನಂಬಿಕೆಗಳನ್ನು ಇಂತಹ ಕಡೆಗಳಲ್ಲಿ ಕಥೆಯಲ್ಲಿ ಸಮಾವೇಶಗೊಳಿಸಿರುವುದನ್ನು ಗಮನಿಸಬಹುದಾಗಿದೆ).

ರಾವಣ ತನ್ನ ವಿದ್ಯಾಸಾಮರ್ಥ್ಯದಿಂದ ಹತ್ತು ತಲೆ ಇರುವವನಾಗಿ ತೋರ್ಪಡಿಸಿ ಕೊಳ್ಳುತ್ತಿದ್ದ. ಸಂಗೀತಪುರಾಧಿಪ ಮಯನು ಜ್ಯೋತಿಷ್ಯರಿಂದ ರಾವಣನು ಮಂಡೋದರಿಗೆ ಗಂಡನಾಗುವನೆಂದು ತಿಳಿದು ಆಕೆಯನ್ನು ಸ್ವಯಂಪ್ರಭಪಟ್ಟಣಕ್ಕೆ ಕರೆದುಕೊಂಡು ಬಂದು ರಾವಣನಿಗೆ ಮದುವೆಮಾಡಿಸಿದ (ಈ ವಿಚಾರವು ಸಂಘದಾಸ-ಹರಿಷೇಣರ ಪರಂಪರೆಯಲ್ಲಿ ಕಂಡು ಬರುತ್ತದೆ).

ಮಂಡೋದರಿಗೆ ತನಗೆ ಹೆಣ್ಣು ಮಕ್ಕಳಿಲ್ಲವೆಂದು ಕೊರಗುತ್ತಿದ್ದ ಸಮಯದಲ್ಲಿ ಆ ಬಗೆಗೆ ಜ್ಯೋತಿಷ್ಯವನ್ನು ಕೇಳಲಾಯಿತು. ಮಂಡೋದರಿಗೆ ಪುತ್ರಿಯ ಲಾಭವಿದೆ ಯೆಂದೂ ಆದರೆ ಅದರಿಂದ ರಾಜ್ಯಕ್ಕೂ ತಂದೆಗೂ ಕೇಡಿದೆಯೆಂದೂ ತಿಳಿಯಿತು. ಆದರೂ ಮಂಡೋದರಿ ಮಗುವಾದರೆ ಸಾಕು ಅದನ್ನು ಮುದ್ದಾಗಿ ದುಃಖ ಪರಿಹರಿಸಿಕೊಳ್ಳುವೆನೆಂದುಕೊಂಡಳು. ಮುಂದೆ ಗರ್ಭಧರಿಸಿದಾಗ ಆಕೆಗೆ ರಾವಣನ ರಕ್ತವನ್ನು ಹೀರುವ ಬಯಕೆ ಆಯಿತು. ಕೊನೆಗೆ ರಾವಣನ ರೂಪವಿಶೇಷವನ್ನು ಮಾಡಿ ಆಕೆ ಅವನ ರಕ್ತ ಹೀರುವಂತೆ ಮಾಡಲಾಯಿತು. ಮುಂದೆ ಮಗು ಹುಟ್ಟಿದಾಗ ಅದರ ಉರಿಗಣ್ಣನ್ನು ಸಹಿಸಲಾರದೆ ಪೆಟ್ಟಿಗೆಲ್ಲಿಟ್ಟು ತ್ಯಜಿಸಲಾಯಿತು. ಈ ವಿಚಾರಗಳು ಕಥೆಯಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ವಿಷಯಗಳಾಗಿ ಕಂಡುಬರುತ್ತದೆ.

ಜನಕನು ಕೈಗೊಂಡ ಯಜ್ಞಕ್ಕೆ ಭಾಧೆಯಾಗದಂತೆ ನೋಡಿಕೊಳ್ಳಲು ರಾಮನು ಲಕ್ಷ್ಮಣನೊಡನೆ ಹೋದಾಗ ರಾಮ ಸೀತೆಯನ್ನು ಮದುವೆಯಾದನು. ಇಲ್ಲಿ ಉತ್ತಪು. ದಂತೆ ಯಾಗ, ಯಾಗದ ಹುಟ್ಟು ಮೊದಲಾದ ವಿಚಾರಗಳನ್ನು ಸಮಾವೇಶಗೊಳಿಸಲಾಗಿದೆ.

ದಶರಥ ಮುನಿಗಳಿಂದ ತನ್ನ ಭವಾವಳಿಗಳ ವಿಚಾರ ಕೇಳಿ ವೈರಾಗ್ಯಪರನಾದ ರಾಮನಿಗೆ ಪಟ್ಟಾಭಿಷೇಕ ಮಾಡಲು ನಿರ್ಧರಿಸಿದ ವಿಷಯುವನ್ನು ರಾಚಪು. ದಂತೆ ಹೇಳಿದ ಕವಿ, ಮತ್ತೆ ವಾಲ್ಮೀಕಿರಾಮಾಯಣದ ಅಂಶವನ್ನು ತೆಗೆದುಕೊಂಡಿದ್ದಾನೆ. (ಸಂಘದಾಸ-ಹರಿಷೇಣರ ಪರಂಪರೆಯಲ್ಲಿಯೂ ಈ ಕೆಲವು ವಿಷಯುಗಳೂ ಸಮಾವೇಶ ವಾಗಿದೆ) ಕೈಕಿಲೆಯ ತವರುಮನೆಯಿಂದ ಬಂದ 'ಮಾಯಾವಿ' ಎಂಬ ದಾದಿ (ಇಲ್ಲಿ ಮಂಥರೆ ಎಂಬ ಹೆಸರಿನ ಬದಲು ಮಾಯಾವಿ ಎಂಬ ಹೆಸರನ್ನು ನೀಡಿದ್ದಾನೆ). ಅವಳಿಗೆ ಎರಡು ವರಗಳನ್ನು ಉಪಯೋಗಿಸಿಕೊಳ್ಳಲು ಸಲಹೆ ನೀಡಿದಳು. ಅದರಂತೆ ಕೈಕೆ ರಾಮನಿಗೆ ವನವಾಸವನ್ನು ಬೇಡಿದಳು. ಅಲ್ಲಿಂದ ಮುಂದೆ ದಶರಥನ ಮೂರ್ಛೆ, ರಾಮನ ನಿರ್ಧಾರ ಈ ವಿಚಾರಗಳನ್ನು ವಾಲ್ಮೀಕಿರಾಮಾಯಣದಂತೆಯೇ ಬರುತ್ತವೆ. ವನವಾಸ ಪ್ರಸಂಗದಲ್ಲಿ ಬರುವ ವಜ್ರಕರ್ಣನ ವೃತ್ತಾಂತ, ವಾಲಖಿಲ್ಯನ ಪ್ರಸಂಗ, ಯಕ್ಷನಿಂದ ರಾಮಪೂನಗರ ನಿರ್ಮಾಣ, ವನಮಾಲೆಯ ವೃತ್ತಾಂತ, ಜಟಾಯು ಪ್ರಸಂಗ ಮೊದಲಾದ ವಿಷಯುಗಳು ರಾಚಪು.ದಂತೆಯೇ ಕಂಡು ಬರುತ್ತವೆ.

ಲಕ್ಷ್ಮಣ ಶಂಭಕನನ್ನು ಕೊಂದುದು ಇಲ್ಲಿ ರಾಚಪು. ದಂತೆ ಆಕಸ್ಮಿಕವಲ್ಲ. ಶಂಭುಕನು ಲಕ್ಷ್ಮಣನು ತನ್ನ ಚಂದ್ರಹಾಸಿ ಖಡ್ಗವನ್ನು ತೆಗೆದುಕೊಂಡುದನ್ನು ನೋಡಿ ಅವನಮೇಲೆ ಬಿದ್ದಾಗ ಲಕ್ಷ್ಮಣ ಅವನನ್ನು ಕೊಂದನು.

ಚಂದ್ರನಖಿಯು ಮೂಗು ಕೊಯ್ಯುವ ಪ್ರಸಂಗ, ಮಾಯರಾಜಿಂಕೆ ಪ್ರಸಂಗ ಈ ಮೊದಲಾದೆಡೆಗಳಲ್ಲಿ ಕವಿ ವಾಲ್ಮೀರಾ. ದತ್ತ ಒಲಿದಿದ್ದಾನೆ. (ಹರಿಷೇಣ ಪರಂಪರೆಯಲ್ಲಿಯೂ ಇವುಗಳು ಸಮಾವೇಶಗೊಂಡಿವೆ) ಸೀತೆಯು ರಾವಣನನ್ನು ಒಲಿಯುವಂತೆ ಮಾಡಲು ಮರೀಚ ಅವಳಿಗೆ ಅನೇಕ ಉಪಸರ್ಗಗಳನ್ನು ಕೊಟ್ಟನೆಂಬ ಅಂಶ ಬರುತ್ತದೆ.

ಉತ್ತಪು.ದಂತೆ ರಾವಣನಿಗೆ ಒಲಿಯದಿರುವಂತೆ ಮಂಡೋದರಿ ಎಚ್ಚರಿಕೆ ನೀಡಿದ ಅಂಶ ಬರುತ್ತದೆ.

ವಾಲಿ ಕಥೆಯ ವೃತ್ತಾಂತ ಪೂರ್ವಪು.ದಂತೆಯೇ ಇದ್ದರೂ ವಾಲಿ ರಾಮನಲ್ಲಿಗೆ ಕಳುಹಿದ ದೌತ್ಯದ ವಿಚಾರ ಬರುವುದಿಲ್ಲ.

ಆಂಜನೇಯನು ಹುಟ್ಟಿದಾಗ ಯಕ್ಷ-ಯಕ್ಷಿಯರು ನಿಂತು ಆತನ ಜಾತಕ ಕರ್ಮಾದಿಗಳನ್ನು ಮಾಡಿದರೆಂಬ ವೃತ್ತಾಂತದಲ್ಲಿ ಯಕ್ಷ-ಯಕ್ಷಿಯರಿಗೆ ಅಂದು ಸಲ್ಲುತ್ತಿದ್ದ ವಿಶೇಷ ಮನ್ನಣೆ ವ್ಯಕ್ತವಾಗುತ್ತದೆ.

ಆಂಜನೇಯ ಪ್ರಥಮಬಾರಿಗೆ ರಾಮನನ್ನು ನೋಡಲು ಬಂದುದು ದಶಕಂಠನ ವೇಷವನ್ನು ಹಾಕಿ, ಆಗ ರಾಮ ಆತನ ಮಾಯಾಬಲವನ್ನು ಮುರಿದ, ಆಂಜನೇಯ ಕ್ಷಮೆಯಾಚಿಸಿದ ಎಂಬೀ ವೃತ್ತಾಂತ ಉಳಿದೆಡೆ ದೊರೆಯುವುದಿಲ್ಲ.

ಸಮುದ್ರವನ್ನು ದಾಟಲು ಖಚರಸೇನೆಯು ಅಂತರಿಕ್ಷ ಮಾರ್ಗವನ್ನು ಆರಿಸಿಕೊಂಡಿತು. ಭೂಚರರಿಗಾಗಿ ಸೇತುವೆಯನ್ನು ಕಟ್ಟಿ ಧರಣೀ ಮಾರ್ಗವನ್ನು ನಿರ್ಧರಿಸಲಾಯಿತು. (ಈ ಅಂಶವು ಕುಮುದೆಂದು ರಾಮಾಯಣದಲ್ಲಿಯೂ ಲಭ್ಯವಾಗುತ್ತದೆ).

ತ್ರಿಜಗದ್ಭಾರಣದ ವಿಷಯವನ್ನು ಕೇಳಿ ಭವಾಂತರ ಸಂಬಂಧವನ್ನರಿತ ಭರತ ವೈರಾಗಪರನಾದರೂ ರಾಮನ ಇಚ್ಛೆಯಂತೆ ದೀಕ್ಷೆ ತೆಗೆದುಕೊಳ್ಳುವುದಿಲ್ಲ. ರಾಮ ಭರತನಿಗೆ ಪೌದನಪುರವನ್ನು ಶತ್ರುಘ್ನನಿಗೆ ಮಧುರಾನಗರಿಯನ್ನು ಕೊಟ್ಟನು. ರಾಚಪು.ದಲ್ಲಿ ಭರತ ವೈರಾಗ್ಯವನ್ನೇ ನೆಮ್ಮಿದ.

ಹೀಗೆ ಚಂದ್ರಸಾಗರವರ್ಣಿಯ ಈ ಕೃತಿ ವಿಮಲಸೂರಿ ಪರಂಪರೆ, ಹರಿಷೇಣನ ಬೃಹಕೋ. ಪರಂಪರೆ, ಗುಣಭದ್ರನ ಉತ್ತಪು. ಪರಂಪರೆಯಿಂದ ಬೆಳೆದು ಬಂದ ರಾಮ ಕಥಾ ಸಂಪ್ರದಾಯವನ್ನು ಅಳವಡಿಸಿಕೊಂಡಂತೆ ತೋರುತ್ತದೆ. ಹರಿಷೇಣನ ಬೃಹಕೋ, ವಾಲ್ಮೀರಾ.ದ ಪ್ರಭಾವಕ್ಕೆ ವಿಶೇಷವಾಗಿ ಒಳಗಾಗಿರುವುದನ್ನು ಹಿಂದೆಯೇ

ಪರಿಶೀಲಿಸಲಾಗಿದೆ. ಇವುಗಳೇ ಅಲ್ಲದೆ ಕವಿಯ ಕಲ್ಪನೆಯ ವಿಶೇಷವಾದ ಕಾಲ್ಪನಿಕ ಅಂಶ, ಜನಪದ ಆಶಯ, ವಾಲ್ಮೀರಾ.ದ ಪ್ರಭಾವ ಸೇರಿಕೊಂಡು ಕಥೆಯಲ್ಲಿ ಮಿಶ್ರನಡೆ ಕಂಡು ಬರುತ್ತದೆ. ಹೀಗೆ ಈ ಕಾವ್ಯ ಉದ್ದಕ್ಕೂ ಸಮ್ಮಿಶ್ರ ನಡೆಯಲ್ಲಿ ಹೆಜ್ಜೆಹಾಕಿರುವುದನ್ನು ಗಮನಿಸಬಹುದಾಗಿದೆ.

ದೇವಚಂದ್ರನ ರಾಮಕಥಾವತಾರ

ರಾಜಾವಳೀ ಕಥಾಸಾರದ ಮೂಲಕ ಸಾಹಿತ್ಯಲೋಕದಲ್ಲಿ ಪ್ರಸಿದ್ಧನಾಗಿರುವ ದೇವಚಂದ್ರನ (ಕ್ರಿ.ಶ. 1807) 'ರಾಮಕಥಾವತಾರ'[47] ರಾಮಕಥೆಯನ್ನೊಳಗೊಂಡ 'ಸಂಗ್ರಹ ಕಥಾಪ್ರಪಂಚ'[48]ವಾಗಿದೆ. ಕವಿಯೇ ಸೂಚಿಸಿರುವಂತೆ ನಾನಾ ಮೂಲಗಳಿಂದ ಸರಕನ್ನು ಎಳೆದು ತಂದಿದ್ದಾನೆ. ಈತನು 16 ಆಶ್ವಾಸಗಳಲ್ಲಿ 6800 ಗ್ರಂಥ ಪ್ರಮಾಣದಲ್ಲಿ ಕೃತಿಯನ್ನು ರಚಿಸಿದ್ದಾನೆ. ರಾಮಕಥಾವತಾರವನ್ನು ಬರೆಯಲು ತನ್ನ ಹಿಂದೆ ನಡೆದು ಬಂದ ಪರಂಪರೆಯನ್ನು ಅನುಸರಿಸಿರುವುದಾಗಿ ಹೇಳಿದ್ದಾನೆ. ಗುರು ಪರಂಪರೆಯಲ್ಲಿ ಕೂಚಿಭಟ್ಟಾರಕ, ನಂದಿಮುನಿ, ಕವಿಪರಮೇಷ್ಠಿ, ವೀರಸೇನ, ಸಿದ್ಧಸೇನ, ಪದ್ಮನಂದಿ, ಗುಣಭದ್ರ ಸಕಲಕೀರ್ತಿ ಇವರನ್ನು ಹೆಸರಿಸಿದ್ದಾನೆ. ಪುರಾಣಕಾರರೂ, ರಾಮಚರಿತ್ರಕಾರನೂ ಆದ ಚಾವುಂಡಾರಾಯ, ನಾಗಚಂದ್ರ. ಮಾಘನಂದಿಸಿದ್ಧಾಂತ, ಕಮುದೇಂದು, ನಯ ಸೇನಾದಿಕವಿಗಳು ಹೇಳಿದ ಅಂಶಗಳನ್ನು ಪುಣ್ಯಾಶ್ರವ ಕಥಾಸಾರದಲ್ಲಿರುವ ವಿಷಯವನ್ನೇ ಸಂಗ್ರಹಿಸಿ, ಅಭಿನವ ಪಂಪ ಕವಿತ್ವಮಂ ಮುಂದುಮಾಡಿ ಈ ರಾಮಕಥಾವತಾರವನ್ನು ಹೇಳಿದ್ದಾನೆ. ಕನ್ನಡದಲ್ಲಿ ಚಾವುಂಡಾರಾಯನ 'ಚಾವುಂಪು' ನಾಗಚಂದ್ರನ 'ರಾಚಪು'. ಕುಮುದೇಂದುವಿಗೆ 'ಕುಮುದೇಂದು ರಾಮಾಯಣ' ಇವು ಉಪಲಬ್ಧ ಇದೆ. ನಾಗರಾಜನ 'ಪುಣ್ಯಾಸ್ರವ'ದಿಂದ ಕವಿ ಅನೇಕ ಉಪಕಥೆಗಳನ್ನು ಸಂಗ್ರಹಿಸಿದ್ದಾನೆ. ಅಷ್ಟೇ ಅಲ್ಲದೆ ಪಂಪನ ಆದಿಪು.ದ ಭಾಗಗಳನ್ನು ಇಲ್ಲಿ ನಿರೂಪಿಸಿದ್ದಾನೆ. ದೇವಚಂದ್ರನು ಕೊಡುವ ಪಟ್ಟಿಯಲ್ಲಿ ಶಿಶುಮಾಯಣನ 'ಅಂಜನಾಚರಿತ್ರೆ' (ಕ್ರಿ.ಶ. 1232), ದೇವಪ್ಪನ 'ರಾಮವಿಜಯ ಕಾವ್ಯ' ಮೊದಲಾದವು ಸಮಾವೇಶವಾಗಿಲ್ಲ. ಬಹುಶಃ ಕವಿಯ ಗಮನಕ್ಕೆ ಈ ಕಾವ್ಯಗಳು ಬಂದಿಲ್ಲದೆ ಇರಬಹುದು.

ಕವಿ ಕಾವ್ಯದ ಮೊದಲಲ್ಲಿ ರಾಮಚರಿತ ಪುರಾಣವನ್ನು ಮುಂದುಮಾಡಿ ರಾಮಕಥೆಯನ್ನು ಬರೆಯುವುದಾಗಿ ಹೇಳಿದ್ದನಾದರೂ ಗ್ರಂಥಾತ್ಮದಲ್ಲಿ 'ಶ್ರೀ ಮಜ್ಜಿನಸೇನಾಚಾರ್ಯರ್ ಶಿಷ್ಯರ್ ಗುಣಭದ್ರ ಸ್ವಾಮಿ ಮೊದಲಾಗೆ ಪೇಳ್ದ ತ್ರಿಷಷ್ಠಿ ಲಕ್ಷಣ ಮಹಾಪುರಾಣದೊಳಿರ್ದ ಕಥೆಯನೆ ಪ್ರಮಾಣದೊಳೆ ತೆಗೆದದಕ್ಕೆ ಸಕಲ ಜಿನಶಾಸ್ತ್ರ ಕಥೆಗಳುಂ ಸಂಬಂಧಿಸಿದೆ' ಎಂದಿದ್ದಾನೆ. ಒಂದು ಕಡೆ ರಾಚಪು. ಮತ್ತೊಂದೆಡೆ ಉತ್ತಪು. ಇವುಗಳನ್ನು ಮುಖ್ಯವಾಗಿ ಇಟ್ಟುಕೊಂಡು ಉಳಿದೆಡೆ ಬರುವ ರಾಮಕಥೆಗಳನ್ನು ಸಮಾವೇಶಗೊಳಿಸಿ ಹೇಳಿದ್ದಾನೆ.

ರಾಚಪು.ದ ಪದ್ಯಗಳನ್ನು ನೇರವಾಗಿ ಆರಿಸಿ ತಂದಿದ್ದಾನೆ. ಇನ್ನೂ ಕೆಲವೆಡೆ ಅವುಗಳ ಸಾರಸಂಗ್ರಹವನ್ನು ಗದ್ಯರೂಪದಲ್ಲಿ ನೀಡಿದ್ದಾನೆ. ಮಧ್ಯೆ ಮಧ್ಯೆ ಉತ್ತಪು.ದ ಗದ್ಯಾನುವಾದ ಹಾಗೂ ಸಂಗ್ರಹವನ್ನು ಮಾಡಿದ್ದಾನೆ. ಇತರ ಕಥೆಗಳಿಂದಲೂ ಸಾಮಗ್ರಿಯನ್ನು ಎಳೆದು ತಂದಿದ್ದಾನೆ. ಒಂದು ರೀತಿ ತೇಪೆ ಹಚ್ಚುವ ಕೆಲಸ ದೇವ ಚಂದ್ರನದು. ಚಂಪೂ ಮಾದರಿಯಲ್ಲಿ ಹಳಗನ್ನಡ, ನಡುಗನ್ನಡ, ಹೊಸಗನ್ನಡದ ಸಮ್ಮಿಶ್ರ ಶೈಲಿಯಲ್ಲಿ ಕಥೆ ಕಂಡುಬರುತ್ತದೆ.

ದೇವಚಂದ್ರನು ರಾಚಪು.ದಿಂದ ವಿಭಿನ್ನವಾಗಿ ನಿಲ್ಲುವ ಉತ್ತಪು.ದ ಬಹುತೇಕ ವಾದ ಎಲ್ಲ ಅಂಶಗಳನ್ನು ರಾಚಪು.ದೊಂದಿಗೆ ಹೆಣೆದಿದ್ದಾನೆ. ಕೆಲವೆಡೆ ಕಥೆಗೆ ಹೊಸ ಅಂಶಗಳ ಸೇರ್ಪಡೆ ಆದಂತೆ ಕಂಡುಬರುತ್ತದೆ.

ಜೈನ ರಾಮಾಯಣದ ವಿವಿಧ ಪರಂಪರೆಯಲ್ಲಿ ಬರುವ ಅಪರಾಜಿತೆಯ ಹೆಸರನ್ನು ಲಕ್ಷಿಸಿ ಆಕೆಗೆ ಕೌಶಲೆ, ಸುಬಾಲೆ ಎಂಬ ಹೆಸರೂ ಇತ್ತೆಂದೂ ಹೇಳಿದ್ದಾನೆ.

ಉತ್ತಪು.ದ ಪ್ರಕಾರ ಯಾಗದ ವಿಚಾರವನ್ನು ತಂದಿದ್ದಾನೆ. ನಮಿವಿನಮಿ ಗಳಿಂದ ಪರಂಪರಾನುಗತವಾಗಿ ಬಂದ ಬಿಲ್ಲುಗಳ ಬಗೆಗೆ ಹೇಳುವಾಗ ಪಂಪನ ಆದಿ ಪು.ದ ನಮಿವಿನಮಿ ಪ್ರಸಂಗವನ್ನು ತೆಗೆದಿಟ್ಟಿದ್ದಾನೆ. ಕೆಲವೆಡೆ ಅದರ ಗದ್ಯಾನುವಾದ ವನ್ನು ಸಂಗ್ರಹವಾಗಿ ನೀಡಿದ್ದಾನೆ.

ಸೀತೆ ಮಂಡೋದರಿಯ ಮಗಳೆಂದು ಉತ್ತಪು.ದಂತೆಯೇ ಹೇಳಿದ್ದಾನೆ. ಅದರ ಸಂಬಂಧವಾಗಿ ಬರುವ ಕಥೆಯನ್ನೇ ನಿರೂಪಿಸಿದ್ದಾನೆ.

ರಾಮನು ಪಾರಣಾಸಿಗೆ ಬಂದ ವಿಚಾರದಿಂದ ಸೀತಾಪಹರಣವಾಗುವಲ್ಲಿನ ವಿಷಯದವರೆಗೆ ಉತ್ತಪು.ವನ್ನು ಅನುಸರಿಸಿದ್ದಾನೆ. ಆದರೆ ಇಲ್ಲಿ ರಾವಣನಿಗೆ ಸೀತೆ ಯನ್ನು ಲಂಕೆಗೆ ಕೊಂಡೊಯ್ಯಲಾಗುವುದಿಲ್ಲ. ಗಗನಗಾಮಿನೀ ವಿದ್ಯೆ ಈತನನ್ನು ತಿರಸ್ಕರಿಸಿ ಹೊರಟು ಹೋಗುತ್ತದೆ. ವಿಭೀಷಣ ಈ ವಿಚಾರ ತಿಳಿದು ಚಿತ್ರಕೂಟಕ್ಕೆ ಬಂದು ರಾವಣನನ್ನು ಕರೆದುಕೊಂಡು ಹೋಗುತ್ತಾನೆ. ದಶರಥನ ಪತ್ರದ ಪ್ರಕಾರ ರಾಮ, ಸೀತೆಯನ್ನು ಕರೆದುಕೊಂಡು ಬರುತ್ತಾನೆ. ಇಲ್ಲಿಂದ ಮುಂದೆ ದಶರಥನ ವೈರಾಗ್ಯದಿಂದ ಹಿಡಿದು ರಾಮನ ವನಪ್ರವೇಶದವರೆಗೆ ಸೀತಾಪಹರಣವಾದುದು ರಾಮಕಥಾವತಾರದ ಪ್ರಕಾರ ಎರಡು ಬಾರಿ.

ವಾಲಿಯ ವೃತ್ತಾಂತದಲ್ಲಿ ರಾಚಪು.ವನ್ನು ಅನುಸರಿಸಿದ್ದಾನೆ. ಆದರೆ ಕೃತಕ ಸುಗ್ರೀವನನ್ನು ಕೊಲ್ಲುವವನು ಲಕ್ಷ್ಮಣ, ರಾಚಪು.ದಂತೆ ರಾಮನಲ್ಲ.

ವಿಭೀಷಣನು ರಾಮನಿಗೆ ಬುದ್ಧಿವಾದ ಹೇಳುವಾಗಿನ ಸಂದರ್ಭದಲ್ಲಿ, ಪತಿವ್ರತಾ ಸ್ತ್ರೀಯರನ್ನು ಭಂಗಪಡಿಸಲು ಸಾಧ್ಯವಿಲ್ಲ ಎಂಬುದನ್ನು ನಿರೂಪಿಸಲು ಸುಲೋಚನೆಯ ಕಥೆಯನ್ನು ಚಾವುಂಪು.ದಂತೆ ನಿರೂಪಿಸಿದ್ದಾನೆ.

ಭರತನ ವೈರಾಗ್ಯದ ವಿಷಯವನ್ನು ಹೇಳುವಾಗ ತ್ರಿಜಗದ್ವಾರಣವೆಂಬ ಆನೆಯ ವಿಷಯವನ್ನು ಹೇಳುತ್ತಾ, ಸಮ್ಯಕ್ತ್ವಧಾರಿಯಾದ ಅದನ್ನು ಜನರು ಪೂಜಿಸಿದರೆಂದೂ ಅದು ಸತ್ತಮೇಲೆ ಆದರ ಪ್ರತಿಕೃತಿಯನ್ನು ಮಾಡಿ ಪೂಜಿಸತೊಡಗಿ, ಅದನ್ನೇ ಕಾಲ ಕ್ರಮೇಣ ಶಿವಪಾರ್ವತಿಯರ ಮಗ ವಿನಾಯಕ ಎಂದು ಹೇಳಿ ಮಿಥ್ಯಾದೃಷ್ಟಿಗಳು ಪೂಜಿಸತೊಡಗಿದರೆಂಬ ತನ್ನ ಹೊಸ ಕಲ್ಪನೆಯ ಸೇರ್ಪಡೆಯನ್ನು ಮಾಡಿದ್ದಾನೆ.[೪೯]

ಸುಗ್ರೀವಾದಿಗಳ ಕಥೆಯನ್ನು ನಿರೂಪಿಸುವಾಗ ನೇರವಾಗಿ ನಾಗರಾಜನ ಪುಣ್ಯಾಸ್ರವದ ಸುಗ್ರೀವ ಕಥೆಯನ್ನು ಅಳವಡಿಸಿಕೊಂಡಿದ್ದಾನೆ.[೫೦]

ದೇವಚಂದ್ರನು ಮುಖ್ಯವಾಗಿ ಇಲ್ಲಿ ಜೈನ ರಾಮಾಯಣ ಪರಂಪರೆಗಳಲ್ಲಿ ಬರುವ ಭಿನ್ನತೆಯನ್ನು ನೀಗಿ ಏಕ ಸೂತ್ರದಲ್ಲಿ ಹಿಡಿದಿಡುವ ಪ್ರಯತ್ನವನ್ನು ಮಾಡಿದ್ದಾನೆ ಜೈನ ಪರಂಪರೆಯಲ್ಲಿ ಕಂಡುಬರುವ ಈ ವಿವಿಧ ಶಾಖೆಯ ಕಥೆಗಳ ವಿಭಿನ್ನತೆಯನ್ನು ಕುರಿತು ಕೆಲವರು ಪ್ರಶ್ನಿಸಿರಬಹುದು ಅದಕ್ಕೆ ಉತ್ತರವೆಂಬಂತೆ ಕವಿ ಅವುಗಳನ್ನು ಬೆಸೆದು ಒಂದೆಡೆ ಸೇರಿಸಿ ಒಂದೇ ರಾಮಕಥೆಯನ್ನಾಗಿ ಮಾಡಿದಂತೆ ತೋರುತ್ತದೆ.

ಚಂದ್ರಸಾಗರ ವರ್ಣಿಯಂತೆ ಹೊಸ ಕಥಾಂಶಗಳನ್ನು ಈತನಾಗಿಯೇ ಸೇರಿಸಿರುವುದು ಕಡಿಮೆ (ನೇರವಾಗಿ ರಾಮಕಥೆಗೆ ಸಂಬಂಧಿಸಿದಂತೆ) ಚಂದ್ರಸಾಗರವರ್ಣಿಯ ರಾಮಕಥೆಯಲ್ಲಿ ವಿಶೇಷವಾಗಿ ವಾಲ್ಮೀರಾ.ದ ಪ್ರಭಾವವೂ (ಹರಿಷೇಣನ ಪರಂಪರೆಯಲ್ಲಿ ಕಂಡು ಬರುವಂತೆ) ಉಳಿದ ಪರಂಪರೆಗಳ ಪ್ರಭಾವವು ಆಗಿದ್ದು ಮಿಶ್ರ ನಡೆಯನ್ನು ಹೊಂದಿದೆ. ದೇವಚಂದ್ರನು ಜೈನರಾಮಾಯಣದ ಏಕೀಕರಣದ ಉದ್ದೇಶಪೂರ್ವಕವಾದ ಪ್ರಯತ್ನದತ್ತ ಹೆಜ್ಜೆ ಇಟ್ಟು ಅಲ್ಲಿಯೂ ಮಿಶ್ರನಡೆಯ ಗತಿಯನ್ನು ತಂದಿದ್ದಾನೆ.

ಭಾಷಾ ದೃಷ್ಟಿಯಿಂದ ಮೇಲಿನ ಎರಡು ಕೃತಿಗಳೂ ಹೇಳಿಕೊಳ್ಳುವಂತಹ ಕೃತಿಗಳಲ್ಲದಿದ್ದರೂ ಮಿಶ್ರ ನಡೆ ಹೇಗೆ ಒಂದು ಕಥೆಯಲ್ಲಿ ಸೇರ್ಪಡೆಗೊಂಡು ಬೆಳೆದು ಬರಲು ಸಾಧ್ಯ ಎಂಬುದಕ್ಕೆ ಇವು ಉತ್ತಮ ನಿದರ್ಶನಗಳಾಗಿವೆ.

ಪ್ರಾಕೃತ, ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಹರಡಿ ನಿಂತಿರುವ ರಾಮಕಥೆ ಜೈನ ಪರಂಪರೆಗೆ ಒಂದು ವಿಶಿಷ್ಟವಾದ ಕಾಣಿಕೆಯನ್ನು ಸಲ್ಲಿಸಿದೆ. ಮೊಟ್ಟಮೊದಲಬಾರಿಗೆ ವಿಮಲಸೂರಿಯಲ್ಲಿ ಜೈನ ಪರಂಪರೆಯ ರಾಮಕಥೆಯ ಸ್ವರೂಪವನ್ನು ಸಮಗ್ರವಾಗಿ

ಕಾಣುತ್ತೇವೆ. ಅನಂತರ ಅದು ಜೈನ ಪರಂಪರೆಯಲ್ಲಿ ಜನಪ್ರಿಯವಾಗಿ, ಅನೇಕ ಕವಿಗಳು ಅನುಸರಿಸಿರುವುದನ್ನು ಕಾಣುತ್ತೇವೆ. ಉತ್ತಪು. ಪರಂಪರೆಗಿಂತ ಪಉಚ, ಪರಂಪರೆ ಹೆಚ್ಚು ಕಾವ್ಯಮಯವಾಗಿದ್ದು ಅನೇಕ ಕವಿಗಳನ್ನು ಅದು ಆಕರ್ಷಿಸಿದೆ.

ರಾಮಕಥೆ ಮೊದಮೊದಲು ಲಾವಣಿ ರೂಪದಲ್ಲಿ ಅಥವಾ ಇನ್ನಾವುದೇ ಜನಪದ ಸಾಹಿತ್ಯದ ರೂಪದಲ್ಲಿದ್ದು ಅದನ್ನು ವೈದಿಕ ಪರಂಪರೆಯ ಮಾದರಿಯಲ್ಲಿ ಬರೆದವರಲ್ಲಿ ವಾಲ್ಮೀಕಿ ಅಗ್ರಗಣ್ಯನಾಗುತ್ತಾನೆ. (ಕ್ರಿ.ಪೂ. 3 ಶ.) ಅದೇ ರೀತಿ ಆ ಕಥೆ ಜೈನ ಪರಂಪರೆಯಲ್ಲಿಯೂ ಬೆಳೆದು ಬಂದಿತೆಂದು ತೋರುತ್ತದೆ. ವಿಮಲಸೂರಿಯ ಪರಂಪರೆಯಿಂದ ಬಂದ ರಾಮಕಥೆಯ ಕೆಲವು ಎಳೆಗಳನ್ನು ಹಿಡಿದು ಜನಪ್ರಿಯವಾಗಿದ್ದ ವಾಲ್ಮೀಕಿ ರಾಮಾಯಣದ ಕೆಲವು ಅಂಶಗಳನ್ನು ಸೇರಿಸಿ ರಾಮಕಥೆಯನ್ನು ಬರೆದಂತೆ ತೋರುತ್ತದೆ. ಈ ಕಾಲಕ್ಕಾಗಲೇ ಬೌದ್ಧಸಂಪ್ರದಾಯದ ದಶರಥ ಜಾತಕ ಮತ್ತು ಇತರ ಜಾತಕಗಳಲ್ಲಿ ರಾಮಕಥೆಯು ಕಂಡುಬರುವುದನ್ನು ಗಮನಿಸಬಹುದು. ಜಾನಪದೀಯವಾಗಿದ್ದ ರಾಮಕಥೆ ಈ ವಿವಿಧ ಮತಗಳಲ್ಲಿ ಬೇರೆ ಬೇರೆ ಸ್ವರೂಪವನ್ನು ಪಡೆದು ಕೆಲವೆಡೆ ಪರಸ್ಪರ ಸಾದೃಶ್ಯವೈದೃಶ್ಯಗಳನ್ನು ಅರಿತೋ ಅರಿಯದೆಯೋ ಪಡೆದುಕೊಂಡಿರುವುದು ಕಂಡುಬರುತ್ತದೆ.

ಜೈನ ಪರಂಪರೆಯ ರಾಮಕಥೆಗೆ ವಾಲ್ಮೀಕಿ ರಾಮಾಯಣ ಪ್ರಭಾವ ಬೀರಿರುವಂತೆ ವಾಲ್ಮೀಕಿ ರಾಮಾಯಣದ ಮೇಲೆ ವಿಶೇಷತಃ ಉತ್ತರರಾಮಾಯಣವಾಗಿ ಬೆಳೆದಿರುವ ರಾಮಕತೆಯ ಮೇಲೆ ಜೈನ ಪರಂಪರೆಯ ಪ್ರಭಾವವಿರುವುದನ್ನು ಗುರುತಿಸಲಾಗಿದೆ. ಪ್ರಚಲಿತ ವಾಲ್ಮೀಕಿ ರಾಮಾಯಣದಲ್ಲಿ ಈ ಸಂಪೂರ್ಣ ಉತ್ತರಕಾಂಡವು ಪ್ರಕ್ಷಿಪ್ತವಾಗಿದೆಯೆಂದೂ ಉತ್ತರಕಾಂಡದ ಸಾಮಗ್ರಿಯ ವಿಶ್ಲೇಷಣೆಯಿಂದ ಇದರ ರಚನೆಯನ್ನು ಭಿನ್ನ ಭಿನ್ನ ಕವಿಗಳು ಬೇರೆ ಬೇರೆ ಕಾಲಗಳಲ್ಲಿ ಮಾಡಿದ್ದಾರೆಂದು ಅಭಿಪ್ರಾಯಪಟ್ಟಿದ್ದಾರೆ. ರಾವಣ ಚರಿತೆಯಂತೂ ಅಶುದ್ಧಶ್ಲೋಕಗಳಿಂದ ಕೂಡಿದೆ. ಇದನ್ನು ತರುವಾಯ ಕಾಲದಲ್ಲಿ ರಾಮಾಯಣದಲ್ಲಿ ಸೇರಿದ್ದಾಗಿದೆ. ಶಂಭುಕವಧೆಯೂ ಇತರ ಪೌರಾಣಿಕ ಕಥೆಗಳೂ ಹೀಗೆಯೇ ಸೇರಿಸಲಾಗಿದೆ. ಇನ್ನೂ ಸೀತಾ ಪರಿತ್ಯಾಗದಂಥ ರಾಮಾಯಣ ಕಥೆಗೆ ನೇರವಾಗಿ ಸಂಬಂಧವಿದ್ದ ವಿಷಯವೂ ಕೂಡ ಈ ರಾಮಾಯಣದ ಉತ್ತರಕಾಂಡದಲ್ಲಿ ಸುಸಂಬದ್ಧವಾಗಿ ಬೆಳೆದು ಬಂದಿಲ್ಲ. ಇವೆಲ್ಲವುಗಳನ್ನು ಗಮನಿಸಿದಲ್ಲಿ ಜೈನ ರಾಮಾಣಗಳ ವಿದ್ಯಾಧರಕಾಂಡ ಉತ್ತರಕಾಂಡಗಳಿಂದ ಪ್ರಭಾವಿತಗೊಂಡು ವಾಲ್ಮೀಕಿರಾ. ಉತ್ತರಕಾಂಡವು ರೂಪಗೊಂಡಿದೆ[1] ಎಂಬ ಅಭಿಪ್ರಾಯವಿದೆ.

ಜೈನರಲ್ಲಿ ವಿಭಿನ್ನವಾಗಿ ಕಂಡುಬರುವ ಮೂರು ಪರಂಪರೆಗಳಲ್ಲಿ ಮೊದಲನೆಯದಾದ ವಿಮಲಸೂರಿಯ ಪರಂಪರೆ ಪ್ರತ್ಯೇಕವಾಗಿ ನಿಂತರೆ ಸಂಘದಾಸ — ಹರಿಷೇಣ ಹಾಗೂ ಗುಣಭದ್ರ ಪರಂಪರೆಗಳು ತೀರಾ ವಿಭಿನ್ನವಾಗಿ ನಿಲ್ಲದೆ ಸ್ವಲ್ಪ ಹತ್ತಿರವಾಗಿ ನಿಲ್ಲುತ್ತವೆ. ವಿಮಲಸೂರಿಯ ಕಾಲದಿಂದೀಚೆಗೆ ರಾಮಾಯಣದಲ್ಲಿ ಬೆಳೆದುಬಂದ ಧೋರಣೆಗಳೂ ಇದಕ್ಕೆ ಕಾರಣವಾಗಿರಬಹುದು.

ವಿಮಲಸೂರಿ ಪರಂಪರೆಯಲ್ಲಿ ಕಂಡು ಬರುವ ರಾವಣ, ಕೈಕೆ, ವಾಲಿ, ಈ ಮೊದಲಾದ ಪಾತ್ರದ ಔನ್ನತ್ಯ ಉಳಿದ ಪರಂಪರೆಗಳಲ್ಲಿ ಕಂಡು ಬರುವುದಿಲ್ಲ. 'ಆ ಜೈನ ರಾಮಾಯಣ ಮಹಾಭಾರತಗಳಲ್ಲಿ ರಾಕ್ಷಸ ಪಾತ್ರಗಳಾಗಿ, ಕ್ರೂರಿಗಳಾಗಿ, ನೃಶಂಸರಾಗಿ ಚಿತ್ರಣಗೊಂಡಿರುವ ಎಷ್ಟೋ ಪಾತ್ರಗಳನ್ನು ಜೈನ ಕವಿಗಳು ತಮ್ಮ ಅಹಿಂಸೆಯ ಅಮೃತ ಮಡುವಿನಲ್ಲಿ ಅದ್ದಿ ತೆಗೆದಿದ್ದಾರೆ. ಆ ಪಾತ್ರಗಳಿಗೆ ಸಾನುಕಂಪೆಯಿಂದ ಹೊಸ ತಿರುವು ಕೊಟ್ಟಿದ್ದಾರೆ. ಅನಾರ್ಯ ಪಾತ್ರಗಳ ರೂಕ್ಷತೆಯನ್ನು ತಗ್ಗಿಸಿ ಅದರಲ್ಲೂ ಮಾನವೀಯ ಗುಣಗಳು ಮಿಂಚುವಂತೆ ಪರಿವರ್ತಿಸಿದ್ದಾರೆ. ಕರ್ಣ, ಜರಾಸಂಧ, ಧುರ್ಯೋಧನ ರಾವಣ ಮೊದಲಾದ ಪಾತ್ರಗಳು ಈ ರೀತಿ ಪರಿಷ್ಕಾರಕ್ಕೆ ಒಳಗಾಗಿವೆ. ಜರಾಸಂಧ ರಾವಣರು ಭವಿಷ್ಯತ್ ಕಾಲದ ತೀರ್ಥಂಕರರಾಗುವರೆಂಬ ಒಂದು ಪರಿಕಲ್ಪನೆ ಸಾಕು ಅವರ ಅನುಕಂಪ ಔದಾರ್ಯ ಮತ್ತು ಮಾನವೀಯ ಮನೋಧರ್ಮದ ವೈಶಾಲ್ಯವನ್ನು ಧ್ವನಿಸಲು'[2] ಎಂಬ ಮಾತುಗಳನ್ನು ಇಲ್ಲಿ ನೆನೆಯ ಬಹುದಾಗಿದೆ.

ಸೀತೆಯು ಅಗ್ನಿಪರೀಕ್ಷೆಯಲ್ಲಿ ಗೆದ್ದು, ಅವಳನ್ನು ಸ್ವೀಕರಿಸಲು ರಾಮನು ಸಿದ್ಧನಾದಾಗ ಸೀತೆ ಕೈಗೊಳ್ಳುವ ಕಾರ್ಯ ಸ್ತ್ರೀಪರ ವಿಚಾರವಾದಿಗಳಿಗೆ ಹೆಮ್ಮೆಯನ್ನು ನೀಡುವ ವಿಷಯವಾಗಿದೆ. ಇಲ್ಲಿ ಸೀತೆ ರಾಮ ಹಾಗೂ ಪುರಜನರು ಬಯಸುವ ಶುದ್ಧತೆಯನ್ನು ಮೆರೆದು, ಅದಕ್ಕೂ ಮೀರಿ ನಿಲ್ಲುವ ಆತ್ಮಕಲ್ಯಾಣ ಪರಿಶುದ್ಧತೆಯನ್ನು ಅರಿಸಿ ಹೊರಡುತ್ತಾಳೆ. ಈ ಸಂದರ್ಭದಲ್ಲಿ ಸೀತೆ ರಾಮನಿಗಿಂತ ಉನ್ನತ ಹಂತದಲ್ಲಿ ನಿಲ್ಲುತ್ತಾಳೆ. ಸೀತೆ ರಾಮನಂತೆ ಚರಮದೇಹಧಾರಿಯಲ್ಲದಿರಬಹುದು ಆದರೂ ಆಕೆ ಮುಂದೆ ಮುಕ್ತಿ ಹೊಂದುವ ಜೀವ. ರಾಮನಿಗಿಂತ ಮೊದಲು ಆತ್ಮ ದೃಢತೆಯನ್ನು ತೋರಿ ವೈರಾಗ್ಯದ ಹಾದಿಯನ್ನು ಸ್ವೀಕರಿಸಿದವಳು.

ವಾಲಿಯ ಚಿತ್ರಣವೂ ವಿಮಲಸೂರಿಯಲ್ಲಿ ವಿಶಿಷ್ಟವಾದುದು. ಕೆಲವು ಜೈನ ಹಾಗೂ ಜೈನೇತರ ಪರಂಪರೆಗಳಲ್ಲಿ ಕಂಡು ಬರುವ ಚಿತ್ರಣ ಇದಲ್ಲ, 'ಜಿನಭಕ್ತಿ' ಪಾರಮ್ಯವನ್ನೇ ನೋಂತು ಅದನ್ನೇ ಜೀವಸರ್ವಸ್ವವೆಂದು ತಿಳಿದು ದೀಕ್ಷೆಯ ದಾರಿಯನ್ನು ಹಿಡಿದವನು ವಾಲಿ.

ರಾಮಾಯಣದ ಅಂತಿಮ ಘಟ್ಟ, ಲಕ್ಷ್ಮಣನ ಸಾವು, ಈ ಭಾಗದಲ್ಲಿ ರಾಮನ ಭ್ರಾತೃವಾತ್ಸಲ್ಯವು ಹೆಪ್ಪುಗಟ್ಟಿನಿಂತಿದೆ. ಇತರ ಜೈನ ಪರಂಪರೆಗಳಲ್ಲಿ ಹಾಗೂ ಜೈನೇತರ ರಾಮಾಯಣಗಳಲ್ಲಿ ಕಂಡುಬಾರದ ಈ ವಿಷಯ ಇಲ್ಲಿ ವಿಶೇಷವಾಗಿ ನಿಲ್ಲುತ್ತದೆ.

ಗುಣಭದ್ರರ ಪರಂಪರೆಯಲ್ಲಿ ಕೈಕೆಯ ವಿಷಯದಲ್ಲಿ ಕಳಂಕವು ಎಳ್ಳಿನಷ್ಟು ಕಂಡು ಬಾರದು. ರಾಮನ ವನವಾಸ ಪ್ರಸಂಗವಿರಲಿ, ಭರತನಿಗೆ ರಾಜ್ಯವನ್ನು ಕೇಳುವ ಪ್ರಸಂಗವೂ ಬರುವುದಿಲ್ಲ. ವಿಮಲಸೂರಿ ಪರಂಪರೆಯಲ್ಲಿ ಕೈಕೆ ಮಗನಿಗಾಗಿ ಸ್ವಲ್ಪ

ಸ್ವಾರ್ಥಿಯಹಾದಂತೆ ಕಂಡರೂ ಸಂಘದಾಸ – ಹರಿಷೇಣ ಮತ್ತು ವಾಲ್ಮೀರಾ. ಪರಂಪರೆಗಳಂತೆ ಮುಲತಾಯಿ ಮಹಾತ್ಸರ್ಯದಿಂದ ಕೂಡಿದ ಪಾತ್ರವಲ್ಲ, ಹೀಗೆ ಆಯಾ ಪರಂಪರೆಗೆ ವಿಶಿಷ್ಟವಾಗಿ ನಿಲ್ಲುವ ಕೆಲವು ಅಂಶಗಳು ಕಂಡುಬರುತ್ತವೆ.

ಜೈನ ರಾಮಾಯಣಗಳಲ್ಲಿ ಮುಖ್ಯ ಕಥಾ ಘಟ್ಟಗಳಾಗಿ ಕಂಡುಬರುವ ರಾಮಾದಿಗಳ ಜನನ, ಸೀತಾರಾಮರ ವಿವಾಹ, ಸೀತಾಪಹರಣ, ರಾಮನ ವಿಜಯ, ರಾಮನದೀಕ್ಷೆ ಮತ್ತು ಭವಾವಳಿನಿರೂಪಣೆ, ವಂಶಾವಳಿ ನಿರೂಪಣೆ (ಇಲ್ಲಿಯೂ ಕೆಲವು ವ್ಯತ್ಯಾಸಗಳಿಗೆ) ಈ ಕೆಲವು ವಿಚಾರಗಳು ಏಕಸೂತ್ರವಾಗಿ ನಿಲ್ಲುತ್ತವೆ.

ಜೈನ ರಾಮಕಥಾ ಪರಂಪರೆಯು ಬೆಳವಣಿಗೆಯ ಹಾದಿ ಅತ್ಯಂತ ಸುದೀರ್ಘವಾದುದು. ಕಾಲದಿಂದ ಕಾಲಕ್ಕೆ ಅದು ವಿವಿಧ ಪರಂಪರೆಗಳಲ್ಲಿ ವಿವಿಧ ಭಾಷೆಗಳಲ್ಲಿ ಮೈದಳೆಯುತ್ತಾ ಬಂದಿದೆ. ಮಹಾವೀರನಿಂದ ಹಿಡಿದು ಅಥವಾ ಅಧಿಕೃತವಾಗಿ ನಮಗೆ ದಾಖಲಾಗುವ ವಿಮಲಸೂರಿಯ ಕಾಲದಿಂದ ಅಂದರೆ ಕ್ರಿ. ಶ. 1ನೆಯ ಶತಮಾನದಿಂದ 19-20ನೆಯ ಶತಮಾನದವರೆಗೆ ಜೈನ ಪರಂಪರೆಯಲ್ಲಿ ಸುಮಾರು 2000 ವರ್ಷಗಳವರೆಗೆ ಬೆಳೆಯುತ್ತಾ ಬಂದಿದೆ. ಈ ಸುದೀರ್ಘಾವಧಿಯಲ್ಲಿ ಅದರ ಬೆಳವಣಿಗೆಯ ಹಂತವೂ ಕಥೆಯ ತಿರುವುಗಳೂ ಅತ್ಯಂತ ರೋಚಕವಾಗಿ ಕಂಡು ಬರುತ್ತದೆ. ಜೈನ ರಾಮಾಯಣಗಳಲ್ಲಿ ವಿವಿಧ ಪರಂಪರೆಗಳು ಬೆಳೆದು ಬಂದಿರುವುದು ಹಾಗೂ ಆಯಾ ಪರಂಪರೆಯೊಳಗೇ ತೋರುವ ವೈಸಾದೃಶ್ಯಗಳು ಜೈನ ರಾಮಾಯಣದಲ್ಲಿ ಒಂದು ರೀತಿಯ ಗೊಂದಲವನ್ನು ಏರ್ಪಡಿಸುವಂತೆ ತೋರುತ್ತದೆ. 'ಜೈನರಾಮಾಯಣ' ಎಂದು ಒಟ್ಟಾರೆ ಸೇರಿಸಿ ಹೇಳಲಾಗದಷ್ಟು ಇವುಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಇತ್ತೀಚಿನ ಕವಿಗಳಾದ ಚಂದ್ರಸಾಗರವರ್ಣಿ, ದೇವಚಂದ್ರರು ಈ ಗೊಂದಲವನ್ನು ಕಂಡುಕೊಂಡವರಂತೆ ಅವುಗಳಲ್ಲಿ ಏಕಸೂತ್ರತೆ ತಂದು ಜೈನ ರಾಮಾಯಣಕ್ಕೊಂದು ಸಾಮಾನ್ಯವಾದ ಸ್ವರೂಪವನ್ನು ತರುವ ಪ್ರಯತ್ನವನ್ನು ಮಾಡಿರುವಂತೆ ತೋರುತ್ತದೆ. ದೇವಚಂದ್ರನಲ್ಲಿಯಂತೂ ಈ ದೃಷ್ಟಿ ಸುಸ್ಪಷ್ಟ. ಆದರೂ ಇವುಗಳಲ್ಲಿ ನಾವು ಕಾಣುವುದು ಕಲಸುಮೇಲೋಗರದಂತಹ ಕಥೆಯನ್ನು.

ತಮ್ಮ ಹಾಗೂ ಜನಮನದ ಆಶಯ, ಕಲ್ಪನೆ, ಧ್ಯೇಯಗಳಿಗನುಗುಣವಾಗಿ ಸ್ಪಂದಿಸುತ್ತಾ, ಕವಿಗಳು, ರಾಮಕಥೆಯನ್ನು ಬೆಳೆಸಿರುವುದು ಕಂಡು ಬರುತ್ತದೆ. ಮಹಾವೀರನಿಂದ ಉಕ್ತವಾದ ಕಥೆ ಇದೆಂದು ಹೇಳಿದ್ದರೂ ಇಷ್ಟೊಂದು ವೈವಿಧ್ಯಮಯವಾದ ಕಥಾಪರಂಪರೆ ದೊರೆಯುವುದು ಆಶ್ಚರ್ಯಕರವಾದ ಸಂಗತಿ ಎನಿಸಿದರೂ ಇಲ್ಲಿ ಸೇರ್ಪಡೆಯಾಗಿರುವ ವಿಚಾರಗಳು ಏನಿದ್ದರೂ ಮುಖ್ಯ ಕಥಾ ಸೂತ್ರವನ್ನು ಹೊರಪಡಿಸಿ ಎಂಬುದನ್ನು ಗಮನಿಸಬೇಕು. ಜೈನ ರಾಮಾಯಣ ಪರಂಪರೆಗಳು ಏನೇ ಆದರೂ ತಮ್ಮ ಸಂಸ್ಕೃತಿಯ ವಲಯದಿಂದ ಆಚೆಬಾರದೆ ಆ ಚೌಕಟ್ಟಿನೊಳಗೇ ಸುತ್ತಿ ಸುಳಿಯುವುದನ್ನು ಗಮನಿಸಬಹುದಾಗಿದೆ.

ತ್ರಿಷಷ್ಟಿ ಶಲಾಕಾಪುರುಷರಲ್ಲಿ ತೀರ್ಥಂಕರರಿಗೆ ಮಾತ್ರ ಪೂಜ್ಯಸ್ಥಾನ, (ಬಾಹುಬಲಿ ತೀರ್ಥಂಕರನಲ್ಲ. ಆದರೂ ಕೇವಲಿಯಾದ ಈತನಿಗೆ ಒಂದು ವಿಶಿಷ್ಟಸ್ಥಾನವಿದೆ) ದೇವಾಲಯಗಳಲ್ಲಿ ತೀರ್ಥಂಕರರಿಗೆ ಪೂಜೆ, ಅಭಿಷೇಕಗಳಿಂದ ವಿಶೇಷ ಸ್ಥಾನವನ್ನು ಸಲ್ಲಿಸಲಾಗಿದೆ. ಹಿಂದೂ ಪರಂಪರೆಯಲ್ಲಿ ಬಂದಿರುವಂತೆ ರಾಮದೇವಾಲಯಗಳು ಜೈನರಲ್ಲಿ ಕಂಡುಬರುವುದಿಲ್ಲ. ಆದರೂ ರಾಮಾದಿಗಳಿಗೆ ಒಂದು ಪೂಜ್ಯಸ್ಥಾನವು ದೊರಕಿರುವುದು ಕುಂದಕುಂದರ 'ದಶಭಕ್ತಿ' ಗ್ರಂಥದಿಂದ ತಿಳಿದು ಬರುತ್ತದೆ. ಕೇವಲಿಗಳಿಗೆ ಸಲ್ಲಿಸುವ ಪೂಜಾವಿಧಿಗಳಲ್ಲಿ ರಾಮನಿಗೂ ಪೂಜೆ ಸಲ್ಲುತ್ತದೆಯಾದರೂ ಪ್ರತ್ಯೇಕವಾದ ದೇವಾಲಯಗಳ ರಚನೆಯಿಲ್ಲ.

ಸಂಕ್ಷಿಪ್ತ-ಸೂಚಿ

ಪಉಮಚರಿ	—	ಪಉಚ.
ರಾಮಚರಿತ ಪುರಾಣ	—	ರಾಚಪು.
ಬೃಹತ್ಕಥಾ ಕೋಶ	—	ಬೃಹಕೋ.
ರಾಮಕಥಾವತಾರ	—	ರಾಕಅ.
ಜೈನ ಪರಂಪರೆ	—	ಜೈನಪ.
ವಾಲ್ಮೀಕಿ ರಾಮಾಯಣ	—	ವಾಲ್ಮೀರಾ.
ಶ್ವೇತಾಂಬರ ಪರಂಪರೆ	—	ಶ್ವೇತಾಂಪ.
ದಿಗಂಬರ ಪರಂಪರೆ	—	ದಿಗಂಪ.
ತ್ರಿಷಷ್ಠಿಶಲಾಕಾಪುರುಷಚರಿತ್ರ	—	ತ್ರಿಶಪುಚ.

ಅಡಿ ಟಿಪ್ಪಣಿಗಳು

1 V. M. Kulkarni 'Story of Rama in Jain literature, Bombay, 1989 ಪು. 239.
ಪಂಪ ರಾಮಾಯಣ ಸಂಗ್ರಹ. ಸಂ : ಶ್ರೀನಿವಾಸ ರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಮುನ್ನುಡಿ 1980.

2 ನೋ. ಮಿರ್ಜಿಅಣ್ಣಾರಾಯ 'ಜನತಾದರ್ಪಣ ರವಿಷೇಣ ರಾಮಾಯಣ' ಶೇಡಬಾಳ, 1968.

3 ಅದೇ ಪು. 5.

4 Kulkarni, ಅದೇ ಪು. 216.

5 ಡಾ. ಹಂಪ ನಾಗರಾಜಯ್ಯ, 'ನಾಗಚಂದ್ರ-ಇತಿವೃತ್ತ' ವಿದ್ಯಾನಿಧಿ ಪ್ರಕಾಶನ ಗದಗ 1992.

6 ಕರ್ನಾಟಕ ಕವಿಚರಿತೆ, ತೃಸಂ.ಪು. 55-56-57 ಚಂದ್ರಶೇಖರ ಮತ್ತು ಪದ್ಮನಾಭ ಕವಿಗಳಿಂದ ರಚಿತವಾದ (ಕ್ರಿ.ಶ. 1750) 'ರಾಮಚಂದ್ರ ಚರಿತ್ರೆ'ವು ಸಾಂಗತ್ಯದಲ್ಲಿದೆ. 47 ಸಂಧಿಗಳಿವೆ. ಪದ್ಯಪ್ರಮಾಣ 5268 ಈ ಪದ್ಯಗಳಲ್ಲಿ ಮೊದಲು 2051 ಪದ್ಯಗಳು ಚಂದ್ರಶೇಖರ ಕವಿಯಿಂದ ರಚಿತವಾದುದೆಂದೂ ಉಳಿದವು ಪದ್ಮನಾಭನಿಂದ ರಚಿತವಾದುದೆಂದೂ ತಿಳಿದು ಬರುತ್ತದೆ. ಸೀತೆಯ ಅಗ್ನಿಪ್ರವೇಶವನ್ನು ಕುರಿತ ಪದ್ಯವನ್ನು ಕವಿಚರಿತೆಕಾರರು ಉದಾಹರಿಸಿರುವುದರಿಂದ ಇದು ಪಉಚ. ಪರಂಪರೆಗೆ ಸೇರಿದಂತೆ ಕಂಡು ಬರುತ್ತದೆ. ಇದು ಅಪ್ರಕಟಿತ ಕೃತಿ.

7 ಕರ್ನಾಟ ಕವಿ ಚರಿತೆ ಪ್ರ.ಸಂ.ಪು.414-416. ಶಿಶುಮಾಯಣನ 'ಅಂಜನಾ ಚರಿತ್ರೆ' ಸಾಂಗತ್ಯ ಗ್ರಂಥವಾಗಿದೆ. 15 ಸಂಧಿಗಳಿವೆ ಪದ್ಯಸಂಖ್ಯೆ 6000 ಈ ಗ್ರಂಥವು ರವಿಷೇಣ ಸಂಸ್ಕೃತದಲ್ಲಿ ಬರೆದಿರುವ ಪದ್ಮಚರಿತದ ಒಂದು ಭಾಗವೆಂದು ತಿಳಿಯುತ್ತದೆ.

8 ರಾವಣನು ಇಂದ್ರನನ್ನು ಗೆದ್ದ ಈ ಪ್ರಸಂಗವನ್ನು ಪ್ರಶ್ನೆಮಾಡಿದರೂ ಈ ಪರಂಪರೆಯಲ್ಲಿಯೂ ಇದು ಸಮಾವೇಶಗೊಂಡಿರುವುದು ಆಶ್ಚರ್ಯಕರವಾದ ವಿಷಯ.

9 PAUMACHARIYAM Part III 14-15, Prakrit text Society, Varanasi, 1962.

10 ಪಂಪರಾಮಾಯಣ ಸಂಗ್ರಹ : ಅದೇ ಪು. 17 ಮತ್ತು Kulkarni, ಅದೇ.

11 ಣಾಮವಲಿಯಣಿಬದ್ಧಂ ಆಯರಿಯ ಪರಂಪರಾಗಮಂ ಸವ್ವಂ, ವೊಚ್ಛಾಮಿ ಪಉಮಚರಿಯಂ ಅಹಾಣುಪುವ್ವ ಸಮಾಸೇಣ. 1-8 (ನಾನು ನಾಮಾವಲೀ ನಿಬದ್ಧವಾಗಿ ಹಾಗೂ ಆಚಾರ್ಯ ಪರಂಪರೆಯಿಂದ ಬಂದ ಸಮಸ್ತ ಪದ್ಮಚರಿತವನ್ನು ಅನುಪೂರ್ವಿಗೆ ಅನುಸರಿಸಿ ಹೇಳುತ್ತೇನೆ). ಇಲ್ಲಿ ಕಂಡುಬರುವ ನಾಮಾವಲೀ ಪರಂಪರೆ ಯಾವುದೆಂದೂ ನೇರವಾಗಿ ತಿಳಿದುಬರುವುದಿಲ್ಲವಾದರೂ ಈತನ ಕಾಲಕ್ಕೆ ಮಹಾವೀರನ ನಿರ್ವಾಣವಾದ 16 ವರ್ಷಗಳ ನಂತರ ಆಗಮ ಸಂರಕ್ಷಣಾರ್ಥವಾಗಿ ಸ್ಥೂಲಭದ್ರಾಚಾರ್ಯರ ನೇತೃತ್ವದಲ್ಲಿ ಆಗಮ ಸಂಕಲನ ಕಾರ್ಯವು ನೆರವೇರಿತು. ಇಲ್ಲಿ ಮೌಖಿಕವಾಗಿ ಸಂಕಲಿತಗೊಂಡು ಬಂದ ನಾಮಾವಲೀ ಪರಂಪರೆ ಈತನಿಗೆ ಪರಿಚಯವಿದ್ದಿರಬೇಕೆಂದು ಊಹಿಸಬಹುದಾಗಿದೆ.

12 ರಾಹೂ ನಾಮಾಯರಿಓ ಸಸಮಯ ಪರಸಮಯಗಹಿಯ ಸಬ್ಭಾಓ
ವಿಜಓಯ ತಸ್ಸ ಸೀಸೋ ನಾಇಲಕುಲವಂಸ ನಂದಿಯರೋ
ಸೀಸೇಣ ತಸ್ಸ ರಇಯಂ ರಾಹವ ಚರಿಯಂ ತುಸೂರಿ ವಿಮಲೇಣ
ಸೋಊಣಂ ಪುವ್ವಗಏ ನಾರಾಯಣಸೀರಿ ಚರಿಯೊಣಂ

13 ದ್ರವ್ಯಶ್ರುತ ಭಾವಶ್ರುತಗಳ ಬಗೆಗೆ ಜೈನ ಪುರಾಣಗಳಲ್ಲಿ ದಾಖಲೆಗಳು ಲಭ್ಯವಾಗುತ್ತವೆ ದ್ರವ್ಯಶ್ರುತ ಅಂದರೆ ಲಿಖಿತರೂಪದಿಂದ ಮಹಾವೀರನ ಪೂರ್ವಕಾಲದ ಯಾವ ಸಾಹಿತ್ಯವು ಉಪಲಬ್ಧವಿಲ್ಲ. ಆದರೆ ಭಾವಶ್ರುತದ ಅಪೇಕ್ಷೆಯಿಂದ ಜೈನ ಶ್ರುತಾಂಗ

ಗಳಲ್ಲಿ ಕೆಲವು ರಚನೆಗಳನ್ನು ಮಹಾವೀರನ ಪೂರ್ವಕಾಲದಿಂದಲೂ ಶ್ರವಣ ಪರಂಪರೆಯಲ್ಲಿ ಪ್ರಚಲಿತವಿದ್ದಿತೆಂದು ಸ್ವೀಕರಿಸಲಾಗುತ್ತದೆ. ಶ್ವೇತಾಂಪ.ಗೆ ಅನುಗುಣವಾಗಿ ಹನ್ನೊಂದು ಅಂಗಗಳನ್ನು ಮಹಾವೀರನು ನಿರ್ವಾಣ ಹೊಂದಿದ ನಂತರ ಕಾಲಕ್ಕೆ ಹಿಡಿದಿಡುವ ಪ್ರಯತ್ನ ನಡೆದುಬಂದಿದೆ. ಅವುಗಳಲ್ಲಿ ಮಹಾವೀರನ ನಿರ್ವಾಣದ ನಂತರ 160 ವರ್ಷಗಳಲ್ಲಿ ಸ್ಥೂಲಭದ್ರಾಚಾರ್ಯರು ಜೈನ ಶ್ರಮಣ ಸಂಘದ ಸಮ್ಮೇಲನಗಳನ್ನು ಕೂಡಿಸಿದರು. ಇಲ್ಲಿ ಹನ್ನೊಂದು ಅಂಗಗಳ ಸಂಕಲನ ಮಾಡಲಾಯಿತು. ಹನ್ನೆರಡನೆಯ ಅಂಗ ದೃಷ್ಟಿವಾದ ಆದರೆ ಇದರ ಜ್ಞಾನವು ಅಲ್ಲಿರುವ ಮುನಿಗಳಿಗೆ ಯಾರಿಗೂ ಇರಲಿಲ್ಲ. ತರುವಾಯ 840 ವರ್ಷಗಳು ಕಳೆದ ಮೇಲೆ ಆರ್ಯ ಸ್ಕಂಧಿಲನ ನೇತೃತ್ವದಲ್ಲಿ ಮಥುರೆಯಲ್ಲಿ ಆಗಮಗಳ ಸಂಕಲನ ಕಾರ್ಯ ನಡೆಯಿತು. ಅದೇ ಸಮಯದಲ್ಲಿ ವಲಭಿಯಲ್ಲಿಯೂ ನಾಗಾರ್ಜುನ ಸೂರಿ ಒಂದು ಮುನಿ ಸಮ್ಮೇಲನವನ್ನು ಸೇರಿಸಿ ಆಗಮ ರಕ್ಷಣೆಗಳ ಪ್ರಯತ್ನವನ್ನು ಮಾಡಿದನು. ಅದರಲ್ಲಿ ಲಿಪಿಬದ್ಧಗೊಳಿಸಿದ ಶ್ರುತಾಂಗಗಳು ಈಗಲೂ ಪ್ರಚಾರದಲ್ಲಿವೆ.

ಸ್ಥಾನಾಂಗ ಸಮವಾಯಾಂಗಗಳಲ್ಲಿ ರಾಮಾದಿಗಳ ಉಲ್ಲೇಖ ಬರುತ್ತದೆ. ಸಮವಾಯಾಂಗದಲ್ಲಿ 54 ಮಹಾಪುರುಷರ ತಂದೆ, ತಾಯಿ, ಜನ್ಮಸ್ಥಳ ಮೊದಲಾದ ವೃತ್ತಾಂತವು ನಾಮಾವಲೀ ರೂಪದಿಂದ ಇದೇ ದಿಗಂಪ.ಯ ತಿಲೋಯಪಣ್ಣತ್ತಿ (ಕ್ರಿ.ಶ. 6ನೆಯ ಶ) ಯಲ್ಲಿ ಈ ನಾಮಾವಲೀ ಸೂತ್ರವು ಕಂಡುಬರುತ್ತದೆ.

14 ರಾಮೋಸುಗ್ಗಿವ ಹಣುಮೋ ಗವಯಗದಕ್ಖೋಯಣೀ ಲಹಮಣೀಲೋ, ಣವಣವದೀ ಕೋಡಿಓ ತುಂಗೀಗಿರಿ ಣಿವ್ವದೇ ವಂದೇ (ಕುಂದ ಕುಂದರ ದಶಭಕ್ತಿಗಳು).

15 ಮಿರ್ಜಿ ಅಣ್ಣಾರಾಯ, ಅದೇ, ಪುಟ 35.

16 ಅದೇ, ಪು. 36.

17 24 ಮಂದಿ ತೀರ್ಥಂಕರರು, 12 ಮಂದಿ ಚಕ್ರವರ್ತಿಗಳು, 9 ಮಂದಿ ಬಲದೇವರು ಹೀಗೆ 63 ಮಹಾಪುರುಷರ ವಿಂಗಡಣೆ ಬರುತ್ತದೆ. ಶ್ವೇತಾಪ.ಯ ಪ್ರಕಾರ 54 ಮಂದಿ ಮಹಾಪುರುಷರು, ಇಲ್ಲಿ ಪ್ರತಿವಾಸುದೇವರನ್ನು ಮಹಾಪುರುಷರೆಂದು ಮಾನ್ಯ ಮಾಡುವುದಿಲ್ಲ, (ಸಮವಾಯಾಂಗ ಹಾಗೂ ಶೀಲಾಂಕನ ಚಉಪ್ಪನ್ನು ಮಹಾಪುರಿಸ ಚರಿಯದಲ್ಲಿ 54 ಮಂದಿ ಮಹಾಪುರುಷರನ್ನು ಪರಿಗಣಿಸಲಾಗಿದೆ. ಹೇಮಚಂದ್ರನು 63 ಮಂದಿ ಮಹಾಪುರುಷರನ್ನು ಪರಿಗಣಿಸಿದ್ದಾನೆ).

18 ನೋ. Wintering, 'History of Indian Literature' Vol. II, P. 475; &
Dr. A. N. Upadhye, introduction to Bruhatkatha Kosha, P. 17–30.

19 ವಿಮಲಸೂರಿಯನ್ನು ಯಾಪನೀಯ ಪಂಗಡದವನೆಂದು ಪರಿಗಣಿಸುವುದುಂಟು.

20 ಯಾಪನೀಯ ಸಂಘವು ಶ್ವೇತಾಂಬರ ಮತ್ತು ದಿಗಂಬರ ಪರಂಪರೆಗಳಿಗೆ ಸೇತುವೆ ಕಟ್ಟುವಂತಿದೆ.
ಈ ಸಂಘವು ವಿ. ಸಂ. 205 ರಲ್ಲಿ ಕಲಶರೆಂಬ ಶ್ವೇತಾಂಬರ ಸಾಧುಗಳಿಂದ ಸ್ಥಾಪಿತವಾಯಿತು.

ಯಾಪನೀಯ ಸಂಘದ ಮುನಿಗಳು ನಗ್ನರಾಗಿದ್ದರೂ ನವಿಲುಗರಿಗಳ ಪಿಂಛಿಯನ್ನಿಟ್ಟು ಕೊಳ್ಳುತ್ತಿದ್ದರು. ಹಾಗೂ ಕೈಯಿಂದಲೇ ಆಹಾರವನ್ನು ತೆಗೆದುಕೊಳ್ಳುತ್ತಿದ್ದರು. ಈ ದಿಗಂಬರ ಪಂಥಗಳ ವಿಚಾರದ ಜೊತೆಗೆ ಸ್ತ್ರೀಮುಕ್ತಿ ವಿಚಾರವನ್ನು, ಕೇವಲಿಗಳು, ಆಹಾರವನ್ನು ತೆಗೆದುಕೊಳ್ಳುವ ಸಿದ್ಧಾಂತವನ್ನು ಮಾನ್ಯಮಾಡುತ್ತಿದ್ದರು. ಶ್ವೇತಾಂಬರ ಪರಂಪರೆಯಲ್ಲಿ ಮಾನ್ಯವಾಗಿದ್ದ ಆಗಮಗ್ರಂಥಗಳನ್ನು ಇವರೂ ಮಾನ್ಯಮಾಡುತ್ತಿದ್ದರು. ಕ್ರಮೇಣ ಈ ಸಂಘವು (15ನೆಯ ಶತಮಾನದವರೆಗಿದ್ದು) ವಿಲೀನಗೊಂಡಂತೆ ತೋರುತ್ತದೆ. (ಪಂಡಿತ ಕೈಲಾಶಚಂದ್ರ–ಜೈನಧರ್ಮ).

20 POUMACARIYAM, ಅದೇ.

21 ಶ್ರೀ ಸಾಹಿತ್ಯ, 'A Tragic Ravana' ಕನ್ನಡ ಅಧ್ಯಯನ ಸಂಸ್ಥೆ ಮೈ.ವಿ.ವಿ.ನಿ. 1983.

22 ಪಉಚ.ದಲ್ಲಿ ಬರುವ ಸೀಯಾಂಬರ (ಶ್ವೇತಾಂಬರ) ಎಂಬ ಪದದ ಉಲ್ಲೇಖವನ್ನು ಮಾಡದೆ ಆ ಜಾಗದಲ್ಲಿ ದಿಗಂಬರ–ಅಸಂಬರ ಎಂಬ ಪದವನ್ನು ಬಳಸಿದ್ದಾನೆ.

ವಿಮಲಸೂರಿ ಶ್ವೇತಾಂಪ.ಗೆ ಸೇರಿದವನೆಂದೂ ರವಿಷೇಣನು ದಿಗಂಪ.ಗೆ ಸೇರಿದವನೆಂದೂ ಹಾಗಿರುವಾಗ ರವಿಷೇಣನು ವಿಮಲಸೂರಿಯನ್ನು ಅನುಸರಿಸುವ ಮಾತು ದೂರವಾಗುತ್ತ ದೆಂದೂ ಅಭಿಪ್ರಾಯಪಡುತ್ತಾರೆ. ಆದರೆ ವಿಮಲಸೂರಿಯು ಇವೆರಡೂ ಪಂಥಗಳಿಗೆ ಸೇತುವೆಕಟ್ಟುವ ಒಂದು ಪಂಥಕ್ಕೆ ಸೇರಿದವನೆಂದೂ (ಯಾಪನೀಯ) ಹೀಗಾಗಿ ಈತನನ್ನು ಶ್ವೇತಾಂಬರ, ದಿಗಂಬರ ಪಂಥದವರಿಬ್ಬರೂ ಮಾನ್ಯ ಮಾಡುತ್ತಾರೆಂಬ ಅಭಿಪ್ರಾಯವೂ ಕಂಡುಬರುತ್ತದೆ. ಅಥವಾ ಇವರಿಬ್ಬರಿಗೆ ಸಮಾನವಾದ ಮತ್ತೊಂದು ಮೂಲವು ಇದ್ದಿರಬೇಕು.

23 CAUPPANNA MAHAPUISA CARIYAM, PRAKRIT TEXT SERIES, Vol. III, Varanasi. 1961.

24 TRISASTI SALAKA PURUSA CARITRA, Hemachandra Oriental Institute, Baroda, 1931.

25 Kulkarni, ಅದೇ.

26 ನಾಗಚಂದ್ರ ವಿರಚಿತ 'ರಾಮಚಂದ್ರ ಚರಿತಪುರಾಣಂ' ಸಂ. ಆರ್. ಸಿ. ಹಿರೇಮಠ, ಭಾರತೀಯ ಜ್ಞಾನಪೀಠ ಪ್ರಕಾಶನ, 1975.

27 ಈತನು ಅನುಸರಿಸಬಹುದಾದ ಆಕರಗಳ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಕೆಲವರು ವಿಮಲಸೂರಿ ಅಥವಾ ರವಿಷೇಣನ ಕೃತಿಯೇ ಆಕರವಾಗಿದ್ದಿರಬಹುದೆಂದೂ (ಪಂಪ ರಾಮಾಯಣ ಸಂಗ್ರಹ: ಅದೇ) ರವಿಷೇಣ, ವಿಮಲಸೂರಿ, ವಾಲ್ಮೀಕಿ ಈ ಮೂವರ ಪ್ರಭಾವಕ್ಕೆ ಒಳಗಾಗಿ ಈ ಕೃತಿ ರೂಪಗೊಂಡಿದೆ ಎಂದೂ (ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ 2. ಬೆಂಗಳೂರು, ಪು. 225) ನಾಗಚಂದ್ರನಿಗೆ ಪ್ರಾಕೃತಕ್ಕಿಂತ ಸಂಸ್ಕೃತ ಹೆಚ್ಚು ಹತ್ತಿರವಾಗಿದ್ದಿರಬಹುದೆಂಬ ಊಹೆಯಿಂದ ರವಿಷೇಣನ ಪದ್ಮಪುರಾಣವೇ ನೇರ ಆಕರವೆಂದೂ (ಕನ್ನಡ ಸಾಹಿತ್ಯ ಚರಿತ್ರೆ 2. ಮೈ.ವಿ.ವಿ.ನಿ) ಪರಿಗಣಿಸಲಾಗಿದೆ.

28 ಕುಮುದೇಂದು ರಾಮಾಯಣ, ಸಂ.ಡಾ.ಪಿ.ವಿ. ನಾರಾಯಣ, ಕ.ಸಾ.ಪ. ಬೆಂಗಳೂರು 1981.

29 ಕುಮುದೇಂದು ರಾಮಾಯಣ, ಅದೇ.

30 Jain Journal, Jain Bhavan Publication, 'The Ramayana Culture in Karnataka' Vasantha Kumari, ಪು. 101.

31 ನಾಗರಾಜನ ರಾಮಕಥೆಯನ್ನು ಕೆಲವರು ಗುಣಭದ್ರನ ಪರಂಪರೆಗೆ ಸೇರಿಸಿ ಹೇಳಿದ್ದಾರೆ. (ನೋ. ಪಂಪ ರಾಮಾಯಣ ಸಂಗ್ರಹ, ಅದೇ, ಆದರೆ ಈ ಕಥೆಗಳು ರಾಜಪು.ಕ್ಕೆ ಹೋಲುತ್ತದೆ.

32 Vasudeva Hindi, Mananda Granthamala.

33 ವಾಲ್ಮೀಕಿ ರಾಮಾಯಣದ ಪ್ರಕಾರ ಈಗ ನಡೆಯುತ್ತಿರುವ ವೈವಸ್ವತ ಮನ್ವಂತರದಲ್ಲಿ ಬ್ರಹ್ಮಮಾನಸ ಪುತ್ರನಾದ ಪುಲಸ್ತ್ಯ ಮುನಿಯ ಮೊಮ್ಮಗನಾದ ವಿಶ್ರವಸನಿಂದ ಕೈಕಸಿಯೆಂಬಾಕೆಯಲ್ಲಿ ಜನಿಸಿದ ಮೂವರು ಪುತ್ರರಲ್ಲಿ ಹಿರಿಯ (ಪುರಾಣನಾಮ, ಚೂಡಾಮಣಿ ಪು. 499), ಭಾರತದ ಪ್ರಕಾರ ಈತ ವಿಶ್ರವಸನಿಂದ ಪುಷ್ಪೋತ್ಕಟಿಯಲ್ಲಿ ಜನಿಸಿದವ (ಬಾರ.ವನ. 276—ಪುರಾಣನಾಮ ಚೂಡಾಮಣಿ—ಪು. 499) ವಿಮಲ ಸೂರಿಯ ಪ್ರಕಾರ—ಸುಕೇಶ, ಸುಮಾಲಿ, ರತ್ನಶ್ರವ, ರತ್ನಶ್ರವನ ಪತ್ನಿ ಕೈಕಸೆ. ಇವರ ಮಗನೇ ರಾವಣ.

34 ವಾಲ್ಮೀಕಿ ರಾಮಾಯಣದ ಪ್ರಕಾರ (ಅಯೋಧ್ಯಾ 40, 44) ರಾಕ್ಷಸರ ಹಾಗೂ ದೇವತೆಗಳ ನಡುವೆ ನಡೆದ ಯುದ್ಧದಲ್ಲಿ ದಶರಥನು ಕೈಕೆಯೊಂದಿಗೆ ಇಂದ್ರನ ಸಹಾಯಾರ್ಥವಾಗಿ ಹೋದನು. ಈ ಸಂದರ್ಭದಲ್ಲಿ ಯುದ್ಧದಲ್ಲಿ ಮೂರ್ಛಿತನಾದ ದಶರಥನ ಸೇವೆಯನ್ನು ಕೈಕೆ ಕೈಗೊಂಡಳು. ಈ ಸಂದರ್ಭದಲ್ಲಿ ಎರಡು ವರಗಳನ್ನು ದಶರಥ ನೀಡಿದ. ಪಉಚ, ಪ್ರಕಾರ ದಶರಥನನ್ನು ಕೈಕಸಿ ವರಿಸಿದಾಗ ಇತರ ರಾಜರು ದಶರಥನ ಮೇಲೆ ಬಿದ್ದಾಗ ಯುದ್ಧದಲ್ಲಿ ಕೈಕಸಿ ಆತನ ಸಾರಥ್ಯವನ್ನು ನಡೆಸಿದಳು. ಆ ಸಂದರ್ಭದಲ್ಲಿ ದಶರಥ ಕೈಕೆಗೆ ಒಂದು ವರವನ್ನು ನೀಡಿದನು.

35 Bruhat Katha Kosha, A. N. Upadhye, Bharatiya Vidya Bhavan, Bombay 1943.

36 ಶಾಂತಿರಾಜ ಶಾಸ್ತ್ರೀ, ಜಿನಸೇನ ಗುಣಭದ್ರರ ಮಹಾಪುರಾಣ, ಭಾಗ–3, ಪರ್ವ 67-68.

37 Kulkarni, ಅದೇ ಪು. 136.

38 ಅದೇ ಪು. 137.

39 ಜಾತಕ ಕಥೆಯಲ್ಲಿಯ ರಾಮಕಥೆ–ದಶರಥ ಜಾತಕ.
ಇದರಲ್ಲಿ ರಾವಣನ ಪ್ರಸ್ತಾಪವಿಲ್ಲ, ಸೀತಾಪಹರಣವೂ ಅದರ ಮುಂದಿನ ಕಥೆಯೂ ಕಂಡುಬರುವುದಿಲ್ಲ.

ಕಾಶಿಯ ರಾಜ ದಶರಥನಿಗೆ ಹದಿನಾರು ಸಾವಿರ ಪತ್ನಿಯರು, ಅವರಲ್ಲಿ ಪಟ್ಟದರಸಿಗೆ ರಾಮ ಮತ್ತು ಲಕ್ಷ್ಮಣ ಎಂಬ ಇಬ್ಬರು ಗಂಡು ಮಕ್ಕಳೂ ಮತ್ತು ಸೀತಾ ಎಂಬ ಹೆಣ್ಣುಮಗಳೂ ಹುಟ್ಟಿದಳು. ಪಟ್ಟದ ರಾಣಿ ಸತ್ತನಂತರ ಎರಡನೇ ರಾಣಿಯ ಗರ್ಭದಲ್ಲಿ ಭರತನು ಜನಿಸಿದನು. ಕಿರಿಯ ರಾಣಿ ತನ್ನ ಮಗನನ್ನು ಪಟ್ಟದ ಮೇಲೆ ಕೂರಿಸಲು ಆಲೋಚಿಸುತ್ತಿದ್ದಳು. ತನ್ನ ಕಿರಿಯ ರಾಣಿಯು ಮಕ್ಕಳನ್ನು ಈಕೆ

ಕೊಲ್ಲಿಸಬಹುದೆಂಬ ಭಯದಿಂದ ದಶರಥ ಅವರನ್ನು ಹನ್ನೆರಡು ವರ್ಷಗಳವರೆಗೆ ಅರಣ್ಯ ವಾಸಕ್ಕೆ ಕಳುಹಿಸಿದನು. ಆಗ ರಾಮಲಕ್ಷ್ಮಣರು ತಮ್ಮ ಸಹೋದರಿ ಸೀತೆಯನ್ನು ಕರೆದುಕೊಂಡು ಹಿಮಾಲಯಕ್ಕೆ ಹೋಗಿ ಅಲ್ಲಿ ಒಂದು ಆಶ್ರಮವನ್ನು ಮಾಡಿಕೊಂಡು ಇರತೊಡಗಿದರು. ಒಂಬತ್ತು ವರ್ಷಗಳನಂತರ ಅರಣ್ಯಕ್ಕೆ ಕಳುಹಿಸಿದ ಪುತ್ರರ ಚಿಂತೆಯಿಂದಲೇ ಕೃಶನಾಗಿ ದಶರಥ ಮೃತನಾದನು. ಆಗ ಮಂತ್ರಿಗಳು ಭರತನಿಗೆ ಪಟ್ಟಕಟ್ಟಲು ನಿರ್ಧರಿಸಿದರು. ಆದರೆ ಅವನು ಒಪ್ಪಲಿಲ್ಲ. ರಾಮನ ಪಾದುಕೆಗಳನ್ನು ತೆಗೆದುಕೊಂಡು ಬಂದು ಅದನ್ನ ಸಿಂಹಾಸನದ ಮೇಲಿಟ್ಟು ಭರತ ರಾಜ್ಯವಾಳ ತೊಡಗಿದನು. ಹನ್ನೆರಡು ವರ್ಷಗಳ ನಂತರ ರಾಮ, ಲಕ್ಷ್ಮಣ, ಸೀತೆ ಹಿಂದಿರುಗಿ ಬಂದರು. ರಾಮನಿಗೆ ರಾಜ್ಯಾಭಿಷೇಕವಾಯಿತು. ಅನಂತರ ರಾಮನೇ ಸೀತೆಯನ್ನು ಮದುವೆಯಾಗಿ 14 ವರ್ಷಗಳವರೆಗೆ ರಾಜ್ಯವಾಳಿದನು. (ಜನತಾದರ್ಪಣ ಹರಿಷೇಣ ರಾಮಾಯಣದ ಅನುಬಂಧದಿಂದ).

40 Kulkarni, ಅದೇ ಪು. 137.

41 ಅಧ್ಭುತರಾಮಾಯಣದಲ್ಲಿ ಬರುವ ಸೀತೆಯ ಜನ್ಮಕಥೆ ಹೀಗಿದೆ. ದಂಡಕಾರಣ್ಯದಲ್ಲಿ ಗೃತ್ಸಮರ್ಧ ಎಂಬ ಋಷಿ ಇದ್ದನು ಅವನ ಹೆಂಡತಿಯು ತನ್ನ ಗರ್ಭದಿಂದ ಸಾಕ್ಷಾತ್ ಲಕ್ಷ್ಮಿಯು ಹುಟ್ಟಲೆಂದು ಪ್ರಾರ್ಥನೆ ಮಾಡಿಕೊಂಡಳು. ಇದಕ್ಕಾಗಿ ಅವಳ ಪತಿ ಪ್ರತಿ ನಿತ್ಯವು ಒಂದು ಗಡಿಗೆಯಲ್ಲಿ ಹಾಲನ್ನು ಅಭಿಮಂತ್ರಿಸಿ ಇಡುತ್ತಾ ಬಂದ. ಹೀಗಿರುವಾಗ ಒಮ್ಮೆ ಅಲ್ಲಿಗೆ ರಾವಣ ಬಂದನು. ಅವನು ಆ ಋಷಿಯನ್ನು ಗೆದ್ದ ಸಂಕೇತಕ್ಕಾಗಿ ತನ್ನ ಬಾಣದ ಕೊನೆಯಿಂದ ಅವನ ಶರೀರಕ್ಕೆ ಚುಚ್ಚಿ ಚುಚ್ಚಿ ರಕ್ತವನ್ನು ಹನಿಹನಿಯಾಗಿ ತೆಗೆದು ಹಾಲನ್ನು ಅಭಿಮಂತ್ರಿಸಿಟ್ಟಿದ್ದ ಗಡಿಗೆಗೇ ಹಾಕಿ ತುಂಬಿದನು. ಅನಂತರ ಆ ಗಡಿಗೆಯನ್ನು ತೆಗೆದುಕೊಂಡು ಹೋಗಿ ಮಂಡೋದರಿಗೆ ಅದನ್ನು ಏನಾದರೂ ಕುಡಿಯ ಬೇಡವೆಂದು ಹೇಳಿದನು. ಮಂಡೋದರಿ ತನ್ನ ಪತಿಗೆ ತನ್ನ ಮೇಲೆ ಎಳ್ಳಷ್ಟು ಪ್ರೀತಿ ಯಿಲ್ಲವೆಂದು ಬಗೆದು ಅದನ್ನು ಕುಡಿದು ಬಿಟ್ಟಳು. ಆದರೆ ಅವಳು ಸಾಯದೆ, ಗರ್ಭ ವತಿಯಾದಳು. ಪತಿಯಿಲ್ಲದಾಗ ಗರ್ಭವತಿಯಾದುದರಿಂದ ಅದನ್ನು ಮುಚ್ಚಿಡಲು ಪ್ರಯತ್ನಿಸಿದಳು. ಪತಿಯಿಲ್ಲದಾಗ ಇದಕ್ಕಾಗಿ ಕೊನೆಗೊಂದು ದಿನ ವಿಮಾನದಲ್ಲಿ ಕುಳಿತು ಕುರುಕ್ಷೇತ್ರಕ್ಕೆ ಹೋದಳು. ಅಲ್ಲಿ ಆ ಗರ್ಭವನ್ನು ನೆಲದಲ್ಲಿ ಹೂತಿಟ್ಟು ಬಂದಳು. ಅನಂತರ ನೆಲವನ್ನು ಉಳುತ್ತಿದ್ದಾಗ ಆ ಗರ್ಭದಿಂದ ಜನಿಸಿದ ಹೆಣ್ಣು ಮಗು ಜನಕ ಮಹಾರಾಜನಿಗೆ ಸಿಕ್ಕಿತು.

42 ಅಮಿಗತಿಯ 'ಧರ್ಮಪರೀಕ್ಷೆ'ಯಲ್ಲಿ ದೊರೆಯುವ ಉಲ್ಲೇಖ ಇದು. ಮಂಡೋದರಿ ತನ್ನ ತಂದೆಯ ವೀರ್ಯದಿಂದಾಗಿ ಗರ್ಭಿಣಿ ಆಗುತ್ತಾಳೆ. ರಾವಣನನ್ನು ಮದುವೆಯಾದ ನಂತರ ಇಂದ್ರಜಿತನಿಗೆ ಜನ್ಮನೀಡುತ್ತಾಳೆ. ವಾಲ್ಮೀಕಿ ರಾಮಾಯಣದಲ್ಲಿ ವಿಭೀಷಣನು ಎಷ್ಟೇ ಕಷ್ಟ ಬಂದರೂ ಸಚ್ಚಾರಿತ್ರವನ್ನು ಬಿಡದವನಾಗಬೇಕೆಂಬ ವರವನ್ನು ಬೇಡಿದಾಗ ಬ್ರಹ್ಮನು ಆ ವರದ ಜೊತೆಗೆ ಅಮರತ್ವವನ್ನು ನೀಡುತ್ತಾನೆ.

43 ಚಾವುಂಡರಾಯ ಪುರಾಣ ಸಂ. ಕಮಲಾಹಂಪನಾ, ಕೆ. ಆರ್. ಶೇಷಗಿರಿ, ಕ.ಸಾ.ಪ. ಬೆಂಗಳೂರು 1983.

44 ತೆರಳಿ ಬರುತ ಬಳಿ ಶಿವಗಿರಿಯೊಳು ಸ್ಥಿರಲಗ್ನದಿಂದ ಜಾನಕಿಗೆ ಅರಸ ಸಾವಿರದೆಂಟುಕನಕ ಕಳಶಗಳಿಂ ದಿರದಭಿಷೇಕಗೈಸಿದನು. (19—26).

45 ಚಂದ್ರಸಾಗರವರ್ಣಿಯ ಕೃತಿಗಳು, ಸಂ. ಹಂಪನಾ ಮತ್ತು ಎಸ್. ಶಿವಣ್ಣ ಕ.ಸಾ.ಪ. ಮೈಸೂರು. 1981—ಮುನ್ನುಡಿ.

46 ಚಂದ್ರಸಾಗರವರ್ಣಿಕೃತ 'ಶ್ರೀರಾಮಾಯಣ', ಬಿದಿರೆ ಪಾಯಸಾಗರ ಸ್ವಾಮಿ, 1933.

47 ಜಿ. ಆರ್. ಶೇಷಗಿರಿಯವರ ಬಳಿಯಿರುವ ಹಸ್ತಪ್ರತಿಯ ಕೃಪೆಯಿಂದ.

48 ರಾಮಕಥಾವತಾರ (16–97).

49 ಇದೇ ಸಂದರ್ಭದಲ್ಲಿ ವಿಪ್ರಕುಲೋತ್ಪತ್ತಿಯ ಕಥೆಯನ್ನು ಹೇಳುವಾಗ ಕಾಲದೋಷದಿಂದಾಗಿ ಮೂಡಿ ಬಂದ ಮತಗಳಿಂದು ಮುಸಲ್ಮಾನ, ಕ್ರೈಸ್ತ ಮೊದಲಾದ ಮತಗಳನ್ನು ಹೆಸರಿಸಿದ್ದಾನೆ. ಕ್ರಿಸ್ತನ ಜನ್ಮವೃತ್ತಾಂತದ ವಿಚಾರ ಬರುತ್ತದೆ. ಕ್ರಿಸ್ತನ ಕಥೆಯನ್ನು ಮೊದಲಬಾರಿಗೆ ಕನ್ನಡದಲ್ಲಿ ಕೊಡುವ ಕೃತಿ ಇದೆಂದು ತೋರುತ್ತದೆ.

50 ನಾಗರಾಜಕವಿ ವಿರಚಿತ 'ಪುಣ್ಯಸ್ರವ' ಸಂ. ದೇಜಗೌ ಚತುರ್ಥಾಶ್ವಾಸ 'ಸುಗ್ರೀವನ ಕಥೆ'

51 ಮಿರ್ಜಿ ಅಣ್ಣಾರಾಯ, ಅದೇ ಪು. 25.

52 ಸಾಧನೆ—1993 ಡಾ. ಕಮಲಾಹಂಪನಾ, 'ಕುಮಾರವ್ಯಾಸ ಭಾರತ' ಪೂರ್ವಕಾಲೀನ ಮತ್ತು ಉತ್ತರಕಾಲೀನ ಜೈನ ಭಾರತಗಳು.

ಅವಳಿ ದೈವಗಳು : ಒಂದು ವಿವೇಚನೆ

ವಸಂತಕುಮಾರ್ ಪೆರ್ಲ

ತುಳುನಾಡಿಗೆ ವಿಶಿಷ್ಟವಾಗಿರುವ ಭೂತಾರಾಧನೆಯಲ್ಲಿ ಅವಳಿ ದೈವಗಳು ವಿಶೇಷ ಕಾರಣಿಕವುಳ್ಳದ್ದಾಗಿ ಮತ್ತು ಪ್ರಭಾವಶಾಲಿಯಾಗಿ ಕಾಣುತ್ತವೆ. ಅವಳಿ ದೈವಗಳ ಮಹಿಮಾತಿಶಯತೆ ಮತ್ತು ಆರಾಧನಾ ಹಿನ್ನೆಲೆಯನ್ನು ಸ್ಥೂಲವಾಗಿ ವಿವೇಚಿಸಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

ಭೂತ ಎಂಬುದು 'ಅದ್ಭುತ' ಅಥವಾ 'ಭೂಮ' ಎಂಬ ಅರ್ಥವನ್ನು ಕೊಡುತ್ತದೆ ಹೊರತು ಕಾಲಕ್ಕೆ ಸಂಬಂಧಪಟ್ಟ ಅರ್ಥವನ್ನಲ್ಲ. ತಮ್ಮ ಬುದ್ಧಿಗೆ ಮತ್ತು ಮನಸ್ಸಿಗೆ ನಿಲುಕದ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವುದಕ್ಕಾಗಿ, ವರ್ಣಯುಕ್ತ ವಿಶಿಷ್ಟ ಆಲಂಕಾರಿಕ ವೇಷದ ದೈವವನ್ನು, ಭಕ್ತಿಗಿಂತಲೂ ಭಯವೇ ಮೂಲವಾಗಿ ಆರಾಧಿಸತೊಡಗಿದ್ದು ಭೂತಾರಾಧನೆಯ ಮೂಲ ಎಂದು ಹೇಳಬಹುದು.

ಲೋಹಯುಗಕ್ಕಿಂತ ಹಿಂದೆ, ಅಂದರೆ ಸುಮಾರು ಮೂರು ಸಾವಿರ ವರ್ಷಗಳ ಹಿಂದೆ ಕರಾವಳಿಯಲ್ಲಿ ಜನವಸತಿ ತೀರ ವಿರಳವಾಗಿತ್ತು ಎಂದು ಊಹಿಸಲಾಗಿದೆ. ಅತ್ಯಂತ ಹೆಚ್ಚು ಮಳೆಬೀಳುವ ಭೂಭಾಗವಾದ್ದರಿಂದ ದಟ್ಟಕಾಡು ಹಬ್ಬಿಕೊಂಡಿತ್ತು. ಕರಾವಳಿ ಪ್ರಾಂತ ಬೆಟ್ಟಗುಡ್ಡಗಳ ಅಸಮತಲಭೂಮಿ, ಒಂದೆಡೆಯಿಂದ ಆರ್ಭಟಿಸಿ ಅಟ್ಟಹಾಸಗೈಯುವ ಸಮುದ್ರ, ಮತ್ತೊಂದೆಡೆಯಿಂದ ಆಚ್ಛಾದಿಸಿದಂತಿರುವ ಪಶ್ಚಿಮಘಟ್ಟ. ದಟ್ಟಕಾನನ, ದುರ್ಗಮನೆಲ. ಮೋಡ ಕವಿದು ಗುಡುಗುಮಿಂಚುಗಳು ಆರ್ಭಟಿಸಿ ಮುಸಲಧಾರೆ ತೊಡಗಿತೆಂದರೆ ಪ್ರಕೃತಿಯೇ ಮುನಿದಂತಿರುವ ವಾತಾವರಣ. ಮೈದುಂಬಿ ಹರಿಯುವ ಹೊಳೆಗಳು, ಕ್ರೂರ ಕಾಡುಮೃಗಗಳು. ಒಟ್ಟಿನಲ್ಲಿ ಕರಾವಳಿಯ ಕಾರ್ಗಾಲದ ಇರುಳು ಅತ್ಯಂತ ಭಯಾನಕ ಮತ್ತು ಅಭೇದ್ಯ.

ಇಂತಹ ಪರಿಸರದಲ್ಲಿ ಇಲ್ಲಿಯೇ ಇದ್ದಿರಬಹುದಾದ ಮತ್ತು ಘಟ್ಟದ ಮೇಲಿಂದ ಇಳಿದು ಬಂದ ಮಂದಿಗೆ ಬದುಕಿನ ಅನಿವಾರ್ಯಕ್ಕೆ ಮತ್ತು ಕೃಷಿಗೆ ಕಾಡನ್ನು ಕತ್ತರಿಸಲು 'ಪರಶು' ತೀರ ಅಗತ್ಯವಾಗಿತ್ತು. ಕೈಯಲ್ಲಿ ಆಯುಧ ಇಲ್ಲದೆ ಜೀವನ ದುಸ್ಸಹವಾದ ಇಲ್ಲಿನ ವಾತಾವರಣದಿಂದಾಗಿ ಇದು 'ಪರಶುರಾಮ ಕ್ಷೇತ್ರ' ವೆಂದು ಕರೆಸಿಕೊಂಡಿತು.[1] ಪರಶು ಅವನ ಜೀವನಕ್ಕೆ ಒಂದು ಅರ್ಥವನ್ನೂ, ಧೈರ್ಯವನ್ನೂ, ನೆಮ್ಮದಿಯನ್ನೂ ತಂದುಕೊಟ್ಟಿತ್ತು.[2]

ಈ ಭಯದ ನೆಲದಲ್ಲಿ, ಅನಿಶ್ಚಿತ ಬದುಕಿನ ಹೋರಾಟದಲ್ಲಿ 'ತೆಂಬರೆ'ಯ[3] ಲಯಕ್ಕೆ ಅನುಗುಣವಾಗಿ ಅಭೇದ್ಯ ಪ್ರಕೃತಿ ಅದ್ಭುತ ರಮ್ಯ ಭೂತದ ಪರಿಕಲ್ಪನೆಯಲ್ಲಿ ಗೆಜ್ಜೆಕಟ್ಟಿ ಕುಣಿಯತೊಡಗಿದ್ದು ಆಶ್ಚರ್ಯವಲ್ಲ, ಅಮಾನುಷವಾದ ಪ್ರಕೃತಿಯನ್ನು ಒಲಿಸಿಕೊಳ್ಳುವುದಕ್ಕಾಗಿ ಭೂತ ರೂಪದಲ್ಲಿ ಆರಾಧಿಸಲಾಗುತ್ತದೆ.

ಭೂತಾರಾಧನೆ ಯಾವಾಗ ಆರಂಭಗೊಂಡಿತು ಎಂಬುದು ಇನ್ನು ಸಾಧಾರವಾಗಿ ನಿರೂಪಿತವಾಗಿಲ್ಲ. ಸುಮಾರು ಕ್ರಿ. ಶ. 1450 ರಲ್ಲಿ ಬರೆದ ನಂದಳಿಕೆಯ ಶಾಸನ ವೊಂದರಲ್ಲಿ ಭೂತದ ಉಲ್ಲೇಖ ಸಿಗುತ್ತದೆ. ಕ್ರಿ. ಶ. 1559 ರ ಶಾಸನದಲ್ಲಿ ವಿಟ್ಲದ ಅರಸರಾದ ಡೊಂಬ ಹೆಗ್ಗಡೆಯವರು ಮಲೆರಾಯ ಭೂತಕ್ಕೆ ಉಂಬಳಿಬಿಟ್ಟ ಉಲ್ಲೇಖವಿದೆ. ಕೋಟಿ-ಚೆನ್ನಯ, ಕಲ್ಕುಡ-ಕಲ್ಲುರ್ಟಿ-ಮುಂತಾದ ವೀರಪುರುಷರು ಪೆರ್ಮಲೆ ಬಲ್ಲಾಳ, ಕಾರ್ಕಳದ ಭೈರರಸ ಮುಂತಾದ ಚಾರಿತ್ರಿಕ ರಾಜರ ಕಾಲದಲ್ಲಿ ಬಾಳಿ ಬದುಕಿದುದರಿಂದ ಆ ಭೂತಗಳು ಸುಮಾರು ನಾನ್ನೂರರಿಂದ ಮುನ್ನೂರ ಐವತ್ತು ವರ್ಷಗಳ ಅಂತರದಿಂದ ಆರಾಧನೆಗೊಳ್ಳುತ್ತಿವೆ ಎನ್ನಬಹುದು. ಬೊಬ್ಬರ್ಯ ಭೂತವು ಮುರ್ಡೇಶ್ವರದಿಂದ ಬಂದ ಮುಸಲ್ಮಾನ ವ್ಯಾಪಾರಿಯೊಬ್ಬನು ಕಡಲ ಯುದ್ಧದಲ್ಲಿ ಮಡಿದು ವೀರಸ್ವರ್ಗವನ್ನು ಸೇರಿದುದರಿಂದ ಹುಟ್ಟಿಕೊಂಡ ಭೂತ ವಾದುದರಿಂದ ಅದರ ಇತಿಹಾಸವು ಮುನ್ನೂರು ವರ್ಷಕ್ಕಿಂತ ಹಿಂದೆ ಹೋಗಲಾರದು. ಪಾಡ್ದನದಲ್ಲಿ 'ಪೆರಂಗಿ' ಎನ್ನುವ ಉಲ್ಲೇಖ ಬರುವುದರಿಂದಾಗಿ, ಪಶ್ಚಿಮ ಕರಾವಳಿಗೆ ಪೋರ್ಚುಗೀಸರು ಬಂದು ನೆಲೆಯೂರಿ ಪ್ರಾಬಲ್ಯ ಗಳಿಸಿದ ಬಳಿಕವಷ್ಟೆ ಇಂತಹ ವಿದ್ಯಮಾನಗಳು ಘಟಿಸಿರಲು ಸಾಧ್ಯ. ವೀರಪುರುಷರ ಮತ್ತು ಅರ್ವಾಚೀನವಾಗಿ ಆರಾಧನೆಗೆ ಬಂದ ಭೂತಗಳ ಇತಿಹಾಸವನ್ನು ಹೆಚ್ಚೆಂದರೆ ಸುಮಾರು ಐನೂರು ವರ್ಷಗಳಷ್ಟು ಹಿಂದಕ್ಕೆ ಕೊಂಡೊಯ್ಯಬಹುದಾದರೂ ಭೂತದ ಪರಿಕಲ್ಪನೆ ಹಿಂದೆಯೇ ಇತ್ತು, ಅಥವಾ ಆದಿಮ ಭೂತವೊಂದನ್ನು ಮೂಲ ಜನರು ಬಹುಹಿಂದಿನಿಂದಲೂ ಆರಾಧಿಸುತ್ತಿದ್ದಿರಬೇಕೆಂದು ಊಹಿಸಬಹುದು. ಆದಿಮ ಜನರು ಎಲೆಸೊಪ್ಪುಗಳಿಂದ ಮೈಮುಚ್ಚಿಕೊಳ್ಳುವಂತೆ ಭೂತವು ತೆಂಗಿನ ಮರದ ಎಳೆಯ ಗರಿಯನ್ನು (ತಿರಿ) ಹರಿದು ಮೈಯ ದಿರಿಸು ಮಾಡಿಕೊಳ್ಳುತ್ತದೆ ಎಂಬುದು ಈ ವಾದಕ್ಕೆ ಪುಷ್ಟಿಕೊಡುತ್ತದೆ.

ಭೂತಾರಾಧನೆಯು ದೀಪಾವಳಿ ಹಬ್ಬದಿಂದ ತೊಡಗಿ ಪತ್ತನಾಜೆ[4] ವರೆಗೆ (ಡಿಸೆಂಬರ್‌ನಿಂದ ಮೇ ವರೆಗೆ) ಜರುಗುವುದನ್ನು ಗಮನಿಸಿದರೆ ಪ್ರಕೃತಿ ಸೌಮ್ಯವಾಗಿ ರುವ ಕಾಲದಲ್ಲಿ ಆಕೆಯ ಆರಾಧನೆಯ ಕಟ್ಟುಕಟ್ಟಳೆ ಮತ್ತು ಗ್ರಾಮ ದೇವರಿಗಿಂತ ಕೆಳಗಿನ ಸ್ತರದಲ್ಲಿಯೇ ಭೂತಗಳನ್ನು ಪರಿಗಣಿಸುತ್ತಾರೆ ಅಥವಾ ಹೆಚ್ಚೆಂದರೆ ಭೂತ ಗಳನ್ನು ದೇವರ ಗಣಗಳನ್ನಾಗಿ ಪರಿಗಣಿಸುತ್ತಾರೆ. ಬ್ರಾಹ್ಮಣರಿಗೆ ಯಾವುದೇ ಭೂತ ಮನೆದೇವರಾಗಿಲ್ಲ ಮತ್ತು ಮನೆಯೊಳಗೆ ಭೂತಕೊಟ್ಟಿಗೆ ಇರುವುದಿಲ್ಲ ?

ಕ್ರೂರ ಮತ್ತು ನಿಯಂತ್ರಣಕ್ಕೆ ಬಾರದ ಕಾಡು ಮೃಗಗಳನ್ನು ಹಾಗೂ ಅಸಹಜ ವ್ಯಕ್ತಿತ್ವದ ಅಸಾಮಾನ್ಯ ವ್ಯಕ್ತಿಗಳನ್ನು ಭೂತಗಳಾಗಿ ಕಲ್ಪಿಸಿ ಅಥವಾ ದೈವತ್ವಕ್ಕೆ ಏರಿಸಿ ಆರಾಧಿಸಿದಂತೆ ಕಂಡುಬರುತ್ತದೆ. ಮನುಷ್ಯರಿಗೆ, ಸಾಕು ಪ್ರಾಣಿಗಳಿಗೆ ಮತ್ತು ಬೆಳೆಗಳಿಗೆ ಸ್ವಪ್ನಕಾರಕಗಳಾಗಿದ್ದ ಮತ್ತು ಹಾನಿ ಮಾಡುತ್ತಿದ್ದ ಕ್ರೂರ ಮೃಗಗಗನ್ನು–ಹಾನಿಕಾರಕ ಶಕ್ತಿಗಳಾದುದರಿಂದ–ಒಲಿಸಿಕೊಳ್ಳುವುದಕ್ಕಾಗಿ, ಅವಕ್ಕೆ ದೈವತ್ವವನ್ನು ಆರೋಪಿಸಿ ಜನಪದರು ಪೂಜಿಸತೊಡಗಿದರು. ಹಾಗೆಯೇ, ತಮ್ಮನ್ನು ಸಂಕಷ್ಟಗಳಿಂದ ಪಾರು ಮಾಡಿದ ಅಥವಾ ದೈವೀಕ ಪರಿವೇಷದಿಂದ ಕೂಡಿದ ಅಸಾಮಾನ್ಯ ವ್ಯಕ್ತಿಗಳನ್ನೂ ಆರಾಧನೆಯ ಕಕ್ಷೆಗೆ ತರಲಾಯಿತು. ತುಳುನಾಡಿನ ಭೂತಗಳನ್ನು ದಿವಂಗತ ಡಾ॥ ಪಿ. ಗುರುರಾಜ ಭಟ್ ಅವರು ನಾಲ್ಕು ವಿಭಾಗಗಳಾಗಿ ವಿಂಗಡಿಸಿದ್ದಾರೆ.

(೧) ಮತ್ಸ್ಯ ಮತ್ತು ಮೃಗಮೂಲ : ಭೂತನಾಗ, ಪಿಲಿಭೂತ (ಹುಲಿಭೂತ), ಪಂಜುರ್ಲಿ (ಹಂದಿ), ನಂದಿಗೋಣ, ಮಹಿಷಂದಾಯ (ಎಮ್ಮೆ) ಇತ್ಯಾದಿ.

(೨) ಅಸಹಜ ಮತ್ತು ಅತಿಮಾನುಷ ವ್ಯಕ್ತಿತ್ವದ ಮನುಷ್ಯ ಮೂಲದ ಭೂತಗಳು : ಅಣ್ಣಪ್ಪ, ಅಬ್ಬಗ–ದಾರಗ, ಬೊಬ್ಬರ್ಯ, ಕೋಟಿ–ಚೆನ್ನಯ, ಬೈರಾಗಿ, ದೇವುಪೂಂಜ, ಕೊರಗ, ಕಲ್ಲುಕುಟ್ಟಿಗ, ಜೋಗಿ ಪುರುಷ ಇತ್ಯಾದಿ.

(೩) ಪುರಾಣಮೂಲದ ಭೂತಗಳು ಅಥವಾ ವೈದಿಕೀಕರಣಗೊಂಡ ಭೂತಗಳು : ಭೈರವಿ, ಬೆರ್ಮೆ (ಬ್ರಹ್ಮ), ಜುಮಾದಿ (ಧೂಮಾವತಿ), ಲೆಕ್ಕೆಸಿರಿ (ರಕ್ತೇಶ್ವರಿ), ಕ್ಷೇತ್ರಪಾಲ, ಕಾಳರಾತ್ರಿ, ಖಡ್ಗೇಶ್ವರಿ, ವಿಷ್ಣುಮೂರ್ತಿ ಇತ್ಯಾದಿ.

(೪) ಸ್ಥಳ ಮೂಲವಾದ ಅಥವಾ ಕ್ಷೇತ್ರಸಂಬಂಧಿಯಾದ ಭೂತಗಳು : ಮಲೆರಾಯ (ಮಲೆಯ ಅಥವಾ ಘಟ್ಟಪ್ರದೇಶದ ಭೂತ), ಮಲೆಚಂಡಿ, ಪೊಸ್ರಾಲ್‌ತ್ತಾಯಿ (ಪೊಸರಾಲ್ ಎಂಬ ಪ್ರದೇಶದ ಭೂತ), ಉಳ್ಳಾಲ್ದಿ, ಕನಪಡಿತ್ತಾಯಿ (ಕನಪಾಡಿ ಎಂಬ ಪ್ರದೇಶದ ಭೂತ), ಕೊಡಮಣಿತ್ತಾಯಿ (ಕೊಡಮಣ್ಣು ಎಂಬ ಸ್ಥಳದ ಭೂತ), ಮುಂಡಿ-ಪಡಿತ್ತಾಯಿ (ಮುಂಡಿಪ್ಪಾಡಿ ಎಂಬ ಸ್ಥಳದ ಭೂತ)–ಇತ್ಯಾದಿ. ಇವುಗಳಲ್ಲದೆ ಭೂತಗಳ ಗುಣ ಸ್ವಭಾವವನ್ನು ಅನುಸರಿಸಿ ಮಾಡಿದ ಇನ್ನೊಂದು ಪಂಗಡ ಹೀಗಿದೆ :

(೫) ನೀಚೆ (ನೀಚ–ದುಷ್ಟ), ಮರ್ಲುಜುಮಾದಿ (ಹುಚ್ಚು ಜುಮಾದಿ), ಪೊಟ್ಟೆ (ಕಿವುಡ ಮತ್ತು ಮೂಗ) ಸರಳ ಜುಮಾದಿ–ಹೀಗೆ.

ಕಾಲಾಂತರದಲ್ಲಿ ಭೂತಗಳ ಸಂಖ್ಯೆ ಏರುತ್ತ ಬಂದುದನ್ನು ನೋಡುತ್ತೇವೆ. ಪೊಸಭೂತ, ತಿಮ್ಮಪ್ಪ, ಒಕ್ಕುಬಲ್ಲಾಳ, ಪುರ್ಲಾಯ, ರಾಯ, ಮುತ್ತಪ್ಪೆ, ಬೈರಾಗಿ ಭೂತ, ಅಂಗಾರ ಭೂತ, ಆಲಿಭೂತ–ಮುಂತಾದವು ತೀರ ಇತ್ತೀಚೆಗೆ ಭೂತಗಳಾಗಿ

ಸೇರ್ಪಡೆಗೊಂಡವುಗಳು. "ಹೀಗೆ ತುಳುನಾಡಿನ ಭೂತಾರಾಧನೆಯಲ್ಲಿ ಪ್ರಾಣಿಪೂಜೆ, ವೀರಪೂಜೆ, ಮಾತೃದೇವತಾರಾಧನೆ, ನಾಗಪೂಜೆ, ಶಿವಗಣಗಳ ಪೂಜೆ, ಶಿವ–ವಿಷ್ಣುಗಳ ವಿಶೇಷ ಅವತಾರಗಳ ಆರಾಧನೆ ಮುಂತಾದ ಅಂಶಗಳು ಕಂಡುಬರುತ್ತವೆ."[6]

ವರ್ಷಕ್ಕೊಮ್ಮೆ ದೈವಗಳಿಗೆ ನಡೆಸಲಾಗುವ ಆರಾಧನೆಯನ್ನು ಕೋಲ, ಒತ್ತೆ ಕೋಲ, ನೇಮ, ಬಂಡಿ, ಜಾತ್ರೆ, ಮೆಚ್ಚಿ, ಆಯನ, ಕೆಂಡಸೇವೆ ಮುಂತಾದ ಹೆಸರು ಗಳಿಂದ ಕರೆಯುತ್ತಾರೆ. "ತುಳುನಾಡಿನ ಭೂತಗಳ ಸಂಖ್ಯೆ ಐನೂರನ್ನು ದಾಟುತ್ತದೆ. ಅವುಗಳಲ್ಲಿ ಸುಮಾರು ಮೂವತ್ತು ನಲವತ್ತು ಭೂತಗಳು ಹೆಚ್ಚು ಪ್ರಸಿದ್ಧವಾಗಿದ್ದು ಎಲ್ಲ ಕಡೆಗಳಲ್ಲಿಯೂ ಆರಾಧಿಸಲ್ಪಡುತ್ತವೆ".[7]

ಬ್ರಾಹ್ಮಣ ಮತ್ತು ಇತರ ಮೇಲುಜಾತಿ ಜನರ ಆಗಮನ ಕರಾವಳಿಗೆ ಮತ್ತು ಘಟ್ಟದ ತಪ್ಪಲಿಗೆ ತಡವಾಗಿ ಆಗಿರಬೇಕು. ಹಾಗಾಗಿ, ಮೂಲ ಆರಾಧನಾ ವಿಧಾನ ವಾದ ಭೂತಾರಾಧನೆಯನ್ನು ಮೂಲವಾಸಿಗಳಾದ ಅಥವಾ ಆರಂಭಿಕ ಜನರಾಗಿ ಬಂದ ಪಂಬದ, ಪಾಣಾರ, ನಲಿಕೆ, ಪರವ ಮತ್ತು ಬೈದ್ಯರು ನಡೆಸಿಕೊಂಡು ಬರುತ್ತಿರುವು ದನ್ನು ಇವತ್ತಿಗೂ ಕಾಣಬಹುದು.

ಭೂತಾರಾಧನೆಯಲ್ಲಿ ಪ್ರಾಣಿಬಲಿ ಮತ್ತು ತೀರ ಅಪೂರ್ವವಾಗಿ ನರಬಲಿಯೂ ಬಳಕೆಯಲ್ಲಿತ್ತು[8]. ಬ್ರಾಹ್ಮಣರ ಆಗಮನಾನಂತರ ಪ್ರಾಣಿಬಲಿ ಕೊನೆಗೊಂಡು ಸೌಮ್ಯ ಆರಾಧನಾಕ್ರಮ ಬಳಕೆಗೆ ಬಂತು ಹಾಗೂ ಭೂತಕ್ಕೊಂದು 'ಮಾಡ'ದ ಅಥವಾ ಆಲಯದ ಕಲ್ಪನೆ ಬಂದಿತು. ಬ್ರಾಹ್ಮಣರು ದೇವಸ್ಥಾನಗಳನ್ನು ಕಟ್ಟಿಸಿ ವ್ಯವಸ್ಥಿತವಾಗಿ ಪೂಜೆ-ಪುನಸ್ಕಾರಗಳನ್ನು ನಡೆಸುತ್ತ ಭೂತಗಳನ್ನು ದೇವರ ಅಧೀನಕ್ಕೆ ಮತ್ತು ಒಂದು ವ್ಯವಸ್ಥೆಗೆ ತಂದರು. ಆದರಿಂದಾಗಿ ಗ್ರಾಮದೈವ ಮತ್ತು ಸೀಮೆದೈವ ಎಂಬ ವ್ಯವಸ್ಥೆ ಅಸ್ತಿತ್ವಕ್ಕೆ ಬಂತು. ಬ್ರಾಹ್ಮಣರು ತುಳುನಾಡವರ ಒತ್ತಡ ಮತ್ತು ಒಟ್ಟು ಪ್ರಭಾವ ದಿಂದಾಗಿ ಭೂತಗಳನ್ನು ನಂಬುತ್ತ ವರ್ಷಾವಧಿ ನೇಮ–ನಡಾವಳಿಗಳನ್ನು ನಡೆಸುತ್ತಾ ರಾದರೂ, ಮನೆ ದೇವರು ಮತ್ತು ಗ್ರಾಮ ದೇವರಿಗಿಂತ ಕೆಳಗಿನ ಸ್ತರದಲ್ಲಿಯೇ ಭೂತ ಗಳನ್ನು ಪರಿಗಣಿಸುತ್ತಾರೆ ಅಥವಾ ಹೆಚ್ಚೆಂದರೆ ಭೂತಗಳನ್ನು ದೇವರ ಗಣಗಳನ್ನಾಗಿ ಪರಿಗಣಿಸುತ್ತಾರೆ. ಬ್ರಾಹ್ಮಣರಿಗೆ ಯಾವುದೇ ಭೂತ ಮನೆದೇವರಾಗಿಲ್ಲ ಮತ್ತು ಮನೆಯೊಳಗೆ ಭೂತಕೊಟ್ಟಿಗೆ ಇರುವುದಿಲ್ಲ[9].

ಜನಪದ ವೀರರು (Heros) ಭೂತಗಳಾಗಿ ಪೂಜೆಗೊಳ್ಳುವುದನ್ನು ತುಳು ನಾಡಿನಲ್ಲಿ ಕಾಣಬಹುದು. ಅದರಲ್ಲೂ ಅವಳಿ ವೀರರು ವಿಶೇಷ ಆಕರ್ಷಣೆಗೆ ಕಾರಣರು ಹಾಗೂ ಕಾರಣಿಕವುಳ್ಳ ದೈವಗಳೆಂದು ಪ್ರಸಿದ್ಧಿ ಪಡೆದಿವೆ. ಇಂತಹ ನಾಯಕರ ಆರಾಧನೆ (Hero Worship) ಭೂತಾರಾಧನೆಯ ಇನ್ನೊಂದು ಕವಲು. ಗರಡಿಗಳಲ್ಲಿ

ಕೋಟಿ-ಚೆನ್ನಯರು ವೀರ ದೇವತೆಗಳಾಗಿ ಪೂಜೆಗೊಳ್ಳುತ್ತಾರೆ. ಕೇರಳದ ವೀರರು, ತುಳುನಾಡಿಗೆ ಆಗಮಿಸಿ ತುಳುನಾಡಿನ ಗರಡಿಗಳಲ್ಲಿ ಸಮರಪಟ್ಟುಗಳನ್ನು (ಕಳರಿ ಪಯಟ್ಟು)[10] ಕಲಿಯುತ್ತಿದ್ದರು. ಆರಾಧನೆಗೊಳ್ಳುವ ಈ ಜನಪದ ವೀರರು ಅಸಾಮಾನ್ಯ ಮತ್ತು ಅತಿಮಾನುಷ ವ್ಯಕ್ತಿಗಳಾಗಿರುತ್ತಾರೆ. ಮನುಷ್ಯ ಮಾತ್ರರಿಂದ ಸಾಧಿಸಲು ಕಷ್ಟಸಾಧ್ಯವಾದ ಅಪೂರ್ವ ಸಾಹಸಗಳನ್ನು ಮಾಡಿ ಅವರು ಜನ ಮಾನಸಕ್ಕೆ ಪ್ರಭಾವ ಬೀರಿರುತ್ತಾರೆ. "ತುಳು ಪಾಡ್ದನದ ವೀರನು ವೀರನಾಗಲು ಕಾರಣ ಆತನು ದೈವದ ಅವತಾರವಾಗಿರುವುದು ಅಥವಾ ಪೂರ್ವಜನ್ಮದ ಪುಣ್ಯ ವಿಶೇಷಗಳಲ್ಲ. ಬದಲಾಗಿ ಆತನು ಈ ಜನ್ಮದಲ್ಲಿ ನಡೆಸಿದ ಮಹತ್ಕಾರ್ಯಗಳೇ ಆತನನ್ನು ವೀರನನ್ನಾಗಿ ಸಿವೆ. ಆತನ ಸಾಮಾಜಿಕ ಸ್ಥಾನಮಾನಗಳು (ಉದಾ : ಅರಸುಕುಮಾರ ಇತ್ಯಾದಿ) ಆತನ ಕಲಿತನವನ್ನು ನಿರ್ಧರಿಸುವುದಿಲ್ಲ. ಪ್ರತಿಯಾಗಿ ಜೀವನವನ್ನು ಆತನು ಎದುರಿಸುವ ಸಂದರ್ಭಗಳಲ್ಲಿ ತೋರುವ ಕ್ರಿಯಾತ್ಮಕತೆ ಆತನನ್ನು ವೀರನನ್ನಾಗಿ ಸುತ್ತದೆ".[11]

ಅವಳಿ ಭೂತಗಳಲ್ಲಿ ಮುಖ್ಯವಾದುವೆಂದರೆ ಕೋಟಿ ಚೆನ್ನಯ[12], ಅಬ್ಬಗದಾರಗ ಅರಸು ಮಂಜಿಷ್ಣಾರ್ ಮತ್ತು ಅರಸು ಪುಳಿಚೋಟ್ಟಾರ್, ಕಲ್ಕುಡ ಕಲ್ಲುರ್ಟಿ, ಕಿನ್ನಿ ಮಾಣಿ ಪೂಮಾಣಿ ಮೊದಲಾದವು. ಮುಖ್ಯವಲ್ಲದಿದ್ದರೂ ಗಮನಾರ್ಹವಾದವು ಕಾಂತಾಬಾರೆ-ಬುದಾಬಾರೆ, ಮಾಯಗೆ-ಮೈಪಗೆ, ಸೊನ್ನೆ-ಗಿಂಡೆ, ಕಾಣದ-ಕಾಟದ, ಮುದ್ದ-ಕಳಲ ಇತ್ಯಾದಿ ದೈವಗಳು.

ಕೋಟಿ-ಚೆನ್ನಯರಲ್ಲಿ ಕೋಟಿ ಅಣ್ಣ ಮತ್ತು ಚೆನ್ನಯ ತಮ್ಮ. ಅಣ್ಣ ಶಾಂತ ಮತ್ತು ಸೌಮ್ಯ ಸ್ವಭಾವದವನಾದರೆ ತಮ್ಮ ಆತುರ ಬುದ್ಧಿಯವನು ಮತ್ತು ಮುಂಗೋಪಿ. ಅವಳಿಗಳ ಸ್ವಭಾವದಲ್ಲಿ ಈ ರೀತಿಯ ವೈರುಧ್ಯವಿರುವುದು ಸರ್ವತ್ರ ಸಾಮಾನ್ಯ ನೋಟ. ಇದು ಬದುಕಿನ ವೈಪರೀತ್ಯಗಳ ಒಂದು ಸಂಕೇತದಂತೆ ಕಂಡು ಬರುತ್ತದೆ.

'ಕೋಟಿ ಚೆನ್ನಯ' ಪಾಡ್ದನದ ಪ್ರಕಾರ, ಕೇಂಜವ ಹಕ್ಕಿಗಳಿಂದ ಕೋಟಿ ಚೆನ್ನಯರ ತಾಯಿ ದೇಯಿ ಬೈದ್ಯೆದಿ ಹುಟ್ಟುತ್ತಾಳೆ. ಪ್ರಾಪ್ತ ವಯಸ್ಸಿಗೆ ಆಕೆಗೆ ಮದುವೆಯಾಗದೆ ತಂದೆ ತಾಯಿಗಳಿಂದ ಉಪೇಕ್ಷೆಗೊಂಡು ಕಾಡಿಗೆ ಅಟ್ಟಲ್ಪಡುತ್ತಾಳೆ. ಬಿಲ್ಲವನೊಬ್ಬನ ಆಸರೆ ಪಡೆದು, ಮತ್ತೊಬ್ಬ ಬಿಲ್ಲವನನ್ನು ಮದುವೆ ಮಾಡಿಕೊಂಡು ಸಂಸಾರ ನಡೆಸುತ್ತಾಳೆ. ನಾಟಿವೈದ್ಯ ಗೊತ್ತಿದ್ದುದರಿಂದ ಬಹುಕಾಲದಿಂದ ಅನಾ ರೋಗ್ಯಪೀಡಿತನಾಗಿದ್ದ ಪಡುಮಲೆ ಬಲ್ಲಾಳ ರಾಜನಿಗೆ ಔಷಧಿ ನೀಡಿ ಗುಣಪಡಿಸು ತ್ತಾಳೆ. ಗರ್ಭಿಣಿಯಾಗಿದ್ದ ಬೈದ್ಯೆದಿ ಅರಮನೆಯಲ್ಲಿ ಕೋಟಿ-ಚೆನ್ನಯ ಅವಳಿಗಳಿಗೆ ಜನ್ಮವೀಯುತ್ತಾಳೆ. ಅರಮನೆಯ ಆಶ್ರಯ ಸಿಕ್ಕಿ ಅವರ ಶೌರ್ಯ ಪ್ರತಾಪಗಳು

ಮೆರೆಯುತ್ತವೆ. ತಮ್ಮನ್ನು ಹೀಯಾಳಿಸಿದ ಕುತಂತ್ರಿ ಮಂತ್ರಿ ಬುದ್ಯಂತನನ್ನು ಕೊಲೆ ಮಾಡುತ್ತಾರೆ. ಬಲ್ಲಾಳರಿಂದ ತಿರಸ್ಕೃತರಾಗಿ ಊರುಬಿಟ್ಟು ಹೋಗಿ ಎಣ್ಮೂರು ಸೀಮೆಯಲ್ಲಿ ಆಶ್ರಯ ಪಡೆಯುತ್ತಾರೆ. ಎಣ್ಮೂರು ಸೀಮೆಯ ಅರಸರಿಗೂ ಪಂಜದ ಬಲ್ಲಾಳರಿಗೂ ವೈರ ಇದ್ದಿರುತ್ತದೆ. ಕೋಟಿ ಚೆನ್ನಯರಿಗೆ ಎಣ್ಮೂರು ಸೀಮೆಯ ಅರಸ ಆಶ್ರಯ ನೀಡಿದ್ದು ನೆಪವಾಗಿ ಎಣ್ಮೂರು ಅರಸರಿಗೂ ಪಂಜದ ಬಲ್ಲಾಳರಿಗೂ ಯುದ್ಧ ಸಂಭವಿಸುತ್ತದೆ. ಕೋಟಿ-ಚೆನ್ನಯರು ಎಣ್ಮೂರು ಸೀಮೆಯ ಪರವಾಗಿ ಮುಂದಾಳ್ತನ ವಹಿಸಿ ಯುದ್ಧ ಮಾಡುತ್ತಾರೆ. ಅಣ್ಣನಾದ ಕೋಟಿ ಯುದ್ಧದಲ್ಲಿ ಗಾಯಗೊಂಡು ಸಾಯುತ್ತಾನೆ. ಅಣ್ಣನ ಸಾವನ್ನು ನೋಡಿ ದುಃಖ ಸಹಿಸಲಾಗದೆ ತಮ್ಮ ಚೆನ್ನಯ ಬಂಡೆಗೆ ತಲೆ ಬಡಿದುಕೊಂಡು ಆತ್ಮಹತ್ಯೆ ಮಾಡುತ್ತಾನೆ. ಹೀಗೆ ಸಹೋದರರು ವೀರ ಮತ್ತು ದುರಂತ ಮರಣವನ್ನು ಅಪ್ಪುತ್ತಾರೆ. ಅಣ್ಣ ತಮ್ಮಂದಿರ ಅನ್ಯೋನ್ಯತೆ ಸಾವಿನಲ್ಲೂ ಪ್ರಕಟವಾಗುತ್ತದೆ.

ಅಬ್ಬಗ-ದಾರಗರು 'ಸಿರಿ'ಯ[13] ಅವಳಿ ಮಕ್ಕಳು. ತುಳುನಾಡಿನ ಉತ್ತರ ಭಾಗದ ಲಂಕೆ ಲೋಕನಾಡಿನ ಬೆರ್ಮ ಆಳ್ವನಿಗೆ ಬಹಳ ವರ್ಷಗಳಾದರೂ ಮಕ್ಕಳಾಗುವುದಿಲ್ಲ.[14] ಕೊನೆಗೆ ಬ್ರಹ್ಮದೇವರ ವರಪ್ರಸಾದದಂತೆ ಅಡಿಕೆ ಮರದ ಸಿಂಗಾರದಲ್ಲಿ ಸಿರಿ ಎಂಬ ಹೆಣ್ಣುಮಗಳು ಹುಟ್ಟುತ್ತಾಳೆ. ಪ್ರಾಪ್ತ ವಯಸ್ಸಿನಲ್ಲಿ ಆಕೆಗೆ ಕಾಂತ ಆಳ್ವನೊಂದಿಗೆ ವಿವಾಹವಾಗುತ್ತದೆ. ಕಾಂತ ಆಳ್ವನಿಂದ ಆಕೆ ಕುಮಾರ[15] ಎಂಬ ಮಗನನ್ನು ಪಡೆದಳಾದರೂ ಗಂಡನ ಲೋಲುಪ್ತ ಜೀವನದಿಂದ ರೋಸಿದ ಆಕೆ ವಿಚ್ಛೇದನಗೊಂಡು ಕೊಡ್ಸರಾಳ್ವನನ್ನು ಮರುಮದುವೆಯಾಗುತ್ತಾಳೆ. ಅವನಿಂದ 'ಸೊನ್ನೆ' ಎಂಬ ಹೆಣ್ಣು ಮಗುವನ್ನು ಪಡೆದು ಅದೃಶ್ಯವಾಗುತ್ತಾಳೆ. ಸೊನ್ನೆಯನ್ನು ಉರ್ಕಿತೋಟದ ಗುರುವಾರ್ಲನಿಗೆ ಕೊಟ್ಟು ಮದುವೆ ಮಾಡಲಾಗುತ್ತದೆ, ಅವರಿಗೆ ಅಬ್ಬಗ–ದಾರಗ ಎಂಬ ಅವಳಿ ಹೆಣ್ಣು ಮಕ್ಕಳು ಹುಟ್ಟುತ್ತಾರೆ. ತಂದೆ ತಾಯಂದಿರು ಇರದಿದ್ದ ವೇಳೆಯಲ್ಲಿ ಎಳವಯದ ಇಬ್ಬರೂ ಚೆನ್ನ ಆಟ ಆಡುತ್ತಾರೆ, ಆಟದಲ್ಲಿ ಭಿನ್ನಾಭಿಪ್ರಾಯ ಬಂದು ಜಗಳವಾಗಿ ಒಬ್ಬಳು ಇನ್ನೊಬ್ಬಳನ್ನು ಚೆನ್ನೆಮಣೆಯಿಂದ ಬಡಿದು ಕೊಲ್ಲುತ್ತಾಳೆ, ತಂದೆ ತಾಯಿಯರಿಗೆ ಏನು ಉತ್ತರ ಹೇಳುವುದೆಂದು ತಿಳಿಯದೆ ಇನ್ನೊಬ್ಬಳು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಅವರಿಗೆ ದೈವೀಕತೆ ಸುತ್ತಿಕೊಂಡು ಭೂತಗಳಾಗಿ ಪೂಜೆಗೊಳ್ಳುತ್ತಿದ್ದಾರೆ. ಮಾತೃವಂಶೀಯ ಕುಟುಂಬ ಪದ್ಧತಿಯನ್ನು ಹೊಂದಿರುವ ಬಂಟ ಸಮಾಜದವರಿಗೆ ಸಿರಿ ಹಾಗೂ ಆಕೆಯ ಪೀಳಿಗೆಯು ಅತ್ಯಂತ ಮಹತ್ವದ ಭೂತಗಳಾಗಿವೆ.

ಮಂಜೇಶ್ವರದ ಸಮೀಪ ಉದ್ಯಾವರ ಎಂಬಲ್ಲಿ ಆರಾಧನೆ ಕೈಗೊಳ್ಳುತ್ತಿರುವ 'ಅರಸು ಮಂಜಿರ್' ಎಂದೇ ಖ್ಯಾತವಾಗಿರುವ ಅರಸು ಮಂಜಿರ್ ಮತ್ತು ಅರಸು ಪುಳಿಚೊಟ್ನಾರ್ ಎಂಬ ಅವಳಿ ದೈವಗಳು ವೇಣೂರು ಬಾಕಿಮಾರಿನಿಂದ ಪ್ರತ್ಯಪ್ರತ್ಯೇಕ

ವಾಗಿ ಹೊರಟು ಸಮುದ್ರ ಮಾರ್ಗವಾಗಿ ದಕ್ಷಿಣಕ್ಕೆ ತೆರಳಿ ಉದ್ಯಾವರದಲ್ಲಿ ನೆಲೆಯಾದ ಅಣ್ಣ ತಮ್ಮಂದಿರಿಬ್ಬರ ಕತೆ, ತೀರ ಅನ್ಯೋನ್ಯವಾಗಿದ್ದು ಕಾರಣಾಂತರದಿಂದ ಮನಸ್ತಾಪಗೊಂಡು ನಿದ್ರಿಸಿದ್ದ ತಮ್ಮನೊಬ್ಬನನ್ನೇ ಬಿಟ್ಟು ಅಣ್ಣ ಹೇಳದೆ ಕೇಳದೆ ಮಂಗಳೂರಿಗೆ ಬಂದು ದಕ್ಷಿಣಾಭಿಮುಖವಾಗಿ ಸಮುದ್ರ ಮಾರ್ಗದಲ್ಲಿ ತೆರಳುತ್ತಾನೆ. ಅಣ್ಣ ಹೊರಟು ಹೋದ ಬಳಿಕ ವಿಹ್ವಲಗೊಂಡ ತಮ್ಮ ದಿಕ್ಕುದೆಸೆ ತಿಳಿಯದೆ ಮಂಜಿಯಲ್ಲಿ ನದೀದಾರಿಯಾಗಿ ಪಾಣೆ, ಮಂಗಳೂರು ಮತ್ತು ಬಂಟ್ವಾಳವನ್ನು ಹಾದು ಮಂಗಳೂರಿಗೆ ಬಂದು ನೆಲೆಯಾಗುತ್ತಾನೆ. ಮಧ್ಯವರ್ತಿಯೊಬ್ಬನ ಮೂಲಕ ಅಣ್ಣ ತಮ್ಮಂದಿರು ಉದ್ಯಾವರದಲ್ಲಿ ಒಟ್ಟಾಗುತ್ತಾರೆ, ಒಟ್ಟಾದರೂ, ತನ್ನನ್ನು ಬಿಟ್ಟು ಹೋದದ್ದಕ್ಕಾಗಿ ರೋಷ ಕೆರಳಿ (ಅತಿರೋಷವು ಅತಿ ಪ್ರೀತಿಯು ಇನ್ನೊಂದು ಮುಖ) ತಮ್ಮ ಅಣ್ಣನೊಡನೆ ಹೋರಾಡುತ್ತಾನೆ. ಬಹುಶಃ ಅದು ಇಬ್ಬರ ದುರಂತದಲ್ಲಿ ಪರ್ಯವಸಾನ ಹೊಂದಿರಬೇಕು. ಸುಮಾರು ನೂರು ಮೀಟರ್‌ಗಳ ಅಂತರದಲ್ಲಿ ಅಣ್ಣ ಮತ್ತು ತಮ್ಮನ 'ಮಾಡ' (ಭೂತಸ್ಥಾನ)ಗಳನ್ನು ಎರಡು ಪ್ರತ್ಯೇಕ ಬಂಡಿ (ರಥ)ಗಳನ್ನೂ ಉದ್ಯಾವರದಲ್ಲಿ ನಾವು ಕಾಣಬಹುದು. ಬಂಡಿಯು (ಜಾತ್ರೆಯ) ದಿನ ಎರಡು ರಥಗಳೂ ಮುಖಾಮುಖಿಯಾಗಿ ಭೂತಗಳೊಳಗೆ ಸಂವಾದ ನಡೆಯುತ್ತದೆ.

ಅವರಿಬ್ಬರನ್ನು ಒಟ್ಟುಗೂಡಿಸಿದ ಆ ಮಧ್ಯವರ್ತಿ ಬಹುಶಃ ಮುಸಲ್ಮಾನನಾಗಿದ್ದಿರಬೇಕು. 'ದೈಯೊಂಗುಳು'[16] ಸಮೀಪದ ಮಸೀದಿಗೆ ಹೋಗಿ ಅಭಯ ಕೊಡುವ ಮತ್ತು ಸಂವಾದ ನಡೆಸುವ ಪರಿಪಾಠ ಈಗಲೂ ಇದೆ. ಅಲ್ಲಿನ ಕಟ್ಟೆಯಲ್ಲಿ ಬ್ರಾಹ್ಮಣರೊಂದಿಗೆ ಮುಸಲ್ಮಾನರು ಕುಳಿತು ದೈವದ ಕೈಯಿಂದ ಪ್ರಸಾದ ಸ್ವೀಕರಿಸುತ್ತಾರೆ. ಉದ್ಯಾವರದ ಭೂತಕ್ಕೆ ಹಿಂದೂ–ಮುಸಲ್ಮಾನರಿಬ್ಬರೂ ಸಮಾನ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಪ್ರತಿವರ್ಷ ಮೇ ತಿಂಗಳ ಮಧ್ಯಭಾಗದಲ್ಲಿ ಜರುಗುವ ಉದ್ಯಾವರದ 'ಬಂಡಿ' ಉತ್ಸವ ತುಂಬ ಪ್ರಸಿದ್ಧವಾಗಿದೆ. ಮತೀಯ ಸೌಹಾರ್ದದ ತಾಣವೆಂದು ಜನಮನ್ನಣೆ ಗಳಿಸಿದೆ.

ಸಣ್ಣ ಗಾತ್ರದ ಹಾಯಿಹಡಗಿಗೆ ತುಳುವಿನಲ್ಲಿ 'ಮಂಜಿ' ಎನ್ನುತ್ತಾರೆ. ಮುಸಲ್ಮಾನ ಸಂಪರ್ಕವಿದ್ದ ವ್ಯಾಪಾರೀ ಮೂಲದ ಪ್ರಭಾವೀ ಅಣ್ಣ ತಮ್ಮಂದಿರು ಇತರರಿಗೆ ಚೋದ್ಯವೆನಿಸುವಂತೆ ತುಂಬ ಅನ್ಯೋನ್ಯದಿಂದಿದ್ದು, ಯಾವುದೋ ಕೆಟ್ಟ ಗಳಿಗೆಯಲ್ಲಿ ದುರಂತ ಪರ್ಯವಸಾನ ಹೊಂದಿ ದೈವಗಳಾದ ಹಾಗೆ ಕಂಡುಬರುತ್ತದೆ.[17]

ಕಲ್ಲುಕುಟ್ಟಿಗ (ಶಿಲ್ಪ) ಕೆಲಸದ ಕಲ್ಕುಡ ಮತ್ತು ಕಲ್ಲುರ್ಟಿ ಅಣ್ಣ–ತಂಗಿಯರ ಭೂತಗಳು. ಅವರಿಬ್ಬರು ತುಂಬ ಪ್ರೀತಿಯಿಂದಿದ್ದು ಸಮಾಜದ ಕಣ್ಣಿಗೆ ಕಿಸುರಾಗುವಂತೆ ಅನ್ಯೋನ್ಯವಾಗಿದ್ದವರು. ಕಲ್ಕುಡ ಶ್ರವಣ ಬೆಳಗೊಳದಲ್ಲಿ ಬಸದಿ ನಿರ್ಮಾಣ,

ಮೂರ್ತಿ ಕೆತ್ತನೆ ಇತ್ಯಾದಿ ಕೆಲಸ ಮುಗಿಸಿ ಕಾರ್ಕಳದ ಭೈರರಸನಲ್ಲೂ ಕೆತ್ತನೆ ಕೆಲಸ ಮತ್ತು ವಿಶೇಷವಾಗಿ ಗೊಮ್ಮಟ ನಿರ್ಮಾಣದ ಕೆಲಸ ಮುಗಿಸುತ್ತಾನೆ, ಅನಂತರ ವೇಣೂರಿನ ಅಜಿಲರು ಶಿಲ್ಪ ಕೆಲಸಕ್ಕೆ ಅವನನ್ನು ಆಹ್ವಾನಿಸುತ್ತಾರೆ. ಶತ್ರು ರಾಜ್ಯದಲ್ಲಿ ಶಿಲ್ಪಕೆಲಸ ಮಾಡಕೂಡದೆಂದು ಕಾರ್ಕಳದ ಭೈರರಸ ಕಲ್ಕುಡನ ಕೈಕಾಲು ಗಳನ್ನು ಕತ್ತರಿಸಿ ಹಾಕಿಸುತ್ತಾನೆ. ನೊಂದುಕೊಂಡ ಕಲ್ಕುಡ ವೇಣೂರಿಗೆ ಹೋಗಿ ಪಣತೊಟ್ಟು ಕೆಲಸ ಮುಂದುವರಿಸುತ್ತಾನೆ. ಅಣ್ಣ ಕೈಕಾಲುಗಳನ್ನು ಕಳೆದುಕೊಂಡ ಸುದ್ದಿ ತಿಳಿದು ತಂಗಿ ಕಲ್ಲುರ್ಟಿ ಧಾವಿಸಿ ಬಂದು ಕಾರ್ಕಳದ ಭೈರರಸನಿಗೆ ಶಾಪ ಕೊಡುತ್ತಾಳೆ.[18] ಬಳಿಕ ಅಣ್ಣ ತಂಗಿಯರು ದುರಂತ ಮರಣವನ್ನು ಅಪ್ಪುತ್ತಾರೆ. ಎಲ್ಲೆಲ್ಲೂ ಉತ್ಪಾತಗಳು ಸಂಭವಿಸುತ್ತವೆ. ಜೀವಂತವಿದ್ದಾಗ ತಮಗೆ ತೊಂದರೆ ಕೊಟ್ಟವರಿಗೆಲ್ಲ ಅಣ್ಣ ತಂಗಿಯರ ಭೂತಗಳು ಉಪಟಳ ನೀಡತೊಡಗುತ್ತಾರೆ. ಉಪಟಳದಿಂದ ಪಾರಾಗಲು ಎಲ್ಲರೂ ಭಕ್ತಿಯಿಂದ ಆ ಅವಳಿ ಭೂತಗಳನ್ನು ಪೂಜಿಸ ತೊಡಗುತ್ತಾರೆ.

'ಸಿರಿ'[19] ಪಾಡ್ದನಗಳಲ್ಲಿ ಕಂಡುಬರುವ ಒಂದು ಪ್ರಮುಖ ಘಟನೆ ಸೊನ್ನೆ ಗಿಂಡೆಯರು ತಂಗಿ–ಅಕ್ಕಂದಿರು,[20] ಅಜ್ಜ ಬೆರ್ಮೆರ್ ಬಲ್ಲವರು[21] ಬ್ರಹ್ಮ ದೇವರಲ್ಲಿ ಬೇಡಿ ಪಡೆದುಕೊಂಡ ಮೊಮ್ಮಕ್ಕಳು. ಅವರು ಪ್ರಾಯ ಪ್ರಬುದ್ಧರಾದಾಗ ಚೆನ್ನೆ ಆಟ ಆಡುತ್ತಾರೆ. ಚೆನ್ನೆ ಆಟದಲ್ಲಿ ಸತತ ಮೂರು ಬಾರಿ ಸೋತ ಅಕ್ಕ ಗಿಂಡೆಯನ್ನು ಅಲ್ಲಿಗೆ ಬಂದ ಬ್ರಾಹ್ಮಣನೊಬ್ಬನು ಮೂದಲಿಸುತ್ತಾನೆ. ಆ ಬ್ರಾಹ್ಮಣ ಬೇರಾರೂ ಆಗಿರದೆ ವೇಷ ಮರೆಸಿ ಬಂದ ಬ್ರಹ್ಮ ದೇವರೇ ಆಗಿರುತ್ತಾರೆ. ಆ ಮೂದಲಿಕೆ ಯಿಂದಾಗಿ ಅಕ್ಕ ಗಿಂಡೆ ಗೊಣಗಿಕೊಳ್ಳುತ್ತಾಳೆ. ಕುಪಿತಳಾದ ಸೊನ್ನೆ ಚೆನ್ನೆಮಣೆ ಯಿಂದ ಗಿಂಡೆಯನ್ನು ಬಡಿದು ಕೊಲ್ಲುತ್ತಾಳೆ. ಬಳಿಕ ತನ್ನ ಅಚಾತುರ್ಯದ ಕೆಲಸ ದಿಂದ ನೊಂದು ಬಾವಿಗೆ ಹಾರಿ ಆತ್ಮಾರ್ಪಣೆ ಮಾಡಿಕೊಳ್ಳುತ್ತಾಳೆ.

ಮಾಯಗೆ–ಮೈಪಗೆಯರದು ಹೆಚ್ಚು ಕಡಿಮೆ ಇದೇ ಕತೆ, ಅಥವಾ ಪಾಡ್ದನದ ಕತೆಯಲ್ಲಿರುವ ಹೋಲಿಕೆಗಳನ್ನು ಗಮನಿಸಿದರೆ ಇದು ಸೊನ್ನೆ-ಗಿಂಡೆಯರ ಕಥೆಯ ರೂಪಾಂತರದಂತೆ ತೋರುತ್ತದೆ. ಮಾಯೆಗೆ ಅಕ್ಕ ಮತ್ತು ಮೈಪಗೆ ತಂಗಿ, ಚೆನ್ನೆ ಆಟದಲ್ಲಿ ಸತತ ಮೂರು ಬಾರಿ ಅಕ್ಕ ಮಾಯೆಗೆ ಸೋಲುತ್ತಾಳೆ. ಅಷ್ಟರಲ್ಲಿ ಬ್ರಹ್ಮ ದೇವರು ಬ್ರಾಹ್ಮಣವೇಷದಲ್ಲಿ ಬಂದು ಮಾಯೆಗೆಯ ಆತ್ಮಾಭಿಮಾನವನ್ನು ಕೆಣಕುತ್ತಾನೆ ಕೋಪಗೊಂಡ ಮಾಯೆಗೆ ಮೈಪಗೆಯನ್ನು ಚೆನ್ನೆಮಣೆಯಿಂದ ಬಡಿದು ಕೊಲ್ಲುತ್ತಾಳೆ. ಬಳಿಕ ವಿವೇಕ ಬಂದು, ತಂಗಿಯ ಕಳೇಬರವನ್ನು ಎಳೆದುಕೊಂಡು ಹೋಗಿ ಹತ್ತಿರದ ಬಾವಿಗೆ ದೂಡಿ ತಾನೂ ನೀರಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.[22] ಸೊನ್ನೆ ಗಿಂಡೆಯರು ಮತ್ತು ಮಾಯೆಗೆ ಮೈಪಗೆಯರು ತುಳುವರಿಗೆ ಪೂಜನೀಯರಾಗಿದ್ದಾರೆ.

ಪೂವಣಿ ಮತ್ತು ಕಿನ್ನಿವಣಿ ಎಂಬ ಅಣ್ಣ ತಮ್ಮ ಭೂತಗಳು ತಲಕಾವೇರಿ (ಘಟ್ಟದ ಮೇಲಿನಿಂದ) ಹೊರಟು, ಸುಬ್ರಹ್ಮಣ್ಯದ ಕುಮಾರಪರ್ವತ ದಾರಿಯಾಗಿ ಬಂದು ತುಳುನಾಡಿನಲ್ಲಿ ನೆಲಸಿದರು. ಪಡುಮಲೆಯ ಪೆರುಮಾಳ ಬಲ್ಲಾಳರು ಈ ಅಣ್ಣ ತಮ್ಮ ಭೂತಗಳಿಗೆ 'ಸ್ಥಾನ' ಕಟ್ಟಿಸಿ ಮನೆದೈವವಾಗಿ ಪೂಜಿಸತೊಡಗಿದರು. ಪೆರ್ಮಲೆಯಿಂದ ಪುತ್ತಿಗೆಯ ತನಕ ಅಲ್ಲಲ್ಲಿ ಈ ದೈವಗಳನ್ನು ಆರಾಧಿಸಲಾಗುತ್ತದೆ. ಕುಂಬಳೆ ಸೀಮೆಯಲ್ಲಿ ಇವು ಆರಾಧನೆಯ ಪ್ರಧಾನ ದೈವಗಳಾಗಿವೆ. ಉಳಿದ ಭೂತ ಗಳಂತೆ ಪೂವಣಿ-ಕಿನ್ನಿವಣಿ ದೈವಗಳು ಶೂದ್ರ ಮೂಲದವುಗಳಲ್ಲ. ಇವು ಬ್ರಾಹ್ಮಣ ಮೂಲದ ದೈವಗಳಾಗಿವೆ. 'ವಣಿ' ಎಂಬ ಪ್ರಯೋಗವು ಬ್ರಾಹ್ಮಣ ವಟುಗಳಿಗೆ ಸಂಬೋಧನೆಯಾಗುತ್ತದೆ. ಶಿಷ್ಟ ರಕ್ಷಣೆ ಮತ್ತು ದುಷ್ಟ ಶಿಕ್ಷೆಯ ಸಂಕೇತವಾಗಿ ಈ ದೈವಗಳ ಕೈಯಲ್ಲಿ ಬಿಲ್ಲುಬಾಣಗಳಿವೆ.

ಕಾಂತಾಬಾರೆ-ಬುದಾಬಾರೆಯರು ಹದಿನೇಳನೇ ಶತಮಾನದ ಮಧ್ಯ ಭಾಗದಲ್ಲಿ ತುಳುನಾಡಿನಲ್ಲಿ ಜನ್ಮವೆತ್ತಿದ ಅವಳಿಗಳು. ಸುರತ್ಕಲ್ ಸಮೀಪ ಕಜೆರಿಸ್ಥಾನ ಎಂಬಲ್ಲಿ ಇವರು ಜನ್ಮವೆತ್ತಿದರೆಂದೂ ಮುಲ್ಕಿ ಸಮೀಪ ಉಳಿಯತ್ತಾಡಿ ಗುತ್ತಿನ ಪ್ರತಿಷ್ಠಿತ ಬಂಟ ಮನೆತನದಲ್ಲಿ ಇವರು ಬೆಳೆದರೆಂದೂ ತಿಳಿದು ಬರುತ್ತದೆ. ತಂದೆಯ ಬಗ್ಗೆ ಸ್ಪಷ್ಟ ವಿವರಗಳಿಲ್ಲ. ತಾಯಿ ಆಚಿ ಬೈದೆತಿ. ಬೆಳೆದಂತೆ ಈ ಅವಳಿಗಳ ಶೌರ್ಯ ಪ್ರತಾಪಗಳು ಮೆರೆಯುತ್ತವೆ. ಇವರು ದುರಂತ ಸಾವನ್ನಪ್ಪಿ ದೈವೀಕ ನೆಲೆಗೆ ಏರುತ್ತಾರೆ. ತುಳು ನಾಡವರಿಗೆ ಪೂಜನೀಯ ವ್ಯಕ್ತಿಗಳಾಗುತ್ತಾರೆ.

ಮೇರ ಜನಾಂಗದ ಮುದ್ದ-ಕಳಲರು ಮತ್ತು ಮನ್ಸ ಜನಾಂಗದ ಕಾಣದ-ಕಾಟದರು ಕ್ರಮವಾಗಿ ಮೇರ ಮತ್ತು ಮನ್ಸ ಜನರಿಂದ ಆರಾಧನೆಗೊಳ್ಳುತ್ತಿರುವ ಅವಳಿ ದೈವಗಳು. ಕೋಟಿ ಚೆನ್ನಯರ ಅನುಕರಣೆಯಲ್ಲಿ ಸಮಾಜದ ನಿಮ್ನ ವರ್ಗದ ಜನರು ಈ ದೈವಗಳನ್ನು ಹುಟ್ಟುಹಾಕಿದಂತೆ ಕಂಡು ಬರುತ್ತದೆ.

ಒಂದು ದಿನ ಕೋಟಿ-ಚೆನ್ನಯ, ಮುದ್ದ-ಕಳಲ ಮತ್ತು ಕಾಣದ-ಕಾಟದ ಈ ಆರು ಮಂದಿ ಒಟ್ಟಾಗಿ ಬೇಟೆಯಾಡಲು ಕಾಡಿಗೆ ಹೋದರು. ಬೇಟೆಯಾಡುತ್ತ ಅವರಿಗೆ ಬಾಯಾರಿಕೆ ಆಗುತ್ತದೆ. ಹಾಸುಬಂಡೆಯನ್ನು ಒಡೆದು ನೀರು ಕುಡಿಯುವ ಸಾಹಸಕ್ಕೆ ತೊಡಗುತ್ತಾರೆ. ಹಾಸುಬಂಡೆಗೆ ಕೋಟಿ ಚೆನ್ನಯರು ಸುರಿಯ (ಖಡ್ಗ) ಹಾಕಲು ಸುರಿಯ ಮೊಂಡಾಗುತ್ತದೆ. ಮುದ್ದ-ಕಳಲರು ಬಿಲ್ಲಿನಿಂದ ಬಾಣ ಹೂಡಿದರೂ ಪ್ರಯೋಜನವಾಗಲಿಲ್ಲ. ಆಗ ಕಾಣದ ಕಾಟದರು ತಾವು ಕೈಯಲ್ಲಿ ಹಿಡಿದಿದ್ದ ಅಲಂಬುಡ (ಹರಳು) ಗಿಡದ ದಂಟನ್ನು ಬಂಡೆಗೆ ಹಾಕಲು ಬಂಡೆ ಇಬ್ಭಾಗವಾಗಿ ನೀರು ಚಿಮ್ಮಿತು. ಆಗ ಇತರರು "ಮನ್ಸೆರ್ ದೆತ್ತಿ ನೀರ್ ಪರಯೋ" (ಮನ್ಸರು ತೆಗೆದ ನೀರು ಕುಡಿಯ ಲಾರೆವು) ಎಂದು ಅವಮಾನ ಮಾಡಿ ಪ್ರತಿಭಟಿಸಿದರು. ಆ ನೆಪದಿಂದ ಅವರೊಳಗೆ

ಜಗಳವಾಗಿ ಆರು ಮಂದಿ ಪರಸ್ಪರ ಹೊಡೆದಾಡಿ ಸಾಯುತ್ತಾರೆ. ಹಾಗೆ ಸತ್ತ ಕಾಣದ-ಕಾಟದ ಮನ್ಸ ಜನಾಂಗಕ್ಕೂ ಮುದ್ದ-ಕಳಲರು ಮೇರ ಜನಾಂಗಕ್ಕೂ ಕೋಟಿ-ಚೆನ್ನಯರು ಬಿಲ್ಲವ ಜನಾಂಗಕ್ಕೂ ಕಾರಣಿಕ ಪುರುಷರಾಗುತ್ತಾರೆ.[24]

ತುಳುನಾಡಿನ ನೂರಾರು ಭೂತಗಳ ಪೈಕಿ ಅವಳಿ ಭೂತಗಳಿಗೆ ವಿಶೇಷ ಸ್ಥಾನ ಮಾನ, ಕಾರಣಿಕ ಮತ್ತು ಶಕ್ತಿ ಇದೆ. ಅವು ಜನಾಂಗಿಕವಾದ ಮತ್ತು ಮನಶ್ಶಾಸ್ತ್ರೀಯ ನೆಲೆಯ ಅಧ್ಯಯನವನ್ನು ಬೇಡುತ್ತವೆ. ಅವಳಿ ಎಂಬ ಪದಕ್ಕೆ ತುಳುಭಾಷೆಯಲ್ಲಿ 'ಅವರು' ಎಂಬ ಪರ್ಯಾಯ ಪದವಿದೆ. ತುಳುವಿನಲ್ಲಿ ಈ ಪದ ವಿಶಿಷ್ಟವಾದ ಅರ್ಥದ ನೆಲೆಗಳನ್ನು ಒದಗಿಸುತ್ತದೆ. ಈ ಪದಕ್ಕೆ ದೈವೀಕ ಮತ್ತು ಸಾಂಸ್ಕೃತಿಕ ಪರಿವೇಶದ ಅರ್ಥಭಾರವಿದೆ. ಅವಳಿ ಮಕ್ಕಳು ಹುಟ್ಟಿದರೆ ಅವರು ಬಾಲೆಲು, ಅಮರು ಜೋಕುಲು ಎಂದು ಹೇಳಲಾಗುವುದಲ್ಲದೆ ಅದನ್ನು ದೈವದ ವಿಶೇಷ ಅನುಗ್ರಹವೆಂದು ಪರಿಗಣಿಸಲಾಗುತ್ತದೆ.

ಆರಾಧನೆಗೊಳ್ಳುತ್ತಿರುವ ಅವಳಿಗಳ ಹುಟ್ಟು ವಿಶೇಷವಾಗಿ ಕಂಡು, ಅಪೂರ್ವವಾದ ಸಾಮರಸ್ಯವುಳ್ಳ ಅವರ ನಡೆನುಡಿಗಳಿಂದ ಚೋದ್ಯಗೊಂಡು ಅವರಿಗೆ ವಿಶೇಷತ್ವವನ್ನು ಆರೋಪಿಸಲಾಯಿತು. ಅನ್ಯಾಯದ ವಿರುದ್ಧ ಸೆಟೆದು ನಿಂತು ನ್ಯಾಯಕ್ಕಾಗಿ ಅವರು ನಡೆಸಿದ ಹೋರಾಟ, ಉತ್ಕರ್ಷದಲ್ಲಿ ದುರಂತ ಪರ್ಯವಸಾನಗಳು ಅವರನ್ನೊಂದು ವಿಶೇಷವಾದ ನೆಲೆಗೆ ಕೊಂಡೊಯ್ದುವಲ್ಲದೆ ದೈವದ ಸ್ಥಾನಮಾನಗಳನ್ನು ಒದಗಿಸಿದವು. ದೈವಗಳಾದ ಇಂಥ ಮಂದಿ ಬದುಕಿದ್ದಾಗ ಪಾಲಕರಿಲ್ಲದೆ ಅನಾಥವಾಗಿ ಬಂಧುಗಳ ಅಥವಾ ಇನ್ನಾರದೋ ಮನೆಯಲ್ಲಿ ಬೆಳೆದುದನ್ನೂ ಬಾಲ್ಯ ತೀರ ಸಂಕಷ್ಟಮಯವಾಗಿ ನೊಂದು ಬೆಂದುದನ್ನೂ ಆದರೂ ಸಮಷ್ಟಿ ಹಿತಕ್ಕಾಗಿ ಅವರು ಹೋರಾಡಿದ್ದನ್ನೂ ನಾವು ಕಾಣಬಹುದು. ಹಾಗಾಗಿ ಸಾಮೂಹಿಕ ನೆಲೆಯಲ್ಲಿ ಅವರಿಗೊಂದು ಮನ್ನಣೆಯ ಸ್ಥಾನ ದೊರೆತಿದೆ.

ತುಳು ಪಾಡ್ದನಗಳಲ್ಲಿ ದುಃಖಾಂತ ಕತೆಗಳನ್ನೇ ಹೆಚ್ಚಾಗಿ ಕಾಣುತ್ತೇವೆ. ದುಃಖಾಂತ ಕತೆಗಳ ನಾಯಕರಿಗೆ ಗ್ರೀಕ್ ದುಃಖಾಂತ ನಾಟಕಗಳ ಹೀರೋಗಳಂತೆ ಒಂದು ದೈವೀಕ ಪರಿವೇಷ ಒದಗಿಬಂದಿದೆ. "ಭಾರತೀಯ ಶಿಷ್ಟ ಸಾಹಿತ್ಯದಲ್ಲಿ ದುಃಖಾಂತ ಕತೆಗಳನ್ನು ನಿಷೇಧಿಸಿದರೂ ತುಳು ಜನಪದ ಸಾಹಿತ್ಯದಲ್ಲಿ ಅವು ಅತ್ಯಂತ ಮಾರ್ಮಿಕವಾಗಿ ಪ್ರಭಾವಶಾಲಿಯಾಗಿ ಬಂದಿವೆ."[25] ಎಂಬ ಮಾತು ಗಮನಾರ್ಹ.

ಅವಳಿಯ ಬಗೆಗಿನ ಮಹತ್ವ ಮತ್ತು ಗುರುತ್ವ ತುಳುವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಅದನ್ನು ಸೃಷ್ಟಿಯ ವಿಶೇಷವೆಂದು ಭಾವಿಸಲಾಗುತ್ತದೆ ಹಾಗೂ ಅಲ್ಲಿ ಶಕ್ತಿಯ ಆವಿರ್ಭಾವವನ್ನು ಕಾಣಲಾಗುತ್ತದೆ.

ಅಡಿ ಟಿಪ್ಪಣಿಗಳು

1 ತುಳುನಾಡಿನ ಇತಿಹಾಸ : ಡಾ॥ ಕೆ. ವಿ. ರಮೇಶ್, ಪ್ರ. ಮು. 1969, ಪುಟ 17.

2 ಭೂತದ ಕೈಯಲ್ಲಿ ದುಷ್ಟ ಶಿಕ್ಷಣ ಮತ್ತು ಶಿಷ್ಟ ರಕ್ಷಣದ ಸಂಕೇತವಾಗಿ ಖಡ್ಗ ಇರುತ್ತದೆ. ಭೂತದ 'ಭಂಡಾರ'ದಲ್ಲಿ ಈ ಖಡ್ಗಕ್ಕೆ ವಿಶಿಷ್ಟ ಸ್ಥಾನಮಾನ ಇದೆ. ವಿಶೇಷ ದಿನಗಳಲ್ಲಿ ಭಂಡಾರಕ್ಕೆ ಪೂಜೆ ನಡೆಯುತ್ತದೆ. ಭೂತದ ಭಂಡಾರದಿಂದ ದೈವದರ್ಶನ ಸ್ಥಳಕ್ಕೆ ಭೂತದ ಪರಿಕರಗಳನ್ನು ತರುವುದಕ್ಕೆ 'ಕೀರ್ವಾಲು' ಬರುವುದು ಅನ್ನುತ್ತಾರೆ. (ಕೀರ್ವಾಲು < ಕರವಾಳ್ < ಖಡ್ಗ). ಕೆಲವು ಕಡೆ 'ಭಂಡಾರ' ಬರುವುದು ಎಂದೂ ಹೇಳುತ್ತಾರೆ.

3 ಭೂತ ಕುಣಿಸುವಾಗ ಪಾಡ್ದನಗಾರ್ತಿ ಪಾಡ್ದನ (ಪಾರ್ತನೊ < ಪ್ರಾರ್ಥನೆ) ಹೇಳುತ್ತ ನುಡಿಸುವ ಚಿಕ್ಕಗಾತ್ರದ ಚರ್ಮವಾದ್ಯ.

4 ಪತ್ತನಾಜೆ–ಪ(ಹ)ತ್ತನೇ ಅ(ಹ)ಜ್ಜೆ = ಬೇಸಗೆ ತಿಂಗಳ (ವೈಶಾಖ ಮಾಸದ) ಹತ್ತನೇ ದಿನ. ಪತ್ತನಾಜೆಯಂದು ಎಲ್ಲ ಆರಾಧನೆಗಳನ್ನು ಮುಗಿಸಿಕೊಂಡು ಭೂತ 'ಮಾಡ' ಪ್ರವೇಶ ಮಾಡುತ್ತದೆ. ಭೂತಾಲಯಕ್ಕೆ 'ಮಾಡ' ಎಂದೂ ಕರೆಯಲಾಗುತ್ತದೆ. (ಮಾಡ = ಸೂರು). ಭೂತವು ವೇಷಕಟ್ಟಿ ದರ್ಶನ ಕೈಗೊಳ್ಳುವ ಸ್ಥಳದಲ್ಲಿ ಮಾಡು (ಸೂರು) ಇರುವುದಿಲ್ಲ. ಪತ್ತನಾಜೆಯ ಬಳಿಕ ಸಾಮಾನ್ಯವಾಗಿ ಮಳೆಗಾಲ ಆರಂಭವಾಗುತ್ತದೆ. ರೈತಾಪಿ ಜನರು ಕೃಷಿ ಕೆಲಸಗಳಲ್ಲಿ ತೊಡಗುತ್ತಾರೆ. ಮಳೆಗಾಲದಲ್ಲಿ ತಿರುಗಾಟ ಹಾಗೂ ಪ್ರದರ್ಶನ ಸಾಧ್ಯವಿಲ್ಲದುದರಿಂದ ಯಕ್ಷಗಾನ ಬಯಲಾಟದ ಮೇಳಗಳು ಪತ್ತನಾಜೆ ದಿನ ಪ್ರದರ್ಶನ ಕೊನೆಗೊಳಿಸಿ ಊರಿಗೆ ಹಿಂದಿರುಗುತ್ತವೆ. ಶಕ್ತ್ಯಾರಾಧನೆಯೇ ಮೂಲವಾಗಿ ಭೂತ ಮತ್ತು ಯಕ್ಷಗಾನ ಹುಟ್ಟಿ ಎರಡು ಕವಲುಗಳಾಗಿ ಬೆಳೆದುಬಂದಂತೆ ತೋರುತ್ತದೆ.

5 Studies in Tuluva History and Culture by Prof. P. Gururaja Bhat, M.A., Ph.D., Publisher : Author, 1975, P.p. 360–361.

6 'ಜಾನಪದ ಆರಾಧನೆ ಮತ್ತು ರಂಗಕಲೆ' : ಡಾ॥ ಸುಶೀಲಾ ಪಿ. ಉಪಾಧ್ಯಾಯ, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ. ಪ್ರ. ಮು. 1989, ಪುಟ 9.

7 ಅಲ್ಲೇ, ಪುಟ 9.

8 ಭೂತಾರಾಧನೆ ಮತ್ತು ಶಕ್ತಿಪೂಜೆ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಕದಂಬರ ಕಾಲದ ಕೋಟಿಯ ಅಧಿದೇವತೆಯಾದ ಬಳ್ಳದ ತ್ರಿಶೂಲಿನಿಗೆ ನರಬಲಿ ನಡೆಯುತ್ತಿತ್ತು.

9 ಭೂತದ ಪರಿಕರಗಳನ್ನು ಇಡುವ ಕೊಟ್ಟಿಗೆಯನ್ನು ಭಂಡಾರ ಅಥವಾ 'ಕೀರಾಲು' ಎಂದು ಹೇಳಲಾಗುತ್ತದೆ. ಅಲ್ಲಿ ಭೂತದ ಮುಖವಾಡ, ಅಣಿ, ಖಡ್ಗ, ಗಗ್ಗರ ಮುಂತಾದ ವಸ್ತುಗಳನ್ನು ಇಡಲಾಗುತ್ತದೆ. ವಿಶೇಷ ದಿನಗಳಂದು ಅಲ್ಲಿ ಭಕ್ತಿ-ಶ್ರದ್ಧೆಗಳ ಸಂಕೇತವಾಗಿ ಜ್ಯೋತಿ ಉರಿಸಿಡಲಾಗುತ್ತದೆ.

10 ತುಳುವಿನ 'ಗರಡಿ' ಎಂಬ ಶಬ್ದ ಮಲಯಾಳದಲ್ಲಿ ಕಳರಿ ಎಂದಾಗಿದೆ. ಕೇರಳದಲ್ಲಿ ಪ್ರಚಲಿತದಲ್ಲಿರುವ ಕಳರಿಪಯಟ್ಟು ಎನ್ನುವ ಸಮರಕಲೆ ತುಳುನಾಡಿನಲ್ಲಿ ಹುಟ್ಟಿತು ಎಂಬ ವಾದವೂ ಇದೆ. ತುಳುನಾಡಿನಲ್ಲಿ ಇವತ್ತಿಗೂ ಹಬ್ಬಿ ಹರಡಿಕೊಂಡಿರುವ ವ್ಯಾಯಾಮಶಾಲೆಗಳನ್ನು ಮತ್ತು ಜಿಮ್ನಾಶಿಯಂನಲ್ಲಿ ಹಾಗೂ ದೇಹದಾರ್ಢ್ಯದಲ್ಲಿ ತುಳುವರು ಪಡೆಯುವ ಪ್ರಶಸ್ತಿ-ಫಲಕಗಳನ್ನು ಗಮನಿಸಿದರೆ ಆ ಊಹೆಗೆ ಇನ್ನಷ್ಟು ಇಂಬು ದೊರೆಯುತ್ತದೆ. ಹಿಂದಿನ ಕಾಲದಲ್ಲಿ ಕೇರಳದ ವೀರರು ತುಳುನಾಡಿಗೆ ಆಗಮಿಸಿ ಗರಡಿಗಳಲ್ಲಿ ತರಬೇತು ಪಡೆಯುತ್ತಿದ್ದರು. ತುಳು-ಮಲಯಾಳಿಗಳಿಗೆ ವ್ಯಾಪಕ ಸಂಪರ್ಕ ವಿತ್ತು ಎಂಬುದಕ್ಕೆ ಲಿಪಿಯೇ ಉದಾಹರಣೆ, ಮಲಯಾಳದಲ್ಲಿ ಈಗ ಬಳಕೆಯಲ್ಲಿರುವ ಲಿಪಿ ಪರಿಷ್ಕಾರಗೊಂಡ ತುಳು ಲಿಪಿಯಾಗಿದೆ.

11 ತುಳುವ ದರ್ಶನ : ಡಾ॥ ಪೀಟರ್ ಜೆ. ಕ್ಲಾಸ್ (ಕನ್ನಡ ಅನುವಾದ : ಎಂ. ವಿ. ನಾವಡ ಮತ್ತು ಸುಭಾಷ್ಚಂದ್ರ) 'ವೀರರು ವೀರ ರಮಣಿಯರು' ಎಂಬ ಲೇಖನ, ಪುಟ 160.

12 ಕೋಟಿ–ಚೆನ್ನಯರು ತುಳುನಾಡಿನ ಪ್ರಖ್ಯಾತ ವೀರರು. ತುಳುನಾಡಿನಾದ್ಯಂತ ಅವರ ಒಟ್ಟು 64 ಗರೋಡಿಗಳಿವೆ. (ಗರೋಡಿ, ಗರಡಿ ಅಥವಾ ಸಾಮು (ವ್ಯಾಯಾಮ) ಮನೆಗಳು. ಕಾಲಾಂತರದಲ್ಲಿ ಅವು ಭೂತ ಸ್ಥಾನಗಳಾಗಿ ಮಾರ್ಪಾಡುಗೊಂಡವು). ಕೋಟಿ-ಚೆನ್ನಯರು ಎಷ್ಟು ಪ್ರಖ್ಯಾತ ವೀರರೆಂದರೆ ಅವರ ಕಥೆ, ನಾಟಕ, ಯಕ್ಷಗಾನ ಪ್ರಸಂಗ ಮತ್ತು ಚಲನಚಿತ್ರಗಳು ಅತೀವ ಜನಮನ್ನಣೆ ಗಳಿಸಿವೆ. ಹೆಚ್ಚಿನ ವಿವರಗಳಿಗೆ "ತುಳುನಾಡಿನ ಗರೋಡಿಗಳ ಸಾಂಸ್ಕೃತಿಕ ಅಧ್ಯಯನ" ಎಂಬ ಕೃತಿ ನೋಡಿ. ಸಂ : ಮೋಹನ ಕೋಟ್ಯಾನ್ ಮತ್ತು ಬನ್ನಂಜೆ ಬಾಬು ಅಮೀನ್.

13 'ಸಿರಿ' ಒಂದು ಭೂತವಾಗಿ ತುಳುನಾಡಿನಲ್ಲಿ ಆರಾಧನೆಗೊಳ್ಳುತ್ತಿದ್ದಾಳೆ.

14 ಸಂತತಿಹೀನ ಬೆರ್ಮ ಆಳ್ವ ಕೊರಗುವ ಚಿತ್ರಣ ತುಳು ಪಾಡ್ದನದಲ್ಲಿ ಎಷ್ಟು ಹೃದಯಂಗಮವಾಗಿ ಮೂಡಿಬಂದಿದೆ ನೋಡಿ : 'ಮುಂದೆ ನಿಂತು ಬೆಂಬಲಿಸುವ ಗಂಡು ಸಂತಾನವಿಲ್ಲ. ಹಿಂದೆ ನಿಂತು ಬೆಂಬಲಿಸುವ ಹೆಣ್ಣು ಸಂತಾನವಿಲ್ಲ. ಪಕ್ಕದಲ್ಲಿ ನಿಲ್ಲಬಲ್ಲ ಅಳಿಯಂದಿರಿಲ್ಲ. ಕಾಲ ಕೆಳಗೆ ಓಡಾಡಿಕೊಂಡಿರುವ ಮೊಮ್ಮಕ್ಕಳಿಲ್ಲ'. ಎಂಬುದು ತುಂಬು ಸಂಸಾರದ ಬಗೆಗಿನ ಶ್ರೀಮಂತ ಕಲ್ಪನೆ.

15 'ಕುಮಾರ' ಒಂದು ಭೂತವಾಗಿ ತುಳುವರಿಂದ ಆರಾಧನೆ ಕೈಗೊಳ್ಳುತ್ತಿದ್ದಾನೆ.

16 ಈ ಅವಳಿ ದೈವಗಳು 'ದೈಯೊಂಗುಳು' ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿವೆ. ಈ ಭೂತಗಳನ್ನು ಏಕವಚನದಿಂದ ಕರೆಯುವ ಸಂಪ್ರದಾಯ ಇಲ್ಲ. ಕ್ಷೇತ್ರವು ಅರಸು ಮಂಜಿಷ್ಣಾರ್ ಎಂದು ಅಣ್ಣನ ಹೆಸರಿನಿಂದ ಪ್ರಸಿದ್ಧವಾಗಿದ್ದರೂ 'ದೈಯೊಂಗುಳು' ಎಂಬ ಬಹುವಚನ ಪ್ರಯೋಗದಿಂದಾಗಿ ತಮ್ಮನೂ ಅಲ್ಲಿ ಅಸ್ತಿತ್ವದಲ್ಲಿದ್ದಾನೆ ಎಂದು ಭಾವಿಸಿಕೊಳ್ಳಬೇಕು.

17 ಉತ್ಕಟ (climax) ಸನ್ನಿವೇಶದಲ್ಲಿನ ತಿರುವು ಮನುಷ್ಯ ಇತಿಹಾಸದಲ್ಲಿ ಬಹಳ ಗಮನಾರ್ಹವಾದದ್ದೆಂದು ತೋರುತ್ತದೆ. ಗ್ರೀಕ್ ಪುರಾಣದ ವರ್ಚಸ್ವೀ ನಾಯಕರು ತಮ್ಮ ವ್ಯಕ್ತಿತ್ವದ ಉಚ್ಛ್ರಾಯದಲ್ಲಿ ಸಂಭವಿಸುವ ಸಣ್ಣದೊಂದು ತಿರುವಿನಿಂದಾಗಿ ದುರಂತಕ್ಕೀಡಾಗಿ ದೈವಗಳಾಗುತ್ತಾರೆ. ಉಚ್ಛ್ರಾಯ ಅವಸ್ಥೆಯಲ್ಲಿರುವಾಗಲೇ ಜೈನ

ಕಾವ್ಯನಾಯಕರಿಗೆ ಸಣ್ಣದೊಂದು ಕಾರಣದಿಂದ ವೈರಾಗ್ಯ ಬಂದು ತತ್ಪರಿಣಾಮವಾಗಿ ದೈವೀಕಪುರುಷರಾಗುತ್ತಾರೆ. ಮಹಾನ್ ವ್ಯಕ್ತಿಗಳ ಬದುಕಿನಲ್ಲಿ ಘಟಿಸುವ ತೀವ್ರ ಏರುಪೇರುಗಳು ಅಥವಾ ತಿರುವು ಅಸಾಮಾನ್ಯವಾದ ವಿದ್ಯಮಾನಗಳಿಗೆ ಕಾರಣವಾಗುತ್ತದೆ.

18 ಭೂತಾರಾಧನೆಯ ಕತೆಗಳು : ಸೇವ ನಮಿರಾಜ ಮಲ್ಲ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ. ವಿ. ಪ್ರಕಟಣೆ, 1970.

19 'ಸಿರಿ' ಶಬ್ದ ಸಂಸ್ಕೃತದ ಶ್ರೀ ಎಂಬ ಶಬ್ದದಿಂದ ಹುಟ್ಟಿದೆ. ಇಲ್ಲಿ ಸಿರಿಯು ಸಂತಾನ ಶ್ರೀಗೂ ಸಂಪತ್‌ಶ್ರೀಗೂ ಸಂವಾದಿಯಾಗಿರುವುದಲ್ಲದೆ, ಆ ಉತ್ಸವದ ಒಟ್ಟು ಆಚರಣೆ ಜೀವನದ ಎರಡು ಸಾರ್ಥಕ ಅಭೀಪ್ಸೆಗಳ ಒಂದು ರೂಪಕದಂತೆ ಕಂಡು ಬರುತ್ತದೆ. 'ಸಿರಿ'ಯ ಹುಟ್ಟು ಅಡಿಕೆ ಮರದ ಹಿಂಗಾರದಿಂದ (ಹಿಂಗಾರವೆಂದರೆ ಅರಳಿರದ ಮೊಗ್ಗು-ಆದರೂ ಹೂ !) ಆಯಿತು. ಅಡಿಕೆ ವಾಣಿಜ್ಯ ಬೆಳೆಯಾದುದರಿಂದ ಸಂಪತ್ತಿಗೆ ಕಾರಣ ಹೇಗೋ, ಮುಂದೆ ಅರಳಿ ಕಾಯಾಗುವುದರಿಂದ ಸಂತಾನದ ಪ್ರತೀಕವೂ ಹೌದು. ವಿವರಗಳಿಗೆ ನೋಡಿ : 'ಜನಪದ ಸುತ್ತಮುತ್ತ' : ವಾಮನ ನಂದಾವರ, ಪ್ರಜಾ ಬಂಧು ಪ್ರಕಾಶನ, ಮಂಗಳೂರು' 1992.

20 ಕೆಲವು ಪಾಡ್ದನಗಾರ್ತಿಯರು ಸೊನ್ನೆ ಅಕ್ಕ ಮತ್ತು ಗಿಂಡೆ ತಂಗಿ ಎಂದು ಉಲ್ಲೇಖಿಸುತ್ತಾರೆ. ಈ ಅಭಿಪ್ರಾಯ ಬೇಧ ಕಥೆಯ ಒಟ್ಟು ಆಶಯದಲ್ಲಿ ವ್ಯತ್ಯಾಸವನ್ನೇನೂ ಉಂಟು ಮಾಡುವುದಿಲ್ಲ.

21 ಬ್ರಹ್ಮ < ಬೆರ್ಮೆ < ಬೆರ್ಮ್ಮೆ < ಬಿರುಮ.

22 ಅಕಾಲಗಳಲ್ಲಿ ಚೆನ್ನೆ ಆಟ ಆಡುವುದು ಅಮಂಗಲ ಮತ್ತು ಅಶುಭಕಾರಕ ಎಂದು ನಂಬಲಾಗಿದೆ. ಸಹೋದರರು, ಸಹೋದರಿಯರು ಮತ್ತು ಗಂಡ ಹೆಂಡತಿ–ಹೀಗೆ ದ್ವಯಾ ಸಂಬಂಧವುಳ್ಳವರು ಚೆನ್ನೆ ಆಟ ಆಡಬಾರದೆಂಬ ನಿಷೇಧ ತುಳುವರಲ್ಲಿದೆ. ಆಟಿ (ಆಷಾಢ) ತಿಂಗಳಲ್ಲಿ ಈ ನಿಷೇಧಕ್ಕೆ ವಿನಾಯ್ತಿ ಇದೆ. ಆಷಾಢದಲ್ಲಿ ಜೋರಾಗಿ ಮಳೆ ಬೀಳುವುದರಿಂದ ಹೊರಗಿನ ಕೆಲಸಗಳು ಸಾಧ್ಯವಾಗದೆ. ಹೊತ್ತು ಕಳೆಯುವುದಕ್ಕಾಗಿ ಚೆನ್ನೆ ಆಟ ಆಡಬಹುದು. "ಆಡಬಾರದು ಚೆನ್ನೆ, ನೋಡಬಾರದು ಪಗಡೆ, ಆಡಬೇಕೊಂದಾಟ ಚದುರಂಗ" ಎಂಬ ಜನಪದ ಸಾಮತಿ ತುಳುನಾಡಿನಲ್ಲಿ ಪ್ರಚಲಿತವಾಗಿದೆ. ಇದು ಚೆನ್ನೆ ಆಟದಿಂದೊದಗುವ ದುರಂತ ಪರ್ಯವಸಾನವನ್ನು, ಪಗಡೆ ಆಟದ ಕಷ್ಟ, ನಷ್ಟ ಸಂಕಟ ಪರಂಪರೆಗಳನ್ನು ಮತ್ತು ಬುದ್ಧಿಗೆ ಕೆಲಸ ಕೊಡುವ ಚದುರಂಗದಾಟದ ಮಹತ್ವವನ್ನು ಸಾರಿ ಹೇಳುತ್ತದೆ.

23 ಮೇರ ಮತ್ತು ಮನ್ಸ ಎಂಬವು ಹೊಲೆಯರಲ್ಲಿರುವ ಎರಡು ಪಂಗಡಗಳು.

24 ಕರಂಗೋಲು ಕುಣಿತ : ಪಠ್ಯ, ಪ್ರದರ್ಶನ ಮತ್ತು ಅರ್ಥ : ಡಾ॥ ಕೆ. ಚಿನ್ನಪ್ಪ ಗೌಡ, ಜಾನಪದ ಗಂಗೋತ್ರಿ, ಡಿಸೆಂಬರ್, 1989, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

25 'ಜನಪದ ಆರಾಧನೆ ಮತ್ತು ರಂಗಕಲೆ' : ಪೂರ್ವೋಕ್ತ, ಪುಟ 55-56.

ತೆಲಸಂಗದಲ್ಲಿ ದೊರೆತ ಅಪೂರ್ವ ಮದನಿಕೆ ವಿಗ್ರಹಗಳು

ಎಂ. ಎಲ್. ಶಿವಶಂಕರ


ತೆಲಸಂಗ ಗ್ರಾಮ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿ ಅಥಣಿಯಿಂದ 21 ಕಿ.ಮಿ. ದೂರದಲ್ಲಿದೆ. ಈ ಹಳ್ಳಿಯಿಂದ ನಾನು 1976 ರಲ್ಲಿ ಎರಡು ಅಪೂರ್ವ ಹಾಗೂ ಕಲಾ ಪೂರ್ಣವಾದ ಮದನಿಕಾ ಮೂರ್ತಿಗಳನ್ನು ಧಾರವಾಡ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ತಂದೆನು. ಈ ಮೂರ್ತಿಗಳನ್ನು ಬೆಂಗಳೂರಿನ ಸರ್ಕಾರಿ ವಸ್ತು ಸಂಗ್ರಹಾಲಯಕ್ಕೆ ಸಾಗಿಸಿದ ಮೇಲೆ ವಿದೇಶಕ್ಕೆ "ಫೆಸ್ಟಿವಲ್ ಆಫ್ ಇಂಡಿಯಾ" ದಲ್ಲಿ ಪ್ರದರ್ಶಿಸಲು ಕಳಿಸಲಾಗಿತ್ತು.

ಮದನಿಕಾ ಮೂರ್ತಿಗಳು ಎತ್ತರ 1 ಮೀಟರ್, 40 ಸೆಂ.ಮಿ. ಅಗಲ 23 ಸೆಂ.ಮೀ. ದಪ್ಪ ಇವೆ.

ಮದನಿಕಾ ವಿಗ್ರಹ 1 : ಮದನಿಕೆ ತ್ರಿಭಂಗಿಯಲ್ಲಿ ನಿಂತಿದ್ದಾಳೆ. ಕೈಗಳಲ್ಲಿ ವೀಣೆಯನ್ನು ಹಿಡಿದಿರುವ ಹಾಗೆ ಕಾಣಿಸುತ್ತದೆ. ಎಡಕಿವಿಯಲ್ಲಿ ರಿಂಗ್ ಇದೆ. ಕಂಠಹಾರ, ತೋಳ್ಬಂದಿ, ಕೈಕಡಗ, ನೂಪುರ ಮತ್ತು ಮೇಖಲೆಗಳಿಂದ ಅಲಂಕೃತ ಳಾಗಿದ್ದಾಳೆ. ಈಕೆಯ ಸುತ್ತಲೂ ಬಳ್ಳಿಯ ಸುರುಳಿಗಳಿವೆ. ಈ ಸುರುಳಿಗಳಲ್ಲಿ ರಾಮಾಯಣದ ದೃಶ್ಯಗಳ ಕೆತ್ತನೆಯಿದೆ. ರಾಮ ಮತ್ತು ರಾವಣರ ಯುದ್ಧ (ಲಕ್ಷ್ಮಣನನ್ನು ಸಹಿತ ಕೆತ್ತಲಾಗಿದೆ), ವಾಲಿ ಸುಗ್ರೀವರ ದ್ವಂದ್ವ ಯುದ್ಧ ಸಹ ಚಿತ್ರಿತವಾಗಿದೆ (ಛಾಯಾಚಿತ್ರ–1).

ಮದನಿಕಾ ವಿಗ್ರಹ 2 : ಸುಂದರಿ ಸ್ವಲ್ಪ ಸ್ಥೂಲವಾಗಿದ್ದಾಳೆ. ಎರಡು ಕಾಲುಗಳನ್ನು ಮಡಚಿ ಡಮರುಗವನ್ನು ಬಾರಿಸುವ ಭಂಗಿ ರಮ್ಯವಾಗಿದೆ. ದುರದೃಷ್ಟವಶಾತ್ ಬಲ ಮುಂಗೈ ಹಾರ ಮುರಿದಿದೆ.

ಕಿವಿಯಲ್ಲಿ ರಿಂಗನ್ನು ಧರಿಸಿರುವುದನ್ನು ಸ್ವಲ್ಪ ಮಟ್ಟಿಗೆ ಕಾಣಬಹುದು. ಕಂಠಾಭರಣ, ಉತ್ತರೀಯ, ತೋಳ್ಬಂದಿ, ನೂಪುರ ಮತ್ತು ಮೇಖಲೆ ಇವನ್ನು ಸುಂದರವಾಗಿ ಬಿಡಿಸಿದೆ. ಉನ್ನತ ಸ್ತನಗಳು, ಬಳ್ಳಿ ಸುರುಳಿಗಳು, ಮಂಗ, ಕೊಳಲು ಊದುವ ವಾದ್ಯಗಾರರು, ನೃತ್ಯಗಾರರು ಮತ್ತು ಸಂಗೀತಗಾರರನ್ನು ಸೂಕ್ಷ್ಮವಾಗಿ ಬಿಡಿಸಲಾಗಿದೆ (ಛಾಯಾಚಿತ್ರ-2).



ಚಿತ್ರ 1. ಮದನಿಕಾ ವಿಗ್ರಹ



ಚಿತ್ರ 2. ಮದನಿಕಾ ವಿಗ್ರಹ

ಮದನಿಕೆಯರು ಮೂಗುತಿಯನ್ನು ಧರಿಸಿಲ್ಲ. ಮದನಿಕಾ ವಿಗ್ರಹಗಳು ಸುಮಾರು ಕ್ರಿ.ಶ. ಹನ್ನೆರಡನೆಯ ಶತಮಾನದವೆಂದು ಹೇಳಬಹುದು. ಸುಮಾರು 1966 ರಲ್ಲಿ ಈ ಮದನಿಕಾ ವಿಗ್ರಹಗಳು ತೆಲಸಂಗ್‌ನಲ್ಲಿರುವ ಸಿಕಂದರಾಬಾದ ದರ್ಗಾ ಹಿಂಭಾಗದಲ್ಲಿ ದೊರೆತಿರುವುದಾಗಿ ತಿಳಿದು ಬಂದಿತು.

ಶ್ರೀ ಬಿ. ಎ. ಕೆ. ಯವರು ಪ್ರಜಾವಾಣಿ 8-8-78 ರಲ್ಲಿ ಕಲಾರಂಗದಲ್ಲಿ "ಕರ್ನಾಟಕದ ಕಲೆಯ ಪರಂಪರೆ" ಎಂಬ ಶೀರ್ಷಿಕೆಯಲ್ಲಿ ಈ ಮದನಿಕೆಯರ ಬಗ್ಗೆ ಚೆನ್ನಾಗಿ ಬರೆದಿದ್ದಾರೆ. "ಇಲ್ಲಿ ಗಮನಿಸಬೇಕಾದ ಶಿಲ್ಪಗಳಲ್ಲಿ–ಬೆಳಗಾವಿ ಜಿಲ್ಲೆಯ ತೆಲಸಂಗ ಗ್ರಾಮದಲ್ಲಿದ್ದ ಸುಂದರ ಮದನಿಕಾ ಪ್ರತಿಮೆಗಳು. ಇವೂ ಬಳಪದ ಕಲ್ಲಿನವು. ಆದರೆ ಚಾಳುಕ್ಯರ ಕಾಲದವು.

ಬಳಪದ ಕಲ್ಲಿನಲ್ಲಿ ಮುದ್ದಾಗಿ ಕಡೆದ ಮಧುಸೂದನ ಮೂರ್ತಿ ತೆಲಸಂಗದ ಸರ್ವೆ ನಂ. 622, ಬಾಗಾಯಿತು ಭೂಮಿಯಲ್ಲಿ ಸುಮಾರು 1948 ರಲ್ಲಿ ದೊರೆತಿದ್ದು. ಶ್ರೀ ಶ್ರೀನಿವಾಸ ವಿಷ್ಣುಭಟ್ ಜೋಶಿಯವರು ಇದನ್ನು ಪೂಜಿಸುತ್ತಿದ್ದರು. ದಶಾವತಾರಗಳ ವಿಗ್ರಹಗಳನ್ನು ಪ್ರಭಾವಳಿಯಲ್ಲಿ ಸೂಕ್ಷ್ಮವಾಗಿ ಕಲಾತ್ಮಕವಾಗಿ ಬಿಡಿಸಿರುವುದನ್ನು ಕಾಣುತ್ತೇವೆ. ಮಧುಸೂದನನ ಬಲಗಾಲಿನ ಹತ್ತಿರ ಗರುಡನ ಮೂರ್ತಿ ಇದೆ. ಅಕ್ಕಪಕ್ಕಗಳಲ್ಲಿ ಚಾಮರ ಧಾರಿಣಿಗಳಿದ್ದಾರೆ. (ನಿಂತಿದ್ದಾರೆ). ಮೂರ್ತಿ ಬಳಪದ ಕಲ್ಲಿನಲ್ಲಿದ್ದು 1-20 ಮೀಟರ್ ಎತ್ತರ, 63 ಸೆಂ.ಮೀ. ಅಗಲವಿದೆ. ಮಧುಸೂದನನ ಉಗುರುಗಳನ್ನೂ ಸಹ ಮುದ್ದಾಗಿ ಬಿಡಿಸಲಾಗಿದೆ. ಇದರ ಕಾಲ ಸುಮಾರು 11–12ನೆಯ ಶತಮಾನ.

"ಪಂಚಾಚಾರ್ಯರ ಬಗೆಗಿನ ವಿವಾದಕ್ಕೆ ಅಂತಿಮ ತೆರೆ"– ಹೆಚ್ಚಿನ ನಿರ್ಣಾಯಕ ಆಧಾರಗಳು

ಡಾ|| ಎಂ. ಚಿದಾನಂದಮೂರ್ತಿ

"ಪಂಚಾಚಾರ್ಯರ ಬಗೆಗಿನ ವಿವಾದಕ್ಕೆ ಅಂತಿಮ ತೆರೆ" ಎಂಬ ಲೇಖನದಲ್ಲಿ (ಸಾಧನೆ, 18 : 3–4, ಪು. 88–111) ನಾನು ಪ್ರತಿಪಾದಿಸಿರುವ ವಿಷಯಕ್ಕೆ ಇನ್ನೂ ಹೆಚ್ಚಿನ ಸಮರ್ಥನೆಯು ಹನ್ನೆರಡನೆಯ ಶತಮಾನದ ವಚನಕಾರರಲ್ಲಿ ದೊರಕುವುದನ್ನು ಓದುಗರ ಗಮನಕ್ಕೆ ತರುವುದು ಈ ಪ್ರಬಂಧದ ಉದ್ದೇಶ. ಮೇಲಿನ ಲೇಖನದಲ್ಲಿಯೇ ಹಲವು ವಚನಕಾರರ ಸಾಕ್ಷ್ಯಾಧಾರಗಳನ್ನು ಒದಗಿಸಿದ್ದೇನೆ. ಅವರಲ್ಲದೆ ಇನ್ನೂ ಹಲವು ವಚನಕಾರರಲ್ಲಿ ದೊರಕುವ ನಿರ್ಣಾಯಕವೆಂದು ಕರೆಯಬಹುದಾದ ಆಧಾರಗಳು ಪಂಚಾಚಾರ್ಯರ ಸಮಸ್ಯೆಯನ್ನು ಅಂತಿಮವಾಗಿ ಪರಿಹರಿಸಿರುವ ವಿಷಯವನ್ನು ಇನ್ನೂ ಪ್ರಬಲವಾಗಿ ಪುಷ್ಟೀಕರಿಸುತ್ತವೆ. ವೀರಶೈವರ "ಗುರು" ಪರಂಪರೆಯ ಮಠಗಳಿಗೆ ಮೂಲರಾದ ಐವರು "ಪಂಚಾಚಾರ್ಯ"ರಲ್ಲಿ ಮೊದಲ ನಾಲ್ವರು (ರೇವಣಸಿದ್ಧ, ಪಂಡಿತಾರಾಧ್ಯ, ಮರುಳಾರಾಧ್ಯ ಮತ್ತು ಏಕೋರಾಮರಾಧ್ಯ) ವಚನಕಾರರ ಸಮಕಾಲೀನರೆಂದೂ ವಚನಕಾರರಂತೆ ಶಿವಭಕ್ತರೆಂದೂ, ರೇವಣಸಿದ್ಧರೂ ರೇಣುಕರೂ ಅಭಿನ್ನರೆಂದೂ, "ರೇಣುಕ" ಎಂಬುದು ರೇವಣಸಿದ್ಧರ ಕೈಲಾಸದ ಹೆಸರೆಂದೂ (ಈ ಲೋಕದ ಅಲ್ಲಮನ ಕೈಲಾಸದ ಹೆಸರು "ನಿರ್ಮಾಯ" ಇದ್ದ ಹಾಗೆ), ನಾನು ಮೇಲಿನ ಲೇಖನದಲ್ಲಿ ಪ್ರತಿಪಾದನೆ ಮಾಡಿದ್ದೇನೆ. "ಆದಿರೇಣುಕ" ಎಂಬ ಒಬ್ಬ ವ್ಯಕ್ತಿ ವಚನಕಾರರಿಗಿಂತ ಎಷ್ಟೋ ಶತಮಾನ ಹಿಂದೆ ಇದ್ದರೆಂದು ಅವರೇ ವೀರಶೈವ ಧರ್ಮ ಸ್ಥಾಪಕರೆಂಬುದಾಗಿ ಯಾರು ಏನೇ ವಾದ ಮಾಡಿದರೂ ಅವರ ವಾದವೆಲ್ಲ ಸಂಪೂರ್ಣವಾಗಿ ನಿರಾಧಾರವಾದುದೆಂಬುದನ್ನು ನಾನು ಹಿಂದಾಗಲೇ ತೋರಿಸಿಕೊಟ್ಟಿದ್ದೇನೆ. ಇದ್ದುದು ಒಬ್ಬರೇ ರೇಣುಕ–ಅವರಿದ್ದುದು ಕೈಲಾಸದಲ್ಲಿ ಇದ್ದುದು ಒಬ್ಬರೇ ರೇವಣಸಿದ್ಧ ಅಥವಾ ರೇವಣಾರಾಧ್ಯ–ಅವರಿದ್ದುದು ಈ ಲೋಕದಲ್ಲಿ ಶಿವಗಣಂಗಳಲ್ಲಿ ಒಬ್ಬನಾದ ರೇಣುಕ ಕೈಲಾಸದಿಂದ ಇಳಿದುಬಂದು ಮನುಷ್ಯನಾಗಿ ಅವತರಿಸಿದಾಗ ಅವನು ರೇವಣ (ಸಿದ್ಧ)ರೆಂದು ನಾಮಕರಣ ಹೊಂದಿದನು. ನಾವು ಐತಿಹಾಸಿಕತೆಯನ್ನು ಹುಡುಕಬೇಕಾದುದು ರೇವಣಸಿದ್ಧರ

ಬಗ್ಗೆ ಮಾತ್ರ.[1] ಇವರು (ರೇವಣಸಿದ್ಧರು) ಸಿದ್ಧರಾಮನ ಹಿರಿಯ ಸಮಕಾಲೀನರು ಇದು ಗಟ್ಟಿ ಸಂಗತಿ.

ರೇಣುಕರು (ಕೊಲ್ಲಿಪಾಕಿಯ) ಲಿಂಗದಿಂದ ಉದ್ಭವವಾಗಿ ಈ ಲೋಕದಲ್ಲಿ ರೇವಣಸಿದ್ಧರೆಂದು ಹೆಸರು ಪಡೆದು ಹಲವು ಪವಾಡಗಳನ್ನು ಮೆರೆದರೆಂದು ಹರಿಹರನು ತನ್ನ ಕೃತಿಯಲ್ಲಿ ಪ್ರತಿಪಾದನೆ ಮಾಡಿರುವನಷ್ಟೇ, ಅದು ಅವನ ಕಲ್ಪನೆ; ಅಥವಾ ಅಂತಹ ಕಲ್ಪನೆ ಅವನಿಗಿಂತ ಹಿಂದಿನ ವಚನಕಾರರಲ್ಲೇ ಪ್ರಚಲಿತವಾಗಿತ್ತು. ನಾಗಾಲಾಂಬಿಕೆಯ ವಚನವೊಂದು ಹೀಗಿದೆ.[2]

ಅಂಗದಿಂದುದಯವಾದಾತ ಮಡಿವಾಳಯ್ಯ
ಲಿಂಗದಿಂದುದಯವಾದಾತ ರೇವಣಸಿದ್ಧಯ್ಯ
ಭಸ್ಮದಿಂದುದಯವಾದಾತ ಸಿದ್ಧರಾಮಯ್ಯ
ಪಾದೋದಕದಿಂದ ಉದಯವಾದವಳು ಅಕ್ಕಮಹಾದೇವಿ
ಮಂತ್ರದಿಂದುದಯವಾದಾತ ನಿಮ್ಮ ಸೋದರಮಾವ ಬಸವಯ್ಯ
ಪ್ರಸಾದದಿಂದುದಯವಾದಾತ ನೀನಲ್ಲವೆ ಚೆನ್ನಬಸವಯ್ಯ
ಬಸವಣ್ಣ ಪ್ರಿಯ ಚೆನ್ನಸಂಗಯ್ಯ.

ಮೇಲಿನ ವಚನದ ಪ್ರಕಾರ ಮಡಿವಾಳ ಮಾಚಿದೇವನು "ಅಂಗ"ದಿಂದ, ರೇವಣಸಿದ್ಧನು "ಲಿಂಗ"ದಿಂದ, ಸಿದ್ಧರಾಮನು "ಭಸ್ಮ"ದಿಂದ, ಅಕ್ಕಮಹಾದೇವಿ "ಪಾದೋದಕ"ದಿಂದ, ಬಸವಣ್ಣ "ಮಂತ್ರ"ದಿಂದ, ಚೆನ್ನಬಸವಣ್ಣ "ಪ್ರಸಾದ"ದಿಂದ ಜನಿಸಿದರು. ಈ ಮಾತುಗಳ ಸಾಂಕೇತಿಕತೆಯೇನು ಎಂಬುದು ಮುಖ್ಯವಾದರೂ ಸದ್ಯಕ್ಕೆ ಅದು ಅಪ್ರಸ್ತುತ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಸಿದ್ಧರಾಮ ಬಸವಣ್ಣ ಮಹಾದೇವಿಯಕ್ಕನವರ ತಂದೆ ತಾಯಿಗಳ ಹೆಸರು ನಮಗೆ ತಿಳಿದಿದೆ. ಮಡಿವಾಳ ಮಾಚಿದೇವನ ತಂದೆ ತಾಯಿಗಳ ಹೆಸರನ್ನು ಇತಿಹಾಸ ಉಳಿಸಿಕೊಂಡು ಬಾರದಿದ್ದರೂ ಅವನೂ ಎಲ್ಲರಂತೆಯೇ ಜನಿಸಿದವನು. ಚೆನ್ನಬಸವಣ್ಣನ ತಾಯಿ, ಬಸವಣ್ಣನ ತಂಗಿ ನಾಗಲಾಂಬಿಕೆ ಅಥವಾ ಅಕ್ಕನಾಗಮ್ಮ.[3] ಅವಳೇ ಮೇಲಿನ ವಚನದ

---

1 "ರೇಣುಕ"ರು ಐತಿಹಾಸಿಕ ವ್ಯಕ್ತಿಯೆಂದು ತೋರಿಸಬೇಕಾದರೆ, ದಾರುಕ, ಧೇನುಕ(ರ್ಣ), ಶಂಕುಕ(ರ್ಣ) ಇವರೂ ಐತಿಹಾಸಿಕ ವ್ಯಕ್ತಿಗಳೆಂದು ತೋರಿಸಬೇಕಾಗುತ್ತದೆ. ಏಕೆಂದರೆ, ಕತೆಗಳ ಪ್ರಕಾರ ರೇಣುಕ, ದಾರುಕ, ಧೇನುಕ, ಶಂಕುಕರು ಈಶ್ವರನ ಅನುಜ್ಞೆಯ ಮೇರೆಗೆ ಅವತರಿಸಿ ರೇವಣ, ಮರುಳಸಿದ್ಧ, ಪಂಡಿತಾರಾಧ್ಯ, ಏಕೋರಾಮರಾಗಿ ಜನಿಸಿ ಧರ್ಮವನ್ನು ಉದ್ಧರಿಸಿದರು. ರೇಣುಕರು ಐತಿಹಾಸಿಕ ವ್ಯಕ್ತಿಯಾದರೆ ದಾರುಕ, ಧೇನುಕ, ಶಂಕುಕರೂ ಐತಿಹಾಸಿಕ ವ್ಯಕ್ತಿಗಳಾಗಬೇಕಾಗುತ್ತದೆ. ಇದು ಸಂಪೂರ್ಣವಾಗಿ ಅಸಾಧ್ಯ.

2 ಶಿವಶರಣೆಯರ ವಚನ ಸಂಪುಟ (ಸಂ. ವೀರಣ್ಣ ರಾಜೂರ), ಬೆಂಗಳೂರು- 1993, ಪು. 230.

3 ಇವಳು ಬಸವಣ್ಣನ "ಅನುಜೆ" ಎಂದು ಹಿಂದಿನ ಕೃತಿಗಳಲ್ಲಿ ಸ್ಪಷ್ಟವಾಗಿ ಹೇಳಿದೆ. ಅವಳ "ಅಕ್ಕ" ಎಂಬ ವಿಶೇಷಣವು ಅವಳು ಬಸವಣ್ಣನ ಅಕ್ಕ ಎಂಬ ತಪ್ಪು ಕಲ್ಪನೆಗೆ ದಾರಿ ಮಾಡಿ ಕೊಟ್ಟಿದೆ. "ಅಕ್ಕ" ಮಹಾದೇವಿ ಯಾರ ಅಕ್ಕನೂ ಅಲ್ಲ ತಾನೇ ! "ಅಕ್ಕ" ಮಾತು ಅಂದಿನ ಸಮಾಜ ಆ ಶರಣೆಯರನ್ನು ಪ್ರೀತಿ ಗೌರವಗಳಿಂದ ಕರೆದುದರ ಸಂಕೇತ ಅಷ್ಟೇ.

ಕರ್ತೃ ; ಚನ್ನಬಸವಣ್ಣನ ತಂದೆಯ ಹೆಸರು ನಮಗೆ ತಿಳಿಯದು, (ಅವನು ಡೋಹರ ಕಕ್ಕಯ್ಯ ನಿಶ್ಚಿತವಾಗಿಯೂ ಅಲ್ಲ ; ಬಹುಶಃ ಶಿವಸ್ವಾಮಿಯೂ ಅಲ್ಲ). ಈ ಎಲ್ಲ ಶರಣ ಶರಣೆಯರಂತೆ ರೇವಣಸಿದ್ಧರೂ ಕೂಡ ಸಹಜವಾಗಿ ತಮ್ಮ ತಂದೆ ತಾಯಿಗಳಿಂದ ಜನಿಸಿದವರೇ, ಮೇಲೆ ಹೇಳಿರುವ ವಚನದಲ್ಲಿ ಭಸ್ಮ, ಪಾದೋದಕ, ಮಂತ್ರ, ಪ್ರಸಾದಗಳಿಂದ ಉಳಿದವರು ಹುಟ್ಟಿದ್ದು ಹೇಗೆ ಅಸಾಧ್ಯವೋ ರೇವಣ ಸಿದ್ಧರೂ ಲಿಂಗದಿಂದ ಹುಟ್ಟಿರುವುದೂ ಅಷ್ಟೇ ಅಸಾಧ್ಯ, ರೇವಣಸಿದ್ಧರ ತಂದೆ ತಾಯಿ ಯಾರೋ ತಿಳಿಯದು — ಅವರು ಲಿಂಗೋದ್ಭವರೆಂಬ ಕತೆ ಹುಟ್ಟಿ ಮುಂದೆ ಅದೇ ಪ್ರಬಲವಾಯಿತು. ಕಾವ್ಯ, ಪುರಾಣಗಳು ಆ ನಂಬಿಕೆಯನ್ನು ಬಲವಾಗಿ ಬೇರೂರಿ ಸಿದುವು. ಆದರೆ ನಾಗಲಾಂಬಿಕೆಯ ವಚನವು ರೇವಣಸಿದ್ಧರು ಒಬ್ಬ ಮನುಷ್ಯನೆಂಬ, ಒಬ್ಬ ಐತಿಹಾಸಿಕ ವ್ಯಕ್ತಿ ಎಂಬ ವಾಸ್ತವಕ್ಕೆ ಒಂದು ಸಮಕಾಲೀನವಾದ ವಿವಾದಾತೀತ ಸಾಕ್ಷಿ. ಚನ್ನಬಸವಣ್ಣ "ಪ್ರಸಾದ"ದಿಂದ ಜನಿಸಿದವನು ಎಂಬ ಕತೆಗಳು ಪುರಾಣಗಳಲ್ಲಿ ಬಂದಿದ್ದರೂ ಅವನು ನಿಜವಾಗಿಯೂ ಪ್ರಸಾದದಿಂದ ಜನಿಸಿದವನು, ಎಂದು ಆಧುನಿಕರು ಯಾರೂ ನಂಬಿಲ್ಲ. ಅವನೊಬ್ಬ ಎಲ್ಲರಂತಹ ವ್ಯಕ್ತಿಯೇ. ಆದರೆ ರೇವಣಸಿದ್ಧರ (ರೇಣುಕರ) ಬಗ್ಗೆ ಮಾತ್ರ ಅವರೊಬ್ಬ ಲಿಂಗೋದ್ಭವರು ಎಂಬ ಕಲ್ಪನೆಯೇ ಪ್ರಧಾನ ವಾಗಿ ಅವರ ಐತಿಹಾಸಿಕತೆಯನ್ನು ಮರೆಮಾಡುವಷ್ಟು ಬೆಳೆದು ಅವರಿಗೆ ಒಂದು ಬಗೆಯ ಅನ್ಯಾಯವೂ ಆಗಿದೆ. ಅವರ ಹುಟ್ಟಿನ ಬಗ್ಗೆ ಇರುವ ಕತೆ ಮತ್ತು ಅವರು ಮಾಡಿದ ರೆಂದು ನಂಬಲಾದ ಪವಾಡಗಳೇ ಮುಂದಾದುದರಿಂದ, ಅವರು ರೈತರಿಗೆ ಕೆರೆ ಕಟ್ಟಿಸಿ ಕೊಟ್ಟು, ಹಲವು ದೀನರಿಗೆ ಉಪಕಾರಗಳನ್ನು ಮಾಡಿ ತಮ್ಮನ್ನು ತಾವು ಹಲವು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು ಎಂಬ ಹರಿಹರನ ನಿರೂಪಣೆಯತ್ತ ಗಮನ ಹರಿಸಲು ಅಡ್ಡಿಯಾಗಿದೆ. ಆಧುನಿಕ ದೃಷ್ಟಿಗೆ ವಚನಕಾರರು ಪ್ರಿಯರಾದಂತೆ ರೇವಣಸಿದ್ಧರು ಮಾನ್ಯರಾಗಿಲ್ಲ. ಇದಕ್ಕೆ ಕಾರಣ, ಅವರ ಅಭಿಮಾನಿಗಳಾದ ಜನ ಅವರನ್ನು ಪವಾಡಗಳ ಮುಸುಕಿನಲ್ಲೇ ಇಟ್ಟು ಮೆರೆಸುತ್ತಿರುವುದು ; ಮತ್ತು ಇತಿಹಾಸದ ಮನೋಭಾವ ಬೆಳೆಸಿಕೊಂಡಿರದ ವ್ಯಕ್ತಿಗಳು ವಾಸ್ತವವಾಗಿ ಇಲ್ಲದ "ರೇಣುಕ"ರನ್ನು ಐತಿಹಾಸಿಕ ವ್ಯಕ್ತಿಯೆಂಬಂತೆ ಚಿತ್ರಿಸಲು ಹೊರಟು ಸೋತಿರುವುದು.

ಈ ಹಿನ್ನೆಲೆಯಲ್ಲಿ ಪ್ರಸಾದಿ ಭೋಗಣ್ಣನ ವಚನವೊಂದು ಉಲ್ಲೇಖಾರ್ಹವಾಗಿದೆ.[4]

> ಶ್ರೀಪತಿ ಶಿವಲೆಂಕ ಪಂಡಿತಾರಾಧ್ಯ ಏಕಾಂತದ ರಾಮ
> ಇಂತೀ ಪ್ರಥಮದ ಆಚಾರ್ಯರು ಇಟ್ಟ ಮತಂಗಳಿಂದ
> ಗುರುಸ್ಥಲ ಲಿಂಗಸ್ಥಲ ಉಭಯಮಾರ್ಗ ಆಚಾರ್ಯಸ್ಥಲ
> ಷಡುಸ್ಥಲ ಒಳಗಾದ ನಾನಾ ಸ್ಥಲಜ್ಞರುಗಳಲ್ಲಿ ವರಪ್ರಸಾದಿ ಚನ್ನಬಸವಣ್ಣ
> ಅವರ ಕಾರುಣ್ಯ ಪ್ರಸಾದ ಎನಗಾಯಿತ್ತು
> ಸಂಚಿತ ಪ್ರಾರಬ್ಧ ಆಗಾಮಿಗಳಲ್ಲಿ ಉಪಚಕ್ಕು ನೀನಾಗಿ ಸಲಹಿದೆಯಲ್ಲಾ,
> ಚನ್ನಬಸವಣ್ಣ ಪ್ರಿಯ ಭೋಗ ಮಲ್ಲಿಕಾರ್ಜುನ ಲಿಂಗವಲ್ಲಿ.

---

4. ಸಂಕೀರ್ಣ ವಚನ ಸಂಪುಟ III (ಸಂ : ಬಿ. ಆರ್. ಹಿರೇಮಠ), ಬೆಂಗಳೂರು 1993. ಪು. 42.

ಮೇಲೆ "ಪ್ರಥಮದ ಆಚಾರ್ಯರು" ಎಂದು ನಿರ್ದೇಶಿಸಿರುವ ನಾಲ್ವರಲ್ಲಿ ಪಂಡಿತಾರಾಧ್ಯರು ನಿಶ್ಚಿತವಾಗಿಯೂ ಮಲ್ಲಿಕಾರ್ಜುನ ಪಂಡಿತಾರಾಧ್ಯರು–ಬಸವಣ್ಣನವರ ಸಮಕಾಲೀನರು. ಇವರು ಪಂಚಾಚಾರ್ಯರಲ್ಲಿ ಒಬ್ಬರು. ಏಕಾಂತದ ರಾಮ ಬಹುಶಃ ಏಕೋರಾಮರಾಧ್ಯ. ಇವರೂ ಪಂಚಾಚಾರ್ಯರಲ್ಲಿ ಒಬ್ಬರು. ಏಕಾಂತದ ರಾಮಯ್ಯನು ಒಬ್ಬ ವಚನಕಾರ ಮತ್ತು ಬಸವಣ್ಣನ ಸಮಕಾಲೀನ, ಶ್ರೀಪತಿಯು ಬಹುಶಃ ಬೆಜವಾಡದಲ್ಲಿ ಬೆಂಕಿ ಪವಾಡವನ್ನು ಮೆರೆದನೆಂದು ಹೇಳಲಾದ ಶ್ರೀಪತಿ ಪಂಡಿತಾರಾಧ್ಯ ; ಈ ಪವಾಡವನ್ನು ಕ್ರಿ.ಶ. 1185 ರಲ್ಲಿ ನಿಧನರಾದ ಮಲ್ಲಿಕಾರ್ಜುನ ಪಂಡಿತಾರಾಧ್ಯರು ತಮ್ಮ "ಶಿವತತ್ವಸಾರಮು" ಎಂಬ ತೆಲುಗು ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಶ್ರೀಪತಿ ಪಂಡಿತನೂ ಬಸವಣ್ಣನ ಸಮಕಾಲೀನನೇ. ('ಶ್ರೀಕರಭಾಷ್ಯ'ದ ಶ್ರೀಪತಿ ಪಂಡಿತ ಬೇರೆ); ಶಿವಲೆಂಕನು ಮಂಚಣ್ಣ ನಿಶ್ಚಿತವಾಗಿಯೂ ಶಿವಲೆಂಕ ಮಂಚಣ್ಣ. ಈತ ಪಂಡಿತ ತ್ರಯರಲ್ಲಿ ಒಬ್ಬ ಮತ್ತು ಸ್ವತಃ ವಚನಕಾರ ಇವನು ವಚನಕಾರ ಉರಿಲಿಂಗದೇವನ ತಂದೆಯೂ ಹೌದು. ಹೀಗೆ ಈ ಎಲ್ಲ "ಪ್ರಥಮದ ಆಚಾರ್ಯ"ರೂ ಬಸವಣ್ಣನ ಸಮಕಾಲೀನರೇ ಆಗುತ್ತಾರೆ. ಶಿವಶರಣರ ಕಾಲದಲ್ಲೇ ಇವರನ್ನು "ಪ್ರಥಮದ ಆಚಾರ್ಯರು" ಎಂದು ಭಾವಿಸಲಾಗಿತ್ತು" ಕೊನೆಯ ಪಕ್ಷ ಪ್ರಸಾದಿ ಭೋಗಣ್ಣ ಹಾಗೆ ಭಾವಿಸಿದ್ದನು. "ಪ್ರಥಮದ ಆಚಾರ್ಯ"ರೆಂದರೆ ಆದ್ಯರು, ಪೂಜನೀಯರಾದ ಶಿವಭಕ್ತರು ಎಂದೇ ಅರ್ಥ, ವಚನಕಾರರ ಕಾಲದಲ್ಲಿ ಅವರ (ಹಿರಿಯ, ಕಿರಿಯ) ಸಮಕಾಲೀನರಾಗಿದ್ದ ಶ್ರೀಪತಿ ಪಂಡಿತ, ಶಿವಲೆಂಕ ಮಂಚಣ್ಣ, ಮಲ್ಲಿಕಾರ್ಜುನ ಪಂಡಿತಾರಾಧ್ಯ, ಏಕಾಂತದ ರಾಮಯ್ಯ (ಏಕೋರಾಮಾರಾಧ್ಯ), ರೇವಣಸಿದ್ಧ (ರೇವಣಾರಾಧ್ಯ). ಮರುಳಾರಾಧ್ಯ ಇವರಲ್ಲಿ ನಾಲ್ವರು ಮುಂದೆ "ಪಂಚಾಚಾರ್ಯ"ರಲ್ಲಿ ಮೊದಲ ನಾಲ್ವರೆಂದು ವಿಶೇಷ ಸ್ಥಾನವನ್ನು ಪಡೆದುಕೊಂಡರು. ಅವರೇ ಏಕೆ, ಎಂದು ಪಂಚಾಚಾರ್ಯರಲ್ಲಿ ಪರಿಗಣಿತರಾದರು ಎಂಬುದು ಹೆಚ್ಚಿನ ವಿಚಾರಕ್ಕೆ ಅರ್ಹವಾದುದು. ಪಂಚಾಚಾರ್ಯರೆಂದು ವೀರಶೈವ ಪರಂಪರೆ ಗುರುತಿಸುವ ಯಾರೂ ವಚನಕಾರರಿಗಿಂತ ಹಿಂದಿನವರಲ್ಲ, ಹಲವು ವಚನಕಾರರು ಅವರನ್ನು (ಕೊನೆಯ ಐದನೆಯವರನ್ನು

---

5. ಇವರಿಗೆ ಬಸವಣ್ಣನಲ್ಲಿ ಅಪರಿಮಿತ ಅಭಿಮಾನ. ಇವರು ಬಸವಣ್ಣನನ್ನು ಕಾಣಲು ಆಂಧ್ರದ ತಮ್ಮ ಊರಿಂದ ಹೊರಟು ಕಲ್ಯಾಣಾಭಿಮುಖವಾಗಿ ಬರುತ್ತ, ದಾರಿಯಲ್ಲಿ ಶ್ರೀಶೈಲದ ಸಮೀಪದಲ್ಲಿ ಬೀಡು ಬಿಟ್ಟಿರುವಾಗ ಬಸವಣ್ಣ ಲಿಂಗೈಕ್ಯರಾದರು ಎಂಬುದನ್ನು ಕೇಳಿ, ಅಲ್ಲೇ ಉಳಿದುಬಿಟ್ಟರು ಮತ್ತು ಸ್ವಲ್ಪ ಕಾಲದಲ್ಲೇ ಅವರೂ ಲಿಂಗೈಕ್ಯರಾದರು. ಮಲ್ಲಿಕಾರ್ಜುನ ಪಂಡಿತಾರಾಧ್ಯರ "ಶಿವತತ್ವ ಸಾರಮು" ತೆಲುಗು ಕೃತಿ ಲಭ್ಯವಿದೆ.

6. ವಚನಗಳಲ್ಲಿ ಬರುವ ಆದ್ಯರೆಂದರೆ ಪ್ರಾಚೀನ ಕಾಲದವರೆಂದು ಅರ್ಥವಲ್ಲ - ಮೊದಲ ಸ್ಥಾನಕ್ಕೆ ಅರ್ಹರು, ಪೂಜ್ಯರು ಎಂದು ಅರ್ಥ. "ಆದ್ಯ"ರು ಸಮಕಾಲೀನ ಶಿವಶರಣರನ್ನು ಸೂಚಿಸುತ್ತದೆ.

ಹೊರತುಪಡಿಸಿ) ಸಮಕಾಲೀನ ಶಿವಭಕ್ತರ ಜೊತೆ ಸ್ಮರಿಸಿ ಗೌರವದಿಂದ ಕಂಡಿದ್ದಾರೆ. ಬಸವ, ಅಲ್ಲಮ, ಸಿದ್ಧರಾಮ ಅಜಗಣ್ಣ ಮಡಿವಾಳ ಮಾಚಯ್ಯರಂತೆ ಅವರೂ ಶಿವಭಕ್ತರು, ಶಿವಶರಣರು, ಅನುಭಾವಿಗಳು. ಎಲ್ಲರೂ ಒಂದೇ ಕಾಲದವರು : ಇದು ಒಂದು ನಿಶ್ಚಿತ ಸಂಗತಿ.

"ರೇಣುಕ" ಕೈಲಾಸದ ಶಿವಗಣಗಳಲ್ಲಿ ಒಬ್ಬ ಎಂಬುದು ವಚನಕಾರರಿಂದಲೂ ಸಮರ್ಥನೆಗೊಳ್ಳುತ್ತದೆಯೆಂಬುದು ವಿಶೇಷ ಗಮನಾರ್ಹ. ಮಡಿವಾಳ ಮಾಚಿದೇವರ ಒಂದು ವಚನ ಹೀಗಿದೆ[7]–

ಇಂದ್ರ ಲೋಕದವರೆಲ್ಲರೂ ಸೂತಕಲಾ ಸಂಹಾರಿ ಬಸವಾ ಎಂದೆಂಬರು
ಚಂದ್ರ ಲೋಕದವರೆಲ್ಲರೂ ಷೋಡಶಕಲಾ ಪರಿಪೂರ್ಣ ಬಸವಾ ಎಂದೆಂಬರು
ಯುಗಕೋಟಿ ಬ್ರಹ್ಮರೆಲ್ಲರೂ ಪರಶಿವ ಬಸವಾ ಎಂದೆಂಬರು
ಹರಿ ವಿರಂಚಿಗಳೆಲ್ಲರೂ ಗುರುಲಿಂಗ ಬಸವಾ ಎಂದೆಂಬರು
ಅಷ್ಟದಿಕ್ಪಾಲರೆಲ್ಲರೂ ಪರಶಿವ ಬಸವಾ ಎಂದೆಂಬರು
ಸುರಪಡೆಯೆಲ್ಲಾ ಅಮೃತ ಸಾಗರ ಬಸವಾ ಎಂದೆಂಬರು
ನವನಾಥ ಸಿದ್ಧರೆಲ್ಲರೂ ಪರಮಸ್ಫಟಿಕ ಬಸವಾ ಎಂದೆಂಬರು
ಲಂಬೋದರ ಕುಂಭೋದರ ದಾರುಕ ರೇಣುಕ ಗೌರೀಸುತ
ತಾಂಡವರೆಲ್ಲರೂ ಸಕಲ ಜೀವ ಚೈತನ್ಯ ಮಾತ್ರ ಬಸವಾ ಎಂದೆಂಬರು
ಓತವರೆಲ್ಲರೂ ಮಾತಾಪಿತ ಬಸವಾ ಎಂದೆಂಬರು
ಒಲಿದವರೆಲ್ಲರೂ ಪ್ರಾಣಪರಿಣಾಮಿ ಬಸವಾ ಎಂದೆಂಬರು
ಆನೇನೆಂಬೆನು ಉಪಮಿಸಬಾರದ ಮಹಾಘನ ಮಹಿಮನ
ಕಲಿದೇವಾ ನಿಮ್ಮ ಶರಣ ಬಸವಣ್ಣ ಇಂತಹ ಮಹಿಮ ನೋಡಯ್ಯಾ.

ಇಲ್ಲಿ ದಾರುಕ ರೇಣುಕರನ್ನು ಗಣಪತಿ, ಬ್ರಹ್ಮ, ವಿಷ್ಣುಗಳ ಜೊತೆ ದೇವಾನು ದೇವತೆಗಳ ಜೊತೆ ಸೇರಿಸಿ ಹೇಳಿರುವುದು ಗಮನಾರ್ಹ. ದಾರುಕನೇ ಈ ಲೋಕದಲ್ಲಿ ಮರುಳಾರಾಧ್ಯರಾಗಿ ಜನಿಸಿದನೆಂದು ಕಲ್ಪನೆಯಿರುವುದರಿಂದ ಮೇಲಿನ ರೇಣುಕನೂ ರೇವಣಸಿದ್ಧರ ಕೈಲಾಸದ ಹೆಸರಾದ ರೇಣುಕನೂ ನಿಶ್ಚಿತವಾಗಿಯೂ ಅಭಿನ್ನರು– ರೇಣುಕನು ಶಿವನ ಗಣಗಳಲ್ಲಿ ಒಬ್ಬನೆಂಬುದರಲ್ಲಿ ಅನುಮಾನವಿಲ್ಲ. ಬ್ರಹ್ಮ, ವಿಷ್ಣು, ದೇವಾನುದೇವತೆಗಳ ಜೊತೆ ಕೈಲಾಸದ ಗಣಪತಿ, ದಾರುಕ, ರೇಣುಕರೂ ಸೇರಿ

---

7. ಸಂಕೀರ್ಣ ವಚನ ಸಂಪುಟ III (ಸಂ. ಬಿ. ಆರ್. ಹಿರೇಮಠ), ಬೆಂಗಳೂರು. 1993 ಪು. 196. ಮತ್ತು ಮಡಿವಾಳ ಮಾಚಿದೇವರ ವಚನಗಳು, (ಸಂ) ಚೆನ್ನಕ್ಕ ಎಲಿಗಾರ, ಡಂಬಳ-ಗದಗ, 1987. ಪು. 25. ಹೆಚ್ಚು ಕಡಿಮೆ ಅದೇ ಅರ್ಥದ ಮಡಿವಾಳ ಮಾಚಿದೇವನ ಇನ್ನೊಂದು ವಚನವೂ ಇದೆ (ಪು. 195).

ಬಸವನನ್ನು ಗೌರವದಿಂದ ಸ್ಮರಿಸುತ್ತಾರೆ. ಎಂಬ ಮಾತು ಮಡಿವಾಳ ಮಾಚಿದೇವನು ಬಸವನ ಬಗ್ಗೆ ಇಟ್ಟಿದ್ದ ಗೌರವ ಶ್ರದ್ಧೆಗಳ ಪ್ರತೀಕ. ರೇಣುಕ ಮೊದಲಾದ ಕೈಲಾಸದವರಲ್ಲದೆ ಈ ಲೋಕದ ಸಮಕಾಲೀನ ಜನರೂ ಬಸವನನ್ನು ಗೌರವಿಸುತ್ತಿದ್ದರು ತಮ್ಮ ತಂದೆ ತಾಯಿ ಎಂದೇ ಭಾವಿಸುತ್ತಿದ್ದರು ಎಂಬ ಮಾಚಿದೇವನ ಮಾತು ಅಂದಿನ ಕಾಲದ ಬಸವನ ಬಗ್ಗೆ ಜನ ಇಟ್ಟಿದ್ದ ಆತ್ಮೀಯ ಭಾವನೆಯನ್ನು ಹೇಳುತ್ತವೆ. ವೀರಶೈವರಲ್ಲಿ ವಿರಕ್ತ ಪರಂಪರೆಯವರಾಗಲಿ ಗುರು ಪರಂಪರೆಯವರಾಗಲಿ ಯಾರು ಯಾರನ್ನು ಧಾರ್ಮಿಕ ಚರಿತ್ರೆಯಲ್ಲಿ ಗೌರವ ಪೂಜ್ಯ ಭಾವನೆಗಳಿಂದ ನೋಡುತ್ತ ಬಂದಿರುವರೋ ಅವರೆಲ್ಲರೂ ಸ್ಥೂಲವಾಗಿ ಹನ್ನೆರಡನೆಯ ಶತಮಾನಕ್ಕೆ ಸೇರಿದವರು. ಅಂದ್ರದ "ವೀರಶೈವ" ಧಾರ್ಮಿಕ ನಾಯಕರೂ ಅದೇ ಕಾಲದವರು. ಬಸವ, ಅಲ್ಲಮ, ಜೇಡರ ದಾಸಿಮಯ್ಯ, ದೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ, ರೇವಣ ಸಿದ್ಧ (ರೇಣುಕ)[8], ಮರುಳಾರಾಧ್ಯ, ಶ್ರೀಪತಿ ಪಂಡಿತ, ಪಂಡಿತಾರಾಧ್ಯ, ಶಿವಲೆಂಕ ಮಂಚಣ್ಣ, ಅಜಗಣ್ಣ ಇವರೆಲ್ಲ ಸಮಕಾಲೀನರು ಕೆಲವರು ಹಿರಿಯರಿರಬಹುದು ಹನ್ನೊಂದನೇ ಶತಮಾನದ ಕೊನೆಯಲ್ಲಿದ್ದು ಹನ್ನೆರಡನೆಯ ಶತಮಾನದಲ್ಲೂ ಬದುಕಿದವರಿರಬಹುದು.

ಐವರು ಆಚಾರ್ಯರಲ್ಲಿ ವಿಶ್ವೇಶ್ವರಾರಾಧ್ಯರು ಈಚೆಗೆ ಸೇರ್ಪಡೆಯಾದವರು ಇವರೂ ಹದಿನಾಲ್ಕು ಅಥವಾ ಹದಿನೈದನೆಯ ಶತಮಾನಕ್ಕೆ ಸೇರಿದ ಒಬ್ಬ ಐತಿಹಾಸಿಕ

8. ಸು. 1450ರ ಬೊಮ್ಮರಸನ ಪ್ರಕಾರ "ಮಠ ಚತುಷ್ಟಯ"ದ ಚರಲಿಂಗ ಮೂರ್ತಿಗಳೆಂದರೆ(ಜಂಗಮರು)ರೇವಣಸಿದ್ಧ, ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯರು. (ಆರ್. ನರಸಿಂಹಾಚಾರ್ಯ : ಕರ್ಣಾಟಕ ಕವಿಚರಿತೆ II, ಬೆಂಗಳೂರು, 1973, ಪು. 49). ಸು. 1430 ರಲ್ಲಿದ್ದ ಜಕ್ಕಣಾರ್ಯನ ಪ್ರಕಾರ, ವೀರಶೈವರ ನೂರೊಂದು ಸ್ಥಲದ ವಿಷಯವನ್ನು ಕಾಮಿಕಾಗಮದಲ್ಲಿ ಹೇಳಿದೆ. ಅದನ್ನು ಎಂದರೆ ಕಾಮಿಕಾಗಮದ ನೂರೊಂದು ಸ್ಥಲದ ಶಾಸ್ತ್ರವನ್ನು ರೇವಣಸಿದ್ಧೇಶ್ವರನು ಅಗಸ್ತ್ಯಂಗೆ ಬೋಧಿಸಿದನು "ಈ ಶಾಸ್ತ್ರವು ಕಾಮಿಕಾಗಮದಲ್ಲಿ ಹೇಳಿದೆ. ಅದಂ ರೇವಣಸಿದ್ಧೇಶ್ವರನು ಅಗಸ್ತ್ಯಂಗೆ ಬೋಧಿಸಿದಂ". (ಅದೇ. ಪು. 17). "ಸಿದ್ಧಾಂತ ಶಿಖಾಮಣಿ"ಯನ್ನೂ ಅದರಲ್ಲಿ ನೂರೊಂದು ಸ್ಥಲಗಳ ವಿವರಣೆಯೂ ಇದೆ-ರೇಣುಕರು ಅಗಸ್ತ್ಯನಿಗೆ ಬೋಧಿಸಿದಂತೆ ಅದರಲ್ಲಿ ಹೇಳಿದೆ. ರೇಣುಕರೂ ರೇವಣಸಿದ್ಧೇಶ್ವರರೂ ಅಭಿನ್ನರೆಂಬುದಕ್ಕೆ ಬೇರೆ ಸಾಕ್ಷಿ ಬೇಕೆ ? "ಸಿದ್ಧಾಂತ ಶಿಖಾಮಣಿ"ಯಲ್ಲೇ ರೇಣುಕರನ್ನು ರೇವಣ ಎಂದು ಕರೆದಿರುವುದನ್ನು ನಾನೀಗಾಗಲೇ ತೋರಿಸಿಕೊಟ್ಟಿದ್ದೇನೆ. (ಸಾಧನೆ. 18 : 3-4). ಬೊಮ್ಮರಸನು ರೇವಣಸಿದ್ಧ ಮೊದಲಾದವರು ನಾಲ್ಕು ಮಠಗಳ ಒಡೆಯರೆಂದು ಹೇಳಿರುವುದು ಗಮನಿಸಬೇಕಾದ ಸಂಗತಿ. ಚಿಕ್ಕಮಗಳೂರು ಜಿಲ್ಲೆಯ ಬಾಳೆಹಳ್ಳಿ (ರಂಭಾಪುರಿ), ಬಳ್ಳಾರಿ ಜಿಲ್ಲೆಯ ಉಜ್ಜಯಿನಿ ಉತ್ತರ ಪ್ರದೇಶದ ಹಿಮವತ್ ಕೇದಾರ ಮತ್ತು ಆಂಧ್ರದ ಶ್ರೀಶೈಲಗಳೇ ಆ ನಾಲ್ಕು "ಮಠಗಳು". 'ಪಂಚಾಚಾರ್ಯ'ರಲ್ಲಿ ಐದನೆಯವರಾದ ವಿಶ್ವಾರಾಧ್ಯರ ಮಠವು ವಾರಣಾಸಿಯಲ್ಲಿದೆ.

ಪುರುಷರಾಗಿರಬಹುದು; ಇವರನ್ನು ಇತಿಹಾಸದಲ್ಲಿ ಗುರುತಿಸುವ ಕೆಲಸವಿನ್ನೂ ಆಗಬೇಕಾಗಿದೆ. ಉಳಿದ ನಾಲ್ವರಲ್ಲಿ ರೇವಣಸಿದ್ಧರು (ರೇಣುಕ) ಒಬ್ಬ ಐತಿಹಾಸಿಕ ವ್ಯಕ್ತಿ. ಸಿದ್ಧರಾಮನು ತಾಯಿಗರ್ಭದಲ್ಲಿರುವಾಗಲೇ ಆ ತಾಯ ಗರ್ಭದಿಂದ ಒಬ್ಬ ಮಹಾತ್ಮನು ಮೂಡಿ ಬರುತ್ತಾನೆಂದು ಭವಿಷ್ಯ ಹೇಳಿದ ಮಹಾತ್ಮರು. ಆತನ ಮಗ ರುದ್ರಮುನಿ ಚನ್ನಬಸವಣ್ಣನ ಶಿಷ್ಯ. ಪಂಡಿತಾರಾಧ್ಯರು ಆಂಧ್ರದ ಮಲ್ಲಿಕಾರ್ಜುನ ಪಂಡಿತಾರಾಧ್ಯರು–ಇವರು ಬಸವನನ್ನು ದರ್ಶನ ಮಾಡಬೇಕೆಂದು ಹೊರಟು ಬಸವಣ್ಣ ಶಿವೈಕ್ಯರಾದರೆಂದು ತಿಳಿದು ಕಲ್ಯಾಣಕ್ಕೆ ಬರದೆ ಕ್ರಿ.ಶ. 1185ರಲ್ಲಿ ಶ್ರೀಶೈಲದ ಸಮೀಪ ನಿಧನರಾದರೆಂಬುದನ್ನು ಆಗಲೇ ನೋಡಿದ್ದೇವೆ. ಏಕೋರಾಮಾರಾಧ್ಯರು ಏಕಾಂತದ ರಾಮಯ್ಯನೇ ಎಂಬುದನ್ನು ಮೇಲೆ ಗಮನಿಸಿದ್ದೇವೆ. ಏಕಾಂತದ ರಾಮಯ್ಯನ ಏಳು ವಚನಗಳು ದೊರಕಿವೆ (ಅಂಕಿತ : ('ಎನ್ನಯ್ಯ) ಚೆನ್ನರಾಮ).[8] ಮರುಳಾರಾಧ್ಯರೂ ಬಹುಶಃ ವಚನಕಾರರೇ. ಮರುಳದೇವ ಎಂಬ ಒಬ್ಬ ವಚನಕಾರನಿದ್ದಾನೆ (ಈತ ಮರುಳ ಶಂಕರದೇವನಿಂದ ಭಿನ್ನ) ಈತ ರೇವಣಸಿದ್ಧನ ಶಿಷ್ಯನೆಂದು ಶ್ರೀಕರಭಾಷ್ಯದ ಆರಂಭದಲ್ಲಿ ಹೇಳಿದೆ. ಮರುಳದೇವನ ಅಂಕಿತ "ರೇವಣ ಪ್ರಭುವೇ"- ಈ ಮರುಳದೇವನೇ ಮರುಳಾರಾಧ್ಯ ರಾಗಿರುವ ಸಾಧ್ಯತೆ ಇದೆ.[9] ಈ ಮರುಳಾರಾಧ್ಯ. ಹಲವರು ವಚನಕಾರರು (ಹಾವಿನಹಾಳ ಕಲ್ಲಯ್ಯ, ಮೆರೆಮಿಂಡಯ್ಯ, ಆದಯ್ಯ) ಸ್ಮರಿಸುವ ಮರುಳಾರಾಧ್ಯ ಇಬ್ಬರೂ ಅಭಿನ್ನರು. ಕ್ರಿ.ಶ. 1193ರ ಒಂದು ಶಾಸನ (ಇದರ ತೇದಿ ಪ್ರಶ್ನಾರ್ಹ ವಾಗಿದೆ) "ರೇವಣಸಿದ್ಧ"ನ ಮಗ "ಮರುಳಸಿದ್ಧ" ಎಂದಿದೆ.[10] ಮಗ ಎಂದರೆ ಶಿಷ್ಯನೂ ಆಗಬಹುದು ; ಅನೇಕ ಶಾಸನಗಳಲ್ಲಿ ಇದು ಸ್ಪಷ್ಟವಾಗಿದೆ. ರೇವಣಾ ರಾಧ್ಯನ ಸಮಕಾಲೀನ ಮರುಳಾರಾಧ್ಯನೆಂಬುದು ಸ್ಪಷ್ಟವಿದೆ.

ಪಂಚಾಚಾರ್ಯರು 'ವೀರಶೈವ'ರೇ ಅಲ್ಲವೆಂಬ ಅವರು ನಾಥಪಂಥೀಯರಿರ ಬಹುದೆಂಬ ಹುರುಳಿಲ್ಲದ ಕೆಲವು ವಾದಗಳು ಬಂದಿವೆ. ವಚನಕಾರರೇ ಮೊದಲ ನಾಲ್ವರು ಆಚಾರ್ಯರನ್ನು ಶರಣರೆಂದು ಗೌರವಿಸಿದ್ದರು : ಉದ್ದಕ್ಕೂ ವೀರಶೈವ ಪರಂಪರೆ ಅವರನ್ನು ಭಕ್ತಿಯಿಂದ ಕಂಡಿದೆ. ಅವರು ವೀರಶೈವರೆಂಬುದಕ್ಕೆ ಬೇರೆ ಆಧಾರಗಳು ಬೇಕೆ ? ಬಸವ, ಅಲ್ಲಮ, ಸಿದ್ಧರಾಮರಷ್ಟೇ ಅವರು ವೀರಶೈವರು ;

---

8 "ಏಕೋರಾಮೇಶ್ವರ ಲಿಂಗ" ಎಂಬ ಅಂಕಿತದ ವಚನವೊಂದಿದೆ. (ಸಂಕೀರ್ಣವಚನ ಸಂಪುಟ, IV. ಸಂ. ಬಿ. ಆರ್. ಹಿರೇಮಠ, ಬೆಂಗಳೂರು. 1993. ಪು. 53.) ಇದು ಏಕೋರಾಮಾ ರಾಧ್ಯರದಾದರೆ, ಆಗ ಏಕಾಂತದ ರಾಮಯ್ಯ ಮತ್ತು ಏಕೋರಾಮಾರಾಧ್ಯರು ಭಿನ್ನರೆಂದು ಭಾವಿಸಬೇಕಾಗುತ್ತದೆ.

9 ಡಿ. ಎಲ್. ನರಸಿಂಹಾಚಾರ್ : 'ಕೆಲವು ವಚನಕಾರರು'. (ಪೀಠಿಕೆಗಳು ಮತ್ತು ಲೇಖನಗಳು). ಈ ಲೇಖನದತ್ತ ನನ್ನ ಗಮನ ಸೆಳೆದವರು ಶ್ರೀ ಎಸ್. ಶಿವಣ್ಣ.

10 ಎಂ. ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು. ಧಾರವಾಡ-1970. ಪು. 47.

ಧಾರ್ಮಿಕವಾಗಿ ಅವರಷ್ಟೇ ಗೌರವಾರ್ಹರು. ಕನ್ನಡ ಭಾಷೆ ಸಾಹಿತ್ಯಗಳಿಗೂ ಆಚಾರ್ಯರ ಕೊಡುಗೆ ನಗಣ್ಯವಾದುದೇನೂ ಅಲ್ಲ. ರೇವಣಸಿದ್ಧರು ಒಬ್ಬ ವಚನಕಾರರೆಂದು "ಮುಕ್ತಿಕಂಠಾಭರಣ"ವು ಅವರ ಹಲವು ವಚನಗಳನ್ನು ಉಲ್ಲೇಖಿಸಿದೆ. "ಮುಕ್ತಿ ಕಂಠಾಭರಣ"ವು ಒಂದು ಸಂಕಲನವಾಗಿ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆಯೆಂದು, ರೇವಣಸಿದ್ಧರ ಆ ಸಂಕಲನದ ವಚನಗಳು "ಖೊಟ್ಟಿ" ಎಂದು ಭಾವಿಸಿದರೂ, ರೇವಣಸಿದ್ಧರು ವಚನಕಾರರ ಸಮಕಾಲೀನರೆಂಬ ಅರಿವು ಆ ಸಂಕಲನಕಾರನಿಗಿದೆ. (ರೇವಣಸಿದ್ಧನ ಪತ್ನಿಯರೂ ವಚನಗಳು ರಚಿಸಿರುವಂತೆ ಆ ಸಂಕಲನದಲ್ಲಿ ಹೇಳಿದೆ). ಅಸಾಮಾನ್ಯ ವ್ಯಕ್ತಿತ್ವದ ರೇವಣಸಿದ್ಧರು ಹರಿಹರ ಹೇಳುವಂತೆ ಪವಾಡಗಳನ್ನು ನಡೆಸಿದರೋ ಇಲ್ಲವೋ ತಿಳಿಯದು. ಆದರೆ ಅವರು ದೀನ ದಲಿತರ ಸೇವೆಯನ್ನು ಮಾಡುತ್ತಿದ್ದರೆಂಬ ಸೂಚನೆ ಅದೇ ಕವಿಯಲ್ಲಿದೆ. ಉಳಿದ ಮೂವರು ಆಚಾರ್ಯರಲ್ಲಿ ಮೇಲೆ ನೋಡಿದಂತೆ ಇಬ್ಬರು ವ್ಯಕ್ತಿಗಳು ವಚನಕಾರರು, ವಚನಗಳ ಮೂಲಕ ಕನ್ನಡವನ್ನು ಬೆಳೆಸಲು ಯತ್ನಿಸಿದವರು, ಜನರ ಆಡು ಭಾಷೆಯ ಮೂಲಕ ಜನರ ಹತ್ತಿರಕ್ಕೆ ಹೋಗಲು ಯತ್ನಿಸಿದವರು. ಮಲ್ಲಿಕಾರ್ಜುನ ಪಂಡಿತಾರಾಧ್ಯರು "ಶಿವಭಕ್ತಿಸಾರಮು" ಎಂಬ ತೆಲುಗು ಕೃತಿಯನ್ನು ರಚಿಸಿದವರು. "ಪಂಚಾಚಾರ್ಯ"ರಲ್ಲಿ ನಮಗೆ ತಿಳಿದಮಟ್ಟಿಗೆ ಸಂಸ್ಕೃತ ಕೃತಿ ರಚನೆಯನ್ನು ಯಾರೂ ಮಾಡಿಲ್ಲ. "ಸಿದ್ಧಾಂತ ಶಿಖಾಮಣಿ" ಎಂಬ ಸಂಸ್ಕೃತ ಕೃತಿಯ ಕರ್ತೃ ರೇಣುಕ ಅಥವಾ ರೇವಣಸಿದ್ಧ ಅಲ್ಲ. ರೇವಣಸಿದ್ಧರು (ರೇಣುಕರು) ಅಗಸ್ತ್ಯನಿಗೆ ಬೋಧಿಸಿದುದನ್ನು ತಾನು ನಿರೂಪಿಸಿರುವುದಾಗಿ ಅದರ ಕರ್ತೃವಾದ ಶಿವಯೋಗಿ ಶಿವಾಚಾರ್ಯನು ಹೇಳಿಕೊಂಡಿದ್ದಾನೆ. ಶಿವಯೋಗಿ ಶಿವಾಚಾರ್ಯನು ಸಿದ್ಧರಾಮನ ವಂಶದವನು. ಕಾಮಿಕಾಗಮದಲ್ಲೂ ರೇವಣಸಿದ್ಧರು ಅಗಸ್ತ್ಯನಿಗೆ ಬೋಧಿಸಿದುದನ್ನು ಸಂಗ್ರಹಿಸಲಾಗಿದೆ ಎಂದು ಜಕ್ಕಣಾರ್ಯನ ಉಲ್ಲೇಖವಿರುವುದನ್ನು ನೋಡಿದ್ದೇವೆ. ರೇಣುಕರು ಅಗಸ್ತ್ಯರಿಗೆ ವೀರಶೈವಧರ್ಮವನ್ನು ಬೋಧಿಸಿದರು ಎಂಬ ಪರಂಪರಾಗತ ನಂಬಿಕೆ ಇದ್ದು, ಅದನ್ನು ರೇವಣಸಿದ್ಧರಿಗೆ ವರ್ಗಾಯಿಸಲಾಗಿದೆ. ರೇವಣಸಿದ್ಧರು ಸಂಸ್ಕೃತದಲ್ಲಿ ಏನಾದರೂ ಬರೆದಿದ್ದರೆ ಅವರ ಮೂಲಕೃತಿ ಸದ್ಯಕ್ಕಂತೂ ಲಭ್ಯವಿಲ್ಲ.

ಒಂದು ಮಾತನ್ನಂತೂ ಸ್ಪಷ್ಟಪಡಿಸಬೇಕು. "ಪಂಚಾಚಾರ್ಯ"ರು ಸಮಾಜದಿಂದ ಅಥವಾ ಸಾಮಾನ್ಯ ಜನತೆಯಿಂದ ದೂರವಾಗಿದ್ದು ಕೇವಲ ಸಂಸ್ಕೃತದ ಕಡೆಗೇ ಗಮನಕೊಟ್ಟು ಜನರ ಆಡು ಭಾಷೆಗಳನ್ನು ಅಲಕ್ಷಿಸಿದ್ದರೆಂಬ ಅಪಖ್ಯಾತಿಗೆ ಆಧಾರಗಳಿಲ್ಲ. ವಸ್ತುಸ್ಥಿತಿಯೆಂದರೆ, ಅವರು ಸಂಸ್ಕೃತ ವಿದ್ವಾಂಸರಾಗಿದ್ದಿರಬಹುದು (ವಚನಕಾರರಲ್ಲೂ ಸಂಸ್ಕೃತ ವಿದ್ವಾಂಸರಿದ್ದರು). ಆದರೆ ಅವರು ಸಮಾಜದಿಂದ ದೂರವಿದ್ದು ದೇಶಭಾಷೆಗಳನ್ನು ಅಲಕ್ಷಿಸಿದರೆಂಬ ಮಾತು ನಿಲ್ಲತಕ್ಕದ್ದಲ್ಲ. ಇಂತಹ ಅಪಖ್ಯಾತಿಗೆ ಪಂಚಾಚಾರ್ಯರು ಕಾರಣರಲ್ಲ - ಅವರನ್ನು ವೈಭವೀಕರಿಸಲು ಹೊರಟಿರುವ ಅವರ ಕೆಲವು ಆಧುನಿಕ ಅಭಿಮಾನಿಗಳೇ ಅದಕ್ಕೆ ಕಾರಣ.

ನಾನು ಈಗಾಗಲೇ ಪ್ರತಿಪಾದನೆಮಾಡಿರುವಂತೆ, "ಗುರುಪೀಠ" ಗಳೆಂಬ "ವಿರಕ್ತಪೀಠ" ಗಳೆಂಬ ಎಂಬ ಎರಡು ಬಗೆಯ ಮಠಗಳಿಗೆ ಕರ್ತವ್ಯ ಭೇದವಿರಬಹುದೇ ಹೊರತು ಧ್ಯೇಯ ಭೇದವಿಲ್ಲ. ಎರಡರ ಧ್ಯೇಯವೂ ಸಮಾಜದ ಒಳಿತೇ ಆಗಿದೆ. ಆ "ಎರಡೂ ಸಮಾನ ಗೌರವಕ್ಕೆ ಪಾತ್ರ ; ಎರಡೂ ಸಮಾಜದ ಎರಡು ಕಣ್ಣುಗಳು" (ಸಾಧನೆ, 18:3-4). ಈ ನಿತ್ಯಸತ್ಯದತ್ತ ನಮ್ಮಲ್ಲಿ ಕೆಲವರು ತಮ್ಮ ಕಣ್ಣುಗಳನ್ನು ತೆರೆಯಬೇಕಾಗಿದೆ.

ಮೂರು ಪದ್ಯಗಳು

ರಾಮಚಂದ್ರ ದೇವ

೧. ಬರೆಯಬೇಕಿಕೊ ಹೀಗೆ

೧

ಬರೆಯು ಬೇಕಿಕೊ ಹೀಗೆ
ಜಗಕ್ಕೆ ಕನ್ನಡಿ ಹಾಗೆ
ಎಂಥೆಂಥ ಜನ ಇಲ್ಲಿ
ನನ್ನ ಕುಂಡೆಯು ಬೆಳಕು
ಮಿನುಗಿದರೆ ಮುಂಬೆಳಗು
ಎಂದು ತಿಳಿದವ ಒಬ್ಬ
ಅವನೇ ಸೂರ್ಯ

ಜಗದ ಎಲ್ಲಾ ಭಾರ
ಹೊತ್ತು ಹೆಗಲಿನ ಮೇಲೆ
ಕೂತು ಬಿಟ್ಟಿದ್ದಾನೆ
ಅಟ್ಲಾಸು

ಜಗದ ಹಾಗೂ ತನ್ನ ಜೀವದ ಭಾರ
ಹೊರಿಸಿ ಹೆಂಡತಿ ಮೇಲೆ
ಮಲಗಿಯೇ ಇರುವ ಇವ
ಸಾಕ್ಷಾತ್ ವಿಷ್ಣು

ಇವನ ಹೆಂಡತಿ ಬಸುರಿ
ತಪ್ಪಿದರೆ ಬಾಣಂತನ
ಸದಾ ಸೃಷ್ಟಿಲಿ ನಿರತ
ಪರಬ್ರಹ್ಮ

ತನ್ನದೆಲ್ಲಾ ಕಳೆದೂ
ಮಾವನದ್ದೂ ಕಳೆದು
ಊರೂರು ತಿರುಗುವವ
ಲಯಕರ್ತ

೨

ಎಂಥೆಂಥ ಜನ ಇಲ್ಲಿ

ಒಬ್ಬಾತ ಗೋಡೆ ತಳ್ಳುತ್ತಿರುವ ; ಇನ್ನೊಬ್ಬ ಚಂದ್ರನ ಮೇಲೆ
ಉಚ್ಚೆ ಹೊಯ್ಯುತ್ತಾನೆ ; ರೆಕ್ಕೆ ಕಟ್ಟಿಸಿಕೊಂಡು
ಹಾರ ಹೊರಟವ ಇವನು ; ಅಲ್ಲಿ ಕೋತಿಗೆ ಕೋಳ
ಹಾಕಿ ತಡೆದಿದ್ದಾರೆ ; ಇವರಿಗೋ
ಇರುವುದೇ ಬರಿ ಮುಂಡ ; ಅಥವಾ ಆಗಲಕ್ಕೆ
ತೆರೆದಿರುವ ಭಯ ಭೀತ
ಬಾಯಿ–ಕಣ್ಣಿನ ರುಂಡ

ಚೂಪು ತುದಿ ಮೇಲೆ ಬೊಬ್ಬೆಗೋಪುರ. ಅಲ್ಲಿ
ವಿವಿಧ ಭಾಷೆಯ ಜನರ ವಿವಿಧ ಭಾಷೆಯ ಪ್ರವರ.
ಒಬ್ಬನಿಗೆ ತಿಳಿಯುವುದು ಒಂದೇ ಭಾಷೆ ; ಕೈಕರಣ ಮಾಡಿಯೇ
ಅನಿಸಿದ್ದ ತಿಳಿಸುವ ಆಸೆ.

ಯಾಕೆ ಇವ ಹೀಗೆ ಮರಹತ್ತಿ ನಗುತ್ತಿರುವ ?
ಅದು ಯಾರು ಕುರುಡರು ಹಾಗೆ
ಒಬ್ಬರ ಹಿಂದೆ ಒಬ್ಬ ಪರಡುತ್ತ ಹೊರಟವರು ?
ಇವ ಯಾಕೆ ಹೀಗಿಲ್ಲಿ ಕಾಲಗಲಿ ಮಲಗಿರುವ ?
ಅವನೇಕೆ ಗಲ್ಲತ್ತ ?

ಗೊತ್ತಿಲ್ಲ. ಕನ್ನಡಿ ಕೆಲಸ
ಇದ್ದದ್ದ ಇದ್ದಂತೆ ಪ್ರತಿಫಲಿಸಿ ತೋರುವುದು.

೩

ಚೆಲುವೆಯರು ಬಂದಿಲ್ಲ ಮುಖ ನೋಡಿಕೊಳಲಿ ;
ಅವರಿಗೆ ತಾವು ಇನ್ನಷ್ಟು ಚೆಲುವೆಯರಾಗಿ ಕಾಣಿಸಲಿ.
ಕುರೂಪಿಗಳು ಬಂದಿಲ್ಲಿ ಮುಖ ನೋಡಿಕೊಳಲಿ ;
ಅವರಿಗೂ ತಾವು ಚೆಲುವೆಯರಾಗಿ ಕಾಣಿಸಲಿ.

ಕನ್ನಡಿ ಮಾತ್ರ ಅದರಷ್ಟಕ್ಕೆ
ಬೆಳಕಲ್ಲಿ ಹೊಳೆಯುತ್ತಿರಲಿ,

೨. ಜಗತ್ತು ಅಳಿಯುವುದು ಹೀಗೆ

ಚರ್ಚೆಯ ವಿಷಯ ಈ ಜಗತ್ತು ಅಳಿಯುವುದು ಹೇಗೆಂದು :
ಬಾಂಬಿನಲ್ಲೋ ಇಲ್ಲ ಪ್ರಳಯದಲ್ಲೋ ಚಾಡಿ ಛಿದ್ರದಲ್ಲೋ ?
ಸೇರಿದ್ದ ಜನಗಳೋ–ವೇದ ಪೌರುಷೇಯ ಎಂದು
ಸ್ವಾಮಿಗಳೆದುರು ಸಾಧಿಸಿದ ಆಚೆಮನೆ ಅವಧಾನಿ.
ಹಾಗಿದ್ದರಿನ್ನು ನಾ ಬದುಕುವುದು ಯಾಕೆಂದು
ಸ್ವಾಮಿಗಳು ಆಮರಣ ಉಪವಾಸ ಹೂಡಿದ ಮೇಲೆ
ಅಪೌರುಷೇಯ ಎಂದು ಸಾಧಿಸಿ ನಿಂಬೆರಸ ಕುಡಿಯಿಸಿದ.
ಇನ್ನೊಬ್ಬ ಹೊಸ ಮನೆಯ ಮಾವ ; ತ್ರಿಕಾಲ ಪೂಜೆಗೆ ಮಗನು
ಒಪ್ಪಿ ಕೂರದ್ದಕ್ಕೆ, ಮುಟ್ಟಾದ ಸೊಸೆ ಪಟ್ಟಿ
ಮಡಿಯ ಮುಟ್ಟಿದ್ದಕ್ಕೆ, ಮನೆಯಿಂದ ಹೊರಗಟ್ಟಿ
ಒಂಟಿ ಬದುಕುವ ಜೀವ. ಹೇಳಿದ್ದ ವಾಯಿದೆಗೆ
ಪುಸ್ತಕವ ಕೊಡದ್ದಕ್ಕೆ ಭಾಷೆ ಹಾಕಿದ ಭಾವ.
ಇನ್ನೊಬ್ಬ ಆ ಸನ್ಯಾಸಿ-ಪತ್ನಿ ಹಾಗಲಕಾಯಿ
ಪಲ್ಯ ಮಾಡದ್ದಕ್ಕೆ ಸನ್ಯಾಸ ತಕ್ಕೊಂಡು
ಈಗ ಎಲ್ಲೆಲ್ಲಿ ಹಾಗಲಕಾಯಿ–ಅಲ್ಲಲ್ಲಿ ಈ ಬೈರಾಗಿ.

ಮಾತು ಸುರುವಾದದ್ದು ಈ ಪ್ರಪಂಚ ಆದದ್ದು ಹೇಗೆಂದು.
ದೇವರೊಂದೊಂದೆ ಸೃಜಿಸಿದ ಬಳಿಕ
—ಈ ನೆಲವ, ಈ ಇರುಳ, ಈ ಹೊಳೆಯ, ಈ ಮರವ—
ಮನುಷ್ಯನ್ನ ಸೃಷ್ಟಿಸಿದ, ಪಕ್ಕೆಲುಬಿಂದ ಹೆಣ್ಣನ್ನ ಅಥವಾ
ಸೂರ್ಯಂದ ಸಿಡಿದಿದ್ದ ತುಂಡೊಂದು ಭುವಿಯಾಗಿ
ಅನಿಲಗಳು ಒಟ್ಟಾಗಿ, ಅಣುವೊಡೆದು ಎರಡಾಗಿ
ರೂಪು ತಾಳಿತು ಜೀವ. ಇಲ್ಲ,
ಮಂಗಳನಿಂದ, ಹಾರು ತಟ್ಟೆಗಳಿಂದ
ಜನ ಬಂದರೋ ಇತ್ತ ? ಎಂತಿದ್ದರೂ ಇರಲಿ—
ಪ್ರಳಯ ಬಂದಿತ ಮತ್ತೆ : ಪುನಃ ಸುರುವಾಗುವುದು
ನಾಲ್ಕು ಯುಗದಾವರ್ತ.
ಇಲ್ಲ : ಮತ್ತೆ ಸೃಷ್ಟಿಯೆ ಇಲ್ಲ : ಮೂರನೆಯ ಮಹಾಯುದ್ಧ
ಹುಟ್ಟಿದ್ದ, ಹುಟ್ಟದ್ದ ಸಂಹರಿಸಿ ಮುಗಿಸುವುದು
ಎಂದ ಹೊಸಮನೆ ಮಾವ. ಅಥವಾ
ಜಲಧಿ ಉಕ್ಕೇರಿ ಜಲಪ್ರಳಯ ಆದೀತು. ಇಲ್ಲ,
ಶಾಖಕ್ಕೆ ಹಿಗ್ಗಲಿಸಿ, ಸೂರ್ಯನಿಗೆ ಹತ್ತಿರವಾಗಿ
ಈ ಪೃಥ್ವಿ ಮುಗಿದೀತು ಆಗಿ ಇದ್ದಿಲ ತುಂಡು.

ಇದುವರೆಗೆ ಸುಮ್ಮನೇ ಕೂತಿದ್ದ ಪಂಡಿತ ಭಾವ
ಮುದುಕ ಸುಕ್ಕುತ್ತ, ಹೇರ್‌ಪಿನ್ನಂತೆ ಬಗ್ಗುತ್ತ
ಸಣ್ಣಗಾಗುವ ರೀತಿ ;
ಆಷಾಢದಲ್ಲಿ ಕಿತ್ತಳೆ ಹಣ್ಣು, ಅಥವ ಲಿಂಬೆಯ ಹಣ್ಣು
ಒಣಗಿ ಮುರುಟುವ ಹಾಗೆ
ಕುಗ್ಗುತ್ತ, ಒಣಗುತ್ತ, ತನ್ನೊಳಗೆ ಮುದುರುತ್ತ
ಸಣ್ಣದೊಂದು ಒಣ ದನಿಯಲ್ಲಿ ಅಸವಳಿದು, ಉಸಿರೆಳೆದು
ನಿಧಾನಕ್ಕೆ ಮುಗಿವುದು ಎಂದ.
ಧೀರೋದಾತ್ತ ಈ ಮನುಷ್ಯ, ಸಸ್ಯಶ್ಯಾಮಲೆ ಪೃಥಿವಿ
ಹೀಗೆ ಕ್ರಿಮಿಯಂತೆ ಸಾಯುವುದಿಲ್ಲ
ಎಂದು ಅವಧಾನಿ ನೆಲಕುಟ್ಟಿ ಘರ್ಜಿಸಿದ.
ಚರ್ಚೆಯ ದುರಂತದಲ್ಲಿ ಮುಗಿದದ್ದು ಅನ್ಯಾಯ ;
ಆ ಮೇಲೆ ಊಟಕ್ಕೆ ಎದ್ದೆವು ನಾವು.
ಕುಡಿಬಾಳೆ ಇರಲಿಲ್ಲ ; ಪಾಯಸವೂ ಮಾಡಿರಲಿಲ್ಲ ;
ಕೀತಿತ್ತು, ಹಾಳೆ, ಬಟ್ಟಲು ಇತ್ತು. ಸಾಲದ್ದಕ್ಕೆ
ಅವಧಾನಿ ಹಾಳೆಯಲ್ಲೊಂದು ಕೂದಲು,
ಎಲ್ಲಿ ಇತ್ತೋ ಏನೋ, ಕೂತಾಗ ಕಾಣಿಸಿತು.
ಅವಧಾನಿ ಅದ ಕಂಡದ್ದೆ
ಅತಿಥಿಗೆ ಹಾಳೆ, ಕೀತುಗಳ ಕೊಡುವಂಥ
ಕೂದಲನ್ನೇ ಬಡಿಸುವ ಈ ಮನೆಯಲ್ಲಿ ಈ ನಾನು
ಎಂದೆಂದಿಗೂ ಉಣ್ಣೆ ಎಂದು ದುಡು ದುಡು ಎದ್ದು
—ಹೆಂಗಸರು ತಡೆದರೂ, ನಾವು ಗೋಗರೆದರೂ—
ಹೊರಗೆ ಹೊರಟೇ ಹೋದ.
ಬೇಸರದ ವಿಷಯವೇ ;
ನಮಗೆ ಹಸಿವಾಗಿತ್ತು ; ನಾವು ಉಂಡೆವು ;
ಆ ಮೇಲೆ ಕಂಬಳಿ ಹೊದೆದು ಮೈಮುರುಟಿ ನಿದ್ದೆ ಹೋದೆವು
—ನಾಳೆಯ ಒಳಗೆ
ಪ್ರಳಯ ಆಗುವುದಿಲ್ಲ, ಬಾಂಬು ಸಿಡಿಯುವುದಿಲ್ಲ
ಎಂದು ಮಾತಾಡುತ್ತ ; ಬಟ್ಟೆ—ತಟ್ಟೆಯ ಬಗ್ಗೆ
ಜೋಕುಗಳ ಮಾಡುತ್ತ.

ಇಮ್ಮಡಿ ಗುರುಸಿದ್ಧಸ್ವಾಮಿಗಳ ಪಾದಸ್ತೋತ್ರ

(ಸಂ.) ಎಸ್. ಶಿವಣ್ಣ

ಇಮ್ಮಡಿ ಗುರುಸಿದ್ಧಸ್ವಾಮಿಗಳ[1] (ಇ.ಗು.) [೧-1729] ಸ್ವರವಚನ ರೂಪದಲ್ಲಿನ ಪಾದಸ್ತೋತ್ರವನ್ನು ಈ ಮುಂದೆ ಪ್ರಕಟಿಸಲಾಗಿದೆ. ಇದರಲ್ಲಿ 20 (೧೮ + ೫A + ೧೦A) ಸ್ವರ ವಚನಗಳಿವೆ.

3 ವೃತ್ತಗಳನ್ನುಳ್ಳ 'ಚಾಮರವೃತ್ತ'ವೆಂಬ ಸಂಸ್ಕೃತ ಭಾಷೆಯ ಕೃತಿಯೊಂದು ಈಚೆಗೆ ಇ.ಗು. ರ. ಕೃತಿಯೆಂಬ ಅಂಶ ಬೆಳಕಿಗೆ ಬಂದಿದೆ.[2] ಹೀಗಾಗಿ ಇ.ಗು. ಒಟ್ಟು ಕೃತಿ ಸಂಖ್ಯೆ[3] ಸಂಸ್ಕೃತದಲ್ಲಿ 3 ಹಾಗು ಕನ್ನಡದಲ್ಲಿ 20. ಪ್ರಸ್ತುತ ಕೃತಿ ಚಿತ್ರದುರ್ಗದ ಬೃಹನ್ಮಠದ ಸಂಗ್ರಹದಲ್ಲಿನ ಓಲೆ ಕೃತಿ ಕ್ರಮಾಂಕ 85 (ಗರಿ : 163-167) ರಲ್ಲಿದ್ದು ಅಲ್ಲಿಂದ ಸಂಪ್ರತಿಸಿ, ಸಂಪಾದಿಸಿ ಪ್ರಕಟಿಸಲಾಗಿದೆ. ಕೃತಿಯನ್ನು ಬಳಸಿಕೊಳ್ಳಲು ಸಮ್ಮತಿಸಿದ ಶ್ರೀಮನ್ ಬೃಹನ್ಮಠಾಧೀಶರಾದ ನಿ.ಪ್ರ.ಸ್ವ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರಿಗೆ ವಂದನೆಗಳು.

ಅಡಿ ಟಿಪ್ಪಣಿ

೧ ಇಮ್ಮಡಿ ಗುರುಸಿದ್ಧಸ್ವಾಮಿಗಳ ಇತಿ-ವೃತ್ತದ ಬಗೆಗೆ.
   i) ಹಾಲಾಸ್ಯ ಪುರಾಣಂ. (ಸಂ.) ಜಿ. ಜಿ. ಮಂಜುನಾಥನ್. 1975. ಮೈಸೂರು. ಪೀಠಿಕೆ 1-5.
   ii) ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿಯ ಕೃತಿಗಳು (ಸಂಪುಟ ೧). (ಸಂ.) ಎಸ್. ವಿದ್ಯಾಶಂಕರ, ಚಿತ್ರದುರ್ಗ. ೧೯೭೮. ಪೀಠಿಕೆ.
   iii) ಸಂಕೀರ್ಣ ವಚನ ಸಂಪುಟ: ಆರು. (ಸಂ.) ಎಸ್. ಶಿವಣ್ಣ, ಬೆಂಗಳೂರು. ೧೯೯೩. ಪ್ರಸ್ತಾವನೆ. ಪು. ೨೧-೫.

೨ [೬] ೭೧೪/. (ಗರಿ 38ನೇ) ಬೃಹನ್ಮಠ. ಚಿತ್ರದುರ್ಗ.

೩ ೧ (iii) ರಂತೆ, ಪು. ೨೨-೨೩.

ಇಮ್ಮಡಿ ಗುರುಸಿದ್ಧಸ್ವಾಮಿಗಳ ಪಾದಸ್ತೋತ್ರ

[೧]

ಶಿವಾಧವನೆಂದು ಪಿಡಿವೆ ಶ್ರೀಚರಪಾದ । ಎನ್ನ ।
ಭವ ನಿವಾರಣವ ಮಾಡುವ ಪಾದ ॥ ಶಿ ॥ ॥ ಪಲ್ಲ ॥

ಧರಣಿಗಾಧಾರವಾಗಿಹ ಪಾದ । ಹರ ।
ಶರಣರ ಹೃದಯದೊಳಿಹ ಪಾದ
ಸ್ಮರನ ದೇಹವ ದಹನ ಪಾದ । (ಅ) ಹಂ ।-
ಕರಿಸಿದಂತವರ ಸಂಹಾರ ಪಾದ ॥ ಶಿ ॥ ೧

ಭೂಪತಿಯನು ಧರಿಸಿದ ಪಾದ । ಎನ್ನ ।
ತಾಪತ್ರಯವ ಕಳವ ಪಾದ
ಕೋಪ ವಿರಹಿತ ಪಾದ । ರತ್ನ ।-
ದೋಪಾದಿ ಪ್ರಜ್ವಲಿಸುವ ಪಾದ ॥ ಶಿ ॥ ೨

ಹರಿಯಜರರಸೆ ಸಿಲ್ಕದ ಪಾದ । ಎನ್ನ ।
ಕರಕಮಲದೆ ನೆಲಸಿಹ ಪಾದ
ಮರಣವಿರಹಿತವಾಗಿಹ ಪಾದ । ತನ್ನ ।
ಮರೆಹೊಕ್ಕವರ ಪೊರೆವ ಪಾದ ॥ ಶಿ ॥ ೩

ಚಂದ್ರಶೈಲದಿ ಮಂಡಿತ ಪಾದ । ಶರ- ।
ಶ್ಚಂದ್ರ ಸ್ವರೂಪವಾಗಿಹ ಪಾದ
ಇಂದ್ರಾದಿ ಸುರವಂದಿತ ಪಾದ । ಎನ್ನ ।
ಇಂದ್ರಿಯ ನಿಗ್ರಹ ಸಾಕ್ಷಾದ ಪಾದ ॥ ಶಿ ॥ ೪

ತ್ರಿವಿಧರೂಪವನರುಹಿದ ಪಾದ । ಮಾ- ।
ನವ[ರಿಗೆ] ವರಗಳ ಕೊಡುವ ಪಾದ
ರವುಪುರಸ್ಥಲದಿ ಮೆರವ ಪಾದ । ಗುರು ।
ಶಿವಲಿಂಗೇಂದ್ರರ ನಿಜಪಾದ ॥ ಶಿ ॥ ೫

[೨]

॥ ಆರ್ಯಾವೃತ್ತ ॥
ಬಸವನ ಪೆಸರನುಸುರುವ ಭಕ್ತರ
ವಸವಾಗದು ದೋಷವದೆಂದು
ಪಸರಿಸಿ ಪೇಳುವೆ ಬಸವನ ಸ್ತುತಿಯನು
ಪೊಸೆದು ಕೇಳ್ವುದತಿ ಮುದದಿಂದ ॥ ಪಲ್ಲ ॥

ಆದಿಗನಾದಿಯೆಂದೆನಿಸಿದ ವೃಷಭನ-
ನಾದರದಿಂ ಧ್ಯಾನಿಸುವರಿಗೆ
ನಾದ ಬಿಂದು ಕಳೆರೂಪಿನ ಬಸವನು
ಮೋದದಿಂದೆ ಮೋಕ್ಷವ ಕೊಡುವ ೧

ಪಶುಪತಿಯುರಡನೆಯವತಾರೆನಿಸಿದ
ಬಸವನ ಮಹಿಮೆಯ ವಿಸರವನು
ಕುಶಲದೊಳಜ್ಞವದು ಭಕ್ತರಲ್ಲದೆ
ಪಶುಮಾನವರಜೀವರೆ ಮನದಿ ೨

ಚುನ್ನವಾಡುತಿರುವನ್ಯ ಮತಸ್ಥರ
ಕುನ್ನಿಗಳಂದದೊಳಿರಿಸಿದನು
ಸನ್ನುತ ಮಹಿಮೆಯ ತೋಜಿದ ಬಸವನು
ಉನ್ನತ ಬಿಜ್ಜಳನಿದಿರಿನೊಳು ೩

ಜಂಗಮದಿಂಗಿತವಜಿದು ಭಕ್ತಿಯನು
ಮಂಗಲಪುರದೊಳಗೆಸಗಿದನು
ಸಂಗಮನಾಥನ ಜಂಗಮರೂಪದಿ
ಪೊಂಗುತೆ ಸಮರಸವಾಗಿಹನು ೪

ಮಹಿಯೊಳಧಿಕ ರೌಪ್ಯಪುರಸ್ಥಳದೊಳತಿ
ಮಹಿಮೆಯಿಂದೆ ಶೋಭಿಸುತಿರುವ
ಅಹಿಭೂಷಣನೆನಿಸಿದ ಶಿವಲಿಂಗನ
ಮಹವಾಹನ ರೂಪವಾಗಿಹನು ೫

[೩]

ರಾಗ : ಭೈರವಿ

ಲಿಂಗದಪ್ಪಣೆಯಿಂದಲಿ ಬಂದುದನು
ಲಿಂಗಕರ್ಪಿಸಿ ಸುಖಿಸೆಲೆ ಮನವೆ ॥ ಪಲ್ಲ ॥

ಪರರುಸುಖಿಸುವುದ ಕಂಡು ಎನಗೇಕೆ
ಪರಮಸುಖ ದೊರಕಲಿಲ್ಲವೆಂದು
ಮರುಗಿ ಕಳವಳಗೊಂಡಡೆ ನಿನಗಿನ್ನು
ಪರಲೋಕಗತಿ ದೊರಕದೋ ಮನವೆ ೧

ಅನ್ನ ವಸ್ತ್ರಾಭರಣದಿ ಜಂಗಮವ
ಮನ್ನಿಸುತೆ ಸುಖಬಡಿಸುವ ಭಕ್ತರನು
ಚುನ್ನವಾಡುತಲಿರುತಿರೆ ನಿನಗೆ ಬಹು
ಮನ್ನಣೆಯು ದೊರಕೊಳ್ಳದು ಮನವೆ ೨

ಪೊಡವಿಯೊಳಗುದ್ಭವಿಸುತೆ ಮುನ್ನ ತಾ
ಪಡೆಯದಿರ್ದತಿ ಭೋಗವ ಬಯಸಿ
ನಡುವೆ ಭೋಗಿಪೆನೆಂದೊಡೆ ನಿನ್ನಂಥ
ಕಡುಮೂರ್ಖತನವ ಕಾಣೆ ಮನವೆ ೩

ದೃಢದಿಂದೆ ಮೃಡನನರ್ಚಿಸಿ ಎಡೆವಿಡದೆ
ಪಡೆಯಬಹುದೆಲೆ ಸುಖವನು ಇದಕಿಂದ
ಪಡೆವ ಯುಕ್ತಿಗಳಿಲ್ಲವು ತಿಳಿಯದಿರೆ
ಪಡೆದಷ್ಟರಲಿ ಸುಖಸೆಲೆ ಮನವೆ–

ಭೂಮಿಗತ್ಯಧಿಕವಾದ ರವುಪುರದ
ಸ್ವಾಮಿ ಶಿವಲಿಂಗೇಶ್ವರನ ಒಡವೆರವ
ಪ್ರೇಮವನು ಕಾಣುವಂಥಾ ಸುಖಕಿಂದ
ಕಾಮಿಸುವ ಪದವಿಲ್ಲವೊ ಮನವೇ

[೪]

ಮಂಗಳಾರತಿ

ರಾಗ : ನೀಲಾಂಬ್ರಿ

ಆರತಿಯನು ಬೆಳಗುವೆ ನಾ
ವರಗುರು ಮುರಿಗೇಂದ್ರನಿಗೆ
ಸಾರ ವಿರಕ್ತಿಯಸ್ಥಲಕೆ ಗುರುವಾದನಿಗೆ ॥ ಪ ॥

ಕೈಲಾಸದೊಳಿರುತಿರುವ
ಶೂಲಿಯಪರಮವತಾರ
ಭೂಲೋಕದೊಳವತರಿಸಿ ಲೀಲೆಯನು ನಟಿಸುತಲಿ
ಬಾಲೇಂದು ಮೌಲಿ ತ್ರಿ–
ಮಲ ವಿರಹಿತ ತಾನಾಗಿ
ಕಾಲಾರಿ ಶಾಂತ್ವೀರೇಶೆಂದೆಸವಾತನಿಗೆ ೧

ನೆರೆ ಭಕ್ತಿ ಜ್ಞಾನ
ವೈರಾಗ್ಯವುಪ್ಪುರಿಗೂಡಿ
ಶಿರದೊಳು ಮುರಿಮಾಡಿ ಮಾರೊರ್ನ ದಲಿ ಸುತ್ತಿ
ಮೆರವುತಲಿಹ ಕಾರಣದಿ
ಕರುಣಾಕರ ಪೆಸರ್ವಡೆದ
ಮುರಿಗಾಶಾಂತ್ವೀರಸ್ವಾಮಿಯೆಂಬವರಡಿಗಳಿಗೆ ೨

ಸ್ವಾಮಿಯೆಂಬಭಿಧಾನದಿ
ಪ್ರಮಥರಿಗಧಿಪತಿಯಾಗಿ
ಕಾಮಿತ ಫಲಗಳ ಕೊಡುವ ಮಹಿಮೆಯ ತೋರುತಲಿ
ಕ್ಷೇಮದಿ ರೌಪುರಸ್ಥಳದೊಳು
ರಾಮಣೀಯವಾಗಿರುತಿರ್ದ
ಪ್ರೇಮದಿ ಶಿವಲಿಂಗೇಶನಿಗೆ ಗುರುವಾಗಿರ್ದನಿಗೆ ೩

[೫]

ಮಂಗಳಾರತಿ

ಮಂಗಳಾರತಿ ಬೆಳಗುವೆನು ಇಷ್ಟಲಿಂಗದೇವಗೆ
ಜಂಗಮ ಸ್ವರೂಪದಿಂದೆ ಕಂಗಳಿದಿರಿನಲ್ಲಿ ತೋರಿ
ಮಂಗಲಾತ್ಮಕರ ಮಾಡುವಂಥ ಲಿಂಗದೇವರಡಿಗೆ ॥ ಪಲ್ಲ ॥

ಹಲವು ರೂಪಿಲಿ ಲೋಕದೊಳು ತಾನು ನಲಿವುತಿರುವಗೆ
ಸಲುವಷ್ಟು ಜನಕೆ ಫಲವ ಕೊಡುವಗೆ
ಫಲದಿ ವ್ರತಗಳನ್ನು ನಡಸುತೊಲಿಸಿಕೊಂಬ ಜನರಿಗೆ
ಸುಲಭವಾಗಿಯೆ ತೋರುತಿರುವ ಚೆಲುವ ಮಲಹರೇಶ್ವರನಿಗೆ ೧

ಸ್ಕಂದತಾತಗೆ ಬಾಲೇಂದುಮೌಳಿಯೆಂದು ಮೆರವಗೆ
ಬಂದಪಮೃತ್ಯುಗಳ ತಳವ ಧಾತಗೆ
ನಂದಿವಾಹನ ದೇವಾನಂದದಿ ಪೂಜೆಗೊಂಡು
ಮಂದಮತಿಯು ತೊಲಗಿಸಿರುವ ಕಂದುಗೊರಲ ದೇವನಿಗೆ ೨

ಪ್ರಾಣನಾಥಗೆ ಮದ್ಭಕ್ತಿ ಸುಧೆಯು ತಣಿವುತಿರ್ಪಗೆ
ಮಾಣಿಕ್ಯದಂತೆ ಹೊಳೆವ ರೂಪಗೆ
ಕೇಣಸರವನ್ನುಳ್ಳ ಜನರ ತ್ರಾಣಗೆಡಿಸುವಂಥ ದೇವ
ಕ್ಷೋಣಿಗಧಿಕ ರೌಪುರದಲಿ ಮಾಣದೆಸೆವ ಶಿವಲಿಂಗನಿಗೆ ೩

[೫೨]

ಮಂಗಳಾರತಿ

ಜಯು ಜಯುತೆಂದು ಬೆಳಗುವೆ ಮಂಗಲಂ
ಜಯು ಜಯುತು ಶ್ರೀ ಶಿವಲಿಂಗೇಶನಿಗೆ ॥ ಜ ॥ ॥ ಪಲ್ಲ ॥

ಗುರು ಲಿಂಗ ಜಂಗಮ ರೂಪನಿಗೆ । ಸುರ ।
ಚಿರವೆನಿಸುವ ನಿರಂಜನಗೆ
ಕರಿವರ ಚರ್ಮಾಂಬರಧರಗೆ । ವರ ।
ಕರಿಮುಖ ಶರಜನ್ಮರಯ್ಯನಿಗೆ ॥ ಜ ॥ ೧

ಎನ್ನಭೀಷ್ಟೆಯ ಕೊಡುವಾತನಿಗೆ । ತನ್ನ ।
ಪನ್ನತಿಕೆಯ ತೋರಿಸುವನಿಗೆ
ಸನ್ನುತ ಪೂಜ್ಯದಿಂದಿರುವನಿಗೆ । ಮುನ್ನ ।
ಚೆನ್ನ ಷಡಕ್ಷರ ರೂಪನಿಗೆ ॥ ಜ ॥ ೨

ಅತಿಶಯ ವಿರತಿಯೊಳಿರಕನಿಗೆ । ರತಿ ।
ಪತಿಯನು ಮರ್ದಿಸಿದಾತನಿಗೆ
ಕ್ಷಿತಿಯೊಳು ಶೌಪುರದಾಥನಿಗೆ । ಯತಿ ।
ಪತಿಯು ಶ್ರೀ ಗುರುಶಿವಲಿಂಗನಿಗೆ ೩

[೬]

ಮಂಗಳಾರತಿ

ಎತ್ತುವೆನಾರತಿಯೆತ್ತುವೆನಾರತಿಯೆತ್ತುವೆನಾರತಿಯು
ನಿತ್ಯನೆಂದೆನಿಸುವ ಮೃತ್ಯುಂಜಯುನಿಗೆ ॥ ಎ ॥ ॥ ಪಲ್ಲ ॥

ಸುಗುಣಸಂತತಿಯುಳ್ಳ ಅನಘ ಸ್ವರೂಪಗೆ ॥ ಎ ॥
ತ್ರಿಗುಣಂಗಳಿಗೆ ತ್ರಿಮಲಕೆ ವಿರಹಿತನಿಗೆ ॥ ಎ ॥
ನಿಗಮಕ್ಕಗೋಚರನಾದ ಮಹಾತ್ಮಗೆ ॥ ಎ ॥
ಝಗಝಗಿಸುವ ಪರಂಜ್ಯೋತಿ ಸ್ವರೂಪಗೆ ॥ ಎ ॥ ೧

ಜಡವನಿತೆಯನು ಮಸ್ತಕದೊಳು ಪೊತ್ತಗೆ ॥ ಎ ॥
ಉಡುಪತಿಯನು ಮುಡಿಯೊಳಗೆ ಸೂಡಿದಗೆ ॥ ಎ ॥
ಎಡದೊಡೆಯೊಳು ಗೌರಿ[ಯ] ಮಡಗಿಕೊಂಡಿರ್ದಗೆ ॥ ಎ ॥
ದೃಢವುಳ್ಳ ಭಕ್ತರ ಭಕ್ತಿಗೊತ್ಸಲನಿಗೆ ॥ ಎ ॥ ೨

ಪೃಥ್ವಿಯ ಪಂಚಕರ್ತೃತ್ವವನುಳ್ಳಗೆ ॥ ಎ ॥
ಪೃಥ್ವಿಯ ಪೊತ್ತಂಥ ಶೇಷೋಪವಿತ್ರಗೆ ॥ ಎ ॥
ಪೃಥ್ವಿಗಧಿಕ ರೌಪುರೊಡೆಯನೆಂದೆನಿಸುವಗೆ ॥ ಎ ॥
ಪೃಥ್ವಿಯೊಳ್ವರದ ಶ್ರೀ ಶಿವಲಿಂಗದೈವಗೆ ॥ ಎ ॥ ೩

[೭]

ಮಂಗಳಾರತಿ

ಜಯಮಂಗಲಂ ನಿತ್ಯ ಶುಭಮಂಗಲಂ
ದಯಪೂರಿತಾಯ ಶ್ರೀ ಗುರು ಶಂಕರಾಯ ॥ ಪಲ್ಲ ॥

ಮಾಯಗೆ ವಿದೂರಾಯ ಮದನ ಸಂಹರಾಯ
ಬಾಯ ಬಿಡುತಿರ್ದ ರತಿದೇವಿಗೊರದಾಯ
ಆಯತದಿ ಧರಿಸಿಕೊಂಡಿರ್ದ ವಿಷಕಂಠಾಯ
ಆಯುಸವ ಬಡುವ ಯತಿಗಳಿಗೆ ವರದಾಯ ೧

ನಿರುಪಾಧಿಕಾಯ ನಿರ್ವಿಕಲ್ಪಾಯ
ನಿರಘಾಯ ನಿಸ್ಸಂಗ ನಿರ್ಗುಣಾಯ
ಪರಕೆ ಪರತರವಾದ ನಿತ್ಯಾಯ ಸತ್ಯಾಯ
ಪರಿಪೂರ್ಣರೂಪಾಯ ಚಿತ್ಪ್ರಕಾಶಾಯ ೨

ನದಿಜಟಾಧಾರಾಯ ಸದಮಲಾಕಾರಾಯ
ವಿಧಿ ನಿಷೇದಂಗಳಿಗೆ ವಿರಹಿತಾಯ
ಅಧಿಕವಾಗಿರ್ದ ರೌಪುರಸ್ಥಲಕೆ ಕರ್ತಾಯ
ಬುಧಸ್ತುತ್ಯ ಶಿವಲಿಂಗದೇಶಿಕೇಂದ್ರಾಯ ೩

[೮]

ಮಂಗಳಾರತಿ

ಜಯ ಜಯ ತುಭ್ಯಂ ಮಂಗಲಂ
ಜಯ ಜಯ ತುಭ್ಯಂ ಮಂಗಲಂ
ಮಂಗಲಕರಸೆ ಮಸ್ಮಸೋಪಹರನೆ ॥ ಜ ॥ ॥ ಪಲ್ಲ ॥

ಪುಂಡರೀಕಾಕ್ಷನ ಗಂಡನೆಂದೆನಿಸಿದ
ದಂಡಪಾಣಿಯು ಹರ ಕೆಂಡಗಣ್ಣೊಡೆಯ
ಕೆಂಡಗಣ್ಣೊಡೆಯ ಶ್ರೀ ಕೆಂಡಗಣ್ಣೊಡೆಯು ॥ ಜ ॥ ೧

ಅಂಬಿಕಾನಾಥ ಹೇರಂಬತಾತದಿ –
ಗಂಬರನೆನಿಸಿದ ಶಂಭು ಶಂಕರನೆ
ಶಂಭು ಶಂಕರನೆ ಶ್ರೀ ಶಂಭು ಶಂಕರನೆ ॥ ಜ ॥ ೨

ಭುವನದೊಳ್ ರೌಪುರಧವನೆಂದೆನಿಸಿದ
ನವರಸಿಕತ್ವದ ಶಿವಲಿಂಗೇಂದ್ರಾರ್ಯ
ಶಿವಲಿಂಗೇಂದ್ರಾರ್ಯ ಶ್ರೀ ಶಿವಲಿಂಗೇಂದ್ರಾರ್ಯ ॥ ಜ ॥ ೩

[೯]

ಮಂಗಳಾರತಿ

ಜಯದೇವ ಜಯದೇವ ಭವ ವಿರಹಿತನೆ
ಜಯ ಭವ ವಿರಹಿತನೆ
ಜಯತೆಂದು ಸ್ತುತಿಸಿದೆ ಪರಬ್ರಹ್ಮಾತ್ಮಕನೆ ॥ ಜ ॥ ॥ ಪಲ್ಲ ॥

ಹರಿಯಜಸುರೇಂದ್ರಾದಿಗಳಿಂದ ವಂದಿತನೆ
ವರ ಮುನಿಗಳ ಧ್ಯಾನದ ಹೃತ್ಕಮಲದೊಳಿರುತಿಹನೆ
ಪರಮತಗಜ ಕಂಠೀರವನಾಗಿ ಮೆರದಿಹನೆ
ಗಿರಿರಾಜನ ಪುತ್ರಿಯು ವರಪತಿಯೆಂದೆನಿಸಿದನೆ ॥ ಜ ॥ ೧

ಗಗನವೆ ಕುಂತಳ ನಿಗಮ ವಾಜಿಗಳೆಸಗಿದನೆ
ಭಗಣಪ ಕಲೆಯನು ತಲೆಯೊಳು ಸೂಡಿಕೊಂಡಿಹನೆ
ಅಗಣಿತ ಮಹಿಮೆಯನುಳ್ಳ ಸುಗುಣ ಸೌಂದರನೆ
ಜಗದೊಳು ಕರುಣೆಗಳರಸ ಪರಮ ಹರುಷಿತನೆ ॥ ಜ ॥ ೨

ಜವನನ ಮದವನು ಮುರಿದ ಶೂಲಹಸ್ತಕನೆ
ಪವನ ಭುಗ್ಭೂಷಣನಾಗಿರುವ ಪರಶಿವನೆ
ಭುವನಕ್ಕಧಿಕ ರೌಪುರಸ್ಥಲದಿ ನೆಲಸಿಹನೆ
ಶಿವಲಿಂಗೇಂದ್ರಾಖ್ಯಾನದಿಂದೆ ಶೋಭಿಪನೆ ॥ ಜ ॥ ೩

[೧೦]

ಮಂಗಳಾರತಿ

ಮಂಗಳಾರತಿ ಶಿವಲಿಂಗದೇವಗಾನೆತ್ತುವೆನು ॥ ಪಲ್ಲ ॥
ಲಿಂಗಾಂಗ ಸಂಗ ಸಮರಸಭಾವದೊಳಿಹ
ಇಂಗಿತವರುಹಿಕೊಟ್ಟ ದುರ್ಭವನಿಗೆ ೧

ಯುಕ್ತಿವಿಡಿದು ಭಕ್ತಿ ಜ್ಞಾನ ವೈರಾಗ್ಯ[ವ]
ರಕ್ತಯಿಂದಾಚರಿಸೆಂದು ಬೋಧಿಪಗೆ ೨
ಲೋಕಕ್ಕಧಿಕ ರೌಪುರದೊಳು ಮೆರವ ಜಗ
ದೇಕನಾಥ ಶಿವಲಿಂಗದೇಶಿಕಗೆ ೩

[೧೦ಎ]

ಮಂಗಳಾರತಿ

ಮಂಗಳ ಜಯ ಜಯತು ಜನನ ದೂರಗೆ ಧೀರಗೆ ॥ ಪ ॥

ಕುಸುಮಬಾಣನನುರುಹಿದಸಮನೇತ್ರವನುಳ್ಳ
ಪಶುಪತಿಯೆನಿಸಿರ್ದ ವಿಖ್ಯಾತಗೆ ನಾಥಗೆ ೧

ಅತ್ಯತಿಷ್ಠದ್ದಶಾಂಗುಲದಿ ತೋರುತಲಿರುವ
ನಿತ್ಯವಾದಿಷ್ಟ ಸ್ವರೂಪಗೆ ಭೂಪಗೆ ೨

ಜಗದೊಳಧಿಕ ರೌಪುರದೊಳು ಶೋಭಿಸುತಿರುವ
ಅಗಣಿತ ಶಿವಲಿಂಗದೇವೇಶಗೆ ಈಶಗೆ ೩

[೧೧]

ಮಂಗಳಾರತಿ

ಬೆಳಗುವೆನೊ ಶಿವಲಿಂಗನಿಗಾರತಿ
ಬೆಳಗುವೆನೊ ಶಿವಲಿಂಗನಿಗಾರತಿ
ಬೆಳಗುವೆ ಬೆಳಗುವೆ
ಬೆಳಗುವೆನೊ ಶಿವಲಿಂಗನಿಗಾರತಿ
ಬೆಳಗುವೆನೊ ಶಿವಲಿಂಗನಿಗಾರತಿ ॥ ಪ ॥

ಅರ್ಥಿಯಿಂದಲಿ ಪೂಜಿಸುವರ ಹೃದಯದಿ
ನರ್ತಿಸುತಿಹ ಸದಮಲ ರೂಪಗೆ ॥ ಬೆ ॥ ೧

ಇದಿರಿಟ್ಟು ಪೂಜಿಸಿ ಫಲಪದವಿಗಳ
ಮುದದಿ ಬೇಡುವರಿಗೆ ಒದಗಿಸಿ ಕೊಡುವಗೆ ॥ ಬೆ ॥ ೨

ಇಷ್ಟಲಿಂಗವನರ್ಚಿಸುವ ಏಕತ್ವದೆ
ನಿಷ್ಠೆಯುಳ್ಳವರೊಡವೆರಸಿಕೊಂಡಾತಗೆ ॥ ಬೆ ॥ ೩

ನಾನು ನೀನೆಂಬುಭಯವನಳಿದರ್ಚಿಸಿ
ಧ್ಯಾನಿಸುವವರೊಳು ತಾನು ತಾನಾದಗೆ ॥ ಬೆ ॥ ೪
ಧರೆಯೊಳಧಿಕ ರೌಪುರದೊಳು ನೆಲಸಿ
ಮೆರವ ಶ್ರೀಗುರು ಶಿವಲಿಂಗದೇವೇಶಗೆ ॥ ಬೆ ॥ ೫

[೧೧]

ಮಂಗಳಾರತಿ

ಜಯಮಂಗಲಂ ಶುಭಜಯುತಿ
ಜಯಮಂಗಲಂ ಶುಭ ಜಯುತಿ ಜಯನೆ
ಜಯಮಂಗಲಂ ಶುಭಜಯುತೆಂದು ಬೆಳಗುವೆ ನಿನಗೆ ನಿನಗೆ ॥ ಜ ॥ ॥ ಪ ॥

ಇಂದ್ರಿಯ ವಿಷಯಕೆ ಸಂದುಗೊಡದೆ ಮನ–
ಕಿಂದುಧರನ ಮಂತ್ರವೀವ ಮಜ್ಜೀವ ಎನ್ನ ಕಾವ ಮದ್ದೇವ ದೇವ ॥ ಜ ॥ ೧

ಅಷ್ಟಮದಗಳನು ನಷ್ಟವ ಮಾಡುವ
ಶ್ರೇಷ್ಠ ಸದ್ಗುಣವುಳ್ಳ ದೇವನ ಘನಭಾವ ಎನಗೀವ ಭವ ದಾವ ದಾವ
॥ ಜ ॥ ೨

ಧರೆಯೊಳಧಿಕ ರೌಪುರದೊಳು ನೆಲಸಿಹ
ವರಗುರು ಶಿವಲಿಂಗದೇವ ಮಹಾದೇವ ಶಿವಭಾವ ಇಷ್ಟವೀವ ಭಾವ ॥ ಜ ॥ ೩

[೧೩]

ಮಂಗಳಾರತಿ

ಮಂಗಳಾರತಿ ಬೆಳಗುವೆ ಶ್ರೀ ಶಿವಲಿಂಗಗೆ ಭವಭಂಗಗೆ
ಕಂಗಳಾಗ್ರದಿ ರಂಜಪ ಕರದಿಷ್ಟಲಿಂಗಗೆ ಧವಲಾಂಗಗೆ ॥ ಪಲ್ಲ ॥

ಅನ್ಯಗೋಷ್ಠಿಗೆಳಸದ ಮನವನು ಕೊಡುವಾತಗೆ ಪ್ರಖ್ಯಾತಗೆ
ಮನ್ನಿಸಿ ಮನದೊಳು ಮಂತ್ರವ ತೋರಿಸುವಾತಗೆ ಗುರುನಾಥಗೆ
ಸನ್ನುತ ಶರಣರ ಧ್ಯಾನದೊಳಿರುವಾತಗೆ ವರದಾತಗೆ
ಎನ್ನ ದುರ್ಗುಣಂಗಳನ್ನು ನೋಡದಿರುವಾತಗೆ ಮನ್ನಾಥಗೆ ೧

ಆಶೆಪಾಶಗಳ ತೊಲಗಿಸಿದಂಥ ಈಶಗೆ ಜಗಧೀಶಗೆ
ಶ್ರೀಶ ಪೂಜಿಸಿದ ನೇತ್ರಕಮಲಧರೇಶಗೆ ದೇವೇಶಗೆ
ಕೇಶದೊಳಗೆ ಶಶಿಯ ಧರಿಸಿದ ಶಾಂತೇಶಗೆ ಗಿರಿಜೇಶಗೆ
ರಾಸಿಗಮನನೆಂದೆನಿಸಿದ ಚಿತ್ಪ್ರಕಾಶಗೆ ಚಿತ್ಕೋಶಗೆ ೨

ತಾಮಸಗುಣ ಪರಿಹರಿಸುವ ಗುರುರಾಜೇಂದ್ರಗೆ ಭೂತೇಂದ್ರಗೆ
ಭೂಮಿಗಧಿಕ ರೌಪುರದಿ ಮೆರವ ಗಣೇಂದ್ರಗೆ ಪ್ರಮಥೇಂದ್ರಗೆ
ಕಾಮಿಸಿದವರಿಗೆ ಕಲ್ಪದ್ರುಮ ರೂಪೇಂದ್ರಗೆ ಸುಖಸಾಂದ್ರಗೆ
ಪ್ರೇಮದಿ ವರವನು ಕೊಡುವಂಥ ಶಿವಲಿಂಗೇಂದ್ರಗೆ ವಿರತೇಂದ್ರಗೆ ೩

[೧೪]

ಮಂಗಳಾರತಿ

ಮಂಗಳಾರತಿಯನು ಬೆಳಗಿರೆ ಪಾದಕೆರಗಿರೆ ಶಿವ
ಲಿಂಗ ದೇಶಿಕಗೆ ॥ ಮಂ ॥ ॥ ಪಲ್ಲ ॥

ಕಂಗಳ ಮೂರುಳ್ಳದೇವಗೆ ಎನ್ನ ಕಾವಗೆ
ಗಂಗೋತ್ತುಮಾಂಗನಿಗೆ
ಮಂಗಲೆಯನು ವಾಮಾಂಗಗೆ ಉತ್ತುಂಗಗೆ
ಅಂಗಜನ ಭಂಗನಿಗೆ ೧

ಕಾಲ ಮೂಲ ಕುದ್ದಾಲನಿಗೆ ಸುನೀಲಗೆ
ವ್ಯಾಳಾಭರಣ ಭೂಷಿತಗೆ
ಶೂಲದೊಳಗೆ ಕುಣಪ[ಸಿ]ಬ್ಬಗೆ ಬಹು ದಿಟ್ಟಗೆ
ಬಾಲಚಂದ್ರಶೇಖರಗೆ ೨

ಭೂಮಿಗಧಿಕ ರೌಪುರೇಶಗೆ ಶಿವಲಿಂಗೇಶಗೆ
ಕಾಮಿತಾರ್ಥವನೀವನಿಗೆ
ಧೂಮಕೇತಾಕ್ಷನ ಲೇಶಗೆ ಭವನಾಶಗೆ
ಕ್ಷೇಮವನೀವ ಶಂಕರಗೆ ೩

[೧೫]

ಮಂಗಳಾರತಿ

ಮಂಗಳಾರತಿಯ ಬೆಳಗುವೆನೊ ಶ್ರೀ ಶಿವಲಿಂಗೇಶಗೆ
ಮಂಗಳಾರತಿಯ ಬೆಳಗುವೆನೊ
ಜಂಗಮಾಕಾರದಿ ಬಂದು ತುಂಗಮಹಿಮೆಯನಟಿಸಿದಗೆ ॥ ಪಲ್ಲ ॥

ಸಂಗನ ಶರಣರ ಅಂಗದೊಳಿರುತಿಹ
ಭಂಗ ರಹಿತವಾದ ಮಂಗಳಾತ್ಮಕ ರೂಪನಿಗೆ ೧

ಐಶ್ವರ್ಯಸ್ಯ ಸಮಗ್ರಸ್ಯ ವೀರಸ್ಯ ಯಶಶ್ರೀಯಃ ಜ್ಞಾ
ನಸ್ಯ ವೈರಾಗ್ಯ ಷಡ್ಗುಣಸ್ಯನೆಂದೆನಿಸುವಾತನಿಗೆ ೨

ಅಂತೆವಾಸಿ ಮೋಹವೆಂಬಂತಂಧಕಾರಕ್ಕೆ
ಬಂತು ಬಾಲಾದಿತ್ಯನೆಂಬಂತೆ ಗುರುರೂಪಾದನಿಗೆ ೩

ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣೆಂಬ
[1][ಮೊತ್ತ] ಪಂಚಸುಲಕ್ಷಣವ ಉತ್ತುಮತ್ವದಿ ತಳೆದವಗೆ ೪

ಸ್ಥಿತಿ ಲಯೋತ್ಪತ್ಯಂಗಳಿಗೆ ಪಿತರೂಪನೆಂದೆನಿಸಿರ್ದ
ಕ್ಷಿತಿಯೊಳಧಿಕ ಕಾಪುರದತಿಶಯ ಶಿವಲಿಂಗನಿಗೆ ೫

[೧೬]

ಮಂಗಳಾರತಿ

ಎತ್ತಿರೆ ಆರತಿಯ ಕಾಂತೆಯರೆಲ್ಲ ಸತ್ತು ಚಿತ್ತಾನಂದಗೆ
ಮುತ್ತೈದೆಯರು ಬಂದು ಚಿತ್ತಶುದ್ಧದಿ ನಿಂದು
ಮುತ್ತಿನಾರತಿ ಪಿಡಿದೆತ್ತಿ ಮಾರಾಂತಕನಿಗೆ ॥ ಪಲ್ಲ ॥

ಬಡನಡುವಿನ ಬಾಲೇರು ಮೃಡನ ಪೂಜೆಗೆಡವಿಡದಡಿಯಿಡುತೆ
ಸಡಗರದಿಂದಲಿ ಕಡು ತವಕದಿ ಬಂದು
ದೃಢದಿಂದೆ ಪಿಡಿದೆತ್ತಿ ಸೊಡರಿನಾರತಿಯನು ೧

ಸುಂದರಾಂಗಿಯರೆಲ್ಲರು ಬಂಧುರದಿಂದೆ
ಮಿಂದು ಮಡಿಯನುಡುತೆ ಹೆಂದದಾಭರಣಗಳಂದದೊಳಿಡುತಲಿ
ಇಂದುಧರನಿಗೆತ್ತಿ ಕುಂದಣದಾರತಿಯನು ೨

ಎಸೆವ ಮೂಗುತಿಯನಿಟ್ಟು ಫಣೆಯೊಳಗೆ ಶ್ರೀ ಭಸಿತಧಾರಣೆಗೈವುತೆ
ಕುಸುಮಮಾಲೆಗಳ ಕೇಶದೊಳಳವಡಿಸುತೆ
ಪಶುಪತಿಗೆತ್ತಿ ಸೂಸಕದಾರತಿಯನು ೩

ಕನ್ನೆ ಸ್ತ್ರೀಯರು ಕೂಡುತೆ ಬನ್ನಣೆಯಿಂದೆ
ಚನ್ನಾಗಿ ಪಾಡುತಲಿ ಉನ್ನತದಿಂದಲಿ ಸೋಗೆಗಂಗಳೆಯರು
ಪನ್ನಂಗಧರಗೆತ್ತಿ ರನ್ನದಾರತಿಯ ೪

---

೧ ಮತ್ತಿ

ಇಳೆಯೊಳಧಿಕವಾದ ಕಾಪುರಸ್ಥಳದೊಳಗೆ ಶೋಧಿಸುತಲಿಹ
ಅಳಿಕಲೋಚನ ಶಿವಲಿಂಗದೇವೇಶಗೆ
ಕಳಸಕುಚೆಯರೆತ್ತಿ ಪಳುಕಿನಾರತಿಯನು ೫

[೧೭]

ಮಂಗಳಾರತಿಯ ಪದ

ಶ್ರೀ ಶಿವ ಕಲ್ಯಾಣಂ ತೇ ಶ್ರೀ ಶಿವ ಕಲ್ಯಾಣಂ ತೇ
ಶ್ರೀ ಶಿವ ಕಲ್ಯಾಣಂ ತೇ ಶುಭ ಜಯತು
ಶ್ರೀ ಶಿವ ಕಲ್ಯಾಣಂ ತೇ ಶುಭ ಜಯತು ‖ ಪಲ್ಲ ‖

ಸ್ವರ್ಗದಿಂದೆ ಬಂದು ಭರ್ಗನ ರೂಪು ಶಿ–
ಷ್ಯರ್ಗೆ ಗುರುಸ್ವರೂಪಾದ ಮರ್ತ್ಯದೊಳು ೧

ಪಶ್ಚಿಮ ಚಕ್ರಸ್ಥ ನಿಶ್ಚಲ ಲಿಂಗವ
ಸ್ವಚ್ಛದಿಷ್ಟ ಬ್ರಹ್ಮದಲ್ಲಿ ಹುದುಗಿರ್ಪ ೨

ಇಷ್ಟಲಿಂಗದಲ್ಲಿ ನೈಷ್ಠಿಕನಾಗೆಂದು
ಶ್ರೇಷ್ಠ ಸದ್ಗುರು ಕೊಟ್ಟು ಕರಕಿಟ್ಟ ೩

ದೀಕ್ಷೆಯ ಕೊಟ್ಟು ರಕ್ಷೆಯ ಮಾಡುತ
ಮೋಕ್ಷ ನೀವುದೆಂದು ಪೇಳ್ದ ಎನ್ನನಾಳ್ದ ೪

ಭೂಮಿಯೊಳ್ ಕಾಪುರ ಧಾಮಸ್ಥನಾದ ನಿ
ಸ್ಸೀಮ ಶ್ರೀ ಶಿವಲಿಂಗದೇವ ಇಷ್ಟನೀವ ೫

[೧೮]

ಮಂಗಳಾರತಿ

ಆರತಿ ಬೆಳಗುವೆ ಶ್ರೀಗುರುಮೂರ್ತಿಗೆ
ಮಾರ ಸಂಹರ ಧೀರನಿಗೆ
ಕಾರಣರೂಪಗೆ ಕೀರ್ತಿ ಕಲಾಪಗೆ
ಸೂರಿ ಜನ ಸ್ತುತಿ ಪಾತ್ರನಿಗೆ ‖ ಪಲ್ಲ ‖

ಕರಿಮುಖಿತಾತಗೆ ನರಶರಧಾತಗೆ
ಹರಿಶರಮಾಡಿದ ಗುರುವರಗೆ
ಪುರ ಮೂರುಗಳನು ಉರಿನಯನದೊಲುರುಪಿದ
ಪರಶಿವನವತಾರನಿಗೆ ೧

ಕಟಕಿಯನಾಡುವ ಸಟೆ ಮಾನವರನು
ಕುಟಿಲದಿ ಬಿಟ್ಟಿರುವಾತನಿಗೆ
ಘಟಿಸಿದ ಮಹಿಮೆಯ ನಟಿಸುತೆ ಜಗದೊಳು
ಷಟಸ್ಥಲ ದ್ವಿವರವ (?) ಪಠಿಸಿದಗೆ ೨

ಅಷ್ಟಾವರಣದಿ ನೈಷ್ಠೆಯನುಳ್ಳರಿ—
ಗಿಷ್ಟಾರ್ಥವ ಕೊಡುವಾತನಿಗೆ
ಸೃಷ್ಟಿಯೊಳಗೆ ನಷ್ಟತ್ವವಿಲ್ಲದ
ಶ್ರೇಷ್ಠ ಸದ್ಗುರುದೇವನಿಗೆ ೩

ಗಳಿಸಿದ ದ್ರವ್ಯಕ್ಕೆಳಸದ ಮನದೊಳು
ಗೆಳೆತನದೊಳಿರುವಾತನಿಗೆ
ಥಳಥಳಿಸುವ ಚಿತ್ಕಳೆಯ ಬೆಳಗಿನೊಳು
ಹೊಳೆವ ಚಿತ್ಕಳಾರೂಪನಿಗೆ ೪

ಅಂಗನೆಯರ ಮನಸಿಂಗೆ ನಿಲ್ಕದ
ಜಂಗಮದೊಡವೆರದಾತನಿಗೆ
ತುಂಗಕಾಪುರಸ್ಥಲದಲಿ ರಂಗಿಪ—
ಭಂಗರಹಿತ ಶಿವಲಿಂಗನಿಗೆ ೫

ಪಾದಸ್ತೋತ್ರದ ಅಕಾರಾದಿ

ಇತ್ತೀಚೆಗೆ ಪತ್ತೆಯಾದ ಬೃಹತ್ ಶಿಲಾಯುಗದ ನಿವೇಶನಗಳು

ಎಂ. ಜಿ. ಮಂಜುನಾಥ

ಇತ್ತೀಚೆಗೆ ನಾನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಶಾಸನಗಳ ಅಧ್ಯಯನಕ್ಕೆಂದು ಕ್ಷೇತ್ರಕಾರ್ಯಕ್ಕೆ ಹೋಗಿದ್ದಾಗ ಕೆಲವು ಬೃಹತ್ ಶಿಲಾಯುಗದ ನಿವೇಶನಗಳನ್ನು ಪತ್ತೆಹಚ್ಚಿದೆನು. ಅವು ಮಾಗಡಿ ತಾಲ್ಲೂಕಿನ ಕಲ್ಯಾಣಪುರ, ನೆಲಮಂಗಲ ತಾಲ್ಲೂಕಿನ ಮೈಲನಹಳ್ಳಿ, ಅದೇ ತಾಲ್ಲೂಕಿಗೆ ಸೇರಿದ ಭಿಲ್ಲನ ಕೋಟೆ ಬಳಿಯಲ್ಲಿರುವ ಆಲದಹಳ್ಳಿ ಹಾಗೂ ಅದೇ ತಾಲ್ಲೂಕಿಗೆ ಸೇರಿದ 'ಎಲೆಕ್ಯಾತನಹಳ್ಳಿ' ಈ ಊರುಗಳ ಬಳಿ ಇವೆ. ಈ ನಿವೇಶನಗಳ ವಿವರಗಳನ್ನು ಗಮನಿಸುವ ಮೊದಲು ಬೃಹತ್ ಶಿಲಾಯುಗ ಸಂಸ್ಕೃತಿಯ ಸಾಮಾನ್ಯ ಲಕ್ಷಣಗಳನ್ನು ಕುರಿತು ಗಮನಿಸೋಣ.

ಭೂಮಿಯ ಮೇಲೆ ಮಾನವನ ಉಗಮವಾದ ಕಾಲದಲ್ಲಿ ಅಂದಿನ ಜನರು ತಮ್ಮೆಲ್ಲ ಅವಶ್ಯಕತೆಗಳಿಗೂ ಸಂಪೂರ್ಣವಾಗಿ ನಿಸರ್ಗವನ್ನೇ ಅವಲಂಬಿಸಿಕೊಂಡಿದ್ದರು. ಜೀವನೋಪಾಯಕ್ಕಾಗಿ ಬೇಟೆಯನ್ನು ತಮ್ಮ ಮುಖ್ಯ ವೃತ್ತಿಯನ್ನಾಗಿಸಿಕೊಂಡು ಅಲೆಮಾರಿಗಳ ಜೀವನ ನಡೆಸುತ್ತಿದ್ದರು. ಹೀಗೆಯೇ ಸಾವಿರಾರು ವರ್ಷಗಳು ಕಳೆದ ನಂತರ ಅವರು ಪಶುಪಾಲನೆ ಮತ್ತು ವ್ಯವಸಾಯದಲ್ಲಿ ತೊಡಗುವ ಮೂಲಕ ಆಹಾರವನ್ನು ಉತ್ಪಾದಿಸಲು ತೊಡಗಿದರು. ಆಹಾರಕ್ಕಾಗಿ ಪರಾವಲಂಬಿಗಳಾಗಿದ್ದ ಹಂತದಿಂದ ಆಹಾರೋತ್ಪಾದನೆಯ ಹಂತಕ್ಕೆ ಬಂದುದು ಮಾನವನ ಚರಿತ್ರೆಯಲ್ಲಿ ಬಹುಮುಖ್ಯವಾದ ಸಂಗತಿಯಾಗಿದೆ. ವ್ಯವಸಾಯದಲ್ಲಿ ತೊಡಗಿದುದರಿಂದ ಅವರು ಒಂದೇ ಕಡೆ ನೆಲೆ ನಿಲ್ಲುವಂತಾಯಿತು. ಹೀಗೆ ಕೃಷಿ ಮೊಟ್ಟಮೊದಲಿಗೆ ಮಾನವನ ಗ್ರಾಮ ಜೀವನಕ್ಕೆ ಪ್ರಮುಖ ಕಾರಣವಾಯಿತು. ಕ್ರಮೇಣ ಇಂದು ನಾಗರೀಕತೆಯ ಅವಿಭಾಜ್ಯ ಅಂಗವೆನಿಸಿರುವ ಅನೇಕ ಅಂಶಗಳು ರೂಪುಗೊಳ್ಳತೊಡಗಿದವು. ಈ ಸಾಂಸ್ಕೃತಿಕ ವಿಕಾಸದಲ್ಲಿ ಬರವಣಿಗೆಯ ಉಗಮ ಅತಿ ಪ್ರಮುಖ ಅಂಶವಾಗಿದೆ.

ಇತಿಹಾಸದ ರಚನೆಯಲ್ಲಿ ಆಧಾರಗಳು ಪ್ರಮುಖ ಪಾತ್ರ ವಹಿಸುತ್ತವೆ. ಇತಿಹಾಸದ ದೃಷ್ಟಿಯಿಂದ ಕಾಲವನ್ನು ಐತಿಹಾಸಿಕ ಕಾಲ, (ಹಿಸ್ಟಾರಿಕ್ ಪಿರಿಯಡ್) ಹಾಗೂ ಪ್ರಾಗೈತಿಹಾಸಿಕ ಕಾಲ (ಪ್ರಿಹಿಸ್ಟಾರಿಕ್ ಪಿರಿಯಡ್) ಎಂದು ಎರಡು ಭಾಗವಾಗಿ ವಿಂಗಡಿಸಬಹುದು. ಲಿಖಿತ ಆಧಾರಗಳು ಇರುವ ಕಾಲವನ್ನು ಐತಿಹಾಸಿಕ ಕಾಲ ಹಾಗೂ ಲಿಖಿತ ಆಧಾರಗಳಿಲ್ಲದ ಕಾಲವನ್ನು ಪ್ರಾಗೈತಿಹಾಸಿಕ ಕಾಲ ಎಂದು ಕರೆಯಬಹುದು.

ಪ್ರಾಗೈತಿಹಾಸಿಕ ಯುಗವನ್ನು 1) ಆದಿ ಶಿಲಾಯುಗ (ಪೇಲಿಯೋಲಿಥಿಕ್ ಏಜ್). 2) ಸೂಕ್ಷ್ಮ ಶಿಲಾಯುಗ (ಮೈಕ್ರೋಲಿಥಿಕ್ ಏಜ್). 3) ನವಶಿಲಾಯುಗ (ನಿಯೋಲಿಥಿಕ್ ಏಜ್) ಎಂದು ಸ್ಥೂಲವಾಗಿ ಮೂರು ಭಾಗ ಮಾಡಬಹುದು. ನವಶಿಲಾಯುಗವನ್ನು 1) ಶಿಲಾತಾಮ್ರಯುಗ (ಚಾಲ್ಕೋಲಿಥಿಕ್ ಏಜ್) ಹಾಗೂ ಬೃಹತ್ ಶಿಲಾಯುಗ (ಮೆಗಾಲಿಥಿಕ್ ಏಜ್) ಅಥವಾ ಕಬ್ಬಿಣಯುಗ (ಐರನ್ ಏಜ್) ಎಂದು ವಿಂಗಡಿಸಲಾಗಿದೆ.

ಆದಿ ಶಿಲಾಯುಗವು ಕ್ರಿ.ಪೂ. ಐದು ಲಕ್ಷ ವರ್ಷಗಳಿಂದ ಹತ್ತು ಸಾವಿರ ವರ್ಷಗಳವರೆಗೆ, ಸೂಕ್ಷ್ಮ ಶಿಲಾಯುಗವು ಕ್ರಿ.ಪೂ. ಹತ್ತು ಸಾವಿರ ವರ್ಷಗಳಿಂದ ಮೂರು ಸಾವಿರ ವರ್ಷಗಳವರೆಗೆ, ಶಿಲಾ ತಾಮ್ರಯುಗವು ಕ್ರಿ.ಪೂ. ಎರಡು ಸಾವಿರದ ಐದು ನೂರರಿಂದ ಕ್ರಿ.ಪೂ. ಒಂದು ಸಾವಿರದ ಇನ್ನೂರರವರೆಗೆ, ಬೃಹತ್ ಶಿಲಾ ಯುಗವು ಕ್ರಿ.ಪೂ. ಒಂದು ಸಾವಿರದ ಇನ್ನೂರರಿಂದ–ಕ್ರಿ.ಪೂ. 3ನೆಯ ಶತಮಾನದವರೆಗೆ, ದಕ್ಷಿಣ ಭಾರತದ ಕೆಲವು ಪ್ರದೇಶಗಳಲ್ಲಿ ಕ್ರಿ.ಪೂ. 1–2ನೆಯ ಶತಮಾನದವರೆಗೂ ಅಸ್ತಿತ್ವದಲ್ಲಿತ್ತು.

ಬೃಹತ್ ಶಿಲಾಯುಗ ಸಂಸ್ಕೃತಿಯ ವೈಶಿಷ್ಟ್ಯಗಳು : ನವಶಿಲಾಯುಗದಲ್ಲಿ ಶಿಲಾಯುಧಗಳ ಜೊತೆ ಜೊತೆಗೇ ತಾಮ್ರದ ಆಯುಧಗಳನ್ನೂ ಬಳಸಲಾರಂಭಿಸಿದುದರಿಂದ ಶಿಲಾ ತಾಮ್ರಯುಗ ಅಥವಾ ಚಾಲ್ಕೋಲಿಥಿಕ್ ಏಜ್ ಎಂದು ಇದನ್ನು ಕರೆಯಲಾಗಿದೆ. ನಂತರದ ಕಾಲದಲ್ಲಿ ಕಬ್ಬಿಣದ ಆವಿಷ್ಕಾರವಾಗಿ ಕಬ್ಬಿಣದ ಆಯುಧಗಳು ಬಳಕೆಗೆ ಬಂದು ಶಿಲಾಯುಧಗಳ ಬಳಕೆ ನಿಂತಿತು. ಈ ಯುಗವನ್ನು 'ಕಬ್ಬಿಣ ಯುಗ' ಎಂದು ಕರೆಯಲಾಗಿದೆ. ಅತ್ಯಂತ ಬಲವಾದ ಲೋಹವಾದ ಕಬ್ಬಿಣದ ಆಯುಧಗಳನ್ನು ಹೊಂದಿದ್ದ ಈ ಯುಗದ ಜನರು ಪ್ರಗತಿಯ ಹಾದಿಯಲ್ಲಿ ಧಾಪುಗಾಲನ್ನು ಹಾಕಿದರು. ಇವರು ದೊಡ್ಡ ದೊಡ್ಡ ಬೃಹದಾಕಾರದ ಕಲ್ಲು ಚಪ್ಪಡಿಗಳನ್ನು ಬಳಸಿ ಸಮಾಧಿಗಳನ್ನು ನಿರ್ಮಿಸುತ್ತಿದ್ದುದರಿಂದ ಈ ಸಂಸ್ಕೃತಿಯನ್ನು "ಬೃಹತ್ ಶಿಲಾಯುಗ ಸಂಸ್ಕೃತಿ" ಅಥವಾ "ಬೃಹತ್ ಶಿಲಾ ಸಮಾಧಿ ಸಂಸ್ಕೃತಿ" ಎಂದು ಕರೆಯಲಾಗುತ್ತಿದೆ.

ಬೃಹತ್ ಶಿಲಾಯುಗದ ಜನರು ಕೃಷಿಯನ್ನು ಸಣ್ಣ ಪ್ರಮಾಣದಲ್ಲಿ ಮಾಡುತ್ತಿದ್ದರು. ಪಶುಪಾಲನೆ ರೂಢಿಯಲ್ಲಿತ್ತು. ಕೃಷಿಗೆ ಹಾಗೂ ತಮ್ಮ ಉಪಯೋಗಕ್ಕೆ ಅನುಕೂಲವಾಗುವಂತೆ ನೀರಿನ ಅನುಕೂಲ ಇರುವಂತಹ ಹೊಳೆ, ತೊರೆಗಳ ದಡದಲ್ಲಿಯೇ ತಮ್ಮ ನಿವಾಸ ಏರ್ಪಡಿಸಿಕೊಳ್ಳುತ್ತಿದ್ದರು. ರಕ್ಷಣೆಯ ದೃಷ್ಟಿಯಿಂದ ಹಾಗೂ ನಿಸರ್ಗದತ್ತವಾದ ನಿವಾಸಗಳನ್ನು ಬಳಸಿಕೊಳ್ಳುವ ದೃಷ್ಟಿಯಿಂದ ಕಲ್ಲಾಸರೆಗಳನ್ನು ಹಾಗೂ ಗವಿಗಳನ್ನು ನಿವಾಸಗಳನ್ನಾಗಿ ಬಳಸಿಕೊಳ್ಳುತ್ತಿದ್ದರು. ಅಲ್ಲದೆ

ಸಮಾಧಿಗಳನ್ನು ಕಟ್ಟುವುದಕ್ಕೆ ಕಲ್ಲು ಅವಶ್ಯಕವಾಗಿ ಬೇಕಾಗಿದ್ದುದರಿಂದ ಈ ಎಲ್ಲ ಸೌಕರ್ಯಗಳುಳ್ಳ ಬೆಟ್ಟ ಗುಡ್ಡಗಳ ಬದಿಯ ಪ್ರದೇಶವನ್ನು ಆರಿಸಿಕೊಳ್ಳುತ್ತಿದ್ದರು. ಕೃಷಿಗೆ ಉಪಯೋಗವಾಗುವ ನೇಗಿಲಗುಳ, ಕುಡುಗೋಲು, ಚಾಕು, ಉಳಿ, ಹಾಗೂ ಆಯುಧಗಳಾದ ಉದ್ದನೆಯ ಕತ್ತಿ, ಈಟಿ, ಬಾಣ, ಭರ್ಜಿ ಮುಂತಾದ ಕಬ್ಬಿಣದ ವಸ್ತುಗಳನ್ನು ಬಳಸುತ್ತಿದ್ದರು. ನಿಸರ್ಗದತ್ತವಾದ ಕಬ್ಬಿಣದ ಅದಿರನ್ನು ಕರಗಿಸಿ ಆಯುಧಗಳನ್ನು ಮಾಡಿಕೊಳ್ಳುವ ತಾಂತ್ರಿಕ ಕುಶಲತೆ ಇವರಲ್ಲಿತ್ತೆಂಬುದಕ್ಕೆ ಇವರ ನಿವೇಶನಗಳಲ್ಲಿ ದೊರೆತ ಕಬ್ಬಿಣದ ವಸ್ತುಗಳೇ ಸಾಕ್ಷಿಯಾಗಿವೆ.

ಬೃಹತ್ ಶಿಲಾಯುಗದ ಜನರು ಗವಿಗಳು, ಕಲ್ಲಾಸರೆಗಳೇ ಅಲ್ಲದೆ ಕೃತಕವಾಗಿ ನಿರ್ಮಿಸಿದ ಗುಡಿಸಲುಗಳಂತಹುಗಳಲ್ಲಿಯೂ ವಾಸಿಸುತ್ತಿದ್ದರು. ಇವರ ಸಮಾಧಿಗಳುಳ್ಳ ಹಲವಾರು ನಿವೇಶನಗಳು ದೊರೆತಿದ್ದರೂ ಸಹ ಇವರ ನಿವಾಸಗಳುಳ್ಳ ನಿವೇಶನಗಳು ಕೇವಲ ಬೆರಳೆಣಿಕೆಯಷ್ಟು ಮಾತ್ರ ಸಿಕ್ಕಿವೆ, "ಅವರ ವಾಸದ ಮನೆಗಳು ಸರಳವಾಗಿದ್ದು ಮಣ್ಣು ಮೆತ್ತಿದ ಹೆಣೆದ ದಬ್ಬೆಗೋಡೆ ಮತ್ತು ಹುಲ್ಲುಕಡ್ಡಿ ಮಾಡು ಮುಂತಾದ ಬಹುಬೇಗ ನಶಿಸಿ ಹೋಗುವಂತಹ ವಸ್ತುಗಳಿಂದ ಕಟ್ಟಲಾಗುತ್ತಿತ್ತೆಂದು ಭಾವಿಸಲಾಗಿದೆ".[1]

ಬೃಹತ್ ಶಿಲಾಯುಗದ ನಿವೇಶನಗಳಲ್ಲಿ ನಮಗೆ ಪ್ರಮುಖವಾಗಿ ದೊರೆಯುವ ಅವಶೇಷಗಳೆಂದರೆ ಅವರ ಸಮಾಧಿಗಳು. ಈ ಸಮಾಧಿಗಳಲ್ಲಿ ಹಲವು ಪ್ರಕಾರಗಳಿವೆ. ಅವು ಯಾವುವೆಂದರೆ 1. ಹಾದಿಕೋಣೆಗೋರಿಗಳು. 2. ರಂಧ್ರಕೋಣೆ(ಕಂಡಿಕೋಣೆ) ಗೋರಿಗಳು. 3. ಪೆಟ್ಟಿಗೆಯಾಕಾರದ ಕೋಣೆ ಗೋರಿಗಳು. 4. ಕೊರೆದ ಕೋಣೆ ಗೋರಿಗಳು. 5. ತುಂಡು ಕಲ್ಲುದಿಣ್ಣೆಗಳು. 6. ಕಲ್ಲುವೃತ್ತಗಳು. 7. ಕಾಲುಳ್ಳ ಆಯತ ಅಸ್ಥಿ ಮೃತ್ ಪಾತ್ರೆಯುಳ್ಳ ಕಲ್ಲು ವೃತ್ತಗಳು. 8. ನಿಲಸುಗಲ್ಲುಗಳು 9. ಗುಡಾಣ ಅಸ್ಥಿ ಮೃತ್ ಪಾತ್ರೆಗಳ ಕುಣಿಗಳು. 10. ಶವ ಕುಣಿಗಳು.[2]

ಬೃ. ಶಿ. ಯುಗದ ಸಮಾಧಿಗಳ ವೈಶಿಷ್ಟ್ಯಗಳು :— ಬೃ. ಶಿ. ಯುಗದ ಜನರ ಸಮಾಧಿಗಳ ಹೆಗ್ಗುರುತೆಂದರೆ ಇವರ ಸಮಾಧಿಗಳ ಸುತ್ತಲೂ ಗುಂಡಾಗಿ ಕಲ್ಲುಗಳಿಂದ ನಿರ್ಮಿಸಿದ ವೃತ್ತವಿರುತ್ತದೆ. ಇದು ಚಪ್ಪಡಿಯ ಚೂರುಗಳಿಂದಲಾದರೂ ನಿರ್ಮಿತವಾಗಿರಬಹುದು. ಅಥವಾ ಕಾಡುಗಲ್ಲುಗಳನ್ನು (ಉರುಟುಗಲ್ಲು) ಸಿಕ್ಕಿದ್ದನ್ನು ಸಿಕ್ಕಂತೆಯೇ ತಂದು ನಿರ್ಮಿಸಿದ್ದಾಗಿರಬಹುದು. ಒಟ್ಟಿನಲ್ಲಿ ಒಂದಾದರೂ ಶಿಲಾವೃತ್ತ ಈ ಸಮಾಧಿಗಳ ಸುತ್ತಲೂ ಇರುತ್ತದೆ. ಕೆಲವೊಮ್ಮೆ ಎರಡು ಮೂರು ವೃತ್ತಗಳಿರುವುದೂ ಉಂಟು.

---

1 ಕರ್ನಾಟಕ ರಾಜ್ಯ ಗ್ಯಾಸೆಟಿಯರ್ : A. ಸುಂದರ. ಪುಟ-161.

2 ಪ್ರಾಗಿತಿಹಾಸ, ಪುಟ- 939. ಕರ್ನಾಟಕ-ಕನ್ನಡ ವಿಷಯ ವಿಶ್ವಕೋಶ ಪ್ರಧಾನ ಸಂಪಾದಕ : ಹಾ. ಮಾ. ನಾಯಕ. ಕ. ಅ. ಸಂ. ಮೈಸೂರು ವಿ. ವಿ. 1979.

ಕೋಣೆ ಗೋರಿಗಳು ಬೃಹದಾಕಾರದ ಚಪ್ಪಡಿಗಳಿಂದ ಕೋಣೆಗಳ ಆಕಾರದಲ್ಲಿ ಕಟ್ಟಲ್ಪಟ್ಟಿರುತ್ತವೆ. ತೊಟ್ಟಿಗಳಂತೆ ಆಯತಾಕಾರದಲ್ಲಿ ಚಪ್ಪಡಿಗಳಿಂದ ಕಟ್ಟಲ್ಪಟ್ಟಿದ್ದು, ಮೇಲೆ ಕೆಳಗೆ ಕೂಡ ಚಪ್ಪಡಿಗಳಿಂದಲೇ ಮುಚ್ಚಲ್ಪಟ್ಟಿರುತ್ತವೆ. ಸಾಮಾನ್ಯವಾಗಿ ಈ ಗೋರಿಗಳ ಪೂರ್ವದಿಕ್ಕಿನ ಚಪ್ಪಡಿಯಲ್ಲಿ ಒಂದು ರಂಧ್ರವಿರುತ್ತದೆ. ಇದು ಚೌಕಾಕಾರದಲ್ಲಿದ್ದರೆ ಅದು 'ಹಾದಿಕೋಣೆಗೋರಿ'ಯೆನ್ನಿಸಿಕೊಳ್ಳುತ್ತದೆ. ವೃತ್ತಾಕಾರದಲ್ಲಿದ್ದರೆ ಅದನ್ನು 'ರಂಧ್ರಕೋಣೆಗೋರಿ' ಎಂದು ಕರೆಯುತ್ತಾರೆ. ಈ ಗೋರಿಗಳನ್ನು ಕಟ್ಟಲು ಬಳಸುವ ಚಪ್ಪಡಿಗಳು ಕನಿಷ್ಠ 6 ಅಂಗುಲವಾದರೂ ಮಂದವಾಗಿರುತ್ತವೆ. ಕೆಲವೊಮ್ಮೆ ಎರಡು ಅಡಿ ಮಂದವಿರುವುದೂ ಉಂಟು. ಕನಿಷ್ಠ ಎಂಟು ಅಡಿಗಳಷ್ಟು ಉದ್ದವಾಗಿದ್ದು ಐದಾರು ಅಡಿಗಳಷ್ಟು ಅಗಲವಾಗಿರುತ್ತದೆ. ಸುತ್ತಲೂ ಇರುವ ವೃತ್ತ ಸುಮಾರು 4 ಮೀಟರ್‌ನಿಂದ ಹಿಡಿದು ಹತ್ತಾರು ಮೀಟರ್‌ಗಳಷ್ಟು ವ್ಯಾಸವಿರುತ್ತದೆ.

ಸಮಾಧಿಯ ಒಳಭಾಗದಲ್ಲಿ ಮಣ್ಣಿನ ಮಡಿಕೆ ಕುಡಿಕೆಗಳನ್ನು ಮುಚ್ಚಳ ಸಹಿತವಾಗಿ ಇಡುತ್ತಿದ್ದರು. ಅವುಗಳಲ್ಲಿ ಅಸ್ಥಿಗಳು, ಆಹಾರಧಾನ್ಯಗಳು ಮುಂತಾದವುಗಳನ್ನಿಡುತ್ತಿದ್ದರು. ಸಮಾಧಿಯ ಒಳಭಾಗದಲ್ಲಿ ಆಯುಧಗಳು, ತಾಮ್ರದ, ಹಾಗೂ ಚಿನ್ನದ ಮಣಿಗಳನ್ನು ಸಹ ಇಡುತ್ತಿದ್ದರು.

ಇವು ಬೃಹತ್ ಶಿಲಾಯುಗ ಸಂಸ್ಕೃತಿಯ ಸಾಮಾನ್ಯ ಅಂಶಗಳು. ಇನ್ನು ಮುಂದೆ ಇತ್ತೀಚೆಗೆ ನಾನು ಪತ್ತೆ ಹಚ್ಚಿದ ಬೃಹತ್ ಶಿಲಾಯುಗದ ನಿವೇಶನಗಳನ್ನು ಕುರಿತು ಗಮನಿಸೋಣ.

ಕಲ್ಯಾಣಪುರದ ನಿವೇಶನ :— ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾಗಡಿ ತಾಲ್ಲೂಕು, 'ಸೋಲೂರು' ಹೋಬಳಿಯ 'ಬಸವೇನಹಳ್ಳಿ' ಎಂಬ ಗ್ರಾಮದ ಬಳಿಯ ಬೆಟ್ಟದ ಹಿಂಭಾಗದಲ್ಲಿ 'ಕಲ್ಯಾಣಪುರ' ಎಂಬ ಸಣ್ಣ ಹಳ್ಳಿಯ ವ್ಯಾಪ್ತಿಯಲ್ಲಿ ಈ ಬೃಹತ್ ಶಿಲಾಯುಗದ ನಿವೇಶನವಿದೆ. ಇಲ್ಲಿ ಮೂವತ್ತೈದು (35) ಹಾದಿ ಕೋಣೆ ಗೋರಿಗಳಿವೆ. ಇವುಗಳಲ್ಲಿ ಇಪ್ಪತ್ತೊಂದು ಖಾಸಗಿ ಹಿಡುವಳಿ ಜಮೀನಿನಲ್ಲಿವೆ. ಉಳಿದವು ಸರ್ಕಾರಿ ಜಮೀನಿನಲ್ಲಿವೆ. ಇವುಗಳಲ್ಲದೆ ಇನ್ನೂ 8-10 ಗೋರಿಗಳನ್ನು ಆ ಜಮೀನಿನ ಒಡೆಯರು ಅಗೆದು ಆ ಸ್ಥಳವನ್ನು ಸಹ ವ್ಯವಸಾಯಕ್ಕೆ ಬಳಸಿಕೊಂಡಿದ್ದಾರೆ. ಒಂದು ಗೋರಿಯ ಮೇಲ್ಭಾಗದ ಚಪ್ಪಡಿಯನ್ನು ತೆಗೆದು ಅದರೊಳಗಿನ ಹಳಿಯಮಣ್ಣನ್ನು ಗೊಬ್ಬರವಾಗಿ ಬಳಸಿಕೊಂಡು ಆ ಗುಂಡಿಯನ್ನು ತಿಪ್ಪೆಯನ್ನಾಗಿ ಪರಿವರ್ತಿಸಿಕೊಂಡಿದ್ದಾರೆ. ಮತ್ತೊಂದು ಗೋರಿಯ ಸ್ವಲ್ಪ ಭಾಗ ಸರ್ಕಾರಿ ಶಾಲೆಯ ಕಟ್ಟಡದ ಪಾಯಕ್ಕೆ ಸೇರಿ ಹೋಗಿದೆ. ನಾಲ್ಕಾರು ಗೋರಿಗಳ ಮೇಲ್ಭಾಗದ ಚಪ್ಪಡಿಗಳನ್ನು ಸೈಜ್ ಕಲ್ಲುಗಳಾಗಿ ಒಡೆಸಿ ಬಳಸಿಕೊಂಡಿದ್ದಾರೆ.



ಕಲ್ಯಾಣಪುರದ ಬೃಹತ್ ಶಿಲಾಯುಗದ ಒಂದು ಸಮಾಧಿ

ಇಲ್ಲಿನ ಗೋರಿಗಳನ್ನು ಅಗೆದು ವ್ಯವಸಾಯಕ್ಕೆ ಬಳಸಿಕೊಂಡಿದ್ದ ವ್ಯಕ್ತಿಯನ್ನು ಅದರಲ್ಲಿ ದೊರೆತ ವಸ್ತುಗಳ ಬಗ್ಗೆ ಕೇಳಿದಾಗ ಅವರು ಆ ಬಗ್ಗೆ ವಿವರಿಸಿದರು.

1 ಸಂಪೂರ್ಣ ತುಕ್ಕು ಹಿಡಿದು ಹಾಳಾದ ಒಂದು ಕಬ್ಬಿಣದ ಕತ್ತಿ.

2 ಚಕ್ರದಿಂದ ನಿರ್ಮಿಸಿದ ಕೆಂಪುಬಣ್ಣದ ಮಣ್ಣಿನ 4 ಮಡಿಕೆಗಳು. ಅವುಗಳ ಕೆಳಭಾಗದಲ್ಲಿ ಸ್ಟ್ಯಾಂಡಿನ ಕಾಲುಗಳಂತೆ ಕಾಲುಗಳಿದ್ದವು.

3 ಮಡಿಕೆಗಳ ಒಳಭಾಗದಲ್ಲಿ ಮಣ್ಣು ತುಂಬಿತ್ತಂತೆ. ಅವುಗಳ ಮೇಲೆ ಯಾವುದೇ ರೀತಿಯ ಚಿತ್ರಗಳಿರಲಿಲ್ಲ. ಹಾಗೂ ಮೇಲ್ಭಾಗದಲ್ಲಿ ಮಣ್ಣಿನ ತಟ್ಟೆಗಳನ್ನು ಮುಚ್ಚಲಾಗಿತ್ತು.

4 ಆ ಗೋರಿಯಲ್ಲಾಗಲೀ ಮಡಿಕೆಗಳಲ್ಲಾಗಲೀ ಯಾವುದೇ ಮೂಳೆಗಳು ದೊರೆತಿರಲಿಲ್ಲ. (ಬಹುಶಃ ಅವರು ಸೂಕ್ಷ್ಮವಾಗಿ ಗಮನಿಸಿರಲಾರರು.) ನಿಧಿ ದೊರೆಯುವ ಆಸೆಯಿಂದ ಆ ಬಗ್ಗೆ ಗಮನಿಸುತ್ತಾರೆಯೇ ವಿನಃ ಮೂಳೆಗಳ ಬಗ್ಗೆ ಜನ ಸಾಮಾನ್ಯರು ಗಮನಿಸುವುದಿಲ್ಲ.

5 ಇಲ್ಲಿನ ಮತ್ತೆರಡು ಗೋರಿಗಳನ್ನು ನಿಧಿ ದೊರೆಯುವ ಆಸೆಗೆ ರಾತ್ರೋರಾತ್ರಿ ಯಾರೋ ಅಪರಿಚಿತರು ಅಗೆದು ಅಲ್ಲಿನ ಮಡಿಕೆಗಳನ್ನು ಹೊರ ಹಾಕಿದ್ದರಂತೆ. ಅವೂ ಸಹ ಕೆಂಪು ಬಣ್ಣದ್ದವಾಗಿದ್ದುವಂತೆ.

ಕಲ್ಯಾಣಪುರದ ಸಮಾಧಿಗಳನ್ನು ಅಲ್ಲಿಯೇ ವಿಪುಲವಾಗಿ ದೊರೆಯುವ ಗ್ರಾನೈಟ್ ಚಪ್ಪಡಿಗಳನ್ನು ಬಳಸಿ ನಿರ್ಮಿಸಲಾಗಿದೆ. ಬೇರೆ ಕಡೆಯ ಬೃ. ಶಿ. ಯುಗದ ಜನರ ಸಮಾಧಿಗಳನ್ನೇ ಇವೂ ಹೋಲುತ್ತವೆ. ಆಯತಾಕಾರದಲ್ಲಿ ಪೂರ್ವ ಪಶ್ಚಿಮಾಭಿಮುಖವಾಗಿವೆ.

ಇಲ್ಲಿನ ಬಹುತೇಕ ಎಲ್ಲ ಗೋರಿಗಳೂ ಈಗ ಭೂಮಿಯ ಮಟ್ಟದಿಂದ ಸುಮಾರು ಒಂದು ಅಡಿ ಮಾತ್ರ ಮೇಲಕ್ಕಿವೆ. ಉಳಿದ ಭಾಗ ಭೂಮಿಯ ಒಳಗಿದೆ. ಇಲ್ಲಿ ಬಳಸಲಾಗಿರುವ ಚಪ್ಪಡಿಗಳೆಲ್ಲವೂ ಸುಮಾರು ಹನ್ನೆರಡು ಅಂಗುಲ ಮಂದವಾಗಿವೆ. ಒಂದು ಚಪ್ಪಡಿ ಸುಮಾರು ಹದಿನೆಂಟು ಅಂಗುಲವಿದೆ. ಸಾಧಾರಣವಾಗಿ ಇಲ್ಲಿ ಬಳಸಲ್ಪಟ್ಟ ಬಹುತೇಕ ಚಪ್ಪಡಿಗಳ ಉದ್ದ ಹತ್ತು ಅಡಿ (120 ಅಂಗುಲ). ಅಗಲ 6½ ಅಡಿ (ಸು. 80 ಅಂಗುಲ). ಇಲ್ಲಿನ ಎಲ್ಲ ಗೋರಿಗಳಿಗೆ ಪೂರ್ವದಿಕ್ಕಿನಲ್ಲಿ 1½ ಅಡಿ ಚಚ್ಚೌಕದ ದ್ವಾರವಿದೆ. ಬಹುತೇಕ ಎಲ್ಲ ಗೋರಿಗಳ ಸುತ್ತಲೂ ಕಲ್ಲುಗಳಿಂದ ನಿರ್ಮಿಸಿದ ಮೂರು ವೃತ್ತಗಳಿವೆ. ಈ ವೃತ್ತಗಳು 16 ಅಡಿ, 18 ಅಡಿ ಹಾಗೂ 20 ಅಡಿಗಳಷ್ಟು ವ್ಯಾಸವಿದೆ.

ಒಂದು ಕಾಲದಲ್ಲಿ ಕಲ್ಯಾಣಪುರದ ಸುತ್ತಮುತ್ತಲಿನ ಪ್ರದೇಶದಲ್ಲಿ ದಟ್ಟವಾದ ಕಾಡು ಇದ್ದುದಕ್ಕೆ ಆಧಾರಗಳಿವೆ. ಕೆಲವಾರು ವರ್ಷಗಳ ಹಿಂದೆ ಇಲ್ಲಿ ಎರಡು ಹುಲಿಗಳನ್ನು ಸಹ ಬೇಟೆಯಾಡಿದ ಬಗ್ಗೆ ಇಲ್ಲಿನ ಸ್ಥಳೀಯರು ತಿಳಿಸಿದರು. ಈಗಲೂ ಈ ಪ್ರದೇಶದಲ್ಲಿ ನರಿ, ತೋಳ, ಕರಡಿಗಳು ಕಂಡು ಬರುತ್ತವೆ. ಇನ್ನು 2500 ವರ್ಷಗಳ ಹಿಂದೆ ಇಲ್ಲಿ ದಟ್ಟವಾದ ಕಾಡು ಇದ್ದಿರಲೇ ಬೇಕು. ಕಲ್ಯಾಣಪುರದ ಈ ನಿವೇಶನಕ್ಕೆ ಕೇವಲ 200 ಮೀಟರ್‌ಗಳ ದೂರದಲ್ಲಿ ಈಗಲೂ ಒಂದು ಹೊಳೆ ಹರಿಯುತ್ತದೆ. ಈ ಹೊಳೆಯ ದಡದಲ್ಲಿ ವ್ಯವಸಾಯ ಯೋಗ್ಯವಾದ ಜಮೀನು ಲಭ್ಯವಿದೆ. ವ್ಯವಸಾಯ ಯೋಗ್ಯವಾದ ಭೂಮಿ, ಕುಡಿಯುವ ನೀರು ಹಾಗೂ ನೀರು ಕುಡಿಯಲು ಬರುವ ಪ್ರಾಣಿಗಳು ಬೇಟೆಯಾಡಲು ಸುಲಭವಾಗಿ ದೊರೆಯುತ್ತಿದ್ದ ಈ ಪ್ರದೇಶದಲ್ಲಿ ಆ ಜನರು ನೆಲೆಸಲು ಒಳ್ಳೆಯ ನೆಲೆಯಾಗಿತ್ತೆಂದು ಊಹಿಸಬಹುದು. ಕಲ್ಯಾಣಪುರವು ಸಾವನದುರ್ಗಕ್ಕೆ ಉತ್ತರದಲ್ಲಿ ಸುಮಾರು 8 ಕಿ. ಮಿ. ದೂರದಲ್ಲಿದೆ. ಅದೇ ರೀತಿ ಮತ್ತೊಂದು ಬೃ. ಶಿ. ಯುಗದ ನಿವೇಶನವಾದ ಹೂಜಗಲ್ಲು ಸಾವನದುರ್ಗದಿಂದ ಪಶ್ಚಿಮಕ್ಕೆ ಸು. 8 ಮೈಲಿ ದೂರದಲ್ಲಿದೆ. ಈ ಸುತ್ತಮುತ್ತಲಿನ ಪ್ರದೇಶದಲ್ಲಿ ಬೃ. ಶಿ. ಯುಗದ ಬಹಳಷ್ಟು ಜನರು ವಾಸಿಸುತ್ತಿದ್ದರೆಂದು ಊಹಿಸಬಹುದು.[1]

ಆಲದಹಳ್ಳಿಯ ನಿವೇಶನ : ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿಗೆ ಸೇರಿದ ತುಮಕೂರು ರಸ್ತೆಯಲ್ಲಿರುವ 'ಭಿಲ್ಲನಕೋಟೆ'ಯ ದಕ್ಷಿಣಕ್ಕಿರುವ

---

1 ಕಲ್ಯಾಣಪುರದ ಕ್ಷೇತ್ರಕಾರ್ಯದಲ್ಲಿ ಜೊತೆಗಿದ್ದ ಮಾನ್ಯರ ಶ್ರೀ ಅಯ್ಯಪ್ಪನವರ ಸಹಾಯ ಸ್ಮರಣೀಯವಾಗಿದೆ.

ಆಲದಹಳ್ಳಿ ಬೆಟ್ಟದ ಪೂರ್ವ ದಿಕ್ಕಿನಲ್ಲಿ ಸುಮಾರು ನಲವತ್ತೆರಡು 'ಹಾದಿ ಕೋಣೆ' ಗೋರಿಗಳಿವೆ. ಇಲ್ಲಿನ ಬಹುಪಾಲು ಗೋರಿಗಳು ಅತ್ಯಂತ ಸುರಕ್ಷಿತ ಸ್ಥಿತಿಯಲ್ಲಿವೆ. ಕೇವಲ ಒಂದೇ ಒಂದು ಗೋರಿ ಮಾತ್ರ ನಿಧಿ ಶೋಧಕರ ದಾಳಿಗೆ ಗುರಿಯಾಗಿ ಹಾಳಾಗಿದೆ. ಈ ಗೋರಿಯನ್ನು ಅವರು ಅದರ ಬಾಗಿಲ ಮೂಲಕ ಒಳಹೊಕ್ಕು ಅದರೊಳಗಿದ್ದ ಎಲ್ಲ ವಸ್ತುಗಳನ್ನೂ ಹೊರತೆಗೆದು ಒಡೆದು ಹಾಕಿದ್ದರು. ಅವರಿಗೆ ಏನು ಸಿಕ್ಕಿತೋ ತಿಳಿದಿಲ್ಲ. ಆದರೆ ಅವರು ಒಡೆದು ಹಾಕಿದ ಮಡಿಕೆಯ ಚೂರುಗಳು ನನಗೆ ದೊರೆತವು. ಚಕ್ರದಿಂದ ಮಾಡಲ್ಪಟ್ಟ, ತೆಳುವಾದ ಮಡಿಕೆಯ ಚೂರುಗಳು ಒಳಭಾಗದಲ್ಲಿ ಕಪ್ಪಾಗಿದ್ದು ಹೊರಭಾಗದಲ್ಲಿ ಕೆಂಪಗಿವೆ.



ಆಲದಹಳ್ಳಿ ಬಳಿಯ ಬೃಹತ್ ಶಿಲಾಯುಗಕ್ಕೆ ಸೇರಿದ ಒಂದು ಸಮಾಧಿ

ಈ ನಿವೇಶನದ ಬದಿಯಲ್ಲಿಯೇ ಇರುವ ಬೆಟ್ಟದ ಪರಿಸರದಲ್ಲಿ ನಾಲ್ಕಾರು ಗವಿಗಳು ಹಾಗೂ ಸುಮಾರು ಹತ್ತು ಕಲ್ಲಾಸರೆಗಳೂ ಇವೆ. ಇವು ಆ ಜನರ ನಿವಾಸಗಳಾಗಿದ್ದಿರಬಹುದು. ಆದರೆ ಇವುಗಳ ಒಳಭಾಗದಲ್ಲಾಗಲೀ ಅಥವಾ ಹೊರ ಭಾಗದಲ್ಲಾಗಲೀ ಯಾವುದೇ ರೀತಿಯ ರೇಖಾಚಿತ್ರಗಳಾಗಲೀ, ಆಯುಧಗಳಾಗಲೀ, ಮಡಿಕೆ ಕುಡಿಕೆಗಳಾಗಲೀ ನನಗೆ ಲಭ್ಯವಾಗಲಿಲ್ಲ. ಈ ಕಲ್ಲಾಸರೆಗಳ ಒಳಭಾಗದಲ್ಲಿ ಉತ್ಖನನ ಮಾಡಿದರೆ ಉಪಯುಕ್ತ ಮಾಹಿತಿ ಲಭ್ಯವಾಗಬಹುದು. ಇಲ್ಲಿನ ಎಲ್ಲ ಸಮಾಧಿಗಳು ಅತ್ಯಂತ ಸುಸ್ಥಿತಿಯಲ್ಲಿರುವುದರಿಂದ ಉತ್ಖನನ ಮಾಡಲು ಯೋಗ್ಯವಾಗಿವೆ.[1]

---

1 ಭಿಲ್ಲನಕೋಟೆಯ ಕ್ಷೇತ್ರಕಾರ್ಯದಲ್ಲಿ ಗೆಳೆಯ ಆರ್. ಜಗದೀಶನ ಸಹಾಯ ಸ್ಮರಣೀಯ.

ಎಲೆಕ್ಯಾತನ ಹಳ್ಳಿ : ನೆಲಮಂಗಲ ತಾಲ್ಲೂಕಿಗೆ ಸೇರಿದ ಸೋಂಪುರ ಹೋಬಳಿಯ ಎಲೆಕ್ಯಾತನ ಹಳ್ಳಿ ಎಂಬ ಗ್ರಾಮದಲ್ಲಿ ಕೆಲವು ಜೈನ ಬಸದಿಗಳಿವೆ. ಅಲ್ಲಿ ಶಾಸನಗಳು ದೊರೆಯಬಹುದೆಂಬ ಆಸೆಯಿಂದ ಕ್ಷೇತ್ರ ಕಾರ್ಯಕ್ಕೆ ಹೋಗಿದ್ದಾಗ ಅಲ್ಲಿಯ ರಸ್ತೆಯ ಪಕ್ಕದಲ್ಲಿ ಬೃಹತ್ ಶಿಲಾಯುಗಕ್ಕೆ ಸೇರಿದ ವೃತ್ತಾಕಾರದ ನಿಲಸು ಗಲ್ಲುಗಳುಳ್ಳ ನಾಲ್ಕು ಗೋರಿಗಳು ಪತ್ತೆಯಾದವು. ಇದರಲ್ಲಿ ಒಂದು ಸಮಾಧಿಯನ್ನು ಸಂಪೂರ್ಣವಾಗಿ ಅಗೆದು ತೆಗೆದು ಅದನ್ನು ತಿಪ್ಪೆಯಾಗಿ ಪರಿವರ್ತಿಸಲಾಗಿದೆ. ಉಳಿದ ಮೂರು ಒಂದು ಸ್ವಲ್ಪವೂ ಹಾಳಾಗದೆ ಉಳಿದಿದೆ. ಎಲೆಕ್ಯಾತನ ಹಳ್ಳಿಯ ಸುತ್ತ ಮುತ್ತಲಿನಲ್ಲಿ ಎಲ್ಲಾ ಕಡೆ ಸಂಪೂರ್ಣವಾಗಿ ಹುಡುಕಿದರೂ ಸಹ ಮತ್ಯಾವುದೇ ಸಮಾಧಿಗಳು ಪತ್ತೆಯಾಗಲಿಲ್ಲ. ಬಹುಶಃ ಇದು ಬೃ. ಶಿ. ಯುಗದ ಒಂದು ತಾತ್ಕಾಲಿಕ ಅಲ್ಪಕಾಲೀನ ವಸತಿಯ ನಿವೇಶನವಾಗಿದ್ದಿರಬಹುದೆಂದು ತೋರುತ್ತದೆ.[1]

ಮೈಲನ ಹಳ್ಳಿಯ ನಿವೇಶನ : ನೆಲಮಂಗಲದ ಬಳಿ ದೊಡ್ಡಬಳ್ಳಾಪುರ ರಸ್ತೆ ಯಲ್ಲಿರುವ ಮೈಲನ ಹಳ್ಳಿಯ ವ್ಯಾಪ್ತಿಯಲ್ಲಿ ಸುಮಾರು ಒಂದುನೂರ ಒಂಬತ್ತು ವೃತ್ತಾಕಾರದ ನಿಲಸುಗಲ್ಲುಗಳಿರುವ ಗೋರಿಗಳು ಹಾಗೂ ಹನ್ನೆರಡು ಹಾದಿಕೋಣೆ ಗೋರಿಗಳಿವೆ. (ಈ ಗೋರಿಗಳು ಒಂದೇ ಪ್ರದೇಶದಲ್ಲಿ ಕೆಲವು ಎಕರೆಗಳ ವ್ಯಾಪ್ತಿ ಯೊಳಗಿದ್ದರೂ ಸಹ ಆ ಜಮೀನು ಮೈಲನಹಳ್ಳಿ, ಭೈರಶೆಟ್ಟಿಹಳ್ಳಿಗಳ ಜನಗಳಿಗೆ ಹಂಚಿಹೋಗಿದೆ).

ಮೈಲನ ಹಳ್ಳಿ ನಿವೇಶನದಲ್ಲಿರುವ ಬಹುತೇಕ ಸಮಾಧಿಗಳು ಸ್ವಲ್ಪವೂ ಹಾನಿ ಯಾಗದೆ ಅವು ಇದ್ದ ರೀತಿಯಲ್ಲಿಯೇ ಇವೆ. ಆದರೆ ಇಂದು ಈ ಪ್ರದೇಶದಲ್ಲಿ ನೀಲಗಿರಿ ಮರಗಳನ್ನು ಬೆಳೆಸಲಾಗಿದೆ. ಕೆಲವು ಸಮಾಧಿಗಳ ಮೇಲೆಯೇ ನೀಲಗಿರಿ ಗಿಡಗಳು ಬೆಳೆಯುತ್ತಿವೆ. ಹೀಗೆಯೇ ಇನ್ನು ಕೆಲ ವರ್ಷಗಳು ಕಳೆದರೆ ಈ ನೀಲಗಿರಿ ಗಿಡಗಳು ಈ ಸಮಾಧಿಗಳನ್ನು ಸೀಳಿಕೊಂಡು ಒಳಗೆ ಬೇರು ಬಿಡಬಹುದು. ಹಾಗಾಗಿ ಇವು ಹಾಳಾಗುವ ಸಾಧ್ಯತೆಗಳಿವೆ.[2]

ಇನ್ನುಮುಂದೆ ಬೃಹತ್ ಶಿಲಾಯುಗದ ಜನರ ಅಂತ್ಯ ಸಂಸ್ಕಾರದ ರೀತಿ ನೀತಿಗಳನ್ನು ಕುರಿತು ಗಮನಿಸೋಣ.

ಬೃ.ಶಿ. ಯುಗದ ಜನರು ಸಾಮಾನ್ಯವಾಗಿ ಶವಗಳನ್ನು ಸಮಾಧಿ ಮಾಡುತ್ತಿರ ಲಿಲ್ಲ. ಶವವನ್ನು ಬೆಟ್ಟಗುಡ್ಡಗಳೆಡೆಯಲ್ಲಿ ಇಟ್ಟು ಹದ್ದುಕಾಗೆಗಳು ಆ ಶವವನ್ನು

---

1 ಎಲೆಕ್ಯಾತನಹಳ್ಳಿಯ ಕ್ಷೇತ್ರಕಾರ್ಯದಲ್ಲಿ ನನ್ನೊಡನೆ ಬಂದಿದ್ದ ಆರ್. ಜಗದೀಶ್ ಹಾಗೂ ಹೆಚ್. ಎಸ್. ನೀಲಕಂಠೇಗೌಡರ ಸಹಾಯ ಸ್ಮರಣೀಯ.

2 ಮೈಲನಹಳ್ಳಿಯ ಕ್ಷೇತ್ರಕಾರ್ಯದಲ್ಲಿ ಕಂಬೇಗೌಡರ ಪಾಳ್ಯದ ಶ್ರೀನಿವಾಸಯ್ಯ ಹಾಗೂ ಮೈಲನಹಳ್ಳಿಯ ರಾಜಶೇಖರಯ್ಯನವರ ಸಹಾಯ ಸ್ಮರಣೀಯ.

ಕಿತ್ತು ತಿಂದನಂತರ ಕೆಲವು ದಿನಗಳು ಕಳೆದ ಮೇಲೆ ಅಳಿದುಳಿದ ಅಸ್ಥಿಗಳನ್ನೆಲ್ಲಾ ಒಟ್ಟು ಗೂಡಿಸಿ ಒಂದು ಕುಂಭದಲ್ಲಿಟ್ಟು ಅಥವಾ ಹಾಗೆಯೇ ಗೋರಿಯಲ್ಲಿಟ್ಟು ಸುತ್ತಲೂ ಗೋರಿ ಕಟ್ಟುತ್ತಿದ್ದರೆಂದು ಕಾಣುತ್ತದೆ. ಕೆಲವೊಮ್ಮೆ ಇಂತಹ ಗೋರಿಗಳಲ್ಲಿ ಕಾಲಾನು ಕ್ರಮದಲ್ಲಿ ಇಡಲ್ಪಟ್ಟ ಒಂದಕ್ಕಿಂತ ಹೆಚ್ಚಿನ ಸವಗಳ ಅಸ್ಥಿಗಳು ದೊರೆತಿರುವುದರಿಂದ ಇವುಗಳು ಒಂದೇ ಕುಟುಂಬದ ವ್ಯಕ್ತಿಗಳ ಅಸ್ಥಿಗಳನ್ನು ಸಂಗ್ರಹಿಸಿದ ಗೋರಿಗಳೆಂದು ಹೇಳಬಹುದು. ಮೊದಲು ಸತ್ತವರ ಅಸ್ಥಿಗಳನ್ನು ಒಟ್ಟುಗೂಡಿಸಿ ಒಂದು ಸಮಾಧಿಯ ಒಳಗಿಡುತ್ತಿದ್ದರೆಂದು ಕಾಣುತ್ತದೆ. ನಂತರ ಕಾಲಾಂತರದಲ್ಲಿ ಸತ್ತ ಅದೇ ಕುಟುಂಬದ ಬೇರೆ ವ್ಯಕ್ತಿಗಳ ಅಸ್ಥಿಗಳನ್ನು ಸಹ ಸಂಗ್ರಹಿಸಿ ಮತ್ತೊಂದು ಮಡಿಕೆಯಲ್ಲಿಟ್ಟು ಗೋರಿಯ ದ್ವಾರ ರಂದ್ರದ ಮೂಲಕ ಒಳಗಿಡುತ್ತಿದ್ದರೆಂದು ಊಹಿಸಬಹುದು. ಈ ಅನುಕೂಲಕ್ಕಾಗಿಯೇ ಬಹುಶಃ ದ್ವಾರ ರಂದ್ರವನ್ನು ನಿರ್ಮಿಸುತ್ತಿದ್ದರೆಂದು ಕಾಣುತ್ತದೆ. ಹಾಗೂ ವರ್ಷಕ್ಕೊಮ್ಮೆ ಗತಿಸಿದ ತಮ್ಮ ಹಿರಿಯರಿಗೆ ಪೂಜೆ ಪುನಸ್ಕಾರ ಸಲ್ಲಿಸಿ ಅವರಿಗಿಷ್ಟವಾದ ಆಹಾರ ಪದಾರ್ಥಗಳನ್ನು ಈ ದ್ವಾರದ ಮೂಲಕ ಒಳಗಿಡುತ್ತಿದ್ದ ರೆಂದು ಕಾಣುತ್ತದೆ. ಈ ಪದ್ಧತಿಯು ಸವಕಳಿಯೇ ವರ್ಷಕ್ಕೊಮ್ಮೆ ಗತಿಸಿದ ಹಿರಿಯ ರೆಲ್ಲರಿಗೂ ಪೂಜೆ ಸಲ್ಲಿಸುವ ಮಹಾನವಮಿಯ ಹಬ್ಬವಾಗಿದೆ. ಹಾಗೂ ಇಂದೂ ಆಚರಣೆಯಲ್ಲಿದೆ.

ಬೃಹತ್ ಶಿಲಾಯುಗದ ಜನರ ಸಮಾಧಿಗಳು ದೊರೆತ ಎಲ್ಲ ಪ್ರದೇಶಗಳಲ್ಲಿಯೂ ಅಕ್ಕಪಕ್ಕದ ಬೆಟ್ಟಗುಡ್ಡಗಳಲ್ಲಿ ಒಂದು ರೀತಿಯ ಕಲ್ಲಿನ ರಾಶಿಗಳುಳ್ಳ ಕಲ್ಲುಮಂಟಪಗಳು ದೊರೆತಿವೆ. ಕಲ್ಯಾಣಪುರದ ಬೆಟ್ಟದಲ್ಲಿಯೂ 6 ಮಂಟಪಗಳಿವೆ. ಇವುಗಳನ್ನು ಯಾರು ನಿರ್ಮಿಸಿದರು, ಯಾವ ಕಾರಣಕ್ಕಾಗಿ ನಿರ್ಮಿಸಿದರು ಎಂದು ಇದುವರೆವಿಗೂ ಯಾರೂ ಸರಿಯಾಗಿ ಊಹಿಸಿಲ್ಲ. ಬಹುಶಃ ಇವು ಈ ಜನರು ಶವಗಳನ್ನು ಇಡುತ್ತಿದ್ದ ಮಂಟಪಗಳಾಗಿದ್ದಿರಬಹುದು. ಇಲ್ಲಿ ಶವವನ್ನಿಟ್ಟು ಅದನ್ನು ಹದ್ದು ಕಾಗೆಗಳು ಕಿತ್ತು ತಿಂದ ನಂತರ ಉಳಿದ ಅಸ್ಥಿಗಳನ್ನು ಮಡಿಕೆಯೊಳಗಿಟ್ಟು ಸಮಾಧಿ ಮಾಡುತ್ತಿದ್ದರೆಂದು ಕಾಣುತ್ತದೆ.

ಬೃಹತ್ ಶಿಲಾಯುಗದ ಸಂಸ್ಕೃತಿಯ ಜನರ ಆಚರಣೆಯ ಸವಕಳಿ ರೂಪದ ಆಚರಣೆಯೊಂದು ಇಂದಿಗೂ ಆಚರಣೆಯಲ್ಲಿರುವುದನ್ನು ಗಮನಿಸಬಹುದು. ಮಾಗಡಿ ತಾಲ್ಲೂಕಿನ ಗ್ರಾಮೀಣ ಪ್ರದೇಶದಲ್ಲಿನ ಯಾರಾದರೂ ಹಾಸಿಗೆ ಹಿಡಿದು ತಿಂಗಳುಗಟ್ಟಲೆ ನರಳಿ ಸವೆದು ಸತ್ತರೆ, ಅಥವಾ ಯಾರಾದರೂ 'ತೊನ್ನು' ಬಂದ ವ್ಯಕ್ತಿಗಳು ಮರಣಿ ಸಿದರೆ ಅವರ ಶವಗಳನ್ನು ತೆಗೆದುಕೊಂಡು ಹೋಗಿ ಊರ ಹೊರಗಿನ ಒಂದು ನಿರ್ಜನ ಪ್ರದೇಶದಲ್ಲಿ ಬೆಟ್ಟಗುಡ್ಡಗಳ ಸನಿಹದಲ್ಲಿಟ್ಟು ಸುತ್ತಲೂ ಕಲ್ಲುಗಳನ್ನು ಸುಮಾರು ಅರ್ಧ ದೇಹ ಮರೆಯಾಗುವಂತೆ ಜೋಡಿಸಿ ಹಿಂತಿರುಗುತ್ತಾರೆ. ಸಂಬಂಧಿಕರು ಹಾಗೂ ಊರಿನೆಲ್ಲ ಜನರೂ ಒಂದೊಂದು ಕಲ್ಲನ್ನು ಆ ರಾಶಿಯ ಮೇಲೆ ಆ ಸಂದರ್ಭದಲ್ಲಿ

ಹಾಕಿರುತ್ತಾರೆ. ಇದಕ್ಕೆ 'ಕಲ್ಲುಸೇವೆ' ಎಂದು ಹೆಸರು. ನಾಲ್ಕಾರು ದಿನಗಳ ನಂತರ ಹದ್ದು ಕಾಗೆಗಳು ತಿಂದು ಉಳಿಸಿದ ಅಸ್ಥಿಗಳನ್ನು ಸಂಗ್ರಹಿಸಿ ಸಮಾಧಿ ಮಾಡುತ್ತಾರೆ. ಹೀಗೆ ಕಲ್ಲು ಸೇವೆ ಮಾಡದಿದ್ದರೆ ಕ್ಷಾಮ ಬರುತ್ತದೆಂಬುದು ಈ ಜನರ ನಂಬಿಕೆ. ಈ ರೀತಿಯ ಕಲ್ಲುಸೇವೆಯ ಕಲ್ಲು ಮಂಟಪ ಹಾಗೂ ಕಲ್ಲು ರಾಶಿಗಳು ಈಗಲೂ ಮಾಗಡಿ ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿ ಕಂಡು ಬರುತ್ತವೆ. ಬೃಹತ್ ಶಿಲಾಯುಗದ ಜನರ ನಿವೇಶನಗಳ ಬದಿಯ ಬೆಟ್ಟ ಗುಡ್ಡಗಳಲ್ಲಿ ಕಂಡು ಬರುವ ಮಂಟಪಗಳೂ ಸಹ ಇದೇ ರೀತಿ ನಿರ್ಮಾಣಗೊಂಡಿರಬಹುದು.

ಪ್ರಾಚೀನ ಕಾಲದಲ್ಲಿ ಜೈನರಲ್ಲಿಯೂ ಇದೇ ರೀತಿಯ ಪದ್ಧತಿ ಅಸ್ತಿತ್ವದಲ್ಲಿತ್ತು. ಇವರಲ್ಲಿ ಜೈನ ಸನ್ಯಾಸಿಗಳ್ಯಾರಾದರೂ ಮರಣಿಸಿದರೆ ಅವರ ಶವವನ್ನು ಸಮಾಧಿ ಮಾಡುತ್ತಿರಲಿಲ್ಲ. ಅಥವಾ ಅಗ್ನಿ ಸಂಸ್ಕಾರ ಮಾಡುತ್ತಿರಲಿಲ್ಲ. ಅದರ ಬದಲು ಶವ ಗಳನ್ನು ನಿರ್ಜನವಾದ ಅರಣ್ಯ ಪ್ರದೇಶಗಳಲ್ಲಿ ವಿಸರ್ಜಿಸಿಬಿಡುತ್ತಿದ್ದರು. ಆ ಶವಗಳು ಕ್ರಿಮಿ, ಕೀಟ, ಹದ್ದು ಕಾಗೆಗಳಿಗೆ ಆಹಾರವಾಗಿ ಪಂಚಭೂತಗಳೊಂದಿಗೆ ಸೇರಿ ಹೋಗು ತ್ತಿತ್ತು.

ಈ ಸಂಪ್ರಬಂಧದಲ್ಲಿ ಬೃಹತ್ ಶಿಲಾಯುಗದ ಜನರ ರೀತಿನೀತಿಗಳ ಬಗ್ಗೆ, ಅವರ ಆಚಾರ ವಿಚಾರಗಳ ಬಗ್ಗೆ, ಹಾಗೂ ಇತ್ತೀಚಿಗೆ ನಾನು ಪತ್ತೆ ಹಚ್ಚಿದ ಕೆಲವು ನಿವೇಶನಗಳ ಬಗ್ಗೆ ಚರ್ಚಿಸಿದ್ದೇನೆ.

ಇದುವರೆಗೂ ಹಲವಾರು ಪ್ರದೇಶಗಳಲ್ಲಿ ಬೃ.ಶಿ. ಯುಗದ ಜನರ ಸಮಾಧಿಗಳು ದೊರೆತಿದ್ದರೂ ಸಹ ಅವರ ವಾಸದ ನಿವೇಶನಗಳು ಹೆಚ್ಚಾಗಿ ದೊರೆತಿಲ್ಲ. ಆದರೆ ಈಗ ಗುರುತಿಸಲ್ಪಟ್ಟಿರುವ ಕಲ್ಯಾಣಪುರದ ನಿವೇಶನ, ಭಿಲ್ಲನಕೋಟೆಯ ಬಳಿಯ ನಿವೇಶನ, ಹಾಗೂ ಮೈಲನಹಳ್ಳಿಯ ನಿವೇಶನಗಳನ್ನು ಉತ್ಖನನ ಮಾಡಿದರೆ ಉತ್ತಮ ಫಲ ದೊರೆಯಬಹುದೆಂದು ನನ್ನ ನಿರೀಕ್ಷೆ. ಈ ನಿಟ್ಟಿನಲ್ಲಿ ನಮ್ಮ ಪುರಾತತ್ವ ಇಲಾಖೆ ಕ್ರಮ ಕೈಗೊಂಡರೆ ನನ್ನ ನಿರೀಕ್ಷೆ ಸಫಲವಾದರೂ ಆಗಬಹುದು.

ಮೈಲನಹಳ್ಳಿಯ ಬಳಿಯಲ್ಲಿರುವ ಹೊಸದಾಗಿ ಪತ್ತೆಯಾದ ಗಂಗರ ಕಾಲದ ಅವಶೇಷಗಳು

ಎಂ. ಜಿ. ಮಂಜುನಾಥ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲಕ್ಕೆ ಐದು ಕಿ.ಮಿ. ದೂರದಲ್ಲಿರುವ ಮೈಲನಹಳ್ಳಿಯ ಬಳಿ ಗಂಗರ ಕಾಲಕ್ಕೆ ಸೇರಿದ ಬೂದಿಗುಡ್ಡೆಗಳು ಪತ್ತೆಯಾಗಿವೆ. ಇತ್ತೀಚೆಗೆ ಆ ಪ್ರದೇಶದಲ್ಲಿ ಬೃಹತ್ ಶಿಲಾಯುಗದ ಒಂದು ನಿವೇಶನವನ್ನು ನಾನು ಪತ್ತೆ ಹಚ್ಚಿದೆನು. ಆ ಸಂದರ್ಭದಲ್ಲಿ ಆ ಪ್ರದೇಶದ ಸಂಪೂರ್ಣ ಪರಿವೀಕ್ಷಣೆ ಮಾಡುವಾಗ ಈ ಬೂದಿಗುಡ್ಡೆಗಳನ್ನು ಪತ್ತೆಹಚ್ಚಿದೆನು.

ಮೈಲನಹಳ್ಳಿ ಗ್ರಾಮದಲ್ಲಿ ಮೂರು ಬೂದಿಗುಡ್ಡೆಗಳಿವೆ. ಗ್ರಾಮದ ದಕ್ಷಿಣ ದಿಕ್ಕಿನಲ್ಲಿ ಎರಡೆಕರೆ, ಅಲ್ಲಿಂದ ಉತ್ತರಕ್ಕೆ ಒಂದು ಫರ್ಲಾಂಗ್ ದೂರದಲ್ಲಿ ಎರಡೆಕರೆ, ಅದರ ಹತ್ತಿರದಲ್ಲಿಯೇ ನೂರು ಮೀಟರ್ ಆಚೆಗೆ ಸುಮಾರು ಆರು ಎಕರೆ ಬೂದಿಗುಡ್ಡೆಗಳಿವೆ. ಮೈಲನಹಳ್ಳಿಯ ಈ ನಿವೇಶನದ ಪೂರ್ವಕ್ಕೆ ಸುಮಾರು ಒಂದೂವರೆ ಕಿ.ಮಿ. ದೂರದಲ್ಲಿ ದೊಡ್ಡಬಳ್ಳಾಪುರದ ರಸ್ತೆಯಲ್ಲಿ 'ಯಾಡಾಳು' ಎಂಬ ಗ್ರಾಮದ ಬಳಿ ಸಹ ಮೂರು ಬೂದಿಗುಡ್ಡೆಗಳಿವೆ. ಅಲ್ಲಿನ ಶಾಲೆಯ ಹಿಂಭಾಗದಲ್ಲಿ ಸುಮಾರು ಎರಡೆಕರೆ, ಅಲ್ಲಿಂದ ಸುಮಾರು ನೂರು ಮೀಟರ್ ದಕ್ಷಿಣಕ್ಕೆ ಸುಮಾರು ಎರಡೆಕರೆ ಹಾಗೂ ಅದರ ಸನಿಹದಲ್ಲಿಯೇ ಸುಮಾರು ಐವತ್ತು ಮೀಟರ್ ದೂರದಲ್ಲಿ ಸುಮಾರು ಎಂಟು ಎಕರೆ ಪ್ರದೇಶದಲ್ಲಿ ಬೂದಿಗುಡ್ಡೆಗಳಿವೆ. ಮೈಲನಹಳ್ಳಿಯ ದಕ್ಷಿಣಕ್ಕೆ ಬೆಂಗಳೂರು ತುಮಕೂರು ರಸ್ತೆಯಲ್ಲಿ ಬೂದಿಹಾಳು ಎಂಬ ಗ್ರಾಮದ ಬಳಿ ಬಸ್ ಸ್ಟ್ಯಾಂಡ್ ಪಕ್ಕದಲ್ಲಿಯೇ ಸುಮಾರು ಹನ್ನೆರಡು ಎಕರೆ ಬೂದಿಗುಡ್ಡೆಯಿದೆ. ತುಮಕೂರು ರಸ್ತೆಯಲ್ಲಿಯೇ ಇರುವ ನರಸೀಪುರದ ಬಳಿಯಿರುವ ಹೆಗ್ಗುಂದ ಎಂಬ ಗ್ರಾಮದ ಬಳಿ ಸಹ ಸುಮಾರು ಹನ್ನೆರಡು ಎಕರೆ ಬೂದಿಗುಡ್ಡೆಯಿದೆ. ಇದೇ ನಿವೇಶನದಲ್ಲಿಯೇ ಒಂದು ಪ್ರಾಚೀನ ಶಿವಾಲಯದ ಭಗ್ನಾವಶೇಷಗಳೂ ಸಹ ಇವೆ.

ಇಲ್ಲಿಯ ಬೂದಿಗುಡ್ಡೆಯ ಲಕ್ಷಣಗಳು : ಹಿಂದೆ ಯಾವುದೋ ಕಾಲದಲ್ಲಿ ಊರು ಇದ್ದ ಸ್ಥಳವೆಲ್ಲಾ ಪಾಳು ಬಿದ್ದು ಹೋಗಿ ಒಂದು ರೀತಿಯ ಬೂದಿಯಂತೆ ಕಂಡು ಬರುವ ಪ್ರದೇಶವನ್ನು ಬೂದಿಗುಡ್ಡೆ ಎಂದು ಕರೆಯಲಾಗುತ್ತದೆ. ನೂರಾರು ವರ್ಷಗಳ ಹಳೆಯ ನಿವೇಶನಗಳಲ್ಲಿ ಈ ರೀತಿಯ ಬೂದಿಯ ಅವಶೇಷಗಳು ಕಂಡು

ಬರುತ್ತವೆ. ಇಲ್ಲಿಯು ಬೂದಿಗುಡ್ಡೆಗಳಲ್ಲಿ ಮಡಿಕೆ, ಕುಡಿಕೆಗಳ ಚೂರುಗಳು, ಕೆಲವೊಮ್ಮೆ ಸ್ವಲ್ಪವೂ ಹಾನಿಯಾಗದ ಮಡಿಕೆ ಕುಡಿಕೆಗಳು, ಪ್ರಾಣಿಗಳ ಹಾಗೂ ಮಾನವರ ಮೂಳೆಗಳು ಕಪಾಲಗಳು, ತುಕ್ಕು ಹಿಡಿದ ಆಯುಧಗಳ ಅವಶೇಷಗಳು, ರಾಗಿ ಕಲ್ಲುಗಳು, ಕೆಲವೊಮ್ಮೆ ಬೆಳ್ಳಿ ನಾಣ್ಯಗಳೂ ದೊರೆತದ್ದು ಉಂಟು ಎಂದು ಅಲ್ಲಿನ ನಿವಾಸಿಗಳು ತಿಳಿಸಿದರು.

ಇಲ್ಲಿ ದೊರೆತ ಹಲವಾರು ಮೂಳೆ ಚೂರುಗಳು, ಹಲ್ಲು ಹಾಗೂ ಮಡಿಕೆ ಕುಡಿಕೆ ಚೂರುಗಳು ಹಾಗೂ ಒಂದು ಸಂಪೂರ್ಣ ಸುಸ್ಥಿತಿಯಲ್ಲಿರುವ ಮಡಿಕೆ ಈಗ ನನ್ನ ಸಂಗ್ರಹದಲ್ಲಿವೆ. ಇವುಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿದಾಗ ಇವೆಲ್ಲವೂ ಗಂಗರ ಕಾಲದ ಅಂದರೆ ಕ್ರಿ.ಶ. 800ರ ಕಾಲದ ವಸ್ತುಗಳೆಂದು ತಿಳಿಯಿತು. (ಅಲ್ಲಿ ಎಂದೋ ಯಾರಿಗೋ ಸಿಕ್ಕಿದ ಬೆಳ್ಳಿ ನಾಣ್ಯಗಳು ನನಗೆ ದೊರೆತಿದ್ದರೆ ಕೆಲವೇ ನಿಮಿಷಗಳಲ್ಲಿ ಅದರ ಕಾಲದ ಬಗ್ಗೆ ನಿಖರವಾಗಿ ಹೇಳಬಹುದಾಗಿತ್ತು).

ತಲಕಾಡಿನ ಗಂಗರು ಅವರ ಅಂತಿಮ ಕಾಲದಲ್ಲಿ ತಮ್ಮ ರಾಜಧಾನಿಯನ್ನು ತಲಕಾಡಿನಿಂದ ಮಣ್ಣೆಗೆ ಬದಲಾಯಿಸಿಕೊಂಡು ಅಲ್ಲಿಂದ ತಮ್ಮ ಆಳ್ವಿಕೆಯನ್ನು ನಡೆಸುತ್ತಿದ್ದರು. ಮಣ್ಣೆ ಮೈಲನಹಳ್ಳಿಗೆ ಸುಮಾರು ಹನ್ನೆರಡು ಮೈಲಿ ದೂರ ದಲ್ಲಿದೆ. ಆ ಕಾಲದಲ್ಲಿ ಇಂದಿನ ಮೈಲನಹಳ್ಳಿ, ಯಾಡಾಳು, ಬೂದಿಹಾಳು ಹಾಗೂ ಹೆಗ್ಗುಂದಗಳು ಇರುವ ಪ್ರದೇಶವೆಲ್ಲಾ ಗಂಗರ ಆಳ್ವಿಕೆಗೆ ಒಳಪಟ್ಟಿದ್ದವು. ಇಂದು ಬೂದಿ ಗುಡ್ಡೆಗಳು ಇರುವ ನಿವೇಶನದಲ್ಲಿ ಹಿಂದೆ ಊರು ಇದ್ದಿರಬಹುದು. ಕಾಲಾಂತರದಲ್ಲಿ ಆ ಊರುಗಳು ಶತ್ರುಗಳ ದಾಳಿಗೋ ಮತ್ತಾವುದಕ್ಕೋ ಬಲಿಯಾಗಿ ನಾಶವಾಗಿರಬಹುದು.

ಇದುವರೆಗೂ ಗಂಗರ ಇತಿಹಾಸವನ್ನು ಸಮಗ್ರವಾಗಿ ನಿಖರವಾಗಿ ರಚಿಸಲು ತಕ್ಕಷ್ಟು ಆಧಾರಗಳೇ ದೊರೆತಿಲ್ಲ. ಪ್ರಸ್ತುತ ಪತ್ತೆಯಾಗಿರುವ ಈ ನಿವೇಶನಗಳನ್ನು ಉತ್ಖನನ ಮಾಡಿದರೆ ಅಮೂಲ್ಯವಾದ ವಿಷಯಗಳೇನಾದರೂ ಹೊರಬರುವ ಸಾಧ್ಯತೆಗಳಿವೆ. ಪುರಾತತ್ತ್ವ ಇಲಾಖೆಯವರು ಈ ನಿಟ್ಟಿನಲ್ಲಿ ಕ್ರಮ ಕೈಗೊಂಡರೆ ಈ ನಿವೇಶನಗಳ ಬೂದಿಗುಡ್ಡೆಗಳು ಚಿನ್ನದ ಗುಡ್ಡೆಗಳಾಗುವ ಸಾಧ್ಯತೆಗಳೂ ಇವೆ[1].

---

1 ಮಣ್ಣೆ ಹಾಗೂ ಹೆಗ್ಗುಂದದ ಕ್ಷೇತ್ರಕಾರ್ಯದಲ್ಲಿ ನನ್ನೊಡನೆ ಬಂದು ಸಹಕರಿಸಿದ ಗೆಳೆಯ ಹೊ.ನ. ನೀಲಕಂಠೇಗೌಡನ ಸಹಾಯ ಸ್ಮರಣೀಯ.

ಆಗಮಂಗಳೊಳಗಣ ಗೀತಾಮೃತದ ಷಟ್‌ಸ್ಥಲದ ಸೃಷ್ಟಿವಚನ*

(ಸಂ) ಎಸ್. ಜಿ. ಪಾಟೀಲ್

ಶ್ರೀ ಗುರು ನಿಮ್ಮಯ ಪಾದವನು
ಈಗಲಿ ನಂಬಿದೆ ಚಿತ್ತದೊಳಾಂ
ಆಗಮತೀತನೆ ನೀ ದಯದಿಂ
ರಾಗದಿ ರಕ್ಷಿಸು ಸಂತತವಮಾಂ ॥ ೧ ॥

ಉತ್ಪಲಮಾಲಾ ವೃತ್ತ ।

ಶ್ರೀ ಗುರುಸಿದ್ಧಲಿಂಗಯತಿ ತುಂಗ ನಿರಂಗ ಮದಾಪಹಂ ಕೃಪಾ ।
ಸಾಗರ ರಕ್ಷಿಸಯ್ಯ ಮುನಿ ವಂದಿತ ಪಾದ ಪಯೋಜಮಂ ಮನೋ ।
ರಾಗದಿ ನಚ್ಚಿ ಮೆಚ್ಚಿ ಮುದ ಹೆಚ್ಚುತೆ ಕೀರ್ತಿಸೆ ಭೋಗ ಮೋಕ್ಷಮಂ ।
ಜ್ಯಾಗದೊಳೀವ ದೇವಸುತ ಜೀವನೆ ಕಾವನೆ ಸಿದ್ಧಲಿಂಗನೆ ॥ ೨ ॥

ಗ್ರಂಥ

ಗುರುದೇವೋ ಮಹಾದೇವೋ ಗುರುರ್ದೇವೋ ಸದಾಶಿವಃ ।
ಗುರುದೇವಾತ್ ಪರಂನಾಸ್ತಿ ತಸ್ಮೈ ಶ್ರೀ ಗುರವೇ ನಮಃ । ॥ ೩ ॥

ವಚನ

ಶ್ರೀಮತ್ಪರಮ ಪಾವನನಪ್ಪ ಜ್ಞಾನಾನಂದನೆನಿಪ್ಪ ಶ್ರೀ ಗುರುದೇವನನ್ನು ಸತ್ಕ್ರಿಯೋತ್ತಮನೆನಿಪ್ಪ ಶಿಷ್ಯನು, ಆ ಶ್ರೀ ಗುರುದೇವಗೆ ಭಯಭಕ್ತಿ ಕಿಂಕರತ್ವದಿಂದ ಸಾಷ್ಟಾಂಗ ಪ್ರಣುತನಾಗಿ, ಎದ್ದುನಿಂದು ಕರಕಮಲಮಂ ಮುಗಿದು, ಭುವನಾದಿ ಸತ್ಕ್ರಿಯ ಜ್ಞಾನಗಳೆಂತಾದವೆಂದು ಭಿನ್ನೈಸಲು ಆಜ್ಞಾನಾನಂದನೆನಿಪ್ಪ ಶ್ರೀ ಗುರುದೇವನು ಅಂತಃಕ್ಕರಣದಿಂದ ಹೇಳಲುದ್ಯೋಗೀಸಿದನು ಅದೆಂತೆಂದೊಡೆ

ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವರೆಂಬ ಪಂಚಮೂರ್ತಿಗಳು ।
ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶವೆಂಬ ಪಂಚಭೂತಗಳು ।

*ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸಂಖ್ಯೆ—3027

ನಾಮ, ರೂಪು, ಹಿಂದು ಮುಂದು ವರ್ಣಪಂಚಕವು ಎಂಬುವು ಏನು ಇಲ್ಲದಂದು ಮಹದಾಕಾಶವೆನಿಸುವ ಮಹಾಬಲಿಗನಾಗಿರ್ದ ನಿತ್ಯನಿರಂಜನ ವಸ್ತುವೆ

ತನ್ನ ತಾನೆ ನಿಷ್ಕಾರಣಲೀಲೆಯಿಂದ ಮಿಸುಗಿದಲ್ಲಿಯೆ ನಾದೋದಯವಾಯಿತ್ತು।
ಆ ನಾದದಲ್ಲಿ ಕಳೆ ಉದಯವಾಯಿತ್ತು. ಆ ಕಳೆಯೆ ಬಲಿದು ಬಿಂದುವಾಯಿತ್ತು।
ಆ ನಾದ, ಕಳಾ, ಬಿಂದುಗಳೇಕಾಕಾರವಾಗಿಯೆ ಪಂಚ ಸಂಜ್ಞೆಯುಳ್ಳ ಪರಶಿವನೆನಿಸಿದನು ।

ಆ ಪರಶಿವನು ಇತರರಿಲ್ಲದೆ ಕಿಂಕರನಾಗಿ ನಿಂದು ತನ್ನೊಳು ತಾನಾಳೋಚನಂಗೈದು ।
ಏನುವಂ ಕಾಣದೆ ಮುಂದಣ ಕೃತ್ಯ ಕಾರಣ ಸತ್ಕ್ರಿಯಾ ಸದಾಚಾರವೆಂತೆಂದು ।
ವಿವೇಕಮುಖಾವಲೋಕನದಿಂ ತಿಳಿದು ನೋಡಿ, ಇನ್ನಿದಕೆದಾವ ರೀತಿ ಎಂದು
ಆ ನಿರಂಜನ ಪರವಸ್ತುವಿನ ಧ್ಯಾನಂಗೈಯಲು, ತನ್ನ ಧ್ಯಾನ ಪ್ರಕಾಶವೆ ಬಲಿದು ।

ಗುರುರೂಪವಮಂ ಬಲಿದು ಮುಂದೆ ನಿಂದಿರಲು ಹರುಷಮಂ ತಾಳ್ದು ।
ಸ್ವಾಮಾಮುಂದಣ ಕೃತ್ಯ ಕಾರಣ, ಸತ್ಕ್ರಿಯಾ ಸದಾಚಾರವೆಂತೆಂದು ಭಿನ್ನಪಂಗೈಯಲು

ಆ ಗುರುದೇವನು ನಿಜಲಿಂಗ ಚಿದ್ಭಸ್ಮವನ್ನು ಧಾರಣಂಗೈದು ।
ಪಂಚನಾಗ್ನಿಯಲ್ಲಿ ಪಂಚಕಲೆ, ಪಂಚಾಕೃತಿ, ಪಂಚಸಾದಾಖ್ಯೆ ಪಂಚವರ್ಣಬ್ಯೆವನೆ ಪಂಚಮುಖಮಂ ಮಾಡಿ ತೋರಿ ।

ಪಂಚಮುಖ ಪರಶಿವ ನೀನೆಂದು, ಪಂಚಕೃತ್ಯಾಧೀಶ ನೀನೆಂದು ।
ಚಿತ್‌ಶಕ್ತಿ ಸಂಯುತನಂ ಮಾಡಿ, ಸರ್ವಾಧಿಕಾರ ಪಟ್ಟವಂ ಕಟ್ಟಿ ಉಪದೇಶಂಗೈದು ।

ತನ್ನೊಳೆ ಸಾಕಾರವನಡಗಿರಲು, ಆ ಪರಶಿವನು ನಿತ್ಯಾನಂದದಿಂದಿರುತ್ತ ।
ತನ್ನ ಪಂಚಮುಖದಲ್ಲಿ ಕಾರಣ ದೇಹವನ್ನುಳ್ಳ ಪಂಚಮೂರ್ತಿಗಳಂ ಪಡದು ಪಂಚಕೃತ್ಯವನೊಪ್ಪಿಸಿದನದೆಂತೆಂದೊಡೆ ।

ಗ್ರಂಥ

ಸದ್ಯೋಜಾತಸ್ತಥಾ ಭೂಮಿರ್ವಾಮದೇವ ಸ್ತಥಾಜಲಂ
ಅಘೋರದ್ವಂದ್ವಮುತ್ಪತ್ತ್ಯ ತತ್ಪುರುಷೋ ವಾಯುರುಚ್ಯತೇ ॥ ೪ ॥
ಈಶಾನ್ಯೇ ಗಗನಾಕಾರಂ ಸರ್ವಂ ಬ್ರಹ್ಮಮಯಂ ಜಗತ್
ಪೃಥ್ವೀ ಬ್ರಹ್ಮ ಸ್ತಥಾ ವಿಷ್ಣು ಸ್ತಥಾ ರುದ್ರ ಹುತಾಶನಾ ।
ಈಶ್ವರೋ ಪವನೋ ದೇವ್ಯೋ ಆಕಾಶಶ್ಚ ಸದಾಶಿವಃ । ॥ ೫ ॥

ಇಂತೆಂದುದಾಗಿ ತನ್ನ ಸದ್ಯೋಜಾತಮುಖದಲ್ಲಿ ಪುಟ್ಟಿದ ಪೃಥ್ವಿ ಸಮ್ಮಂಧವಾದ ಬ್ರಹ್ಮಂಗೆ ಸಕಲ ಜಾತಿ ವರ್ಣ ಪ್ರಾಣಿಗಳ ಪುಟ್ಟಿಸುವ ಕಾರ್ಯಮಂ ಕೊಟ್ಟನು. ವಾಮದೇವಮುಖದಲ್ಲಿ ಪುಟ್ಟಿದ ಜಲಸಮ್ಮಂಧವಾದ ವಿಷ್ಣುವಿಂಗೆ ರಕ್ಷಿಸುವ

ಕಾರ್ಯಮಂ ಕೊಟ್ಟನು. ತನ್ನ ಅಘೋರಮುಖದಲ್ಲಿ ಪುಟ್ಟಿದ ಅಗ್ನಿ ಸಮ್ಮಂಧವಾದ ರುದ್ರಂಗೆ ಸಂಹಾರ ಕಾರ್ಯಮಂ ಕೊಟ್ಟನು. ತನ್ನ ತತ್ಪುರುಷಮುಖದಲ್ಲಿ ಪುಟ್ಟಿದ ವಾಯು ಸಮ್ಮಂಧವಾದ ಈಶ್ವರಂಗೆ ಪ್ರಾಣಪ್ರತಿಷ್ಠೆಯ ಕಾರ್ಯಮಂ ಕೊಟ್ಟನು. ತನ್ನ ಈಶಾನ್ಯಮುಖದಲ್ಲಿ ಪುಟ್ಟಿದ ಆಕಾಶ ಸಮ್ಮಂಧವಾದ ಸದಾಶಿವಗೆ ಸಚೇತನಕ್ಕೆ ಆಧಾರವಾಗಿರುವ ಕಾರ್ಯಮಂ ಕೊಟ್ಟನು. ಈ ಪ್ರಕಾರದಿಂದೆ ಪಂಚಮೂರ್ತಿಗಳಿಗೂ ಪಂಚಕೃತ್ಯಂಗಳಂ ಸಾಗಿಸಲಪ್ಪಣೆಯನಿತ್ತು ತನ್ನ ಈಶಾನ್ಯ ಮುಖದಲ್ಲಿ ಜ್ಞಾನಪ್ರಭಾಪಟಲದಲ್ಲಿ ಮಹಾಮಹಿಮ ಸಾಮರ್ಥ್ಯವನ್ನುಳ್ಳ ಪ್ರಮಥಗಣಾಧೀಶ್ವರರ ಸೃಜಿಸಿ ಆಗಮೋಪನಿಷದ್ವ್ಯಾಖ್ಯಂಗಳಿಂದೆ ನಿತ್ಯ ಅನುಭವ ದಿಂದಿರಲು ಮಹಾ ಗುರುಸಿದ್ಧಲಿಂಗನಿರುತಿರ್ದಂ ॥ ಶ್ರೀ ॥[1]

ಗ್ರಂಥ :

ಅನಾದಿ ಶಾಶ್ವತಂ ನಿತ್ಯಂ ವ್ಯೋಮಾತೀತಂ ನಿರಂಜನಂ
ನಾದ ಬಿಂದು ಕಲಾತೀತಂ ತಸ್ಮೈ ಶ್ರೀ ಗುರವೇನಮಃ । ॥ ೬ ॥

ಎಂದು ಸ್ತೋತ್ರಂಗೈದು ಮುಂದೆ ಸಕಲ ಪ್ರಾಣಿಗಳುದಯವೆಂತಾದುದೆಂದು ಬಿನ್ನ ಪಂಗೈಯಲು :

ಆ ಜ್ಞಾನಾನಂದ ಗುರುವರನು ಕ್ರಿಯೋಕ್ತನೆಂಬ ಶಿಷ್ಯಂಗೆ ಪೇಳಲುದ್ಯುಕ್ತನಾದನ ದೆಂತೆಂದೊಡೆ :

ಆ ಪರಶಿವನಿಂದುದಯವಾದ ಪಂಚಮೂರ್ತಿಗಳಿಂದ ಪಂಚಭೂತಂಗಳಾದವು. ಈ ಪಂಚಮಹಾಭೂತಂಗಳಿಂದ ಸೂಕ್ಷ್ಮ ದೇಹವನುಳ್ಳ ಸುರರು, ದಿಗ್ವರರು, ಸೂರ್ಯ ಚಂದ್ರ ಮುಂತಾದ ನವಗ್ರಹಗಳು ಹುಟ್ಟಿದವು. ಇಂತಿವನೊಳಕೊಂಡುದೆ ಸ್ಥೂಲಾಕಾಶ ವೆನಿಸುವದು. ಸ್ಥೂಲಾಕಾಶದಲ್ಲಿ ಸ್ಥೂಲವಾಯು ಪುಟ್ಟಿತ್ತು। ಸ್ಥೂಲವಾಯುವಿನಿಂದ ಸ್ಥೂಲ ಅಗ್ನಿ ಜನಿಸಿತ್ತು, ಆ ಸ್ಥೂಲಅಗ್ನಿಯಿಂದ ಸ್ಥೂಲಅಪ್ಪು ಜನಿಸಿತ್ತು। ಆ ಅಪ್ಪುವಿನಿಂದ ಸ್ಥೂಲಪೃಥ್ವಿ, ಜನನಂಬಡೆವುದು. ಈ ಸ್ಥೂಲ ಪಂಚಭೂತದಿಂದೆ ಸಪ್ತಸಮುದ್ರ, ಅಷ್ಟಕುಲಪರ್ವತ ನವಮೇಘಂಗಳುದಯವಾದವು. ಈ ಮೇಘಂಗಳು ಮಳೆಯನ್ನು ಪೃಥ್ವಿಗೆ ಸುರಿಯಲು, ಇದರಿಂದ ಅಣುರೇಣುಗಳೆ ಬೀಜವಾಗಿ ಧರಣಿತಳದಲ್ಲಿ ನಾನಾಪರಿಯಲ್ಲಿ ತೃಣ, ಗುಲ್ಮ ಲತೆಗಳು ಮುಂತಾದ ವೃಕ್ಷಂಗಳು ಪುಟ್ಟಿದವು। ಹುಟ್ಟಿ ಬೆಳೆದು ಅನೇಕ ಕಾಲವಾಗಲು ಆ ವೃಕ್ಷಂಗಳು ಒಣಗಿ ಧರೆಗುರುಳಿ ಕಾಷ್ಠರಾಶಿಯಾಗಲು ತೃಣಬೀಜಗಳೆಲ್ಲ ಮೇಘಜಲದಿಂದೊಬ್ಬುಳಿಯಾಗಲು ವಾಯುವಿನಿಂದ ಕಾಷ್ಠ ಕಾಷ್ಠ ಹೊಸೆಯಲಾಗಿ ಅಗ್ನಿ ಉದಯವಾಗಿ ಕಾಡ ದೈಸುವ ಕಾಲದಲ್ಲಿ ಆ ಬೀಜರಾಶಿಗಳೆಲ್ಲ ಕುದಿದು ಅನ್ನವಾಗಲು। ಆ ಅನ್ನವು ಭಕ್ಷಿಸುವರಿಲ್ಲದೆ ಹಳಸಿ ಹಸಗೆಡಲು। ಅದರೊಳಗೆ ಸ್ಥೂಲಘಟವನುಳ್ಳ ಮನುಷ್ಯಾಕಾರದ ಹುಳ

ಜೀವಿಗಳು ಪುಟ್ಟಿದವು. ಆ ಹುಳ ಪ್ರಾಣಿಗಳು ಆದೆ ಅನ್ನವನ್ನು ಭಕ್ಷಿಸಲು, ಆ ಅನ್ನರಸದಿಂದ ವೀರ್ಯವರ್ಧನವಾಗಿ ಒಂದಕ್ಕೆ ಒಂದು ಸಂಗಮಂ ಮಾಡಲು ಉನ್ನತೋನ್ನತವಾಗಿ ಜನಿಸಿ ಬೆಳೆದು ಮನುಷ್ಯರೆನಿಸಿದರು. ಮತ್ತು ಮರದಲ್ಲಿ, ಬೂದಿಯಲ್ಲಿ, ಗೊಬ್ಬರದಲ್ಲಿ, ಬೀಜದಲ್ಲಿ, ಜಲದಲ್ಲಿ, ಪೃಥ್ವಿ ಮೊದಲಾದ ಇವರುಗಳಲ್ಲಿ ಒಂದೊಂದರಲ್ಲಿ ಒಂದೊಂದು ಪರಿಯ ಪ್ರಾಣಿಗಳುದಯವಾದವು। ಸ್ಥಾವರ ಜಂಗಮವೆಂಬ ಸ್ಥಿರಪ್ರಾಣಿ ಚರಪ್ರಾಣಿಗಳಲ್ಲಿ ತೃಣ, ಗುಲ್ಮ, ಲತೆ, ವೃಕ್ಷಗಳೆಲ್ಲವು ಸುಪ್ತಿ ಎಂಬ ಅವಸ್ಥೆಯನುಳ್ಳ ಪ್ರಾಣಿಗಳು ಕ್ರಿಮಿ, ಕೀಟ, ಪತಂಗ, ಪಕ್ಷಿ, ಮೃಗಪಶುಗಳೆಲ್ಲವು ಸ್ವಪ್ನಾವಸ್ಥೆಯನುಳ್ಳ ಪ್ರಾಣಿಗಳು ಮನುಷ್ಯರುಗಳೆ ಮನುಷ್ಯರೆ ತ್ರಿವಿಧಾವಸ್ಥೆಯನುಳ್ಳವರೆಂದರಿವದು। ಈ ಮನುಷ್ಯರುಗಳೆ ಹಿತ-ಅಹಿತ, ಮಾರ್ಗ-ಅಮಾರ್ಗ, ನೀತಿ-ಅನೀತಿ ಎಂದು ತಿಳಿಯುವುಳ್ಳವರಾದಕಾರಣ ಪಾಪ, ಪುಣ್ಯಂಗಳನು ಧರಿಸಲು ಕಾರಣರಾದರು. ಉಳಿದ ಸುಪ್ತಾವಸ್ಥೆಯ ಪ್ರಾಣಿ ಸ್ವಪ್ನಾವಸ್ಥೆಯ ಪ್ರಾಣಿಗಳಿಗೆ ಪಾಪ, ಪುಣ್ಯಂಗಳಿಲ್ಲವು ಅದೇನು ಕಾರಣವೆಂದರೆ ವಿವೇಕ-ಶೂನ್ಯವಾದ ಕಾರಣ ಅಕಾಲಪುಣ್ಯ ಅಕಾಲಪಾಪವಲ್ಲದೆ ತಿಳಿದು ಮಾಡಿದ ಪಾಪ ಪುಣ್ಯಂಗಳಿಲ್ಲವೆಂದರಿವದು. ಈ ಪ್ರಕಾರದಿಂದ ಪಂಚಮೂರ್ತಿಗಳಿಂದೆ ಬ್ರಹ್ಮ, ಕ್ಷತ್ರಿಯ, ವೈಶ್ಯ ಶೂದ್ರರೆಂಬ ನಾಲ್ಕು ವರಣವಾದಿಯಾಗಿ ಸಕಲಜಾತಿ ಕುಲಧರ್ಮ ಕರ್ಮಂಗಳನು ಶೈವ ಸಮ್ಮಂಧವಾದ ಆಚರಣೆಯನ್ನು ಆಚರಿಸುವಂತೆ ಮಹಾಗುರುಸಿದ್ಧಲಿಂಗನಾಜ್ಞೆಯಿಂದ ಬ್ರಹ್ಮಾಂಡ ವಿಸ್ತಾರವಾಗಿ ಇರುತ್ತಿಹುದೆಂದರಿವುದು. ॥ ೨ ॥

ಹೇ ಸ್ವಾಮಿ ಶ್ರೀ ಗುರುದೇವನೆ ಬ್ರಹ್ಮನಿಂದುದಯವಾದ ನಾಲ್ಕು ವರಣ ಆದಿಯಗಾದಿ ಶೈವಸಮ್ಮಂಧವಾದ ರೀತಿಯನ್ನು ತಿಳುವಂತೆ ವಿಸ್ತಾರವಾಗಿ ಪೇಳಿದಿರಿ. ಕೇಳಿ ಸಂತೋಷವಾದೆನು. ಇನ್ನು ಮುಂದೆ ವೀರಶೈವವಾದ ರೀತಿಯ ಪರಿಯನ್ನು ತಿಳುವಂತೆ ನಿರೂಪಿಸಿ ಬಿನ್ನೈಸಲು, ಆಜ್ಞಾನಾನಂದವಾದ ಗುರುವರಮೂರ್ತಿಯು ಪೇಳಲುದ್ಯುಕ್ತನಾದನು ಅದೆಂತೆಂದೊಡೆ: ಪರಶಿವನು ಆದಿಯಲ್ಲಿ ತನ್ನ ಈಶಾನ್ಯ ಮುಖದಿಂದುದಯವಾದ ಪ್ರಮಥಗಳಂಗಳೊಳಗೆ ಆದಿ ವೃಷಭೇಂದ್ರನೆಂಬ ಗಣಾಧೀಶ್ವರನಂ ಕರದು ಭುವನದಲ್ಲಿ ನೀವು ಹೋಗಿ ಭಕ್ತಿ ಜ್ಞಾನವಿಡಿದು ವೀರಶೈವವನ್ನು ಆಚರಿಸಿ ವಿಸ್ತರಂಗೈದು ಬರ್ಪುದೆಂದು ಪೇಳಲೊಡನೆ, ಹಸಾದವೆಂದು ಅಪ್ಪಣೆವಿಡಿದು ಬಂದು ವೀರಶೈವ ಪಂಚಾಚಾರವನ್ನು ನಿರ್ವಹಿಸಲುಳ್ಳಾತನಾದುದರಿಂದ ಪಂಚಮುಖ ಗಣಾಧೀಶನೆಂದು ನಾಮವನ್ನು ಧರಿಸಿ ನಿಂದು ಭಕ್ತಿಜ್ಞಾನವನ್ನು ಆಚರಿಸುವಡೆ ಗುರುವಿಲ್ಲದಾಗದೆಂದು, ಆ ಶ್ರೀ ಗುರುದೇವನನ್ನು ಧ್ಯಾನಿಸಲು ಪರಶಿವನರಿದು ತನ್ನ ಸ್ವಯ ಜ್ಞಾನವೆಂಬ ನಾದಮೂರ್ತಿಯನ್ನು ಕರದು ನೀವು ಹೋಗಿ ಭುವನದಲ್ಲಿ ಪಂಚಮುಖ ಗಣಾಧೀಶಗೆ ಗುರುವಾಗಿ ಲಿಂಗಾಂಗ ಸಾಮರಸ್ಯ, ವೀರಶೈವ ಕ್ರಿಯಜ್ಞಾನ ಆಚರಣೆಯನ್ನು ಬೋಧಿಸುವದೆಂದು ಕಳುಹಲೊಡನೆ ಬಂದು ಭೂಮಿಯಲ್ಲಿ ನಿಂದಿರಲು, ಈ ಪಂಚಮುಖ ಗಣಾಧೀಶನು ಕಂಡು ಸಾಷ್ಟಾಂಗ ಪ್ರಣುತನಾಗಿ ಎದ್ದು ನಿಂದು ಕರಕಮಲಮಂ ಮುಗಿದು

ಗ್ರಂಥ :

ಅವಾಚಾತ್ಮ ಸ್ವರೂಪಾಯ ಶಿವಭಾವ ಪ್ರದಾಯಿನಃ ।
ನಮಃ ಸದ್ಗುರು ನಾಥಾಯ ಷಟ್‌ಸ್ಥಲ ಬ್ರಹ್ಮಮೂರ್ತಯೇ ॥ ೭ ॥

ಎಂದು ಭಯಭಕ್ತಿಯಿಂದ ಸ್ತೋತ್ರಂಗೈಯಲು ಆ ಶ್ರೀಗುರುದೇವನು ಮೆಚ್ಚಿ ಇಷ್ಟ, ಪ್ರಾಣ, ಭಾವ, ಷಡ್ವಿಧಲಿಂಗ, ಷಡ್ವಿಧಅಂಗ ಮುಂತಾದ ಅರ್ಪಿತ ಅನರ್ಪಿತಂಗಳನ್ನು ತಿಳುಹಿ ಲಿಂಗಾಂಗ ಸಾಮರಸ್ಯವನ್ನು ಮಾಡಿ ಕ್ರಿಯೋಪದೇಶಂಗೈದು ನಿತ್ಯ ಅನುಭವ ಆನಂದದಿಂದಿರಲು, ಶ್ರೀ ಗುರುದೇವನು ತನ್ನ ನಿಜನಿರಂಜನ ಜ್ಞಾನದಿಂದ ಮಾನಸ ಪುತ್ರನೆಂದು ಪಡೆದು ಉಪದೇಶಂಗೈದ ಗುರುವಾಗಿ ಜಗದಲ್ಲಿ ಭಕ್ತರಂ ಬೋಧಿಸಿ ದೀಕ್ಷಂಗೈವ ಕಾರ್ಯವಂ ಮಾಡುವದೆನಲು ಆ ನಿರಂಜನ ಜಂಗಮವು ಒಡಂಬಡದೆ ಸಕಲ ಕಾರ್ಯಮಂ ಬಿಟ್ಟು ಅರಣ್ಯದಲ್ಲಿ ವನಾಂತರದಲ್ಲಿ ಏಕಾಂತವಾಸಿಯಾಗಲು ಜ್ಞಾನ ದಿಂದ ಪಡದಾತನು ಕಾರ್ಯಕ್ಕೆ ಬಾರನೆಂದು, ಶ್ರೀಗುರುದೇವನು ತಿಳಿದು ಆತನಂ ಬಿಟ್ಟು ಸತಿ ಇಲ್ಲದೆ ಸರ್ವ ಕಾರ್ಯವು ನಡಿಯದೆಂದು, ತನ್ನ ಶಿಷ್ಯನಾಗಿರ್ದ ಪಂಚಮುಖ ಗಣಾಧೀಶಗೆ ಕ್ರಿಯಾಶಕ್ತಿಯಳಂ ಸಮ್ಮಂಧವ ಮಾಡಿಕೊಟ್ಟು ತನಗೆ ಜ್ಞಾನಶಕ್ತಿಯಂ ಸಮ್ಮಂಧಿಸಿಕೊಂಡು ಇರುತಿರಲು ಆ ಭಕ್ತಂಗೆ ನಾಲ್ವರು ಪುತ್ರರು ಜನಿಸಿದರು. ಆ ಗುರುವು ನಾಲ್ವರು ಪುತ್ರರಿಂಗೆ ದೀಕ್ಷಂಗಳಂ ಮಾಡಿದನು. ಈ ಪಂಚಮುಖ ಗಣಾಧೀಶನು ತನ್ನ ನಾಲ್ವರು ಮಕ್ಕಳಿಗೆ ನಾಲ್ಕು ವ್ಯವಹಾರವಂ ಕೊಟ್ಟನು. ಅದೆಂತೆನೆ; ನಾಲ್ವರು ಮಕ್ಕಳೊಳಗೆ ಚಿಕ್ಕಮಗನಿಗೆ ಪಟ್ಟಣಶೆಟ್ಟಿತನವ ನೇಮಿಸಿದನು. ಪೃಥ್ವಿ ಸಮ್ಮಂಧವಾದ ನಿರಸನವಾದ ಜವಳಿ ವ್ಯವಹಾರಮಂ ಕೊಟ್ಟನು. ಆತನಿಂದ ಹಿರಿಯ ನಾದ ಮಗನಿಗೆ ಮಂಡುಗುದ್ದಲಿಶೆಟ್ಟಿತನವನಿತ್ತು, ಜಲ ಸಮ್ಮಂಧವಾದ ಸಕಲ ಧಾನ್ಯಂಗಳಂ ಮಾಡುವ ವ್ಯವಸಾಯಮಂ ಕೊಟ್ಟನು. ಆತನಿಂದ ಹಿರಿಯನಾದ ಮಗನಿಗೆ ಮಲಹರಶೆಟ್ಟಿತನವ ನೇಮಕಂಗೈದು ಅಗ್ನಿ ಸಮ್ಮಂಧವಾದ ಕಾಜಿನಬಳೆಗಳನಿ ಡುವ ಉದ್ಯೋಗಮಂ ಕೈಗೊಳಿಸಿದನು. ಆತನಿಂದ ಹಿರಿಯ ಹಿರಿಯಮಗನಿಗೆ ಕೋರಿಶೆಟ್ಟಿತನವನೆ ಕೊಟ್ಟು, ವಾಯುಸಮ್ಮಂಧವಾದ ಅಡಿಕೆ, ಮೆಣಸು, ಕಾಯಿ, ಪತ್ರೆ, ಲವಂಗ ಮುಂತಾದ ಸರಕುಗಳ ಹಸುಬೆಯಲ್ಲಿ ಹೊತ್ತುಮಾರುವ ವ್ಯಾಪಾರಮಂ ಕೊಟ್ಟನು. ಆ ಪಂಚಮುಖಿಗಣಾಧೀಶನು ತನ್ನ ನಾಲ್ವರು ಮಕ್ಕಳಿಗೂ ನಾಲ್ಕು ವ್ಯವಹಾರಂಗಳಂ ಕೊಟ್ಟನು. ಆ ಶ್ರೀ ಗುರುದೇವಂಗೆ ಲಿಂಗ, ವಿಭೂತಿ. ಸಜ್ಜೆ, ಶಿವದಾರ, ವಸ್ತುಗಳನ್ನು ನಿಮ್ಮ ಚರಣ ಸ್ಪರುಷನಂಗೈದು ಪವಿತ್ರಮಂ ಮಾಡಿ ಕೊಡಬೇಕೆಂದು ಬಿನ್ನಪಂಗೈಯಲು ; ಆ ಶಿಷ್ಯನ ಮಾತಿಂಗೆ ಒಡಂಬಟ್ಟು ಆ ಶ್ರೀಗುರು ದೇವನು ತನ್ನಿಂದುದಯವಾದ ನಾಲ್ವರು ಪುತ್ರರೊಳಗೆ, ಚಿಕ್ಕಮಗನಿಗೆ ಲಿಂಗ, ವಿಭೂತಿ, ರುದ್ರಾಕ್ಷಿ, ಸಜ್ಜೆ, ಶಿವದಾರ, ವಸ್ತ್ರಂಗಳನ್ನು ಪಾದಸೋಂಕಿನಿಂದ ಪವಿತ್ರಮಂ ಮಾಡಿ ಕೊಡುವದನು ನೇಮಕವಮಾಡಿಕೊಟ್ಟನು. ಆತನಿಂದ ಹಿರಿಯನಾದ ಮಗನಿಗೆ ಚರಂತಿ

ಕೆಯ ನೇಮವನ್ನು ಮಾಡಿಕೊಟ್ಟನು. ಆತನಿಂದ ಹಿರಿಯನಾದಾತನಿಗೆ ಪಟ್ಟಾಧಿಕಾರ ಮಂ ಮಾಡಿಕೊಟ್ಟನು. ಆತನಿಂದ ಹಿರಿಯನಾದವನು ವೈರಾಗ್ಯದಿಂದದಾವದು ಒಲ್ಲೆನೆಂದು ದೇಶಿಕನಾಗಿನಿಂದನು. ಆ ಶ್ರೀಗುರುದೇವನು ಪಂಚಮುಖಗಣಾಧೀಶಂಗೆ ಹೇಳಿದನು ; ಎಲೆ ಪಂಚಮುಖಗಣಾಧೀಶನೇ ನೀನು ಭಕ್ತಿ ಸಮ್ಮಂಧವಿಡಿದು ವಸ್ತ್ರದೈಯ್ಯನು ಚರಮೂರ್ತಿ ಪಟ್ಟದೈಯ್ಯನು ಜ್ಞಾನಸಮ್ಮಂದಿಗಳಾದರು. ದೇಶಿಕನಾದ ಅತೀತನು ವಿರಾಗತಿಯಿಂದ ಆವದು ಹಿಡಿಯದೆ ಮೊದಲಲ್ಲಿ ಉದಿಸಿದ ನಿರಂಜನಜಂಗಮವು ವೈರಾಗ್ಯ ಸಮ್ಮಂಧಿಗಳಾದರು. ಭಕ್ತಿ, ಜ್ಞಾನ, ವೈರಾಗ್ಯ ಮೂರು ಪ್ರಕಾರವಾಯಿತು ಎಂದು ಹೇಳಿದನು. ಈ ಭಕ್ತಿ, ಜ್ಞಾನ, ವೈರಾಗ್ಯ ದಲ್ಲಿ ಷಟ್ಸ್ಥಲವಾದವು. ಆ ಷಟ್ಸ್ಥಲವೆಂತೆಂದೊಡೆ, ಹೇ ಪಂಚಮುಖಗಣಾಧೀಶನೆ ಭಕ್ತಸ್ಥಲ ನಿನ್ನಲ್ಲಿ ಸಮ್ಮಂಧವು. ಮಹೇಶ್ವರಸ್ಥಲ ವಸ್ತ್ರದೈಯ್ಯನಲ್ಲಿ ಸಮ್ಮಂಧ. ಪ್ರಸಾದಿಸ್ಥಲ ಚರಮೂರ್ತಿಯಲ್ಲಿ ಸಮ್ಮಂಧ. ಪ್ರಾಣಲಿಂಗಿಸ್ಥಲವು ಪಟ್ಟದದೇವರಲ್ಲಿ ಸಮ್ಮಂಧವು ಅತೀತನಾದ ದೇಶಿಕ- ಜಂಗಮದಲ್ಲಿ, ಶರಣಸ್ಥಲ ಸಮ್ಮಂಧವು. ವಿರಾ ಗತಿಯಿಂದ ತ್ರಿಮಲ ಮೊದಲಾದ ಸಕಲ ಕಾರ್ಯಂಗಳಂ ಮುಟ್ಟದೆ ಇರುತಿರ್ಪ ಪರವೆನಿಸಿದ ಜಂಗಮದಲ್ಲಿ ಐಕ್ಯಸ್ಥಲ ಸಮ್ಮಂಧವು, ಹೀಗೆಂದು ಪಂಚಮುಖಗಣಾ ದೀಶಗೆ ಆ ಶ್ರೀಗುರುದೇವರು ಪೇಳ್ದರೆಂದು ಜ್ಞಾನಾನಂದವೆಂಬ ಗುರುಮೂರ್ತಿ ಶ್ರೀಗುರುಸಿದ್ಧಲಿಂಗನಾಜ್ಞೆಯಿಂದಿನಿತಾಯಿತೆಂದು ಭಕ್ತಿಯುಕ್ತನೆಂಬ ಶಿಷ್ಯಂಗೆ ಪೇಳ್ದರು ॥ ಶ್ರೀ ॥

ಗ್ರಂಥ

> ಉತ್ತಮಂ ದೀರ್ಘದಂಡಂಚ ಮಧ್ಯಮಂ ಶಿರವಂದನಂ ।
> ಕನಿಷ್ಠ ಕರಯೋಗಂಚ ಶರಣಾರ್ಥಿ ನಿಷ್ಕ್ರಿಯಂ ತ್ಯಜೇತ್ ॥ ೧ ॥

ಎಂದುದಾಗಿ ಎನ್ನೊಡೆಯನೆ ಕೃಪೆಗೈವುದೆಂದು ಸಾಷ್ಟಾಂಗಪ್ರಣೀತನಾಗಿ ಎದ್ದು ನಿಂದು ಕರಕಮಲಮಂ ಮುಗಿದು ಎನ್ನೊಡೆಯ ಗುರುವರನೆ ಆರು ಸ್ಥಲದ ಪ್ರವರ್ತನ ವೆಂತೆಂದು ಬಿನ್ನಹಂ ಮಾಡಲು, ಆ ಗುರುಮೂರ್ತಿಯು ಪೇಳಲುದ್ಯುಕ್ತನಾದನು. ಅದೆಂತೆಂದೊಡೆ ; ಆ ಓಂಕಾರಸ್ವರೂಪನಾದ ಗುರುಮೂರ್ತಿಯು ಪಂಚಮುಖಗಣಾ ಧೀಶಗೆ ಭಕ್ತ, ಮಹೇಶ, ಪ್ರಸಾದಿ ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲದ ಪ್ರವರ್ತನೆಯ ಪೇಳ್ದ ವಿವರವನ್ನು, ನಿನಗ ತಿಳುವ ಹಾಂಗೆ ಪೇಳ್ವೆನದೆಂತೆಂದೊಡೆ ಐಕ್ಯಸ್ಥಲದ ವಿರಕ್ತಿ ಜಂಗಮವು ವನಾಂತರವಾಸಿಯಾಗಿ ತ್ರಿಮಲಮಂ ಮುಟ್ಟದೆ ಹಸಿವು, ತೃಷೆ ಮೊದಲಾದ ತನುವಿನ ಆಶೆಯನ್ನು ಮರದು ಸರ್ವ ಕಾರ್ಯಮಂ ಬಿಟ್ಟು ಲಿಂಗಾನಂದದಿಂದ ಇರ್ದಂತ ಜಂಗಮವನ್ನು ಆ ಗುರುಸ್ವಾಮಿ ಭಕ್ತರಿಗೆ ಆ ಜಂಗಮ ವನ್ನು ನೀವು ಆರಾಧಿಸುವದೆಂದು ಪೇಳ್ದರು.

ಗ್ರಂಥ

ನಾರೀಣಾಂ ಷಂಢಪುರುಷಂ ಯತೀನಾಂ ಕಾಂಚನಸ್ಮೃತಿಂ
ತಾಂಬೂಲಂ ಬ್ರಹ್ಮಚಾರೀಷು ತ್ರಿವಿಧಂ ನದದಾಪಯೇತ್ ॥ ೯ ॥

ಎಂದುದಾಗಿ ಷಂಡಪುರುಷಗೆ ಕನ್ನಿಕೆಯು, ಯತಿಗಳಿಗೆ ಕಾಂಚನವು, ಬ್ರಹ್ಮಚಾರಿಗೆ ತಾಂಬೂಲವು ಕೊಡಲಾಗದು. ಹಸುವಿಗೆ ಲಿಂಗಾರ್ಪಿತವ ಮಾಡಿಸುವದು ಶೀತಕ್ಕೆ ವಸ್ತ್ರವ ಕೊಡುವದಲ್ಲದೆ, ಕಾಂಚನವ ವಿರಕ್ತನಾದ ಯತಿಗಳಿಗೆ ಕೊಡಲಾಗದು, ಅವರು ಸಕಲ ಪದಾರ್ಥವನ್ನು ಬೇಡಲಾಗದು. ಮಠಭಕ್ತಸ್ಥಲಂಗಳನ್ನು ನಮ್ಮವು ಎಂದು ಆಡುವವರಲ್ಲಂ ಇಂತಪ್ಪ ನಿರಂಜನ ಜಂಗಮವು ಎಂದು ತಿಳಿದು ನಿಮ್ಮಂತ ಭಕ್ತರಿರ್ದು, ಆ ಜಂಗಮವು ಅರಣ್ಯವಾಸದಲ್ಲಿ ಇರಬಾರದೆಂದು ತಿಳಿದು ಮಠವಂ ಕಟ್ಟಿಸಿ ನಾಲ್ಕು ಮೂಲೆಗೆ ಲಿಂಗಮುದ್ರೆಯಂ ಸ್ಥಾಪನವ ಮಾಡಿ ಈ ಮಠದಲ್ಲಿ ನೀವು ಪರಿಣಮಿಸುವ ದೆಂದು ಭಕ್ತಿಯಿಂದ ಪಾದವಿಡಿದು ಇಡುವದು. ಆ ಜಂಗಮವು ಇಚ್ಛೆವುಳ್ಳನಕ ಇರ್ದು, ಬಾರದಿದ್ದರೆ ಮತ್ತೊಬ್ಬರಿಗೆ ಹೇಳದೆ ಹೊರಟು ಹೋಗುವದೆ, ಐಕ್ಯಸ್ಥಲದ ಜಂಗಮದ ಪ್ರವರ್ತನವೆಂದರಿವುದು. ಇನ್ನು ಶರಣಸ್ಥಲದ ಅತೀತ ಜಂಗಮದ ಪ್ರವರ್ತನ ವೆಂತೆಂದೊಡೆ ಸ್ಥಲ ಪರಸ್ಥಲದಲ್ಲಿ ಸಕಲ ಭಕ್ತರಲ್ಲಿ ಭಕ್ತಿಬಿನ್ನಹಮಂ ಕೈಕೊಳ್ಳುತ ಭಕ್ತಿ ಜ್ಞಾನ ಆಚರಣೆಯನ್ನು ಪೇಳುವದು, ತಪ್ಪಿನಡೆದರೆ ಅವರಿಗೆ ಶಿಕ್ಷೆಯನ್ನು ಮಾಡದೆ, ನೊಹಿಸಿದವರಿಗೆ ಶಪಿಸುವದು. ಸಂತೋಷವ ಬಡಿಸಿದವರಿಗೆ ಆಶೀರ್ವಾದವಂ ಕೊಡುವದೆ ಶರಣಸ್ಥಲ ಪ್ರವರ್ತನವೆಂದರಿವುದು. ಇನ್ನು ಪ್ರಾಣಲಿಂಗಸ್ಥಲದ ವಿವರವು. ಪ್ರಾಣಲಿಂಗಸ್ಥಲದ ಪಟ್ಟದ್ದೇವರಿಗೆ ಸರ್ವಾಧಿಕಾರ ಪಟ್ಟವಂ ಕಟ್ಟುವಡೆ ಶಕ್ತಿಸಂಯುತವಿಲ್ಲದಾಗದೆಂದು, ಲಗ್ನವಿಲ್ಲದೆ ಶಕ್ತಿಸಂಯುತವೆನಿಸದು. ಲಗ್ನದಲ್ಲಿ ಎರಡು ಪ್ರಕಾರವಾಗಿಹುದು. ಅದೆಂತೆಂದೊಡೆ ಸಂಸಾರಲಗ್ನ ನಿಃಸಂಸಾರಲಗ್ನವೆಂದು ಎರಡು ಪ್ರಕಾರವಾಗಿಹವದರಲ್ಲಿ. ಸತಿಯರು ಯುಕ್ತವಾಗಿ ಮಾಡುವದೆ ಸಂಸಾರ ಲಗ್ನವೆಂದರಿವದು. ಶಂಭುಗಿಣಿಲಂ ಕೊಟ್ಟು ಪಟ್ಟವ ಕಟ್ಟುವುದೆ ನಿಃಸಂಸಾರ ಲಗ್ನವೆಂದರಿವುದು. ಇದರಂತೆ ಪಟ್ಟದ್ದೇವರ ಪಾದದಲ್ಲಿ ಮರಿಯನ್ನು ಮಾಡಿಸಿ ಶಂಭುಗಿಣಿಲಂ ಕೊಟ್ಟು, ಸರ್ವಾಧಿಕಾರವಾದ ಶ್ರೀ ಗುರುವಿನ ಪಟ್ಟವನ್ನು ಮಾಡಿದ ಕಾರಣ ಪಟ್ಟದದೇವರು ಭಕ್ತಿ, ಜ್ಞಾನ, ಸಕಲಾಚಾರಮಂ ಪೇಳುವದಕ್ಕೆ, ಶಿಕ್ಷಕ್ಕೆ, ರಕ್ಷಣೆಗೆ ಶಾಪ, ಅನುಗ್ರಹಕ್ಕೆ ದೀಕ್ಷಂಗೈದು ಲಿಂಗಾಂಗ ಸಂಯೋಗಮಂ ಮಾಡುವದಕ್ಕೆ, ದೀಕ್ಷೆ ಎಂಬುವದು ನಾಲ್ಕು ಪ್ರಕಾರವಾಗಿಹುದು ಅದೆಂತೆಂದೊಡೆ ಭಕ್ತದೀಕ್ಷೆ, ಮಹೇಶ್ವರ ದೀಕ್ಷೆ ಸಾಮನದೀಕ್ಷೆ, ಅಸಾಮನದೀಕ್ಷೆ ಎಂದು ನಾಲ್ಕು ಪ್ರಕಾರವಾಗಿಹದವರಲ್ಲಿ. ತನಗೆ ಮರಿಯನ್ನು ಪಡಕೊಂಬಾತನು ಪರಶಿವನ ಪಂಚಮುಖವೆ ಪಂಚಕಲಶವೆಂದು ವಿಧಾನೋಕ್ತವಾಗಿ ಸ್ಥಾಪನವಂ ಮಾಡಿಸಿ ಪಂಚಕಲಶಂಗಳಿಗೆ ಸೂತ್ರಂಗೈದು, ಗುರು ಮೂರ್ತಿಗಳನ್ನು ಮಂಟಪದಲ್ಲಿ ಮುಹೂರ್ತಮಂ ಮಾಡಿಸಿ. ಮರಿಯ ಪಡಕೊಂಬು

ವದಕ್ಕೆ ಅಪ್ಪಣೆಯಂ ಕೊಡಿರಿ ಎಂದು, ಗುರುವು ಮರಿಸಹವಾಗಿ ಸಾಷ್ಟಾಂಗಮಂ ಮಾಡಿ ಅಪ್ಪಣೆ ತೆಗೆದುಕೊಂಡು ಬಂದು ಮಂಟಪದಲ್ಲಿ ಮುಹೂರ್ತವಂ ಮಾಡಿ ಸೂತ್ರವಂ ಪಿಡಿದು.

ಗ್ರಂಥ

ಲಿಂಗವೃತ್ತಸಮಂ ಏಕಂ ವಿಸ್ತಾರಂ ದೀರ್ಘಮೇವಚ ।
ತದರ್ಧಂ ಗೋಮುಖಿಂಶ್ಚೈವ ಪಂಚತಂತ್ರಂ ಪ್ರಕೀರ್ತಿತಮ್ ॥ ೧೦ ॥

ಲಿಂಗದೀರ್ಘೇರ್ಘವೇತ್ ಸ್ಮೃತಿಃ ಶಕ್ತಿ ದೀರ್ಘೇದರಿವೃತಾ ।
ಲಿಂಗಶಕ್ತಿ ಸಮಾಯುಕ್ತಂ ಮೃತ್ಯುದಾರಿದ್ರ್ಯನಾಶನೇ ॥ ೧೧ ॥

ಎಂದುದಾಗಿ ಇದರಂತೆ ಪಂಚಸೂತ್ರಯುಕ್ತವಾದ ಲಿಂಗಕ್ಕೆ, ಹಸ್ತಕ್ಕೆ, ಮಸ್ತಕಕ್ಕೆ ಮೂರ್ವೇಳಿ ವಿಧಾನೊಕ್ತ ಪೂಜೆಯಂ ಮಾಡಿಸಿ, ಆ ಶಿಷ್ಯನಿಗೆ ವಿಭೂತಿ, ರುದ್ರಾಕ್ಷಿ, ಲಿಂಗಧಾರಣಂ ಮಾಡಿ, ಮಂತ್ರವಂ ಬೋಧಿಸುವದೆ ಅಸಾಮಾನದೀಕ್ಷೆ ಎನಿಸುವದು. ಅಸಾಮಾನಧೀಕ್ಷೆ ಎಂದರೂ ಐತನವೆಂದರೂ ಒಂದೆ ಎಂದು ತಿಳಿವದು. ಇನ್ನು ಸಾಮಾನದೀಕ್ಷೆ ಎಂತೆಂದಡೆ ಮುಂದೆ ಹೇಳಿದ ಪ್ರಕಾರ ಮಂಟಪ ಕಲಶಂಗಳೈದು ಪೂಜಾಕ್ರಮವೆಲ್ಲವು ಐತಸವು, ದೀಕ್ಷಕ್ಕು ಒಂದೇ ಪ್ರಕಾರ ಹೆಚ್ಚು ಕಡಿಮೆ ಇಲ್ಲವು. ಮಂಟಪದಲ್ಲಿ ಗುರುಮೂರ್ತಿಯಂ ಮಾಡಿ ಸಾಷ್ಟಾಂಗೈದ ಶಿಷ್ಯನ ಕರದು ಪೂರ್ವೋಕ್ತ ಕ್ರಮದಂತೆ ಲಿಂಗಧಾರಣಮಂ ಮಾಡುವದೆ ಸಾಮಾನದೀಕ್ಷೆಯು. ಸಾಮಾನದೀಕ್ಷೆ ಎಂದರು ಮಹೇಶ್ವರದೀಕ್ಷೆ ಎಂದರು ಒಂದೇ ಪ್ರಕಾರವು. ಜೋಳಿಗೆ, ದಂಡಕಾಷ್ಠ ಕೊಡುವದೆ ಮಹೇಶ್ವರದೀಕ್ಷೆ ಎಂದೆನಿಸುವುದು. ಭಕ್ತನಿಗೆ ಇದೆ ಕ್ರಮವು ಜೋಳಿಗೆ, ದಂಡಕಾಷ್ಠ ಕೊಡದಿರ್ದುದೆ ಭಕ್ತದೀಕ್ಷೆ ಎನಿಸುವದು.

ಗ್ರಂಥ

ಲಿಂಗ ಬಾಹ್ಯಸ್ತತೋಽವೇಹಿ ಮಿಶ್ರಶ್ಚೈವ ಸ್ತತೋ ನರಃ
ಶಕ್ತಿ ಯುಕ್ತಸ್ತತೋ ಭಕ್ತಃ ಅಸಮಾನಂ ಸದಾ ತ್ಯಜೇತ್ ॥ ೧೨ ॥

ಎಂದುದಾಗಿ ಲಿಂಗ ಬಾಹ್ಯರಿಗೂ, ಮಿಶ್ರಶೈವರಿಗೂ, ಸ್ತ್ರೀಯರಿಗೂ, ಲಗ್ನವಾಗದವರಿಗೂ, ಭಕ್ತರಿಗೂ ಇವರ್ಶೈವರಿಗೂ ಅಸಾಮಾನದೀಕ್ಷೆ ಸಮ್ಮಂಧವಿಲ್ಲವು ಎಂದರಿವದು. ಈ ಪ್ರಕಾರ ದೀಕ್ಷಂಗಳು ಮುಂತಾದ ಸಕಲ ಕಾರ್ಯ ಕಾರಣಂಗಳು ಎಲ್ಲವನು ಮಾಡುವದೆ ಪ್ರಾಣಲಿಂಗಿಸ್ಥಲದ ಪಟ್ಟದದೇವರ ಪ್ರವರ್ತನವೆಂದರಿವದು. ಇನ್ನು ಪ್ರಸಾದಿಸ್ಥಲದ ಚರಮೂರ್ತಿಗಳ ಪ್ರವರ್ತನವೆಂತೆಂದೊಡೆ :

ಗ್ರಂಥ

ಗುರುಗ್ರ ಹಸ್ತ ಏವಶ್ಯಾತ-ನಕದಾಚಯೇತಿ ಗುರು ।
ಯತಾಹಂ ಸರ್ವ ಲೋಕಾನಾಂ ಗುರುರ್ದೇವ ಅಂಬಿಕಾಸ್ಸಹಃ ॥ ೧೩ ॥

ಎಂದುದಾಗಿ ಯತಿಗಳು ಗುರುವೆನಿಸಲಾಗಿ, ಲಗ್ನವಾದಾತನೆ ಶ್ರೀಗುರುವಪ್ಪುದರಿಂದ ಈ ಚರಮೂರ್ತಿಗಳಿಗೆಯು ಗಿಣಿಲು ದಂಡಾಗ್ರವಂ ಕೊಟ್ಟು ಶಕ್ತಿಸಂಯುತನಿಃ ಸಂಸಾರಲಗ್ನವನ್ನು ಮಾಡಿದ ತದನಂತರದಲ್ಲಿ, ಸ್ಥಲ, ಪರಸ್ಥಲ ಸಕಲ ದೇಶ ಮಧ್ಯದಲ್ಲಿ ಭಕ್ತರಿಂದ ಭಕ್ತಿ-ಬಿನ್ನಹವಂ ಕೈಕೊಳುತ್ತ, ಆಚಾರ ವಿಚಾರವನ್ನು ವಿಚಾರಿಸುತ್ತ ಐತಾನ ದೀಕ್ಷಂಗಳನ್ನು ಮಾಡಿಸುತ್ತ ತಪ್ಪಿದವರಿಗೆ ಶಿಕ್ಷಂಗಳಂ ಮಾಡಿಸುತ್ತ ಸಂಚಾರವಂ ಮಾಡುವದೆ ಪ್ರಸಾದಿಸ್ಥಲದ ಚರಮೂರ್ತಿಗಳ ಪ್ರವರ್ತನವೆಂದರಿವದು.

ಇನ್ನು ಮಹೇಶ್ವರಸ್ಥಲದ ವಸ್ತ್ರದೈಯ್ಯನ ಪ್ರವರ್ತನವೆಂತೆಂದೊಡೆ ಆ ಶ್ರೀಗುರು ದೇವನಿಂದ ಐತನವಾದ ತದನಂತರದಲ್ಲಿ ಶಕ್ತಿಸಂಯುತ ಸಂಸಾರಲಗ್ನವನ್ನು ಮಾಡಿಕೊಂಡು, ಗುರು, ಲಿಂಗ, ಜಂಗಮಕ್ಕೆ ಭಕ್ತನಾಗಿ, ಭಕ್ತರಿಗೆ ಮಹೇಶ್ವರನಾಗಿ, ತನ್ನ ಮಠಕ್ಕೆ ನಾಲ್ಕು ಮೂಲಿಗೆ ಲಿಂಗಮುದ್ರೆಯನ್ನು ಸ್ಥಾಪನವಂ ಮಾಡಿಸಿ, ಬಿಡಾರಬಿಟ್ಟ ಸುಂಕವಂ ತೆರದೆ ಸಂತೆ ಬಾಜಾರವಂ ರಚಿಸಬೇಕಾದಡೆ ಆ ಬಾಜಾರವ ಮಾಡುವ ಸ್ಥಲದಲ್ಲಿ ಪಂಚರತ್ನಂಗಳಂ ನಿಕ್ಷೇಪವಂ ಮಾಡಿ ಪಟಯುಕ್ತವಾದ ವೃಷಭ ಸ್ಥಂಭವನ್ನು ನಿಲ್ಲಿಸಿ ಕೋರಿಶೆಟ್ಟಿ, ಮಲಹರಶೆಟ್ಟಿ, ಮಂಡುಗುದ್ದಲಿಶೆಟ್ಟಿ, ಪಟ್ಟಣಶೆಟ್ಟಿ ಈ ನಾಲ್ವರಿಂದ ತನ್ನ ಪಾದಪೂಜೆಯನ್ನು ಮಾಡಿಸಿಕೊಂಡು, ಬಾಜಾರ ಮಾಡುವ ಸ್ಥಲ ಎಲ್ಲರೂ ಧೂಳಪಾದೋದಕವಂ ತಳಿದು, ಭೂಶುದ್ಧಿಯಂ ಮಾಡಿದ ಮೇಲೆ ಸಕಲ ವ್ಯವಹಾರವಂ ಮಾಡುವಂತೆ ನೇಮಕವನ್ನು ಮಾಡಿಸುವದು. ಈ ಪ್ರಕಾರ ಭೂಶುದ್ಧಿಯಾದ ಸ್ಥಲವಲ್ಲದೆ ನಿರರ್ತಕವಾಗಿ ಇದ್ದ ಭೂಮಿಯಲ್ಲಿ, ಸಂತೆ ಇಲ್ಲದ ಹಳ್ಳಿಗಳಲ್ಲಿ ತಾವು ವ್ಯವಹಾರವಂ ಮಾಡಲಾಗದು. ಹಸುಬೆಯಲ್ಲದೆ ತರಟೆ ಗೋಣಿಯಲ್ಲಿ ಹೇರಲಾಗದು. ದೀಕ್ಷೆ ಇಲ್ಲದೆ ಪಾದಕೆ ವಸ್ತ್ರವಿಟ್ಟು ಸುಂತ್ರಲಾಗದು. ಲಿಂಗ, ವಿಭೂತಿ, ಸಜ್ಜೆ, ಶಿವದಾರ, ವಸ್ತ್ರ, ರುಮಾಲವಲ್ಲದೆ ಬದಲು ವ್ಯವಹಾರ ಮಾಡಲಾಗದು. ಗುರು, ಲಿಂಗ, ಜಂಗಮವಲ್ಲದೆ ಅನ್ಯದೈವಕ್ಕೆ ಅರ್ಚನೆವಂದನೆಗಳಂ ಮಾಡಲಾಗದು. ಜುಟ್ಟ ಜುಲಪೆಗಳಂ ಬಿಡಲಾಗದು. ವ್ಯವಹಾರದಲ್ಲಿ ಸುಳ್ಳು ಸಟೆಗಳಾಡದೆ ಸತ್ಯಸದಾಚಾರದಿಂದೆ ಶೈವಮಿಶ್ರವಾಗದಂತೆ ಪರಶಿವ ಸಂಪ್ರದಾಯಕವೆಂದು ವಿಶಿಷ್ಠ ವೀರಶೈವದಿಂದ ಆಚರಿಸುವರೆ ಮಹೇಶ್ವರಸ್ಥಲದ ವಸ್ತ್ರದೈಯ್ಯನ ಪ್ರವರ್ತನವೆಂದರಿವುದು.

ಇನ್ನು ಭಕ್ತಿಸ್ಥಲದ ಭಕ್ತರುಗಳ ಪ್ರವರ್ತನವೆಂತೆಂದೊಡೆ। ಗುರು, ಲಿಂಗ, ಜಂಗಮಕ್ಕೆ ಭಕ್ತರಾಗಿ, ಅನ್ಯದೈವಕ್ಕೆ ಎರಗದೆ ಸತಿಯರ ಸಹವಾಗಿ ದೀಕ್ಷೆಯಹಾಗಿ, ಪರಧನ, ಪರಸ್ತ್ರೀಯರಂ ಮುಟ್ಟದೆ ಅಷ್ಟಾವರ್ಣವೆ ಅಂಗವಾಗಿ ಪಂಚಾಚಾರವೆ ಪ್ರಾಣವಾಗಿ ಸತ್ಯಸದಾಚಾರದಲ್ಲಿ ಇರುತ್ತಿಹುದೆ ಭಕ್ತಿಸ್ಥಲ ಭಕ್ತರುಗಳ ಪ್ರವರ್ತನವೆಂದರಿವುದು. ಈ ಪ್ರಕಾರ ಗುರುಸಿದ್ಧಲಿಂಗನಾಜ್ಞೆಯಿಂದ ಜಗದಲ್ಲಿಯೆ ವೀರಶೈವ ವಿಸ್ತಾರವಾಗಿ ಇರುತ್ತಿಹುದೆಂದು ತಿಳಿವದು. ಶ್ರೀ ಶ್ರೀ.

ಶೃಂಖಲಾಲಂಕಾರಗಳಿಗೆ ಮಾಲಾಲಂಕಾರಗಳು ಮೂಲವೇ ?

ಬಿ. ಜಿ. ಶ್ರೀಲಕ್ಷ್ಮೀ
ಮತ್ತು ಸರಸ್ವತೀ ಕೆ. ಹೆಗಡೆ

ಅಲಂಕಾರ ಶಾಸ್ತ್ರೇತಿಹಾಸದ ಸರಿಯುದ್ದಕ್ಕೂ ಅಲಂಕಾರಿಕರು ಕಾವ್ಯವನ್ನು ಅಲಂಕರಿಸುವ ಸಾಧನ (ಅಲಂಕರಣ) ಮತ್ತು ಅಲಂಕೃತವಸ್ತು (ಭಾವ) ಎಂಬ ಇಬ್ಬಗೆಯ ದೃಷ್ಟಿಯಿಂದ ವಿವೇಚಿಸುತ್ತ ಬಂದಿದ್ದಾರೆ. ಈ ದೃಷ್ಟಿದ್ವಂದ್ವವನ್ನು ತಿಳಿಸುವ ಪದ ಅಲಂಕಾರ. ಸಾಮಾನ್ಯವಾಗಿ ದೇಹವನ್ನು ಕಡಗ ಕುಂಡಲಗಳು ಅಲಂಕರಿಸುವಂತೆ ಕಾವ್ಯ(ಶರೀರ) ವನ್ನು ಅಲಂಕರಿಸುವ ಸಾಧನಗಳು ಉಪಮಾದಿ ಮತ್ತು ಅನುಪ್ರಾಸಾದಿ ಅಲಂಕಾರಗಳು. ಅಲಂಕಾರವನ್ನು ವೈಚಿತ್ರ್ಯ, ವಾಗ್ವಿಕಲ್ಪ, ಚಮತ್ಕಾರ, ಮುಂತಾಗಿ ಅನೇಕ ವಿಧವಾಗಿ ಕರೆದಿದ್ದಾರೆ ಅಲಂಕಾರಶಾಸ್ತ್ರಜ್ಞರು.

ಪ್ರಾಚೀನ ವೇದಗಳಲ್ಲಿ 'ಅರಂಕೃತಿ' ಪದವನ್ನು ಭೂಷಣ ಎಂಬ ಅರ್ಥದಲ್ಲಿ ಬಳಸಿರುವುದನ್ನು ಕಾಣುತ್ತೇವೆ.[1] ಸುಮಾರು ಕ್ರಿ.ಶ. 2ನೇ ಶತಮಾನಕ್ಕೆ ಸೇರಿದ ಶಾಸನಗಳಲ್ಲಿ, ಗದ್ಯ, ಪದ್ಯ, ಮುಂತಾದ ಸಾಹಿತ್ಯಪ್ರಕಾರಗಳು ಅಲಂಕೃತವಾಗಿರಬೇಕೆಂಬ ಉಲ್ಲೇಖವಿದೆ.[2] ಸುಮಾರು ಇದೇ ಅವಧಿಗೆ ಸೇರಿದ ಕೃತಿ ಭರತನ ನಾಟ್ಯಶಾಸ್ತ್ರ. ಇದು ಕಾವ್ಯಸೌಂದರ್ಯವನ್ನು ಕುರಿತಂತೆ, ವಿಶೇಷವಾಗಿ ನಾಟಕರಚನೆಯ ಸಂದರ್ಭದಲ್ಲಿ, ಕೆಲವು ತತ್ವಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ನಾಟಕದ ಬಹುಮುಖ್ಯ ಅಂಗವಾದ ಸಾಹಿತ್ಯಕ್ಕೆ ಭೂಷಣವಾಗಿರುವುದು ಅಲಂಕಾರವೆಂದು ಸಾಮಾನ್ಯವಾಗಿ ಪ್ರತಿಪಾದಿಸುವ ಭರತನು, ಉಪಮಾ, ರೂಪಕ, ದೀಪಕ (ಅರ್ಥ) ಮತ್ತು ಯಮಕ (ಶಬ್ದ) ಗಳೆಂಬ ನಾಲ್ಕು ಅಲಂಕಾರಗಳನ್ನು ಪರಿಗಣಿಸಿದ್ದಾನೆ. ಇವನ ನಂತರ ಅಲಂಕಾರ ಪ್ರಸ್ಥಾನದ ಪ್ರವರ್ತಕನೆಂದು ಪ್ರಸಿದ್ಧಿ ಪಡೆದಿರುವ ಭಾಮಹನು ಉಪಮಾ, ಯಮಕ ಮುಂತಾದ ಎರಡು ಬಗೆಯ ಅಲಂಕಾರಗಳಿಗೂ ಮೂಲ ವಕ್ರತೆ ಅಥವಾ ವಕ್ರೋಕ್ತಿ ; ಇದರಿಂದಲೇ ಕಾವ್ಯವು ಶೋಭಿಸುತ್ತದೆ ಎಂದು ಸಿದ್ಧಾಂತಿಸಿದ್ದಾನೆ. ಅಲಂಕೃತ ಶಬ್ದಾರ್ಥಗಳಿಂದ ಮಾತ್ರ ಕಾವ್ಯ ನಿರ್ಮಿತಿಯಾಗುವುದರಿಂದ ಈತನಿಗೆ ಕಾವ್ಯ, ಅಲಂಕಾರ ಹಾಗೂ ವಕ್ರೋಕ್ತಿಗಳು ಪರ್ಯಾಯಪದಗಳು.[3] ಭಾಮಹನ ಈ ಧೋರಣೆಯನ್ನು ಸಮಕಾಲಿಕನಾದ ದಂಡಿಯೂ ಸಹ 'ಕಾವ್ಯಕ್ಕೆ ಶೋಭೆಯನ್ನು ತಂದುಕೊಡುವ ಧರ್ಮಗಳು ಅಲಂಕಾರಗಳು' ಎಂದು ಹೇಳುವುದರ ಮೂಲಕ ಅನುಮೋದಿಸಿದ್ದಾನೆ. ಮತ್ತು ಉಪಮಾ ಮುಂತಾದ ಅಲಂಕಾರ

ವಿಶೇಷಗಳಿಗೆ ಅಲಂಕಾರ ಪದವನ್ನು ನಿಯತವಾಗಿ ಬಳಸಿರುವಂತೆ ಕಾವ್ಯದ ಇತರ ಅಂಶಗಳಾದ ಸಂಧಿ, ವೃತ್ತ...ಇತ್ಯಾದಿಗಳಿಗೂ ಅಲಂಕಾರ ಪದವನ್ನು ಬೇರೆ ಸಂದರ್ಭದಲ್ಲಿ ವ್ಯಾಪಕ ಅರ್ಥದಲ್ಲಿ ಬಳಸಿದ್ದಾನೆ.[5]

ಇನ್ನು ಇತರ ಪ್ರಾಚೀನ ಅಲಂಕಾರಿಕರ ಪೈಕಿ, ರೀತಿ ಸಿದ್ಧಾಂತವನ್ನು ಮಂಡಿಸಿದ ವಾಮನನು ಕಾವ್ಯವು ಅಲಂಕಾರಗಳಿಂದ ಗ್ರಾಹ್ಯವಾಗುತ್ತದೆ ; ಅಲಂಕಾರವೆಂದರೆ ಸೌಂದರ್ಯವೆಂದು ತನ್ನ ಅಲಂಕಾರ ಗ್ರಂಥದ ಆರಂಭದಲ್ಲಿಯೇ ಘೋಷಿಸಿದ್ದಾನೆ.[6] ಆದರೆ ಈ ಕಾಲಕ್ಕೆ ಸೇರಿದ ಉದ್ಭಟ, ರುದ್ರಟರಾದರೆ ಅಲಂಕಾರ ಸ್ವರೂಪದ ಬಗ್ಗೆ ಅಷ್ಟಾಗಿ ಪ್ರಚುರಪಡಿಸಿಲ್ಲ. ಇಷ್ಟರಿಂದ ಪ್ರಾಕ್ತನ ಅಲಂಕಾರಿಕರು ಕಾವ್ಯಭಾಷೆಯು ನಿತ್ಯಭಾಷೆಗಿಂತ ಅಸಾಧಾರಣವಾಗಿ ಅಥವಾ ಸುಂದರವಾಗಿ ಇದ್ದು ಇದರ ಅಪರಿಹಾರ್ಯ ಅಂಗಗಳು ಅಥವಾ ಸೌಂದರ್ಯಕಾರಕಗಳು ಅಲಂಕಾರಗಳು ಎಂಬ ದೃಷ್ಟಿಯನ್ನು ತಳೆದಿದ್ದಾರೆಂದು ಅಡ್ಡಿಯಿಲ್ಲದೆ ಕ್ಷೇಮವಾಗಿ ಹೇಳಬಹುದು. ಈ ಅಲಂಕಾರಗಳು ವಕ್ರತೆಯ ವೈವಿಧ್ಯದಿಂದಾಗಿ ಅನೇಕವಾಗುತ್ತವೆ.

ಆನಂತರದಲ್ಲಿ, ಮಧ್ಯಕಾಲಕ್ಕೆ ಸೇರಿದ ಆನಂದವರ್ಧನನ ಧ್ವನಿ ಸಿದ್ಧಾಂತವು ಕಾವ್ಯಮೀಮಾಂಸೇತಿಹಾಸದಲ್ಲಿ ಪದಾರ್ಪಣೆ ಮಾಡಿದಾಗ್ಯೂ ಅಲಂಕಾರಗಳು ಸಾರ್ವತ್ರಿಕವಾದ ಹಾಗೂ ಪರಮಾರ್ಥವಾದ ರಸ/ಧ್ವನಿಯಲ್ಲಿ ಅಂತರ್ಗತವಾಯಿತೇ ಹೊರತು ಅವು ಪೂರ್ಣವಾಗಿ ಹೇಯವಾಗಲಿಲ್ಲ. ಹಾಗೆಯೇ, ಕಾವ್ಯ ಸಿದ್ಧಾಂತಗಳಲ್ಲಿ ಏನೇ ಮತಭೇದವಿರಲಿ, ಆನಂದವರ್ಧನನಿಂದ ಹಿಡಿದು ಮಮ್ಮಟವರೆಗಿನ ಎಲ್ಲ ಮಧ್ಯ ಹಾಗೂ ನವೀನ ಆಲಂಕಾರಿಕರು ತಮ್ಮದೇ ಆದ ತಾತ್ವಿಕ ಆಯಕಟ್ಟಿನಲ್ಲಿಯೇ ನಿಂತು ಅಲಂಕಾರಸ್ಥಾನ, ಸ್ವರೂಪ ಮತ್ತು ಕಾರ್ಯಗಳನ್ನು ವ್ಯಾಖ್ಯಾನಿಸುತ್ತ ಬಂದಿದ್ದಾರೆಂಬುದನ್ನೂ ಗಮನಿಸಬಹುದು.

ಪ್ರಾಚೀನರೂ ಸೇರಿದಂತೆ ಮಧ್ಯ ಹಾಗೂ ನವೀನ ಯುಗದ ಆಲಂಕಾರಿಕರು ಅಲಂಕಾರವನ್ನು ವೈಚಿತ್ರ್ಯವೆಂತಲೂ, ವಿಚ್ಛಿತ್ತಿ ('poetic differeatia') ಎಂತಲೂ ಚಮತ್ಕೃತಿ ಜನಕವೆಂತಲೂ ಸಾಮಾನ್ಯವಾಗಿ ಒಪ್ಪುತ್ತಾರೆ. ಈ ವಿಚ್ಛಿತ್ತಿ (ವಕ್ರೋಕ್ತಿ)ಯ ಅಂಶವಿರುವುದರಿಂದಲೇ ವಾರ್ತೆಯು ವಾಸ್ತವಾಲಂಕಾರವಾಗುತ್ತದೆ.[7] ಈ ವೈಚಿತ್ರ್ಯವು ಎಲ್ಲಿಂದ ಬರುತ್ತದೆ ? ವಿಚ್ಛಿತ್ತಿ ಎಂದರೇನು ? ಕವಿಯ ಅಪಾರ ಪ್ರತಿಭೆಯ ಫಲವೇ ವೈಚಿತ್ರ್ಯ. ಅಸಂಖ್ಯ ಅಲಂಕಾರಗಳ ನಡುವಿನ ವೈಲಕ್ಷಣ್ಯಕ್ಕೆ ಕಾರಣವಾಗುವುದೇ ವಿಚ್ಛಿತ್ತಿ.[8]

ಕಾವ್ಯಕ್ಕೆ ಶೋಭೆಯನ್ನು ತರುವ ಅಲಂಕಾರಗಳು ಅನಂತವಾಗಿವೆ (ಅನಂತಾ ವೈವಾಗ್ವಿಕಲ್ಪಾ:) ಭರತನ 4 ಅಲಂಕಾರಗಳು ಅಪ್ಪಯ್ಯ ದೀಕ್ಷಿತನ ವೇಳೆಗೆ ಸುಮಾರು 120 ಆಗಿ ಬೆಳೆದಿವೆ. ಕಾವ್ಯದ, ವಿವಿಧ ತತ್ವಗಳ (ಸ್ಥಾನಮಾನದ) ಪುನರ್ರಚನೆ

(redlignment) ಯಾದ ಮೇಲೂ ಅಲಂಕಾರ ಸಂಖ್ಯೆಯು ಹೆಚ್ಚುತ್ತಲೇ ಹೋಗಿದೆ ಯೆಂದು ಇದರಿಂದ ತಿಳಿದು ಬರುತ್ತದೆ. ಶಬ್ದ ಮತ್ತು ಅರ್ಥ ಅಲಂಕಾರ ಪ್ರಧಾನವಾದ ಚಿತ್ರಕಾವ್ಯಕ್ಕೆ ಮಾನ್ಯತೆ ನೀಡಿರುವುದುಂಟು. ಅಲ್ಲದೆ, ಅಲಂಕಾರೇತಿಹಾಸದ ಉತ್ತರಾರ್ಧದಲ್ಲಿ ಒಂದೊಂದು ಅಲಂಕಾರ (ವಿಶೇಷವಾಗಿ ಅರ್ಥಾಲಂಕಾರ)ದ ಮೇಲೂ ಸುದೀರ್ಘ ಚರ್ಚೆಗಳು ನಡೆದಿವೆ. ಆದ್ದರಿಂದ ಕಾವ್ಯಶಾಸ್ತ್ರಕ್ಕೆ ಅಲಂಕಾರಶಾಸ್ತ್ರವೆಂಬ ಹೆಸರನ್ನು ಉಳಿಸಿಕೊಂಡು ಬಂದಿರುವುದು ಕೇವಲ ಸಾಂಪ್ರದಾಯಿಕತೆಯ ಕಾರಣದಿಂದಲ್ಲ ವೆಂದು ತಿಳಿದು ಬರುತ್ತದೆ. ವಸ್ತುಸ್ಥಿತಿಯೇನೆಂದರೆ ಅಲಂಕಾರ ಪದಕ್ಕೆ (ವಾಮನನು ಹೇಳಿರುವಂತೆ) ಸೌಂದರ್ಯವೆಂಬರ್ಥವಿದ್ದು ಇದು ಕಾವ್ಯದಲ್ಲಿ ನವೀನಾಲಂಕಾರಿಕರಿಗೂ ಸಮ್ಮತವಾದ ನಿರ್ಣಾಯಕವಾಗಿದೆ. ಈ ಸಂದರ್ಭದಲ್ಲಿ, ಕುಂತಕನು 'ವೈದಗ್ಧ್ಯಭಂಗೀ ಭಣಿತಿ' ಸ್ವರೂಪವಾದ, ಸಹೃದಯರಿಗೆ ಆಸ್ವಾದವನ್ನುಂಟು ಮಾಡುವ ಕೇವಲ ವಾಕ್ಯ ಗಳಲ್ಲಿಯೇ (ವಾಕ್ಯವಕ್ರತಾ-ಅಲಂಕಾರ) ಅಲ್ಲದೆ ಕಾವ್ಯದ ಸಕಲ ಅಂಶಗಳಲ್ಲಿ ಮೂಲ ಭೂತವಾಗಿರುವ ವಕ್ರೋಕ್ತಿಯನ್ನು ಸಿದ್ಧಾಂತವನ್ನಾಗಿ ಬೆಳೆಸಿರುವುದನ್ನು ಜ್ಞಾಪಕ ಮಾಡಿಕೊಳ್ಳಬೇಕಾಗುತ್ತದೆ.

ಇಷ್ಟೊಂದು ಹೆಮ್ಮರವಾಗಿ ಬೆಳೆದ ಅಲಂಕಾರ ಪ್ರಕಾರಗಳನ್ನು ಗಮನಿಸಿದಾಗ ಅವುಗಳ ವಿಭಜನೆಗೆ ವಿಶೇಷಗಮನವನ್ನು ಹರಿಸಿದ, ನಿಯತವಾಗಿ ಪ್ರಯತ್ನಮಾಡಿದ ಆಲಂಕಾರಿಕರು ಕಡಿಮೆಯೆಂದೇ ಹೇಳಬಹುದು. ಇದನ್ನು ಮೂರು ಹಂತಗಳಲ್ಲಿ ಗುರುತಿಸಿ ವಿಶ್ಲೇಷಿಸಬಹುದಾದರೆ :

1. ಧ್ವನಿಪೂರ್ವ ಆಲಂಕಾರಿಕರು—ಭರತನಿಗೆ ಅಲಂಕಾರಗಳ ಪ್ರಧಾನ ಹಾಗೂ ಉಪವಿಭಜನೆಗಳ ಅವಶ್ಯಕತೆ ಕಾಣಲಿಲ್ಲವೆಂತಿದ್ದರೆ ಭಾವಹನು ಶಬ್ದ ಮತ್ತು ಅರ್ಥ ಅಲಂಕಾರಗಳಿಗೆ ಸಮಾನ ಪ್ರಾಮುಖ್ಯವನ್ನು ಕೊಟ್ಟಿದಾಗ್ಯೂ ವಿಶೇಷ ವಿಂಗಡನೆಯ ಪ್ರಯತ್ನಕ್ಕೆ ಕೈಹಾಕಿದಂತಿಲ್ಲ.

ಆದರೆ, ಅಲಂಕಾರಗಳ ಅನೇಕತೆಯ ಸಮಕಾಲದಲ್ಲೋ ಅಥವಾ ಸಮನಂತರ ದಲ್ಲೋ ಅವುಗಳನ್ನು ವ್ಯಾಪಕ ವರ್ಗಗಳಲ್ಲಿ ತರುವ ಪ್ರಯತ್ನಗಳೂ ಆಗಾಗ ನಡೆದಿವೆ ಕೂಡ. ಇಂತಹ ಮುಕ್ತ ಪ್ರಯತ್ನ ದಂಡಿಯಿಂದ ನಡೆದಿದೆ ಎಂದೆನ್ನಬಹುದು[9]. ದಂಡಿಯ ಶಬ್ದ ಮತ್ತು ಅರ್ಥ ಅಧಿಕಾರಗಳ ವಿಂಗಡನೆಯ ವಿವಕ್ಷೆಯು ತನ್ನ ಗ್ರಂಥ ಕಾವ್ಯಾದರ್ಶದ ಎರಡನೆಯ ಮತ್ತು ಮೂರನೆಯ ಪರಿಚ್ಛೇದಗಳಲ್ಲಿ ಅವುಗಳನ್ನು ಪ್ರತ್ಯೇಕವಾಗಿ ಪ್ರಸ್ತಾಪಿಸಿ ವಿವರಿಸಿರುವುದರಿಂದ ವಿದಿತವಾಗುತ್ತದೆ. ಅಲಂಕಾರಗಳ ವಿವಿಧ ಉಪಭೇದಗಳನ್ನು ಎಣಿಸುವ ದಂಡಿಯು ಅವುಗಳನ್ನು 'ಚಕ್ರ'ಗಳೆಂಬ (ಉದಾಹರಣೆಗೆ ಉಪಮಾ ಚಕ್ರ, ರೂಪಕ ಚಕ್ರ....ಇತ್ಯಾದಿ) ಮುಖ್ಯವರ್ಗಗಳಲ್ಲಿ

ಕಲೆ ಹಾಕಿದ್ದಾನೆ. ಇವುಗಳಲ್ಲಿಯೂ ಅನೇಕ ಉಪಭೇದಗಳು ಮುಂದೆ ಸ್ವತಂತ್ರ ಅಲಂಕಾರಗಳಾಗಿ ಉದಾಹರಣೆಗೆ ಮೋಹೋಪಮೆಯು ಭ್ರಾಂತಿಮಾನ್ ಎಂದು, ಅಸಾಧಾರಣೋಪಮೆಯು ಅನನ್ವಯವೆಂತಲೂ ಪರಿಗಣಿತವಾಗಿರುವುದು ಬೇರೆ ಮಾತು.

ಇನ್ನೊಂದು ಸಂದರ್ಭದಲ್ಲಿ, ದಂಡಿಯು ಶ್ಲೇಷವನ್ನು ಇತರ ಅಲಂಕಾರಗಳಿಗೆ ಪೋಷಕವಾಗುತ್ತದೆಯೆಂದು ಹೇಳಿರುವುದರಿಂದ ಇದು ಅಲಂಕಾರಗಳ ಉಪಭೇದಗಳಿಗೆ ಕಾರಣವಾಗುತ್ತದೆಂದು ತಿಳಿಯಬಹುದು.[10] ವೈಚಿತ್ರ್ಯದಲ್ಲಿಯ ಸೂಕ್ಷ್ಮ ವ್ಯತ್ಯಾಸ ದಿಂದಾಗಿ ಅಲಂಕಾರವನ್ನು ಪ್ರತ್ಯೇಕಿಸಲು ಬಹುದಾದರೂ ಪ್ರಧಾನ ವರ್ಗೀಕರಣ ಮಾಡಿ ಅದರಡಿಯಲ್ಲಿ ಸಾಮಾನ್ಯಾಂಶವನ್ನಾಧರಿಸಿದ ಉಪಭೇದಗಳನ್ನು ತರುವುದು ಒಪ್ಪತಕ್ಕ ಶಕ್ಯ ವಿಚಾರವೇ ಸರಿ.

ದಂಡಿಯ ನಂತರ ವಾಮನನು ಅಲಂಕಾರಗಳನ್ನು ಶಬ್ದ ಮತ್ತು ಅರ್ಥಗಳೆಂದು ದ್ವಿವಿಧವಾಗಿ ಬೇರ್ಪಡಿಸಿ ಯಮಕ ಮತ್ತು ಅನುಪ್ರಾಸಗಳನ್ನು ಮೊದಲನೆಯದರಲ್ಲಿ, ಎರಡನೆಯದರಲ್ಲಿ ಉಪಮೆಗೆ ಆಮುಖ ಸ್ಥಾನವನ್ನು ಕೊಟ್ಟು ಉಳಿದೆಲ್ಲ ಅರ್ಥ ಅಲಂಕಾರಗಳಲ್ಲಿ ಸಾಧಾರಣಾಂಶವನ್ನು ಗುರುತಿಸಿ ಅವುಗಳನ್ನು 'ಉಪಮಾಪ್ರಪಂಚ' ವೆಂದಿದ್ದಾನೆ.[11] ಉಪಮೆಗೆ ಅಗ್ರಸ್ಥಾನವನ್ನು ನೀಡಿ ಅದನ್ನು ಕೊಂಡಾಡುವ ಮಹಿಮಭಟ್ಟ, ಜಗನ್ನಾಥ ಮೊದಲಾದ ಅನೇಕ ಇತರ ನವೀನಾಲಂಕಾರಿಕರೂ ಇದ್ದಾರೆ.[12] ಅಂತೆಯೇ, ಇದಕ್ಕೆ ಸಮಾನಾಂತರವಾಗಿ ಭಾಮಹ ಮೊದಲಾದ ಆಲಂಕಾರಿಕರ ಉಲ್ಲೇಖಗಳಿಂದ ರೂಪಕಾಲಂಕಾರಕ್ಕೆ ಪ್ರಾಮುಖ್ಯವನ್ನು ಕೊಟ್ಟಿರುವ ಪರಂಪರೆಯ ಸೂಚನೆಯೂ ಸಿಕ್ಕುತ್ತದೆ.[13] ಆದರೆ, ಅಲಂಕಾರಗಳಲ್ಲಿ ಉಪಮೆಯು ಪ್ರಮುಖವೋ ಅಥವಾ ರೂಪಕವು ಮೂಲವೋ-ಇದರ ಮೇಲೆ ಆಲಂಕಾರಿಕರು ಸ್ಪಷ್ಟ ಗಂಭೀರ ಚರ್ಚೆಯನ್ನು ನಡೆಸದಿರುವುದು ವಾಸ್ತವಾಂಶ.

ಭಾಮಹನ ಪಥವನ್ನನುಸರಿಸುವ ಉದ್ಭಟನು ತಾನು ಹೆಸರಿಸುವ ಅಲಂಕಾರ ಗಳನ್ನು 6 ಪಟ್ಟಿಗಳನ್ನಾಗಿ ಮಾಡಿ, ಅವುಗಳನ್ನು ವರ್ಗಗಳೆಂದು ಕರೆಯುತ್ತ 6 ಪ್ರತ್ಯೇಕ ಅಧ್ಯಾಯಗಳಲ್ಲಿ ವಿವರಿಸುತ್ತಾನೆ. ಮೊದಲನೆಯ ವರ್ಗದಲ್ಲಿ ಉಪಮಾ ಮುಂತಾದ ಅರ್ಥಾಲಂಕಾರಗಳ ಜೊತೆ ಅನುಪ್ರಾಸ, ಪುನರುಕ್ತವದಾಭಾಸ ಶಬ್ದಾ ಲಂಕಾರಗಳನ್ನೂ ಸೇರಿಸಿದ್ದಾನೆ. ಇದರಿಂದ, ತನ್ನ ಪೂರ್ವಿಕನಾದ ಭಾಮಹನನ್ನು ಸಾಮಾನ್ಯವಾಗಿ ಅನುಸರಿಸುವುದನ್ನು ಬಿಟ್ಟು ಈತನ ಅಲಂಕಾರಗಳ ವರ್ಗೀಕರಣದಲ್ಲಿ ವೈಜ್ಞಾನಿಕ ಆಧಾರವನ್ನು ಹುಡುಕಲಾಗುವುದಿಲ್ಲವೆಂದು ತಿಳಿಯಬಹುದು.

ಅಲಂಕಾರಗಳ ವಿಚಾರ ಹಾಗೂ ನಿಶ್ಚಿತ ಪೂರ್ವಕವಾದ ವ್ಯವಸ್ಥಿತ ವರ್ಗೀಕರಣ ಪ್ರಯತ್ನ ನಡೆದಿರುವುದು ರುದ್ರಟನಿಂದ ಎಂದು ಹೇಳಬಹುದು. ಶಬ್ದ ಮತ್ತು ಅರ್ಥಗಳೆಂಬ ಪ್ರಧಾನ ಭೇದಗಳನ್ನು ಮಾಡಿರುವುದೇ ಅಲ್ಲದೆ, ಅರ್ಥಾಲಂಕಾರಗಳನ್ನು

ವಾಸ್ತವ, ಔಪಮ್ಯ, ಅತಿಶಯ ಮತ್ತು ಶ್ಲೇಷಗಳೆಂಬ 4 ವರ್ಗಗಳನ್ನು ಮಾಡಿ ಸುಮಾರು 20 ಅಲಂಕಾರಗಳನ್ನು ಮೊದಲೆರಡು ವಿಭಾಗಗಳಲ್ಲಿ, ತಲಾ 10ನ್ನು ಉಳಿದೆರಡು ವಿಭಾಗಗಳಲ್ಲಿ ಹೆಸರಿಸಿದ್ದಾನೆ. ವರ್ಗಗಳ ಹೆಸರುಗಳಿಂದಲೇ ಈತನು ವಿಂಗಡನೆಯ ಉದ್ದೇಶವನ್ನು ತೋರಿಸಿಕೊಟ್ಟಿದ್ದಾನೆಯಲ್ಲದೆ ಇವುಗಳ ವಿದ್ಯುಕ್ತ ಲಕ್ಷಣಗಳನ್ನೂ ಕೊಟ್ಟಿದ್ದಾನೆ.[14] ಇವನ ದೃಷ್ಟಿಯಲ್ಲಿ ರೂಪಕ ಮುಂತಾದ ಅಲಂಕಾರಗಳು ಇರುವುದಾದರೂ ಅವು ಈ ನಾಲ್ಕರ ವಿಶೇಷಗಳೇ ಹೊರತು ಬೇರೆಯದಲ್ಲ.[15] ಇನ್ನು ಕೆಲವು ಅಲಂಕಾರಗಳು (ಉದಾಹರಣೆಗೆ ಸಹೋಕ್ತಿ) ಮೂಲತತ್ವವನ್ನು ಅವಲಂಬಿಸಿ (ಉದಾಹರಣೆಗೆ ವಾಸ್ತವ ಮತ್ತು ಔಪಮ್ಯಗಳಲ್ಲಿ) ಒಂದಕ್ಕಿಂತ ಹೆಚ್ಚಿನ ವರ್ಗಗಳಲ್ಲಿ ಸೇರ್ಪಡೆಯಾಗಿರುತ್ತದೆ. ಎಂದರೆ, ಅಲಂಕಾರಗಳು ನಿರ್ದಿಷ್ಟವಾಗಿ ರೂಪುಗೊಳ್ಳುತ್ತಿರುವ, ಬೆಳೆಯುತ್ತಿರುವ ಹಂತದಲ್ಲಿ ಅವುಗಳ ನಿಯತ ವರ್ಗೀಕರಣದ ಪ್ರಸ್ತುತೆಯ ಚರ್ಚೆಯು ರುದ್ರಟನ ಭಾಗಕ್ಕೆ ಅನವಸರ ಅಥವಾ ಅಕಾಲಿಕವೆಂದು ತೋರಬಹುದು. ಆವರೂ ಸಹ, ಪ್ರತಿಯೊಂದು ಅಲಂಕಾರದ ಲಕ್ಷಣದ ಆಯುಕಟ್ಟು ಮತ್ತು ಉದಾಹರಣೆಗಳನ್ನು ಪರಿಕ್ಷೀಸಿದರೆ ಸಾಮಾನ್ಯವಾಗಿ ವೈಜ್ಞಾನಿಕವೆನ್ನಬಹುದಾಗಿರುವ ರುದ್ರಟನ ವಿಂಗಡನೆಯ ಪ್ರಯತ್ನ ಅವನಿಗೆ ಗೌರವವನ್ನು ತಂದುಕೊಡುವುದರಲ್ಲಿ ಸಂಶಯವಿಲ್ಲ. ಇನ್ನೂ ಮುಖ್ಯವಾಗಿ, ನಂತರದ ಆಲಂಕಾರಿಕ ವಾಚ್ಯ ಮತ್ತು ಸೂಚ್ಯ ಅಲಂಕಾರ ವರ್ಗೀಕರಣಕ್ಕೆ ತೋರಗೋಲಾಗಿದೆ ಎನ್ನಬಹುದು.

ಒಟ್ಟಿನಲ್ಲಿ, ಧ್ವನಿಪೂರ್ವ ಆಲಂಕಾರಿಕರಲ್ಲಿ (ರುದ್ರಟನ ಹೊರತು) ಬಹುತೇಕ ಅಲಂಕಾರ ವಿಭಾಗದ ಕಲ್ಪನೆಯಿದ್ದು ಅವರು ಅದರ ಕಡೆ ವಿಶೇಷ ಗಮನಕೊಟ್ಟಿಲ್ಲವೆನ್ನಬಹುದು. ರುದ್ರಟನ ವಿಭಾಗ ಪ್ರಯತ್ನವು ಐತಿಹಾಸಿಕ ಅಥವಾ ತೌಲನಿಕ ದೃಷ್ಟಿಯಿಂದ ನೋಡಿದರೆ ತಕ್ಕಮಟ್ಟಿಗೆ ವೈಜ್ಞಾನಿಕವೂ ಸಮರ್ಪಕವೂ ಆಗಿರುತ್ತದೆಯೆಂದು ಹೇಳಬಹುದು.

2. ಧ್ವನಿಕಾಲದ ಆಲಂಕಾರಿಕರು—ಇನ್ನು ಧ್ವನಿಕಾಲದ ಲಾಕ್ಷಣಿಕರು ಧ್ವನಿ, ರಸ, ಅನುಮಾನ, ಔಚಿತ್ಯ ಮುಂತಾದ ಕಾವ್ಯದ ಸೂಕ್ಷ್ಮತರ ಮೂಲತತ್ವಗಳ ಚಿಂತನೆಯಲ್ಲಿ ತೊಡಗಿರುವಾಗ ಅಲಂಕಾರ ವಿಂಗಡನೆ ಮತ್ತು ಸಂಬಂಧಪಟ್ಟ ಇತರ ಸ್ಥೂಲ ವಿಷಯಗಳಿಗೆ ಗಮನ ಹರಿಸಿದ್ದುದೇ ಆದರೆ ಅದು ನಮಗೆ ಅಪ್ರಸಕ್ತವೆಂತಲೂ ಅಥವಾ ಬೂಟಾಟಿಕೆ ಎಂತಲೂ ತೋರಬರುತ್ತಿತ್ತು ನಿಜ. ಅದಾಗ್ಯೂ ಈ ಆಲಂಕಾರಿಕರಲ್ಲಿ ಭೋಜನು ಅಲಂಕಾರ ವರ್ಗಗಳ ಬಗ್ಗೆ ಸ್ವಲ್ಪ ಆಸಕ್ತಿ ವಹಿಸಿದ್ದಾನೆಂದೆನಿಸುತ್ತದೆ. ಈತನು ಅಲಂಕಾರಗಳನ್ನು ಶಬ್ದ ಮತ್ತು ಅರ್ಥಗಳೆಂದು ವಿಭಾಗಿಸಿರುವುದರ ಜೊತೆಉಭಯಾಲಂಕಾರವೆಂಬ ಮೂರನೆಯ ಭೇದವನ್ನೂ ಮಾಡಿದ್ದಾನೆ. ಉಭಯಾಲಂಕಾರದ ಈ ಮೂರನೇ ವಿಭಜನೆ ಪ್ರಶ್ನಿಸಬಹುದಾಗಿದೆ; ಕೆಲವು ಆಲಂಕಾರಿಕರು ಪ್ರಶ್ನಿಸಿದ್ದಾರೆ ಕೂಡಃ ಇವರ ದೃಷ್ಟಿ

ಯಲ್ಲಿ ಶಬ್ದಾರ್ಥಾಲಂಕಾರಗಳ ಸಹಯೋಗ ತಿಲಕಂಕುಲದಂತೆ ಸಂಸೃಷ್ಟಿ (ಅಥವಾ ನೀರಕ್ಷೀರದಂತೆ ಸಂಕರ) ಯಾಗಬಹುದೇ ಹೊರತು ಇದು ಪ್ರತ್ಯೇಕ ವರ್ಗಕ್ಕೆ ಕಾರಣವಾಗುವುದಿಲ್ಲ. ಭೋಜನಲ್ಲದೆ ಆನಂದ ವರ್ಧನ, ಮಹಿಮ ಭಟ್ಟ, ಕ್ಷೇಮೆಂದ್ರ...... ಮಿಕ್ಕ ಆಲಂಕಾರಿಕರು ತಮ್ಮ ತಮ್ಮ ಸಿದ್ಧಾಂತಗಳ ನಿರೂಪಣೆಗೆ ಗಮನವಿಟ್ಟದ್ದರಿಂದ ಇವರ ದೃಷ್ಟಿಯಲ್ಲಿ ಅಲಂಕಾರಗಳಿಗೆ ಗೌಣಸ್ಥಾನವೇ.

3. ಧ್ವನಿ ಉತ್ತರ ಆಲಂಕಾಂಕರು—ಇದಕ್ಕೆ ಬೇರೆಯಾಗಿ, ನವೀನಯುಗದ ಆಲಂಕಾರಿಕರು ಧ್ವನಿ ಸಿದ್ಧಾಂತದ ಅನುಮೋದಕರೂ ಹಾಗೂ ಪ್ರಚಾರಕರೂ ಆಗಿದ್ದು ತಮ್ಮ ಗ್ರಂಥಗಳಲ್ಲಿ ವಿಶೇಷ ಅಲಂಕಾರಗಳ ಲಕ್ಷಣಗಳ ಬಗ್ಗೆ ಹಾಗೂ ಪೂರ್ವಿಕರು ಕೊಟ್ಟ ಆಯಾಮ ಉದಾಹರಣೆಗಳ ಯುಕ್ತಾಯುಕ್ತತೆಯ ಬಗ್ಗೆ ಬಹುವಾಗಿ ಚರ್ಚಿಸಿದ್ದಾರೆ. ಅಂದಹಾಗೆ, ಅಲಂಕಾರಗಳ ಲಕ್ಷಣ ನಿಷ್ಕರ್ಷೆಯು ಅಲಂಕಾರ ವರ್ಗೀಕರಣ. ಕಲ್ಪನೆಯ ಒಂದು ಸೂಚಕವಾಗಿರ ಬಹುದು. ಮಮ್ಮಟ, ಅಪ್ಪಯ್ಯದೀಕ್ಷಿತ ಮತ್ತು ಇತರ ನವೀನಾಲಂಕಾರಿಕರು ವಿಧ್ಯುಕ್ತವಾದ ಅಲಂಕಾರ ವರ್ಗೀಕರಣವನ್ನು ಮಾಡದಿದ್ದರೂ ಅವರ ಅಲಂಕಾರಗಳ ನಿರ್ವಹಣೆ ಕ್ರಮರಹಿತವೆಂದು ಟೀಕಿಸುವುದು ಧೃಷ್ಟತೆ ಮಾಡಿತು ! ಏಕೆಂದರೆ ಅವರ ಅರ್ಥಾಲಂಕಾರಗಣನೆಯಲ್ಲಿ ಒಂದು ಒಂದಲ್ಲ ಅನುಗತತೆಯ ಧರ್ಮವಿದ್ದು ಅಲಂಕಾರಗಳ ಕ್ರಮವನ್ನು ಗುರುತಿಸಬಹು ದಾಗಿದೆ.[16] ನವೀನಾಲಂಕಾರಿಕರ ಪೈಕಿ, ರುಯ್ಯಕನಕಾಲಕ್ಕೆ ಅಲಂಕಾರ ಲಕ್ಷಣಗಳು ಕಾವ್ಯ ಪ್ರಸಿದ್ಧವಾಗಿ, ಶಾಸ್ತ್ರ ನಿಖರವಾಗಿ, ಅವನು (ಹೊಸ) ಅಲಂಕಾರಗಳನ್ನು ಪರಿಗಣಿಸುವುದಕ್ಕಾಗಲೀ ಅಥವಾ ಅವುಗಳನ್ನು ವಿಂಗಡಿಸು ವುದಕ್ಕಾಗಲೀ ಸಹಾಯಕವಾದವು. ಅಲಂಕಾರಗಳು ಅಧಿಕ ಸಂಖ್ಯೆಯಲ್ಲಿ ಪ್ರತಿಷ್ಠಿತವಾಗಿದ್ದು ರುಯ್ಯಕನು ಪ್ರಧಾನ ವಿಭಾಗಗಳೊಂದಿಗೆ ಉಪವಿಭಾಗಗಳ ಬಗ್ಗೆ ಯೋಚಿಸಿರುವುದು ಸಹಜವಾಗಿದೆ. ಇವನು ಅರ್ಥಾಲಂಕಾರಗಳನ್ನು ಬಹುತೇಕ ನಿಗದಿತವಾದ ಹತ್ತು ಶೀರ್ಷಿಕೆಗಳಲ್ಲಿ ಪಟ್ಟಿ ಮಾಡಿದ್ದಾನೆ. 1. ಸಾದೃಶ್ಯಮೂಲ. 2. ವಿಶೇಷಣ ವಿಚ್ಛಿತ್ತಿಮೂಲ 3. ಗಮ್ಯತ್ವ ವಿಚ್ಛಿತ್ತಿಮೂಲ 4. ವಿರೋಧಮೂಲ 5. ಶೃಂಖಲಾಮೂಲ 6. ತರ್ಕನ್ಯಾಯಮೂಲ 7. ವಾಕ್ಯನ್ಯಾಯಮೂಲ 8. ಲೋಕ ನ್ಯಾಯಮೂಲ. 9. ಗೂಢಾರ್ಥ ಪ್ರತೀತಿ ಮೂಲ ಮತ್ತು 10. ಮಿಶ್ರಿತ.

ಅಲಂಕಾರ ವಿಭಾಗದ ವಿಷಯದಲ್ಲಿ ರುದ್ರಟನನ್ನು ಬಿಟ್ಟರೆ ರುಯ್ಯಕನಿಗೇ ವಿಶೇಷಸ್ಥಾನವಿರುವುದು. ಮುಂದೆ ರುಯ್ಯಕನು ಹಾಕಿ ಕೊಟ್ಟ ಹಾದಿಯಲ್ಲಿ ನಡೆದ ಜಗನ್ನಾಥನು ಆಯಾಯ ವಿಶೇಷ ವರ್ಗಗಳಲ್ಲಿ ಬರುವ ಉದಾಹರಣೆಗೆ, ಶೃಂಖಲಾ

ಮೂಲದ ನಾಲ್ಕು ಅಲಂಕಾರಗಳ ನಡುವಿನ ಸಾಮ್ಯಾಂಶವನ್ನೂ ಗುರುತಿಸಿ ಲಕ್ಷಿಸುವ ಯತ್ನ ಮಾಡಿದ್ದಾನೆ. ಇನ್ನುಳಿದ ಆಲಂಕಾರಿಕರ ಅಲಂಕಾರ ಉಪಸಂಖ್ಯಾನ ಕ್ರಮದಲ್ಲಿ ಪೂರ್ವೋತ್ತರ ಅಲಂಕಾರಗಳಿಗೆ ಒಂದು ನಿರ್ದಿಷ್ಟ ಸಂಬಂಧವು ಕಾಣುವುದೆಂದು ಈಗಾಗಲೇ ಹೇಳಿದ್ದೇವೆ. ಆದರೂ ಈ ನಿಟ್ಟಿನಲ್ಲಿ ಮಾಡಿರುವ ಪ್ರಯತ್ನಗಳು ಒಂದು ದೃಷ್ಟಿಯಿಂದ ಅಷ್ಟು ಫಲಕಾರಿಯಾಗಿಲ್ಲವೆಂದು ಹೇಳಬೇಕು. ಏಕೆಂದರೆ, ಅನೇಕ ಅಲಂಕಾರಗಳು ವಾಸ್ತವದಲ್ಲಿ ಉದಾಹರಣೆಗಳು ವರ್ಗೀಕರಣದ ಹಿಡಿತದಿಂದ ತಪ್ಪಿಸಿ ಕೊಳ್ಳುತ್ತದೆ.[17] ಯಾವುದೇ ವರ್ಗದ ಆಯಕಟ್ಟಿನೊಳಗೆ ಖಚಿತಗೊಳಿಸಲು ಸಾಧ್ಯ ವಾಗುವುದಿಲ್ಲ (ಹೋಲಿಸಿ : ಪ್ರಾಧಾನ್ಯೇನ ವ್ಯಪದೇಶಾಃ ಭವಂತಿ ।) ಅಥವಾ ಹೀಗೆ ಮಾಡುವುದೇ ಆಲಂಕಾರಿಕರ ಪಟ್ಟಿನ ಕೆಲಸವೂ ಅಲ್ಲ.

ಭರತನು ಹೆಸರಿಸಿದ ಮೇಲ್ಕಂಡ 4 ಅಲಂಕಾರಗಳು ನಂತರದಲ್ಲಿ 120 ಪ್ರಧಾನ ಅಲಂಕಾರಗಳಾಗಿ ಹೆಮ್ಮರವಾಗಿ ಬೆಳೆದಿವೆಯೆಂದು ತಿಳಿದಿದೆ. ಈ ಬೆಳವಣಿಗೆಯಲ್ಲಿ ಇತರ ಶಾಸ್ತ್ರಗಳ ಪ್ರಭಾವವನ್ನು ನಾವು ಕಡೆಗಣಿಸಲಾಗದಷ್ಟೆ. ಬೆಳೆದ, ಬೆಳೆಯುತ್ತಲಿದ್ದ ಅಲಂಕಾರಗಳನ್ನು ವರ್ಗಗಳಲ್ಲಿ ತರುವ ಉಪಾಯವಾಗಿ ಕೆಲವು ಸಾಧಾರಣ ಅಂಶಗಳನ್ನು ಕಂಡುಕೊಳ್ಳದ ಲಾಕ್ಷಣಿಕರ ಪ್ರಯತ್ನವೂ ಅಂತೆಯೇ ಸಹಜವಾಗಿದೆ. ವಿಂಗಡನೆಯು ಎಷ್ಟರಮಟ್ಟಿಗೆ ವೈಜ್ಞಾನಿಕವಾಗಿದೆ, ವ್ಯವಸ್ಥಿತವಾಗಿದೆ ಅಥವಾ ಮನೋವೈಜ್ಞಾನಿಕವಾಗಿದೆ ಅಥವಾ ಇಲ್ಲವಾಗಿದೆ ಎಂಬುದರ ವಿವರ ಈ ಲೇಖನದ ಉದ್ದೇಶಕ್ಕೆ ಬಾಹಿರ. (ರುದ್ರಟನಿಂದ ರುಯ್ಯಕನವರೆಗಿನ) ವಿವಿಧ ಅಲಂಕಾರಗಳಿಗೆ ಹೆಚ್ಚು ಹೆಚ್ಚಿನ ಮನ್ನಣೆ ದೊರೆತುದರಿಂದಲೇ ಅಲಂಕಾರಿಕರಲ್ಲಿ ಅವುಗಳ ವಿಂಗಡನೆ ಮತ್ತು ವಿಶ್ಲೇಷಣೆಗಳ ಅಗತ್ಯತೆ ಮತ್ತು ವರ್ಗೀಕರಣ ಪ್ರವೃತ್ತಿ ಹೆಚ್ಚಾಯಿತು.

'ಶೃಂಖಲಾಮೂಲ'ವೆಂಬುದು ಮೇಲೆ ಹೇಳಿದ ವರ್ಗಗಳಲ್ಲಿ ಒಂದು ಇದರೊಳಗೆ ಕಾರಣಮಾಲಾ, ಮಾಲಾದೀಪಕ, ಏಕಾವಳೀ ಮತ್ತು ಸಾರ ಎಂಬ 4 ಅಲಂಕಾರ ವಿಶೇಷಗಳು ಬರುತ್ತವೆ. ಶೃಂಖಲಾ ಎಂದರೆ ಕೊಂಡಿ, ಚೈನು, ಸರಪಳಿ. ಈ (ಶೃಂಖಲಾ) ಸಂಬಂಧವು 4 ಅಲಂಕಾರಗಳಲ್ಲಿಯೂ ಕಂಡುಬರುವ ಸಾಮಾನ್ಯ ತತ್ತ್ವವೆಂಬುದು ವರ್ಗದ ಹೆಸರಿನಿಂದಲೇ ಸ್ಪಷ್ಟವಾಗುತ್ತದೆ. ಅಂದರೆ, ಒಂದು ಪದ್ಯದ ಅನೇಕ ವಾಕ್ಯ ಅಥವಾ ವಾಕ್ಯಾರ್ಥಗಳ ನಡುವಿನ ಸಂಬಂಧವಾಗಿ ಇದು ಇತರ ವರ್ಗದ ಅಲಂಕಾರಗಳನ್ನು ವ್ಯಾವರ್ತಗೊಳಿಸುವ ಅಸಾಧಾರಣ ಅಂಶ ಅಥವಾ ವಿಚ್ಛಿತ್ತಿ ವಿಶೇಷ.[18] ಕುತೂಹಲಕರ ಸಂಗತಿಯೆಂದರೆ, ಶೃಂಖಲಾಪದದೊಂದಿಗೆ ನಿಕಟ ಸಂಪರ್ಕವಿರುವ (ಸಹಜಾತವೆನ್ನಬಹುದಾದ) ಇತರ ಪದಗಳಾಗಿ ಆವೃತ್ತಿ, ಶಶನಾ ಮತ್ತು ಮಾಲಾಗಳು ಈ ಸಂದರ್ಭದಲ್ಲಿ ಪ್ರಯುಕ್ತವಾಗಿದ್ದು ಇವುಗಳನ್ನು ಅರ್ಥೈಸುವುದರಲ್ಲಿ ಅಲಂಕಾರಿಕರ ಮಧ್ಯೆ ಅಸ್ಪಷ್ಟತೆ ಇದ್ದಂತೆ ತೋರುತ್ತದೆ. ಸದ್ಯಕ್ಕೆ ಈ ವರ್ಗದಲ್ಲಿ ಬರುವ ಮಾಲಾ ದೀಪಕ ಮತ್ತು ಕಾರಣಮಾಲಾ ಅಲಂಕಾರಗಳ

ಹೆಸರುಗಳನ್ನೇ ನಿದರ್ಶಿಸಬಹುದು. ಆದಾ ಎಂದರೆ ಪೌನಃಪುನ್ಯ. ಇದು ಪ್ರಸಕ್ತ ಅಲಂಕಾರಗಳಲ್ಲಿವ ಅಂಶ. ರಶನಾ ಎಂದರೆೊ ಡಾಬು. ಇದು ಶೃಂಖಲೆಯ ಪರ್ಯಾಯ ಪದವೇ ಆಗುತ್ತದೆ. ಇನ್ನು ಮಾಲಾ ಪದವು ಉಕ್ತ ಅಲಂಕಾರಗಳ ಹೆಸರುಗಳಲ್ಲಿಯೇ ಕಂಡುಬಂದರೂ ಶೃಂಖಲೆಯ ಅರ್ಥವನ್ನು ಕೊಟ್ಟೀತೇ ಇದು ? ಎಂಬುದನ್ನು ವಿವೇಚಿಸಬೇಕು. ಪ್ರಯತ್ನವಿದಾಗಿರಲು ಇದು ಲೇಖನದ ಶೀರ್ಷಿಕೆ ಯಿಂದಲೇ ವಿಷಯ ಸರಾಚಿತವಾಗುತ್ತದೆ. ಇಂತಹ ಶಾಸ್ತ್ರೀಯ ವಿಚಾರಗಳನ್ನು ಚರ್ಚಿಸುವ ಮುನ್ನ ಭರತನಾದಿಯಾಗಿ ಜಗನ್ನಾಥನ ಪರ್ಯಂತ ಪ್ರಮುಖ ಆಲಂಕಾರಿಕರು ಈ ಆಲಂಕಾರಗಳ ಮೇಲೆ ಗಮನ ಹರಿಸಿದುದರ ಪ್ರಭಾವ ಮತ್ತು ಪ್ರೇರಣೆಗಳನ್ನು ಅವರಿಗೆ ಉಪಲಬ್ಧವಿರುವ ಸಮೃದ್ಧ ಸಾಹಿತ್ಯ ಕೃತಿಗಳು ಎಷ್ಟರ ಮಟ್ಟಿಗೆ ಒದಗಿಸಿಕೊಟ್ಟಿವೆ ಎಂಬುದರ ಕಡೆ ಗಮನ ಹರಿಸೋಣ. ಇದಕ್ಕೂ ಮೊದಲು, ಪ್ರಸಕ್ತ 4 ಅಂಲಕಾರಗಳ ಸ್ಥೂಲ ಲಕ್ಷಣವನ್ನು ತಿಳಿಯೋಣ : ಕಾವ್ಯದಲ್ಲಿ ಪೂರ್ವೋತ್ತರ ವಾಕ್ಯಾರ್ಥಗಳ ಮಧ್ಯೆ ಕಾರ್ಯ ಕಾರಣ ಸಂಬಂಧವಿರುವುದಾದರೆ ಕಾರಣಮಾಲೆ, ವಿಶೇಷ್ಯ ವಿಶೇಷಣ ಸಂಬಂಧವಿರುವುದಾದರೆ ಏಕಾದರೂ ವಿಶೇಷ್ಯ ವಿಶೇಷಣ ಸಂಬಂಧವಿರುವುದರ ಜೊತೆಗೆ ದೀಪಕಾಂತ (ಕಾರಕ ಅಥವಾ ಕ್ರಿಯೆಯು ಏಕತ್ರದಲ್ಲಿ ಅನೇಕಾರ್ಥಗಳನ್ನು ಬೆಳಗಿಸುವುದು) ವಿರುವುದಾದರೆ ಮಾಲಾ ದೀಪಕ ಮತ್ತು ಉತ್ಕರ್ಷಾಪಕರ್ಷ ಭಾವವಿರುವುದಾದರೆ ಸಾರ-ಅಲಂಕಾರಗಳಾಗುತ್ತವೆ. ಈ ನಾಲ್ಕು ಬಹುತೇಕ ನಿಷ್ಕೃಷ್ಟವಾದ ಸಂಕ್ಷಿಪ್ತ ಲಕ್ಷಣಗಳು.

ಪ್ರಸ್ತುತದಲ್ಲಿ, ಪ್ರಮಾಣೀಕರಿಸಲ್ಪಟ್ಟಿರುವ ಈ ಅಲಂಕಾರಗಳ ಲಕ್ಷಣಗಳುಳ್ಳ ಅನೇಕ ಉದಾಹರಣೆಗಳನ್ನು ವೇದಗಳು. ಉಪನಿಷತ್ತುಗಳು, ಎಪಿಕ್ ಕಾವ್ಯಗಳು ಮತ್ತು ಇತರ ಅವಾರ್ಚೀಕ ಕೃತಿಗಳಿಂದ ಹಕ್ಕಲಾಯಬಹುದು. ತಾರ್ಕಿಕ ತೀಕ್ಷ್ಣತೆಗೆ, ರಸಪ್ರಶ್ನೆಗೆ ಮತ್ತು ಅಸಾಧಾರಣ ಪ್ರತಿಭೆಗಾಗಿ ವಿದ್ವಾಂಸರಿಂದ ಗೌರವಿಸಲ್ಪಡುವ ಜಗನ್ನಾಥನೇ ಇದಕ್ಕೆ ಸಾಕ್ಷಿಯಾಗಿರುತ್ತಾನೆ : ಈತನು ಅಲಂಕಾರಗಳಿಗೆ ಸಾಮಾನ್ಯ ವಾಗಿ ಎರಡು ಪ್ರಕಾರದ ಉದಾಹರಣೆಗಳನ್ನು ಕೊಡುವ ಪದ್ಧತಿ ಇಟ್ಟುಕೊಂಡಿದ್ದಾನೆ- 'ವೇದೇ' ಯಥಾ, 'ವೇದೇಷ್ವಯಮಲಂಕಾರೋ ದೃಶ್ಯತೆ. ಮುಂತಾಗಿ ಪ್ರಸ್ತಾಪಿಸಿ ಪ್ರಾಚೀನ ವೇದಗಳಿಂದ ಒಂದನ್ನು ಮತ್ತು ತಾನು ರಚಿಸಿರುವ ಇನ್ನೊಂದನ್ನು ಕೊಡುತ್ತಾನೆ.

ಪ್ರಥಮವಾಗಿ ನಾವು ನಮ್ಮಗಮನವನ್ನು ಅತ್ಯಂತ ಪ್ರಾಚೀನ ಸಾಹಿತ್ಯಿಕ ದಾಖಲೆ ಹಾಗೂ ಸಾಂಪ್ರದಾಯಿಕವಾಗಿ ಕವಿ ಸ್ರಷ್ಟಾರನಾದ ಬ್ರಹ್ಮನ ನಿಃಶ್ವಾಸ ವೆನಿಸಿರುವ ವೇದಗಳ ವಿಶೇಷವಾಗಿ ಋಗ್ವೇದದೆಡೆ ಹರಿಸುವುದಾದರೆ ಇದರಲ್ಲಿ ಈ 4 ಅಲಂಕಾರಗಳಿಗೆ ಶುದ್ಧ ಸ್ಪಷ್ಟ ಉದಾಹರಣೆಗಳು ಸಿಕ್ಕುತ್ತವೆಂದಾಗಲೀ, ಇವುಗಳ ತುಣಕುಗಳೂ ಕಾಣುವುದಿಲ್ಲವೆಂದು ನಿರಾಕರಿಸುವುದಾಗಲೀ ಸಾಧ್ಯವಿಲ್ಲ ಜೊತೆಗೆ,

ಶೃಂಖಲಾಲಂಕರಗಳಿಗೆ ಮಾಲಾಲಂಕಾರಗಳೊಡನೆ ಒಂದು ಬಗೆಯ ಸಂಬಂಧ)ದ ಕಲ್ಪನೆ) ಇರುವುದರಿಂದ (ಲೇಖನದ ಮುಂದಿನ ಭಾಗವನ್ನು ನೋಡಿ.) ಮಾಲೋಪಮಾ, ಮಾಲೋತ್ಪ್ರೇಕ್ಷಾ ... ಇತ್ಯಾದಿ ಅಲಂಕಾರಗಳನ್ನೂ ಋಗ್ವೇದದಲ್ಲಿ ಗುರುತಿಸ ಬಹುದಾಗಿದೆ. ಒಂದಕ್ಕಿಂತ ಹೆಚ್ಚಿನ ಉಪಮೆಗಳನ್ನು, ಉತ್ಪ್ರೇಕ್ಷೆಗಳನ್ನು, ರೂಪಕ ಗಳನ್ನು . . . ಕೊಡುವ ಮಾಲಾಪರಿಕಾಬಿ ಅನೇಕ ಕಡೆ ಕಾಣಬರುತ್ತದೆ.[19] ಉದಾ ಹರಣೆಗೆ, 'ಗೋವುಗಳು ಗ್ರಾಮದೆಡೆ ಓಡುವಂತೆ, ಯೋಧರು ಕುದುರೆಗಳ ಬಳಿ ಸಾರುವಂತೆ, ಹಸುಗಳು ಕರುಗಳೆಡೆ ಓಡುವಂತೆ ಸವಿತೃದೇವತೆಯು ನಮ್ಮನ್ನು ಆದರಾತಿಶಯದಿಂದ ಸಮೀಪಿಸಲಿ' 10.149.4—ಎಂಬಲ್ಲಿ ಉಪಮೇಯವಾದ ಸವಿತೃದೇವತೆಗೆ ಗೋವುಗಳು ಮುಂತಾದ ಯುಕ್ತವಾದ ಅನೇಕ ಉಪಮಾನಗಳನ್ನು ಕೊಡುವುದರ ಮೂಲಕ ಮಾಲೋಪಮೆಯು ಸುಂದರವಾಗಿ ಮೂಡಿಬಂದಿದೆ. ಇಂತಹವೇ ಅಲ್ಲದೆ ಕೆಲವು ಋಕ್ಕುಗಳಲ್ಲಿ ಕಾರಣಮಾಲಾಲಂಕಾರದಛಾಯೆಯನ್ನು ಗುರುತಿಸಬಹುದಾಗಿದೆ. ಉದಾಹರಣೆಗೆ, 'ಬ್ರಹ್ಮಣಸ್ಪತಿಯು ಈ ದೇವತೆಗಳನ್ನು ಚೈತನ್ಯದಿಂದ ತುಂಬಿ ವೃದ್ಧಿಪಡಿಸಿದನು. ದೇವತೆಗಳು ಸೃಷ್ಟಿಯಾಗುವ ಕಾಲಕ್ಕೆ ನಾಮರೂಪಗಳಿಂದ ಕೂಡಿದ ಜಗತ್ತತ್ವವು ಉತ್ಪನ್ನವಾಯಿತು. ಆದರ ನಂತರ ದಿಕ್ಕುಗಳು, ನಂತರ ವೃಕ್ಷಗಳು, ವೃಕ್ಷದಿಂದ ಭೂಲೋಕ, ಭೂಲೋಕದಿಂದ ದಿಕ್ಕು ಗಳು . . . ' 10.72.2-5.—ಎಂಬ ಈ ವರ್ಣನೆಯಲ್ಲಿ ಪೂರ್ವೋತ್ತರಗಳಿಗೆ ಕಾರ್ಯಕಾರಣ ಭಾವವಿರುವುದಾದರೂ ಸಾಹಿತ್ಯಿಕ ದೃಷ್ಟಿಯಿಂದ ಆದರ ನಿರೂಪಣೆಯು ಕ್ರಮ ವ್ಯತ್ಯಸ್ತವಾಗಿದೆಯೆಂದು ಭಾಸವಾಗುತ್ತದೆ. ಮತ್ತು ಇದರಲ್ಲಿ ಸೃಷ್ಟಿವಿಚಾರವು ಪ್ರಧಾನವಾಗಿ ವಕ್ರಕಾಂಶವು ಗೌಣವಾಗಿ ಅಥವಾ ಅತ್ಯಲ್ಪವಾಗಿ ತೋರುತ್ತದೆ.[20]

ವೇದಗಳ ಶಿರೋರತ್ನಗಳೆಂದು ಕರೆಯಲ್ಪಡುವ ಉಪನಿಷತ್ತುಗಳಲ್ಲಿ ಮಾಲೋಕಮಾ, ಮಾಲಾರೂಪಕ . . . ಇವುಗಳಿಗೆ ಅನೇಕ ಸುಂದರ ಉದಾಹರಣೆ ಗಳು ದೊರಕುತ್ತವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.[21] ಆದರೆ ಶೃಂಖಲಾ ಮೂಲಾಲಂಕಾರಗಳ ಅಂಗೀಕೃತ ರೂಪದಲ್ಲಿ ಇಲ್ಲದಾದ್ದರೂ ಇವುಗಳ ತಾತ್ವಿಕ ಬಳುಕೆ ಉಪನಿಷತ್ತುಗಳಲ್ಲಿ ಇದೆ ಎಂಬುದು ಮುಂದಿನ ಉದಾಹರಣೆಗಳಿಂದ ತಿಳಿಯಬಹುದಾದ ಅಂಶ. ಕಠೋಪನಿಷತ್ತಿನಲ್ಲಿ, 'ಇಂದ್ರಿಯಗಳಿಗಿಂತ ವಿಷಯಗಳು, ವಿಷಯಗಳಿಗಿಂತ ಮನಸ್ಸು, ಮನಸ್ಸಿಗಿಂತ ಬುದ್ಧಿ, ಬುದ್ಧಿಗಿಂತ ಮಹತ್, ಮಹತ್ತಿಗಿಂತ ಪರವಾದದ್ದು ಅವ್ಯಕ್ತ (ಪ್ರಕೃತಿ), ಅವ್ಯಕ್ತಕ್ಕಿಂತ ಪುರುಷ. ಇವನೇ ಎಲ್ಲಕ್ಕಿಂತ ಶ್ರೇಷ್ಠ 1.3.10-11.—ಎಂದು ಒಂದಕ್ಕಿಂತ ಇನ್ನೊಂದರ ಶ್ರೇಷ್ಠತೆಯನ್ನು ಕ್ರಮವಾಗಿ ಹೇಳುತ್ತ ಹೋಗಿರುವುದರಿಂದ ಸಾರಾಲಂಕಾರದತತ್ವವು ಇದರಲ್ಲಿ ಅಡಕವಾಗಿದೆ ಎನ್ನಬಹುದು. ಆದರೆ ಇಲ್ಲಿ ಪ್ರತಿಪಾದಿತ ವಿಷಯವು ವಾಸ್ತವಿಕ ಅಥವಾ ಪಾರಮಾರ್ಥಿಕವಾಗಿದೆ ಎಂಬುದು ಸ್ಪಷ್ಟ. ಇದನ್ನೇ ವೇದದಿಂದ ಆಯ್ದ ಸಾರಾಲಂಕಾರದ ಉದಾಹರಣೆ ಯೆಂದು ಜಗನ್ನಾಥನು ಕೊಟ್ಟಿರುವುದು.

ಇವೇ ಮೊದಲಾದ ವೈದಿಕೋದಾಹರಣೆಗಳಲ್ಲಿ ಶೃಂಖಲಾಲಂಕಾರಗಳು ಶುದ್ಧ ವಾಗಿರದೆ ಇತರ ಅಂಶ ಅಥವಾ ಅಲಂಕಾರಗಳಿಂದ ಸಂಕೀರ್ಣವಾಗಿರುವುದನ್ನು ಕಾಣುತ್ತೇವೆ. ಮೇಲಿನ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ ಅವ್ಯಸ್ತವು ಮಹತ್ತಿಗಿಂತ ಶ್ರೇಷ್ಠ . . . ಎಂಬ ಮೇಲಿನ ಸಾರಾಲಂಕಾರದ ವರ್ಣನೆಯನ್ನು ಅವ್ಯಸ್ತವು ಮಹತ್ತಿಗೆ ಕಾರಣ . . . ಎಂಬುದಾಗಿ ಕಾರಣಮಾಲಾಲಂಕಾರದ ಪರ ವಾಗಿಯೂ ಅರ್ಥೈಸಬಹುದು.

ಸಂಸ್ಕೃತ ಸಾಹಿತ್ಯದ ಕ್ಲಾಸಿಕ್ ಯುಗವು ರಾಮಾಯಣ, ಮಹಾಭಾರತ ಎಪಿಕ್ ಕಾವ್ಯಗಳಿಂದ ಆರಂಭವಾಗುವದೆಂದು ಸರ್ವಸಮ್ಮತ. ಇವುಗಳ ಶೈಲಿ ಆಲಂಕಾರಿಕ (ornate) ಅಲ್ಲದಿದ್ದರೂ ರಾಮಾಯಣವು ಆದಿಕಾವ್ಯವೆನಿಸಿದೆ; ಹಾಗೂ ಇತಿಹಾಸ ವೆಂದೇ ಹೆಚ್ಚು ಪ್ರಸಿದ್ಧವಾದ ಮಹಾಭಾರತವನ್ನು ಕಾವ್ಯಗುಣಗಳಿಂದ ಹತ್ತಿಕ್ಕ ಲಾಗುವುದಿಲ್ಲ. ವಸ್ತುತಃ, ಎರಡರಲ್ಲೂ ಒಂದೇ ತರಹದ ಎಪಿಕ್‌ಮಾದರಿಯ ಅಲಂಕಾರಗಳು ಅಥವಾ ಆಲಂಕಾರಿಕ ಪ್ರಯೋಗಗಳು ಹೇರಳವಾಗಿ ದೊರೆಯುತ್ತವೆ. ರಾಮಾಯಣದ ಬಾಲ ಮತ್ತು ಸುಂದರಕಾಂಡಗಳಲ್ಲಂತೂ ಮಾಲೋಪಮೆ ಇತ್ಯಾದಿ ಅಲಂಕಾರಗಳನ್ನೊಳಗೊಂಡ ಬಹುಸುಂದರ ವರ್ಣನೆಗಳಿವೆ.[22] ನೀತಿ, ಧರ್ಮ ಮತ್ತು ಅಧ್ಯಾತ್ಮ ವಿಷಯಾಂತರಗಳನ್ನು ಕುರಿತು ವಿವರಿಸುವ ಮಹಾಭಾರತದಲ್ಲಿ ಶೃಂಖಲಾ ವರ್ಗದ ಅಲಂಕಾರಗಳಿಗೆ ಸಾಕಷ್ಟು ಅವಕಾಶ ದೊರೆತಿದೆ. ಉದಾಹರಣೆಗೆ, ಉದ್ಯೋಗ ಪರ್ವದಲ್ಲಿಯ 70. 18-19 ಶ್ಲೋಕಗಳಲ್ಲಿ—'ಲೋಭವು ಪ್ರಜ್ಞೆಯನ್ನು ನಾಶಪಡಿಸುತ್ತದೆ: ನಷ್ಟಪ್ರಜ್ಞೆಯಿಂದ ಲಜ್ಜೆಮರೆಯಾಗುತ್ತದೆ, ನಾಚಿಕೆಗೇಡಿತನವು ಧರ್ಮವನ್ನು ಬಾಧಿಸುತ್ತದೆ; ಹತಧರ್ಮವು ಸಂಪತ್ತನ್ನು ನಷ್ಟಕ್ಕೀಡುಮಾಡುತ್ತದೆ, ಕಡೆಯದಾಗಿ, ದಾರಿದ್ರ್ಯವು ಮನುಷ್ಯನನ್ನು ಸರ್ವನಾಶಮಾಡುತ್ತದೆ'- ಹಿಂದು ಮುಂದಿನ ವಾಕ್ಯಗಳ ನಡುವೆ ಕಾರಣಮಾಲೆಯ ತತ್ತ್ವವಾದ ಕಾರ್ಯಕಾರಣ ಸಂಬಂಧ ವಲ್ಲದೆ ಏಕಾವಳೀ ಅಲಂಕಾರದ ವಿಶೇಷ್ಯ ವಿಶೇಷಣ ಸಂಬಂಧವನ್ನೂ ಕಾಣುತ್ತೇವೆ. ಹಾಗೆಯೇ, ಭಗವದ್ಗೀತೆಯಲ್ಲಿಯ 'ವಿಷಯಗಳನ್ನು ಚಿಂತಿಸುತ್ತಿರುವ ವ್ಯಕ್ತಿಗೆ ಅವು ಗಳಲ್ಲಿ ಆಸಕ್ತಿ ಹುಟ್ಟಿ, ಆಸಕ್ತಿಯಿಂದ ಕಾಮವು, ಕಾಮದಿಂದ ಕ್ರೋಧವು ಕ್ರೋಧದಿಂದ ಸಂಮೋಹವು, ಸಂಮೋಹದಿಂದ ಸ್ಮೃತಿನಾಶವು, ಸ್ಮೃತಿನಾಶದಿಂದ ಬುದ್ಧಿನಾಶ, ಬುದ್ಧಿನಾಶದಿಂದ ವ್ಯಕ್ತಿಯು ನಾಶವಾಗುತ್ತಾನೆ' 2.62-63–ಈ ಪ್ರಸಿದ್ಧ ಪದ್ಯದಲ್ಲಿ ಕಾರಣಗಳ ಸರಮಾಲೆಯೇ ಇದೆ. ಇದರಂತೆ ಈ ವರ್ಗದ ಇತರ ಅಲಂಕಾರಗಳ ಸ್ವರೂಪವನ್ನು ಗುರುತಿಸಬಹುದಾದ ಸಂದರ್ಭಗಳು ಭಾರತದಲ್ಲಿ ಹಲವೆಡೆ ಇವೆ.[23] ಅವುಗಳಲ್ಲಿ ಒಂದನ್ನು ಉದಹರಿಸಬಹುದಾದರೆ, ಉದ್ಯೋಗಪರ್ವದ 37. 48–51 ಳಲ್ಲಿ—'ಮನುಷ್ಯರಲ್ಲಿ ಕಂಡು ಬರುವ 5 ಬಗೆಯ ಬಲಗಳಲ್ಲಿ ಕ್ರಮವಾಗಿ ಬಾಹುಬಲ,

ಅವರಾತ್ಮಬಲ, ಧನಬಲ . . . ಇವೆಲ್ಲಕ್ಕಿಂತ ಹಿರಿದಾದುದು ಪ್ರಜ್ಞಾಬಲ' ಎಂಬುದಾಗಿ ಹೇಳಲ್ಪಟ್ಟಿದೆ. ಈ ವರ್ಣನೆಯು ಸಾರಾಲಂಕಾರದ ಲಕ್ಷಣವನ್ನುಳ್ಳದ್ದಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ.

ಮೇಲಿನ ಎಪಿಕ್ ಉದಾಹರಣೆಗಳ ಪರಿಶೀಲನೆಯಿಂದ ಇವು ವೈದಿಕ ಪ್ರಯೋಗಗಳ ಧಾಟಿಯಲ್ಲಿಯೇ ನೈಜವಾಗಿ ಪ್ರಯುಕ್ತವಾಗಿವೆಯೆಂದು ಅರಿವಾಗುತ್ತದೆ. ವೇದ ಮತ್ತು ಎಪಿಕ್ ಸಾಹಿತ್ಯಗಳೆರಡರಲ್ಲಿಯೂ ಯಾವುದೇ ಕಾವ್ಯಾರ್ಥಕ್ಕಿಂತ ತತ್ವಾರ್ಥಕ್ಕೆ ಸಾಧಾರಣವಾಗಿ ಮಹತ್ವವಿದೆಯೆಂದು ಕಾಣುತ್ತದೆ. ಹಾಗೆಯೇ, ಇವೆರಡರಲ್ಲಿಯ ಮಾಲೋಪಮೆ ಮುಂತಾದ ಅಲಂಕಾರಗಳ ಉದಾಹರಣೆಗಳಲ್ಲಿ ವಿಚ್ಛಿತ್ತಿ ಅಂಶವನ್ನು ವಿಶೇಷವಾಗಿ ಅಥವಾ ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಇನ್ನು ಎಪಿಕ್ ನಂತರದ ಹಾಗೂ ದಂಡೀ ಭಾಮಹ ಮುಂತಾದ ಶಾಸ್ತ್ರಜ್ಞರಿಗಿಂತ ಮುಂಚಿನ ಭಾಸ, ಕಾಳಿದಾಸಾದಿ ಕವಿಗಳಿಂದ ರಚಿತವಾದ ಕಾವ್ಯ ನಾಟಕಗಳಲ್ಲಿ ಮಾಲೋಪಮೆ, ಮಾಲೋತ್ಪ್ರೇಕ್ಷೆ, ಮಾಲಾ ರೂಪಕಗಳಿಗೆ ಸಹಜ ಸುಂದರ ಉದಾಹರಣೆಗಳು ಹೇರಳವಾಗಿ ದೊರೆಯುತ್ತವೆ.[24] ಕಾಳಿದಾಸನ ಉಪಮೆಗಳ ಸೌಂದರ್ಯ ಮತ್ತು ಔಚಿತ್ಯಗಳು ಅವನಿಗೆ 'ದೀಪಶಿಖಾ ಕಾಳಿದಾಸ'. ಅಥವಾ 'ಉಪಮಾ ಕಾಳಿದಾಸಸ್ಯ' ಎಂಬ ಬಿರುದನ್ನು ತಂದುಕೊಟ್ಟದ್ದು ನಮಗೆ ತಿಳಿದೇ ಇದೆ; ಪ್ರಸಕ್ತದಲ್ಲಿ ಇದರ ವಿವರದ ಅಗತ್ಯವಿಲ್ಲ. ಮತ್ತು ಕಾಳಿದಾಸನ ಇತರ ಅನೇಕ ಉದಾಹರಣೆಗಳಲ್ಲದೆ ಮಾಲೋಪಮೆಯ ಪದ್ಯವೊಂದನ್ನು ಪ್ರಸಿದ್ಧ ಕಾವ್ಯ ಮೀಮಾಂಸಕ ಆನಂದವರ್ಧನ 'ಧ್ವನ್ಯಾಲೋಕ'ದಲ್ಲಿ ವಿಶೇಷ ಸಂದರ್ಭದಲ್ಲಿ ಉಲ್ಲೇಖಿಸಿದ್ದಾನೆಕೂಡ[25]. ಕವಿ ನಾಟಕಕಾರನ ಕೃತಿಗಳನ್ನೇ ಈ ದೃಷ್ಟಿಯಿಂದ ಪರಾಮರ್ಶಿಸುವುದಾದರೆ, ಮಾಲಾ ಪ್ರಕಾರದ ಪ್ರತಿವಸ್ತೂಪಮೆ ; ನಿದರ್ಶನ ಮತ್ತಿತರ ಅಲಂಕಾರಗಳಿಗೂ ಕೂಡ ಉದಾಹರಣೆಗಳು ದೊರೆಯುತ್ತವೆಯೆಂದು ತಿಳಿದುಬರುತ್ತದೆ.[26] ಆದಾಗ್ಯೂ, ಆರ್ನೇಟ್ ಎನ್ನಬಹುದಾದ ಕಾಳಿದಾಸನ ಕಾವ್ಯಗಳಲ್ಲಿಯೂ ಸಹ ಶೃಂಖಲಾ ಮೂಲ ಅಲಂಕಾರಗಳಿಗೆ ಪ್ರಾಮುಖ್ಯ ದೊರೆಯದಿರುವುದು ಅಥವಾ ಇಲ್ಲವೆನಬಹುದಾದುದು ಗಮನೀಯ.

ವಿದ್ವತ್ಕವಿಗಳೆನಿಸಿದ್ದ ಭಾರವಿ, ಮಾಘ ಮತ್ತು ಶ್ರೀಹರ್ಷರ ಕಾವ್ಯಗಳಲ್ಲಿ ಮಾಲೋಪಮೆ...ಮಾಲಾ ಪ್ರತಿವಸ್ತೂಪಮೆ...ಇವುಗಳಲ್ಲದೆ[27] ಕೆಲವು ಸಂದರ್ಭಗಳಲ್ಲಿ ವಿಶೇಷವಾಗಿ ಏಕಾದಶೀ, ಕಾಂಗಿ ಮಾಲಾಲಂಕಾರಗಳು ಶುದ್ಧರೂಪದಲ್ಲಿ ಉಪಯುಕ್ತವಾಗಿರುವುದನ್ನು ಕಾಣುತ್ತೇವೆ. ಭಾರವಿಯ ಕಿರಾತಾರ್ಜುನೀಯದ, 'ಪವಿತ್ರವಾದ ಶಾಸ್ತ್ರಕಲಿಕೆಯು ಶರೀರವನ್ನು ಅಲಂಕರಿಸುತ್ತದೆ. ಕಲಿಕೆಗೆ ಕ್ರೋಧ ಶಮನವೇ ಅಲಂಕಾರ; ಉಪಶಮನಕ್ಕೆ ಪರಾಕ್ರಮವು ಮತ್ತು ಪರಾಕ್ರಮಕ್ಕೆ ನೀತಿಜ್ಞತೆಯಿಂದ ಯುಕ್ತವಾದ

ಸಾಫಲ್ಯವೇ ಭೂಷಣ' 2.32. ವರ್ಣನೆಯಲ್ಲಿ ಉತ್ತರೋತ್ತರಕ್ಕೆ ಪೂರ್ವ ಪೂರ್ವವು ವಿಶೇಷಣವಾಗಿರುವುದರಿಂದ ಏಕಾವಳೀ ಅಲಂಕಾರ ಸ್ಪಷ್ಟವಾಗಿದೆ. ಹೀಗೆಂದು ಮಲ್ಲಿನಾಥನೇ ವ್ಯಾಖ್ಯಾನದಲ್ಲಿ ಬರೆಯುತ್ತಾನೆ—ಅತ್ರ ಉತ್ತರೋತ್ತರಸ್ಯ ಪೂರ್ವ ಪೂರ್ವ ವಿಶೇಷಣತ್ವಾದೇಕಾವಲ್ಯಃ। ಅಂತೆಯೇ ಮಾಘನ ಶಿಶುಪಾಲವಧೆಯು, 'ಸ್ತ್ರೀಯರ ಶರೀರವನ್ನು ಸೌಂದರ್ಯವು ಅಲಂಕರಿಸಿತು; ಆ ಸೌಂದರ್ಯವನ್ನು ಹೊರಹೊಮ್ಮುತ್ತಿರುವ ಯೌವನವು ಶೋಭಿಸಿತ್ತು ; ಮತ್ತೆ ಅದನ್ನು ಮನ್ಮಥನ ಹಿರಿಯು ಅಲಂಕರಿಸಿತು; ಅದನ್ನಾದರೂ ಪ್ರಿಯತಮನ ಸಹವಾಸವೆಂಬ ಭೂಷಣವುಳ್ಳ ಮದವು ಶೋಭಿಸಿತು.' 10.33—ಸಂದರ್ಭದಲ್ಲಿಯೂ ಮಲ್ಲಿನಾಥನು 'ಉತ್ತರೋತ್ತರಸ್ಯ ಪೂರ್ವ ಪೂರ್ವ ವಿಶೇಷ ಕತ್ವಾದೇಕಾವಳೀ । ಯಥಾಭಾರವೇಃ ಪ್ರಯೋಗಃ ಶುಚಿ ಭೂಷಯತಿ ಇತ್ಯಾದೌ ಶ್ಲೋಕೇ ಸ ನಯಾಂಕಃ ಸಚ ಸಿದ್ಧಿಭೂಷಣಃ...ಎಂದು ಭಾರವಿಯ ಮೇಲಿನ ಪದ್ಯವನ್ನೇ ಉಲ್ಲೇಖಿಸಿ ವಿವರಿಸಿದ್ದಾನೆ. ಅದೇ ಕಾರಣ ಮಾಲಾ[28] ಮತ್ತು ಸಾರಾಲಂಕಾರಗಳಿಗೆ[29] ಇಷ್ಟೊಂದು ಒಕ್ಕಣೆಯಿರುವ ಅಚ್ಚುಕಟ್ಟಾದ ಉದಾಹರಣೆಗಳು ಈ ಕಾವ್ಯಗಳಲ್ಲಿ ಅಪರೂಪವೆಂದು ಹೇಳಬಹುದು.

ವೇದ ಸಾಹಿತ್ಯದಿಂದ ಹಿಡಿದು ಲೌಕಿಕ ಸಾಹಿತ್ಯವರೆಗಿನ ಈ ಮೇಲಿನ ಉದಾಹರಣೆಗಳ ಸಮೀಕ್ಷೆಯಿಂದ ಇವು ಲಾಕ್ಷಣಿಕರು ಕೊಟ್ಟಿರುವ ಶೃಂಖಲಾಮೂಲಾಲಂಕಾರಗಳ ಲಕ್ಷಣ ಅನುಕ್ರಮ ವಿಕಸನ, ಪರಿಪೂರ್ಣತೆ ಮತ್ತು ಉಪಭೇದಗಳಿಗೆ ಸಾಕಷ್ಟು ಸಾಮಗ್ರಿಯನ್ನು ಒದಗಿಸಿಕೊಟ್ಟಿವೆಯೆಂದು ತಿಳಿದುಬರುವ ಸಂಗತಿ. ವೇದ ಮತ್ತು ಎಪಿಕ್ ಕಾವ್ಯಗಳಲ್ಲಿ ಮಾಲಾಪ್ರಕಾರದ ಉಪಮಾದಿ ಅಲಂಕಾರಗಳು ವೈಚಿತ್ರ್ಯ ಯುತವಾಗಿ ರಂಜನೀಯವಾಗಿರುವುದಾದರೆ ಶೃಂಕಲಾ ವರ್ಗದ ಅಲಂಕಾರಗಳು ಸ್ವರೂಪ ಸ್ಥಿತಿಯಲ್ಲಿವೆಯೆಂದು ತಿಳಿದುಬರುತ್ತದೆ. ನಂತರದ ಭಾಸ ಕಾಳಿದಾಸ ಕೃತಿಗಳಲ್ಲಿ ಶೃಂಖಲಾಲಂಕಾರಗಳು ಅತ್ಯಂತ ವಿರಳವಾಗಿದ್ದು, ವಿದ್ವತ್ಕಾವ್ಯಗಳಲ್ಲಿ ಭಾಷೆಯಲ್ಲಿಯ ನವಿರತೆ ಮತ್ತು ಆಡಂಬರಗಳು ಹೆಚ್ಚಾಗಿದ್ದು, ಬಹುಶಃ ಇದಕ್ಕೆ ಸಂಬಂಧಪಟ್ಟ ಚರ್ಚೆಗಳು ಆಗಲೇ ನಡೆಯುತ್ತಲಿದ್ದು ಇವು ನಿಯತರೂಪ ತಾಳುತ್ತ ವೈಚಿತ್ರ್ಯಪೂರ್ಣವಾಗುತ್ತ ಬಂದಿತೆನ್ನಬಹುದು.

ಇನ್ನು ಮುಂದೆ, ರುಯ್ಯಕ ಮತ್ತು ಜಗನ್ನಾಥರೀರ್ವರು[30] ಮುಖ್ಯವಾಗಿ ಮಾಡಿರುವ ಅನೇಕ ಅಲಂಕಾರ ವಿಭಾಗಗಳಲ್ಲಿ ಒಂದಾದ ಪ್ರಸ್ತುತ ಅಧ್ಯಯನ ವಿಷಯವಾದ ಶೃಂಖಲಾಮೂಲಾಲಂಕಾರಗಳ ಲಕ್ಷಣ ಮತ್ತು ಉದಾಹರಣೆಗಳ ವಿಚಾರವಾಗಿ ಕೆಲವು ಆಲಂಕಾರಿಕರು ತಳೆದಿರುವ ಭಿನ್ನಾಭಿಪ್ರಾಯಗಳನ್ನು ಪರಿಶೀಲಿಸೋಣ—ಕಾರಣ ಮಾಲಾ—ಉತ್ತರೋತ್ತರಕ್ಕೆ ಪೂರ್ವಪೂರ್ವ ಕಾರಣಗಳ ಪೂರ್ವಪೂರ್ವಕ್ಕೆ ಅಥವಾ ಉತ್ತರೋತ್ತರ ಕಾರಣಗಳ ವರ್ಣನೆ ಕಾರಣ ಮಾಲಾ

ಲಂಕಾರವಾಗುತ್ತದೆ.[31] ಇದರಲ್ಲಿಯ 'ಮಾಲಾ' ಪದಕ್ಕೆ ಪೂರ್ವೋತ್ತರ ಸಂಬಂಧವಿರುವ ಪಂಕ್ತಿ ಎಂದರ್ಥವಾಗುತ್ತದೆ. ಇಲ್ಲಿ ಅನೇಕ ಕಾರಣಗಳು ಅಥವಾ ಕಾರ್ಯಗಳು ಇರುವುದಾದರೂ ಅವುಗಳ ಪೂರ್ವೋತ್ತರ ಸಂಬಂಧ ಶ್ರೇಣಿಯೇ ಅಸಾಧಾರಣ ಅಂಶ. ಒಂದೇ ಕಾರ್ಯಕ್ಕೆ ಅನೇಕ ಕಾರಣಗಳಾಗಲೀ ಅಥವಾ ಒಂದು ಕಾರಣದಿಂದ ಅನೇಕ ಕಾರ್ಯಗಳೆಂದಾಗಲೀ ಅಥವಾ ಕೇವಲ ಅನೇಕ ಕಾರಣ ಅಥವಾ ಕಾರ್ಯಗಳೆಂದಾಗಲೀ ಅರ್ಥವಲ್ಲ. ಒಂದಕ್ಕೆ ಇನ್ನೊಂದು ಕಾರಣ, ಇನ್ನೊಂದಕ್ಕೆ ಮತ್ತೊಂದು ಕಾರಣ...... (ಅಥವಾ ಒಂದರಿಂದ ಇನ್ನೊಂದು ಕಾರ್ಯ, ಇನ್ನೊಂದರಿಂದ ಮತ್ತೊಂದು ಕಾರ್ಯ ...) ಎಂದರ್ಥ. (ಭೇದಗಳ ವಿಷಯದಲ್ಲಿ ಭಿನ್ನತೆಯೇನೇ ಇರಲಿ) ಇದು ರುದ್ರಟನಿಂದ ಜಗನ್ನಾಥವರೆಗಿನ ಕಾರಣ ಮಾಲಾಲಂಕಾರದ ತತ್ವ ಕಲ್ಪನೆ. ಎಂದರೆ, ಮೊದಲ ಪದದಿಂದ ಕೊನೆಯವರೆಗೂ ಕಾರ್ಯಕಾರಣ ಉಪನ್ಯಾಸವು ಏಕರೂಪದಿಂದಿರಬೇಕು. ಆರಂಭದಲ್ಲಿ ಒಂದನ್ನು ಇನ್ನೊಂದಕ್ಕೆ ಕಾರಣ (ಅಥವಾ ಕಾರ್ಯ)ವೆಂದ ಮೇಲೆ, ಸಮನಂತರದಲ್ಲಿ ಇನ್ನೊಂದು ಮತ್ತೊಂದಕ್ಕೆ ಕಾರಣ (ಅಥವಾ ಕಾರ್ಯ) ವೆಂತಲೇ (ಕವಿ) ಹೇಳಬೇಕಾದೀತು. ಇಲ್ಲದಿದ್ದರೆ 'ಭಗ್ನಪ್ರಕ್ರಮತಾ' ದೋಷ ಬರುತ್ತದೆ[32]ಯೆಂದು ಪ್ರಾಚೀನರ ಶ್ಲೋಕವನ್ನು ಉದಹರಿಸುತ್ತ ಜಗನ್ನಾಥನು ಈ ರೀತಿ ವಿಮರ್ಶೆ ಮಾಡಿದ್ದಾನೆ—

ಉದಾ :

ಜಿತೇಂದ್ರಿಯತ್ವಂ ವಿನಯಸ್ಯಕಾರಣಂ
ಗುಣಪ್ರಕರ್ಷೋ ವಿನಯಾದಾ ಪದ್ಯತೇ ।
ಗುಣಾಧಿಕೇ ಪುಂಸಿ ಜನೋಽನುರಜ್ಯತೇ (ಗುಣಪ್ರಕರ್ಷೇಣ)
ಜನಾನುರಾಗ ಪ್ರಭವಾಶ್ಚ ಸಂಪದಃ ॥ (ಹಿ)

(ಇಂದ್ರಿಯ ನಿಗ್ರಹವು ವಿನಯಕ್ಕೆ ಕಾರಣ ; ವಿನಯದಿಂದ ಗುಣಾತಿಶಯವು ಲಭಿಸುತ್ತದೆ ; ಗುಣಾತಿಶಯದಿಂದ ಲೋಕವು ಅನುರಕ್ತವಾಗುತ್ತದೆ ; ಜನಾನುರಾಗದಿಂದ ಸಂಪತ್ತು ಸಿದ್ಧಿಸುತ್ತದೆ.) ಈ ಉದಾಹರಣೆಯಲ್ಲಿ ಕಾರಣಮಾಲೆಯು ಅರ್ಥದಿಂದ ಸಿದ್ಧವಾಗುವುದಾದರೂ ಪದಗಳ ಸಂಯೋಜನೆಯಲ್ಲಿ ವ್ಯತಿಕ್ರಮ ಕಂಡು ಬಂದು ಅಲಂಕಾರವು ಅಷ್ಟು ರಮ್ಯವಾಗದೇ ಹೋದೀತು ಎಂಬ ಟೀಕೆ ಸಮಂಜಸವೆನಿಸುತ್ತದೆ. ಎಂದರೆ, ಇಂದ್ರಿಯ ನಿಗ್ರಹವು ವಿನಯಕ್ಕೆ ಕಾರಣವೆಂದು ಹೇಳಿದ ಮೇಲೆ ಜಿತೇಂದ್ರಿಯಕ್ಕೆ ಯಾವುದು ಕಾರಣ ಅಥವಾ ವಿನಯವು ಯಾವುದಕ್ಕೆ ಕಾರಣವಾಗುತ್ತದೆಯೆಂಬ ಸಹೃದಯನ ಆಕಾಂಕ್ಷೆಗೆ 'ವಿನಯವು ಗುಣಾತಿಶಯಕ್ಕೆ ಕಾರಣ' ... ಎಂಬುದು ಪೂರಕವಾಗುತ್ತದೆಯಷ್ಟೆ ಎಂದು ಮುಂದುವರಿಸಿ ಹೇಳುತ್ತಾನೆ ಜಗನ್ನಾಥ[33], ಅಲ್ಲದೆ, ಇಂತಹ ಸ್ಥಳಗಳಲ್ಲಿ ಪದಗಳ ಪುನರುಚ್ಚರಣೆಯಿಂದ ದೋಷ

ಉಂಟುವುದಿಲ್ಲ.[34] ಉದಾಹರಣೆಗೆ–'ಉದೇತಿ ಸವಿತಾತಾಮ್ರಃ ತಾಮ್ರ ಏವ ಅಸ್ತಮೇತಿ ಚ' (ಕೆಂಪಾಗಿ ಸೂರ್ಯನು ಉದಯಿಸುತ್ತಾನೆ ಮತ್ತು ಕೆಂಪಾಗಿಯೇ ಮುಳುಗುತ್ತಾನೆ) ರಸ.ಗಂ. ಪು 555.—ಮುಂತಾದ ಸ್ಥಳಗಳಲ್ಲಿ ಪುನರುಚ್ಚರಣೆಯು ಚಮತ್ಕೃತಿ ಜನಕವೆನ್ನುವುದೇ ಅನುಭವ ಸಿದ್ಧಂ ಹಾಗೆಯೇ, ಅನನ್ವಯ ಮುಂತಾದ ಅಲಂಕಾರಗಳಲ್ಲಿ ಉದಾಹರಣೆಗೆ, ಗಗನಂ ಗಗನಾಕರಂ...' ಎಂಬಲ್ಲಿ ಕಥಿತಪದದಿಂದ ಶೋಭೆಯುಂಟಾಗುತ್ತದೆ. ಇಲ್ಲಿಯೂ ಕೂಡ ಕಾರಣ ಅಥವಾ ಕಾರ್ಯದ ಪುನರುಕ್ತಿಯಿಂದ ಶೋಭೆಯು ಅಧಿಕವಾಗುವುದೇ ಹೊರತು ದೋಷ ತಟ್ಟುವುದಿಲ್ಲ. ಏಕೆಂದರೆ, ಜಗನ್ನಾಥನು ಹೇಳುವಹಾಗೆ ಅನುಭವದ ಆಧಾರದ ಮೇಲೆ ಒಂದು ಪದದ ಮಾನಸಿಕ ಬೋಧೆಯಾಗುತ್ತದೆ. ಮತ್ತು ಆ ಬೋಧೆಯು ವೈಶಿಷ್ಟ್ಯ ಗಳೊಂದಗಿನ ಮುಖ್ಯಾರ್ಥಕ್ಕೆ ಅನುಗುಣವಾಗಿರುತ್ತದೆ, ಆಗಿರಬೇಕು ಕೂಡ. ಹಾಗಾಗಿ ಈ ಸಂದರ್ಭಗಳಲ್ಲಿ ಕಾರಣ ಮುಂತಾದ ಪದಗಳ ಪುನರುಚ್ಚರಣೆ ಕೇವಲ ತೋರಿಕೆಯಾಗಿರದೆ ವಿಶಿಷ್ಟ ಅರ್ಥಗಳಿಂದ ಕೂಡಿರುತ್ತದೆ.[35] ಹಾಗೆ ನೋಡಿದರೆ ಪರ್ಯಾಯ ಪದಗಳಿಂದ ವೇಷಾಂತರವನ್ನು ಧರಿಸಿದ ನಟನನ್ನು ಗುರುತಿಸಲು ಕಷ್ಟ ವಾಗುವಂತೆ ಕವಿಯ ವಿವಕ್ಷೆಯನ್ನು ತಿಳಿಯುವಲ್ಲಿ ವಿಳಂಬವಾದೀತು.[36] ಅಂದರೆ ಯಾವುದೇ ಕಾವ್ಯ ಪ್ರಯೋಜನ (ಅಥವಾ ನ್ಯಾಯ) ವಿಲ್ಲದ ಪದದ ಪುನರುಚ್ಚರಣೆ ದೋಷವಾದೀತು ಅಷ್ಟೆ.

ಏಕಾವಳೀ (ಏಕಾವಳಿ) :– ಪೂರ್ವೋತ್ತರ ಸಂಬಂಧವುಳ್ಳ ವಾಕ್ಯಾರ್ಥಗಳ ಆವಳಿಯೇ ಏಕಾವಳಿ. ಆವಳಿ ಪದಕ್ಕೂ ಶ್ರೇಣಿ, ಮಾಲೆ ಅಥವಾ ಪಂಕ್ತಿ ಎಂಬ ಅರ್ಥವೇ ಇದ್ದು ಇಲ್ಲಿಯ ವಾಕ್ಯಾರ್ಥಗಳ ಸಂಬಧವು ವಿಶೇಷ್ಯ ವಿಶೇಷಣ ರೂಪವಾಗಿರುತ್ತದೆ. ಎಂದರೆ, ಮೊದಲಿನ ವಾಕ್ಯಾರ್ಥಗಳು ಮುಂದಿನದವಕ್ಕೆ (ಮೊದಲಿಂದ ಕೊನೆಯವರೆಗೂ) ವಿಶೇಷ್ಯಗಳಾಗಿಯೋ ಅಥವಾ ವಿಶೇಷಣಗಳಾಗಿಯೋ ಇರುತ್ತವೆ.[37] ಈ ಅಲಂಕಾರವನ್ನು ಬೇರೆ ಬೇರೆ ಉದಾಹರಣೆಗಳಿಂದ ಉದಾಹರಿಸಿದ್ದರೂ ಇದರ ಸಾಮಾನ್ಯ ಕಲ್ಪನೆ ಒಂದೆಯಾಗಿರುತ್ತದೆ ಆಲಂಕಾರಿಕರಲ್ಲಿ.[38] ರುದ್ರಟನ ಆರಭ್ಯ ಇತರ ಅನೇಕ ಆಲಂಕಾರಿಕರು ಅಪೋಹಕ ಮತ್ತು ಸ್ಥಾಪಕ ಎಂಬ ಉಪಭೇದವನ್ನು ಮಾಡಿದ್ದಾರೆ. ಆದರೆ ವಿರೋಧವಿರುವುದು ಇದರ ಮುಖ್ಯ ಪ್ರಭೇದಗಳಲ್ಲಿ. ಪೂರ್ವ ಪೂರ್ವವು ಉತ್ತರೋತ್ತರಕ್ಕೆ ವಿಶೇಷಣವಾಗುವ (ಉತ್ಕರ್ಷವನ್ನು ತರುವ) ಏಕಾ ವಳಿಯ ಎರಡನೆಯ ಮುಖ್ಯ ಭೇದದ ಲಕ್ಷಣವನ್ನು ಮಮ್ಮಟ ಮತ್ತು 'ರುಯ್ಯಕರು ಮಾಲಾದೀಪಕ (ಎಂಬ ಸ್ವತಂತ್ರ) ಅಲಂಕಾರದಲ್ಲಿ ಒಪ್ಪಮಾಡಿದ್ದಾರೆ. ಈ ಸಂಧಿ ಕಟ್ಟಿನಲ್ಲಿ, ಕಾರಣಮಾಲೆಯಲ್ಲಿ ಕಾರ್ಯ ಕಾರಣ ಭಾವದ 2 ವಿಧಗಳನ್ನು ಸಮ್ಮತಿಸಿ ಅದೇ ಏಕಾವಳಿಯಲ್ಲಿ ವಿಶೇಷ್ಯ ವಿಶೇಣ ಭಾವವನ್ನಾಧರಿಸಿದ 2 ವಿಧಗಳನ್ನು ಸಮ್ಮತಿ ಸದೆ ಎರಡನೆಯದನ್ನು ಪ್ರತ್ಯೇಕ ಅಲಂಕಾರವಾಗಿ ಬಗೆದಿರುವುದು ಮಮ್ಮಟ ಮತ್ತು

ರುಯ್ಯಕರಲ್ಲಿ ಒಂದೇ ತೆರನಾದ ತರ್ಕವು ಇಲ್ಲದಂತೆ ಬಯಲು ಮಾಡುತ್ತದೆಂಬುದು ಗಮನೀಯ. ಇದಲ್ಲದೆ ಮಮ್ಮಟನು ಮಾಲಾದೀಪಕವನ್ನು ದೀಪಕದ ನಂತರ ಉಪಸಂಖ್ಯಾನ ಮಾಡಿರುವುದು ಗಮನಿಸಬೇಕಾದ ಮತ್ತೊಂದು ವಿಶೇಷ ಸಂಗತಿ. ಜಗನ್ನಾಥನ ಪ್ರಕಾರವೂ ಕೂಡ (ಏಕಾವಳಿಯ 2 ನೇ ಪ್ರಭೇದವು) ಮಾಲಾದೀಪಕವೇ ಸರಿ. ಜಗನ್ನಾಥನ ಈ ಧೋರಣೆಯ ಬಗ್ಗೆ ಮುಂದೆ ಅಂದರೆ ಮಾಲಾದೀಪ ಕಾಲಂಕಾರದ ಸಂದರ್ಭದಲ್ಲಿ ಹೆಚ್ಚು ವಿಚಾರ ಮಾಡೋಣ.

ಮಾಲಾದೀಪಕ :- ಈ ಅಲಂಕಾರವನ್ನು ದೀಪಕದಡಿಯಲ್ಲಿ ಹಾಗೂ ಶೃಂಖಲಾ ವರ್ಗದಡಿಯಲ್ಲಿ ಗುರುತಿಸಿರುವ ಆಲಂಕಾರಿಕರ ಇಬ್ಬಗೆಯ ಪ್ರಯತ್ನ ಅಲಂಕಾರೇತಿ ಹಾಸದಲ್ಲಿ ನಡೆದಿದೆ. ಈ ಅಲಂಕಾರದಲ್ಲಿ ಪೂರ್ವೋತ್ತರ ಸಂಬಂಧವಿರುವ ವಾಕ್ಯಗಳಿಗೆ ಕಾರಕ ಅಥವಾ ಕ್ರಿಯಾಪದವು ಒಂದೇ ಇರಲಾಗಿ ದೀಪಕ ಸ್ಥಾನದಲ್ಲಿರುತ್ತದೆ.[39] ದಂಡಿಯಿಂದ ಹಿಡಿದು ಧ್ವನ್ಯುತ್ತರ ಆಲಂಕಾರಿಕರೆಲ್ಲರೂ ಪೂರ್ವೋತ್ತರ ಸಂಬಂಧವುಳ್ಳದ್ದು ಮಾಲಾದೀಪಕವೆಂದು ಸಾಮಾನ್ಯವಾಗಿ ಒಪ್ಪಿರುತ್ತಾರೆ. ಕುತೂಹಲ ಸಂಗತಿಯೆಂದರೆ ಒಂದೇ ಉದಾಹರಣೆ–

> ಸಂಗ್ರಾಮಾಂಗಣಮಾಗತೇನ ಭವತಾ ಚಾಪೇ ಸಮಾರೋಪಿತೇ
> ದೇವಾಕರ್ಣಯ ಯೇನ ಯೇನ ಸಹಸಾಯದ್ಯತ್ ಸಮಾಸಾದಿತಮ್ ।
> ಕೋದಂಡೇನ ಶರಾಃ ಶರೈರರಿಶಿರಸ್ತೇನಾಪಿ ಭೂಮಂಡಲಂ
> ತೇವತ್ಥಂ ಭವತಾ ಚ ಕೀರ್ತಿರತುಲಾ ಸೀತ್ಯಾ ಚ ಲೋಕ ತ್ರಯಮ್ ॥

(ರಣರಂಗಕ್ಕೆ ಬಂದ ರಾಜನು ಬಿಲ್ಲನ್ನು ಹೆದೆಯೇರಿಸಲು, ಬಾಣಗಳು ಬಿಲ್ಲಿನೊಂದಿಗೆ. ಶತ್ರು ಶಿರಗಳು ಬಾಣಗಳೊಂದಿಗೆ, ಭೂವಲಯವು ಶತ್ರುಶಿರಗಳೊಂದಿಗೆ, ಕೀರ್ತಿಯು ಭೂವಲಯದೊಂದಿಗೆ, ಸಂಪತ್ತು ಕೀರ್ತಿಯೊಂದಿಗೆ ಸೇರಿತು). ಯನ್ನು ಉದ್ಧರಿಸಿಯೂ ತಮ್ಮ ತಮ್ಮಲ್ಲಿ ವಿರೋಧಮಾಡಿಕೊಂಡು ಜಾರಿಕೆಯ ಸ್ಥಳವನ್ನು ಹತ್ತಿದ್ದಾರೆ, ಆಲಂಕಾರಿಕರು.[40]

ಇಲ್ಲಿಯ ಮಾಲಾ ಶಬ್ದಕ್ಕೆ ಶೃಂಖಲಾ ಎಂಬ ಅರ್ಥವು ಮುಖ್ಯವೇ ಹೊರತು ಮಾಲೋಪಮೆಗಳಲ್ಲಿಯಂತೆ 'ಅನೇಕ' ಅರ್ಥವಲ್ಲ[41]. ಮಾಲಾದೀಪಕವು ಅನೇಕ ಉಪಮೆಗಳ ಮಾಲೋಪಮೆಯಂತೆ ಅನೇಕ ದೀಪಕಗಳಲ್ಲಿ (ದೀಪಕಗಳ ಮಾಲೆಯಲ್ಲಿ). ಏಕೆಂದರೆ, ಬೆಳಗಿಸುವ ದೀಪಕವು ಒಂದೇ ಅನೇಕವಲ್ಲ ಮತ್ತು ಅದು ಕೇವಲ ಎರಡು ವಾಕ್ಯಾರ್ಥಗಳನ್ನಲ್ಲಿ ಬಹು ವಾಕ್ಯಾರ್ಥಗಳನ್ನು ಬೆಳಗಿಸುತ್ತದೆ. ಅಲ್ಲದೆ, ವ್ಯಾಕ್ಯಾರ್ಥಗಳಿಗೆ ಪರಸ್ಪರ (ಆಂತರಿಕ) ಸಂಬಂಧವಿರುತ್ತದೆ. ಮಾಲಾದೀಪಕವು ಶೃಂಖಲೆಯೂ ಹೌದು; ದೀಪಕವೂ ಹೌದು. ಪದವು ಒಂದು ಕಡೆ ಇದ್ದು, ಸಂಬಂಧವಿರದ ವಾಕ್ಯಾರ್ಥಗಳನ್ನಲ್ಲಿ, ಪರಸ್ಪರ ಸಂಬಂಧವುಳ್ಳ ಆದರೆ ಪ್ರಸ್ತುತ ಭಾವವಿರದ ವಾಕ್ಯಾರ್ಥಗಳನ್ನು ಬೆಳಗಿಸುವಂತಹುದು ಮಾಲಾದೀಪಕ.[42]

ಏಕರೂಪತೆಯ ದೃಷ್ಟಿಯಿಂದ ನೋಡಿದಾಗ ಕಾರಣಮಾಲೆಯಂತೆ ಇದನ್ನು ದೀಪಕಮಾಲೆ ಎಂದು ಕರೆಯಬಹುದಿತ್ತು. ಅಥವಾ ಕಾರಣ ಮಾಲೆಯನ್ನೇ ಮಾಲಾ ಕಾರಣಮ್ ಎಂಬುದಾಗಿ ಬದಲಾಯಿಸಬಹುದಿತ್ತು. ಏಕೆಂದರೆ ಎರಡರಲ್ಲೂ ಒಂದಂಶದಲ್ಲಿ ಅನೇಕತ್ವವಿದ್ದರೂ ಪೂರ್ವೋತ್ತರ (ಶೃಂಖಲಾ) ಸಂಬಂಧಕ್ಕೇನೇ ಪ್ರಾಮುಖ್ಯ. ಆದಾಗ್ಯೂ, ಪರಂಪರೆಯಿಂದ (ದಂಡೀ, ರುದ್ರಟ) ಬಂದ ಹೆಸರು ಗಳನ್ನುಳಿಸಿಕೊಂಡು ಬಂದಿದ್ದಾರೆ ಆಲಂಕಾರಿಕರು. ಆದರೆ ಪೂರ್ವೋತ್ತರ ಸಂಬಂಧ ವಿದ್ದು ಸಾದೃಶ್ಯಾಂಶವು ಪ್ರಮುಖವಾಗಿರುವ ರಶನೋಪಮೆ ಮೊದಲಾದ ಅಲಂಕಾರ ಗಳನ್ನು ಶೃಂಖಲಾವರ್ಗದಲ್ಲಿ ಸೇರಿಸಿಲ್ಲ. ಆದ್ದರಿಂದ, ಮಮ್ಮಟ ರುಯ್ಯಕರು ಏಕಾವಳೀ ಅಲಂಕಾರವನ್ನೊಪ್ಪಿ ಮಾಲಾದೀಪಕವನ್ನು ಅವರು ಕೊಟ್ಟ ಲಕ್ಷಣದ ಮೇರೆಗೆಯಲ್ಲಿಯೇ ಪ್ರತ್ಯೇಕ ಅಲಂಕಾರವೆಂದು ಅಂಗೀಕರಿಸಿರುವುದು ಬುದ್ಧಿವಂತಿಕೆ ಯಂತೆ ಕಾಣುವುದಿಲ್ಲ.[43] ಈಗಾಗಲೇ ಇರುವ ಅಲಂಕಾರಗಳ ಕೋಶಕ್ಕೆ ಇನ್ನೊಂದು ಹೆಸರಿನ ಸೇರ್ಪಡೆಯಾದಂತಾಯಿತಷ್ಟೆ.

ಅದರಿಂದಲೇ ಅಪ್ಪಯ್ಯದೀಕ್ಷಿತನು ಎರಡನೆಯ ವಿಶೇಷ್ಯ ವಿಶೇಷಣ ಭಾವವನ್ನೂ ಏಕಾವಳಿಯಂತಲೇ ಕರೆದು ಏಕಾವಳೀ ಮತ್ತು ದೀಪಕ ಅಂಶಗಳನ್ನೊಳಗೊಂಡಿರುವುದನ್ನು ಮಾಲಾದೀಪಕವೆಂದಿದ್ದಾನೆ. ಅಂದಮಾತ್ರಕ್ಕೆ ಮಾಲಾ ದೀಪಕವನ್ನು ಏಕಾವಳೀ ಮತ್ತು ದೀಪಕ ಅಲಂಕಾರಗಳ ಸಂಸೃಷ್ಟಿ ಅಥವಾ ಸಂಕರವೆಂತಲೊ ಭಾವಿಸಬಾರದು. (ಏಳು) ಬಣ್ಣಗಳ ಮಿಶ್ರಣಮಾಡಿದಾಗ ಹೊಸ ಬಳೀ ಬಣ್ಣವಾದಂತೆ ವಿಶೇಷ್ಯ ವಿಶೇಷಣ ಭಾವ ಹಾಗೂ ದೀಪಕಾಂಶಗಳೂ ಸೇರಿ ಉಂಟಾಗುವ ಪ್ರತ್ಯೇಕ ಅಲಂಕಾರ ಮಾಲಾದೀಪಕ.[44] ಎಂದರೆ, ದೀಪಕ ಪದಕ್ಕೆ ದೀಪಕ ಅಲಂಕಾರ (ಪ್ರಸ್ತುತಾಪ್ರಸ್ತುತ ಉಪಮಾನೋಪಮೇಯ ಭಾವ) ದ ಅರ್ಥವನ್ನು ಅಡಕ ಮಾಡಲಾಗದು. ಹಾಗೆಂದು ದೀಪಕದ ಪಾತ್ರವನ್ನೂ ತೆಗೆದು ಹಾಕಲಾಗದು.

ಪ್ರಾಸಂಗಿಕವಾಗಿ ಪ್ರಸಿದ್ಧ ವ್ಯಾಖ್ಯಾನಕಾರ ಮಲ್ಲಿನಾಥನ ಹೇಳಿಕೆಯನ್ನೇ ಗಮನಿಸ ಬಹುದು. ಮಾಲೋಪಮಾ...ಮುಂತಾದ ಅಲಂಕಾರಗಳಿರುವ ಕಾವ್ಯಸಂದರ್ಭಗಳಲ್ಲಿ ಈತನು 'ಮಾಲಾಯಾಂ ಸಂಸೃಷ್ಟಃ ! (ಕಿರಾತ. 17.46) ಎಂದು ವ್ಯಾಪ್ಯೆ ಬರೆಯು ತ್ತಾನೆ. ಈ ಸ್ಥಳಗಳಲ್ಲಿ ಸಂಸೃಷ್ಟ ಪದಕ್ಕೆ ಪಾರಿಭಾಷಿಕ ಅರ್ಥ ಇಟ್ಟುಕೊಳ್ಳದೆ ಹೇಗೆ ಸಾಧಾರಣ ಅರ್ಥವನ್ನು ಇಟ್ಟುಕೊಳ್ಳಬೇಕೊ ಹಾಗೆ ಅಪ್ಪಯ್ಯ ದೀಕ್ಷಿತನು ಉಪ ಯೋಗಿಸಿರುವ ಸಂಮಿಶ್ರ ಪದಕ್ಕೆ ಆ ಅರ್ಥವಿರುವುದಿಲ್ಲ.

ಹಾಗೆ ನೋಡಿದರೆ, ದೀಪಕ ಅಂಶವನ್ನು ಕಾರಣಮಾಲಾ ಮತ್ತು ಸಾರಾಲಂ ಕಾರಗಳಲ್ಲಿಯೂ ಕಾಣಬಹುದು. ಈ ಅಲಂಕಾರಗಳಲ್ಲಿ ಕೆಲವೊಮ್ಮೆ ಕಾರಣ, ಸಾರ ...ಪದಗಳು ಸಾದೃಶ್ಯ ಅಂಶದ ಗೊಡವೆಯಿಲ್ಲದೆ ಹೊಸಲಿನ ಮೇಲಿಟ್ಟಿರುವ ದೀಪ

ದಂತೆ ಇರುತ್ತವೆ. ಆದ್ದರಿಂದ ಮಾಲೆ ಅಥವಾ ಶೃಂಖಲೆಯೇ ಈ ಅಲಂಕಾರದ ಜೀವತಂತು. ಇವೆಲ್ಲವನ್ನೂ ಗಮನಿಸಿಯೇಸೊ ಜಗನ್ನಾಥನು ಇದನ್ನು ಸ್ವತಂತ್ರ ಅಲಂಕಾರವಾಗಲಾರದೆಂದು ಕೈಬಿಟ್ಟಿದ್ದಾನೆಯಲ್ಲದೆ ಸಂಪೂರ್ಣವಾಗಿ ದೀಪಕ ಪ್ರಕಾರ ವೆಂತಲೂ ಒಪ್ಪಿರುವುದಿಲ್ಲ. ಕೇವಲ ಸಂಪ್ರದಾಯಬದ್ಧನಾಗಿ ಪೂರ್ವೋತ್ತರ ಸಂಬಂಧವಿದ್ದು ದೀಪಕದಡಿಯಲ್ಲಿ ಹೆಸರಿಸಿದ್ದಾನೆ.[45]

ಒಟ್ಟಿನಲ್ಲಿ, ಎರಡರಲ್ಲೂ ವಿಶೇಷ್ಯ ವಿಶೇಷಣಭಾವವಿರುವುದು ಸಾಧಾರಣ ಅಂಶ. ಆದರೆ ಮಾಲಾ ದೀಪಕದಲ್ಲಿ ಪೂರ್ವಪೂರ್ವಕ್ಕೆ ಉತ್ತರೋತ್ತರ ವಿಶೇಷಣ ವಿರುವುದರ ಜೊತೆ ಕಾರಕವಾಗಲೀ, ಕ್ರಿಯಾಪದವಾಗಲೀ ಅವಶ್ಯವಾಗಿ ದೀಪಕ ಸ್ಥಾನದಲ್ಲಿ ವಾಚ್ಯವಾಗಿರುತ್ತದೆ. ಏಕಾವಳಿಯಲ್ಲಾದರೊ ವಿಶೇಷ್ಯ ವಿಶೇಷಣ ಭಾವವನ್ನು ದ್ವಿಮುಖವಾಗಿ ಕೊಡುವುದಷ್ಟೇ ಮುಖ್ಯವಾಗಿರುತ್ತದೆ ಎಂಬ ನಿಷ್ಕರ್ಷೆಗೆ ಬರಬಹುದು.

ಸಾರಾಲಂಕಾರ :— ಈ ಅಲಂಕಾರದ ಮೂಲಸ್ವರೂಪದ ಬಗ್ಗೆ ಅಲಂಕಾರಿಕ ರಲ್ಲಿ ಎರಡು ಮಾತಿಲ್ಲ ವಾಕ್ಯಾರ್ಥಗಳಲ್ಲಿ ಉತ್ತರೋತ್ತರ (ವಸ್ತುವಿನ) ಉತ್ಕರ್ಷ ವರ್ಣನೆಯನ್ನು ಎಲ್ಲರೂ ಒಪ್ಪಿರುವ ಸಾರಾಲಂಕಾರದ ಸಾಮಾನ್ಯ ಲಕ್ಷಣ.[46] ಆದರೆ ಕೆಲವು ಆಲಂಕಾರಿಕರು ಇದನ್ನು ಬೇರೆ ಬೇರೆ ಹೆಸರಿನಿಂದ ಕರೆದಿದ್ದಾರಲ್ಲದೆ ಒಂದಕ್ಕಿಂತ ಹೆಚ್ಚಿನ ಭೇದವನ್ನು ಇದರಲ್ಲಿ ಮಾಡಿದ್ದಾರೆ.[47] ಅಲ್ಲದೆ, ಜಗನ್ನಾಥನು ಈ ಅಲಂಕಾರಕ್ಕೆ ವೈದಿಕ ಮತ್ತು ಲೌಕಿಕವೆಂದು ಎರಡು ಉದಾಹರಣೆಗಳನ್ನು ಕೊಟ್ಟಿರುತ್ತಾನೆ. ವೈದಿಕ ಉದಾಹರಣೆಯನ್ನು (ನೋ ಪು. 8.) ಸ್ವರೂಪಕೃತವೆಂದು, ಲೌಕಿಕ ಉದಾಹರಣೆ ಯನ್ನು ಗುಣಕೃತವೆಂದಲೂ ಹೇಳಿದ್ದಾನೆ.[48] ವರ್ಣನೆಯು ಸ್ವರೂಪಕೃತಸಾರದಲ್ಲಿ ವಾಸ್ತವಿಕವಾಗಿದ್ದು ಗುಣಕೃತದಲ್ಲಿ ಆಲಂಕಾರಿಕವಾಗಿರಬಹುದೆಂದು ಜಗನ್ನಾಥನ ವಿವಕ್ಷೆ ಇರಬಹುದು. ಈ ವೈಲಕ್ಷಣ್ಯವು ಕಾವ್ಯಶಾಸ್ತ್ರ ಮತ್ತು ಕಾವ್ಯಗಳಲ್ಲಿ ಕಂಡು ಬರುವ ಶೃಂಖಲಾಧಾರಿತ ಅಲಂಕಾರ ಉದಾಹರಣೆಗಳ ಕಾವ್ಯತ್ವವನ್ನು ನಿರ್ಧರಿಸುವ ಮೂಲಭೂತ ತತ್ವವಾಗಿದೆ. ಈ ವಿಚಾರವನ್ನು ಪ್ರಶ್ನಿಸಿ ಆಯಾಯ ಸಂದರ್ಭದಲ್ಲಿ ತಕ್ಕಮಟ್ಟಿಗಿನ ಉತ್ತರವನ್ನು ಕೊಡಲಾಗಿದೆ. ಆದರೂ ಸ್ಪಷ್ಟಪಡಿಸುವುದಕ್ಕಾಗಿ ಪುನಃ ಉಚ್ಚರಿಸಿದರೆ ತಪ್ಪಾಗಲಾರದು.

ಕೆಲವು ಅಲಂಕಾರಗಳಲ್ಲಿ ಉದಾಹರಣೆಗೆ ಪ್ರಸ್ತುತ ಶೃಂಖಲಾವರ್ಗಕ್ಕೆ ಸೇರಿದ ಅಲಂಕಾರಗಳಲ್ಲಿ ವಕ್ರತಾಂಶವು ಕಡಿಮೆಯಿರಬಹುದು. ಆದರೂ ಸಾಧಾರಣ ಆಡು ಮಾತಿಗಿಂತ ಸ್ವಲ್ಪ ಅಧಿಕ ಪ್ರಮಾಣದಲ್ಲಿರುತ್ತದೆಯೆನ್ನಬಹುದು. ಈ ಕಾರಣಕ್ಕಾಗಿಯೇ ರುದ್ರಟನೂ ಕೂಡ ವಾಸ್ತವ ವರ್ಗವನ್ನು ಪರಿಗಣಿಸಿ ಇದರಡಿಯಲ್ಲಿ ಪ್ರಸಕ್ತ ಅಲಂಕಾರಗಳನ್ನು ಪರಿಗಣಿಸಿರುವುದು. ಹೃದಯಂಗಮತೆಯು ಅಲಂಕಾರದ

ಸಾರವೆಂಬುದನ್ನು ಮರೆಯಲಾಗದು.[49] ಇನ್ನು ಅಲಂಕಾರಗಳ ವರ್ಗೀಕರಣವಾದ ಮೇಲೆ ಆ ಅಲಂಕಾರಗಳ ಸಾಮಾನ್ಯ ಹಾಗೂ ವಿಶೇಷ ಲಕ್ಷಣಗಳನ್ನು ಕೊಡುವುದು ಸರ್ವಥಾ ಸಮರ್ಪಕ.[50] ಅಂದಮಾತ್ರಕ್ಕೆ ಕೇವಲ ಅಲ್ಪ ವಿಶೇಷಗಳಿಂದಲೇ ಪ್ರತ್ಯೇಕ ಅಲಂಕಾರಗಳನ್ನು ಮಾನ್ಯಮಾಡುವುದಾದರೆ ಆಗ ಆ ನಿಟ್ಟಿನಲ್ಲಿ ಅವುಗಳ ಸಂಖ್ಯೆಗೆ ಎಣೆಯೇ ಇರುವುದಿಲ್ಲ.[51]

ಎಷ್ಟೇ ಹೇಳಿದರೂ ಕಡೆಗೆ, ಅಲಂಕಾರ ನಿಷ್ಕರ್ಷೆಯು ಪ್ರಕರಣ ಮತ್ತಿತರ ಅಂಶಗಳನ್ನೊಳಗೊಂಡ ವಿಮರ್ಶಕನ ಅಥವಾ ಸಹೃದಯನ ವ್ಯಾಖ್ಯೆಯನ್ನವ ಲಂಬಿಸಿರುತ್ತದೆ. ಎಡ್ವಿನ್ ಜೆರಾವ್ ಹೇಳುವಂತೆ 'It is not an object of investigation, but a eriterion of identification';[62] 'Poetry is not a content, but a context,[53]—ಇವೆಲ್ಲವನ್ನು ಪರಿಗಣನೆಗೆ ತಂದುಕೊಂಡಿದ್ದರೂ ಕೆಲವೊಮ್ಮೆ ಅಲಂಕಾರಗಳು ನಿಷ್ಕರ್ಷೆಯಾಗದೆ ಸಂದೇಹವು ಹಾಗೆಯೇ ಉಳಿದು ಬಿಡಬಹುದೂ ಕೂಡ.

ಈಗ ಪ್ರಸ್ತುತಕ್ಕೆ ಸಂಬಂಧಪಟ್ಟಂತೆ ಕಡೆಯ ಮುಖ್ಯ ವಿಚಾರಕ್ಕೆ ಬರೋಣ. ಪಂಕ್ತಿರೂಪವಾದ ಪೂರ್ವೋತ್ತರ ಸಂಬಂಧವು ಶೃಂಖಲಾಮೂಲಾಲಂಕಾರಗಳ ಸಾಮಾನ್ಯ ಧರ್ಮವಾಗಿದೆಯೆಂದು ಈಗಾಗಲೇ ಅರಿತಿದ್ದೇವೆ.[54] ಇದನ್ನು ಆಧಾರವನ್ನಾಗಿಟ್ಟು ಕೊಂಡೇ ಜಗನ್ನಾಥನು ಈ ವರ್ಗದಲ್ಲಿ ಬರುವ ಅಲಂಕಾರಗಳಿಗೆ ವಿಶೇಷ ಲಕ್ಷಣಗಳನ್ನು ಕೊಟ್ಟಿರುವುದು ಕೂಡ.[55] ಸಾದೃಶ್ಯ, ಅಭೇದ, ವಿರೋಧಗಳಂತೆ ಶೃಂಖಲೆಯು ಪ್ರತ್ಯೇಕ ಅಸ್ತಿತ್ವವನ್ನು ಹೊಂದಿರುವುದಿಲ್ಲ. ಉದಾಹರಣೆಗೆ, ಸಾದೃಶ್ಯವು ಹೇಗೆ ಉಪಮಾಲಂಕಾರಕ್ಕಿಂತಲೂ ಬೇರೆಯಾಗಿರುವುದಿಲ್ಲವೊ ಅಥವಾ ಅಭೇದವು ರೂಪಕಕ್ಕಿಂತ ಬೇರೆಯಾಗಿರುವುದಿಲ್ಲವೊ ಹಾಗೆ ಕಾರಣಮಾಲಾ... ಅಲಂಕಾರಗಳಿಗಿಂತ ಶೃಂಖಲಾ ಬೇರೆಯಲ್ಲ. ಉಪಮಾ, ರೂಪಕ...ಇತ್ಯಾದಿಗಳು ಸ್ವತಂತ್ರ ಅಲಂಕಾರಗಳಂತೆ ಪೂರ್ಣ, ಲುಪ್ತ, ಸಾವಯವ...ಇತ್ಯಾದಿಗಳು ಅವುಗಳ ಉಪಭೇದಗಳು. ಅಂತೆಯೇ, ಶೃಂಖಲೆಯು ಸಾಮಾನ್ಯಲಕ್ಷಣವಾಗಿ ಕಾರ್ಯಕಾರಣ, ವಿಶೇಷ್ಯ ವಿಶೇಷಣ, ಉತ್ಕರ್ಷ ಅಪಕರ್ಷ ಸಂಬಂಧಗಳು ಈ ವರ್ಗದ ಅಲಂಕಾರಗಳ ವಿಶೇಷ ಲಕ್ಷಣಗಳಾಗಿರುತ್ತದೆ.[56]

ಶೃಂಖಲಾಪದವು ಮತ್ತು, ಮಾಲಾ, ರಶನಾ ಮತ್ತು ಆವೃತ್ತಿ ಪದಗಳು ನಿಕಟ ಸಂಪರ್ಕ ಹೊಂದಿದೆ ಎಂದು ತಿಳಿಸಿದ್ದೇವೆ. ಅಥವಾ ಸಹಜಾತವಾಗಿದೆ (cognate) ಎನ್ನಬಹುದೇನೊ. ಮಾಲಾ ಎಂದರೆ ಹೂಮಾಲೆ, ಸರಮಾಲೆ. ದಾರವೊಂದರಲ್ಲಿ ವಿವಿಧ ಹೂಗಳನ್ನು ಹೆಣೆಯುವಂತೆ ಕಾವ್ಯದಲ್ಲಿ ಅನೇಕ ವಾಕ್ಯಾರ್ಥಗಳು ಸಂಯೋಜಿತವಾಗಿರುತ್ತವೆ. ಹೂಗಳು ಬೇರೆ ಬೇರೆಯಾದರೂ ದಾರವೊಂದೇ ? ದಾರದ ಮೂಲಕ

ಹೂಗಳಿಗೆ ಪರಸ್ಪರ ಸಂಬಂಧ, ಹಾಗೆಯೇ ಮಾಲೋಪಮೆ ಮಾಲಾ ರೂಪಕ... ಇತ್ಯಾದಿ ಅಲಂಕಾರಗಳಲ್ಲಿ ಒಂದು ಉಪಮೇಯ ಹಲವಾರು ಉಪಮಾನಗಳು ಇದ್ದು ಉಪಮೇಯದ ಮೂಲಕವೇ ಉಪಮಾನಗಳ ನಡುವೆ ಸಂಬಂಧ. ಆದ್ದರಿಂದ ಮಾಲೋಪಮೆ...ಗಳಲ್ಲಿಯ ಮಾಲಾಪದಕ್ಕೆ 'ಅನೇಕ' ಎಂಬ ಅರ್ಥವೇ ಪ್ರಧಾನ. ಈ ವಿವಕ್ಷೆಯಿರುವುದರಿಂದಲೇ ಇದನ್ನು ಬಹೂಪಮಾ ಎಂತಲೂ ಕರೆದಿರುವುದುಂಟು.[57] ಆದರೆ ಶೃಂಖಲಾವಿಧ (ಕಾರಣಮಾಲಾ ಮತ್ತು ಮಾಲಾದೀಪಕ)ಗಳಲ್ಲಿಯ ಮಾಲಾ ಶಬ್ದಕ್ಕೆ ಬೇರೆಯ ಅರ್ಥವಿದೆ. ಇಲ್ಲಿ ಪೂರ್ವೋತ್ತರ ವಾಕ್ಯಾರ್ಥಗಳು ಒಂದಕ್ಕೊಂದು ಕೊಂಡಿಯಂತೆ ಬೆಸೆತು ಕೊಂಡಿರುತ್ತವೆ.[58] ಅನೇಕತ್ವ ಅಂಶವಿದ್ದರೂ ಅದು ಗೌಣ. ಪೂರ್ವೋತ್ತರ ಸಂಬಂಧವೇ (ಶೃಂಖಲೆಯೇ) ಪ್ರಧಾನ. ಬೇರೊಂದು ದೃಷ್ಟಿಯಿಂದ ಸ್ಪಷ್ಟಪಡಿಸುವುದಾದರೆ, 'ಹೇತು' (ಅಂದರೆ ಕಾರಣ)ವನ್ನು ಅಲಂಕಾರವೆಂದು ಒಪ್ಪದಿರುವ ಮಮ್ಮಟ ಮೊದಲಾದ ಆಲಂಕಾರಿಕರು ಕಾರಣಮಾಲೆ'ಯನ್ನ ಒಪ್ಪಿರುವುದು ಪೂರ್ವೋತ್ತರ ಸಂಬಂಧ(ಮಾಲೆ)ದ ವೈಚಿತ್ರ್ಯದಿಂದಲೇ ಎಂಬುದಾಗಿ ತಿಳಿಯಬೇಕು.[59]

ಮೇಲಿನ ಮಾಲಾಪದದ ವಿಶ್ಲೇಷಣೆಯ (ವಿವರಣೆಯ) ಮುಂದಿನಲ್ಲಿ ಭರತನ 36 ಲಕ್ಷಣಗಳಲ್ಲಿ ಒಂದಾದ 'ಮಾಲಾ' ಮಾಲಾಪ್ರಕಾರದ ಅಲಂಕಾರಗಳಿಗೆ ದಾರಿಯಾಯಿತೆಂಬ ಡಾ॥ ವಿ. ರಾಘವನರ ಸೂಚನೆಯು ಸಂದೇಹಾಸ್ಪದವಾಗಿದೆ.[60] ಏಕೆಂದರೆ, ಈ ಲಕ್ಷಣಕ್ಕೆ ಅಭಿನವ ಗುಪ್ತನು ಕೊಟ್ಟ ಉದಾಹರಣೆಯೊಂದಿಗೆ ತಾಳೆ ಮಾಡಿ ನೋಡಿದಾಗ ಭರತನು ಮಾಲಾ ಪದವನ್ನು ಅನೇಕ ಎಂಬ ಅರ್ಥದಲ್ಲಿ ಬಳಸಿದ್ದನೆಂಬುದು ವಿದಿತವಾಗುತ್ತದೆ. ಇದರಿಂದ (ಮಾಲಾ ಲಕ್ಷಣದಿಂದ) ಮಾಲೋಪಮೆ, ಮಾಲೋತ್ಪ್ರೇಕ್ಷೆ ...ಮುಂತಾದ ಅಲಂಕಾರಗಳಿಗೆ ನೇರವಾಗಿ ಮನ್ನಣೆ ಸಿಕ್ಕಿತೇ ಹೊರತು ಶೃಂಖಲಾಮೂಲಾಲಂಕಾರಗಳಿಗಲ್ಲವೆಂದು ಹೇಳಲು ಶಕ್ಯ.

ರಶನಾ ಎಂದರೆ ಡಾಬು. ಅರ್ಥದಲ್ಲಿ ಇದು ಶೃಂಖಲಾ ಪದಕ್ಕಿಂತ ಬೇರೆಯಲ್ಲ. ಆದರೆ ಆಲಂಕಾರಿಕರು ರಶನಾ ವಿಧವನ್ನು ಬಹುತೇಕ ಉಪಮಾ ಮತ್ತು ರೂಪಕಗಳಲ್ಲಿ ಒಪ್ಪಿದ್ದಾರೆ. ರಶನೆಯಲ್ಲಿ ಪೂರ್ವ ಉಪಮೇಯವು (ಉಪಮಾನ) ಉತ್ತರೋತ್ತರಕ್ಕೆ ಉಪಮಾನ (ಉಪಮೇಯ) ವಾಗುವ ಲಕ್ಷಣ ಹೊಂದಿದ್ದರೂ ಔಪಮ್ಯ ಅಥವಾ ಅಭೇದ (ಅಥವಾ ಉಪಮಾ ನೋಪಮೇಯ ಭಾವ)ಕ್ಕೆ ಪ್ರಾಧಾನ್ಯವಿರುವುದರಿಂದ ಇದನ್ನು ಕೇವಲ ಪೂರ್ವೋತ್ತರ ಸಂಬಂಧ ಪ್ರಧಾನವಾದ ಶೃಂಖಲಾ ವರ್ಗದಲ್ಲಿ ಸೇರಿಸುವಂತಿಲ್ಲ. ಶೃಂಖಲಾವರ್ಗದ ಅಲಂಕಾರಗಳಲ್ಲಿ ವಾಕ್ಯಾರ್ಥಗಳಿಗೆ ಉಪಮಾನೋಪಮೇಯ ಭಾವವಿರುವುದಿಲ್ಲವೆಂದು ಸಾರಿಸಾರಿ ಹೇಳಿಯಾಗಿದೆ. ರಶನೋಪಮಾ, ಮಾಲೋಪಮಾ ಇತ್ಯಾದಿ ಪದಗಳಲ್ಲಿ ಉತ್ತರ ಪದಕ್ಕೆ ಪ್ರಾಧಾನ್ಯವೆಂದೂ ಸ್ಪಷ್ಟಪಡಿಸಬಹುದು.

ಈ ಗುಂಪಿನ ಮೂರನೆಯ ಪದ ಆವೃತ್ತಿ. ಮತ್ತೊಮ್ಮೆ ಇರುವುದು, ಬರುವುದು ಆವೃತ್ತವಾಗುವುದು ಎಂದರ್ಥ. ಶಬ್ದ ಆವೃತ್ತವಾಗಬಹುದು ಅಥವಾ ಅರ್ಥ ಆವೃತ್ತವಾಗಬಹುದು ಅಥವಾ ಎರಡೂ ಆಗಬಹುದು. ಈ ಲಕ್ಷಣವನ್ನೊಳಗೊಂಡ ಅಲಂಕಾರ ಆವೃತ್ತಿ ದೀಪಕ. ಇಲ್ಲಿ ಇದರ ವಿಚಾರ ಅಪ್ರಸ್ತುತ ಶೃಂಖಲಾಲಂಕಾರಗಳಲ್ಲೂ ಪದಗಳೂ (ಅರ್ಥಗಳೂ) ಆವೃತ್ತವಾಗುತ್ತವೆಯಷ್ಟೆ. ಉದಾಹರಣೆಗೆ, ಕಾರಣಮಾಲಾ ಅಥವಾ ಸಾರಾಲಂಕಾರದಲ್ಲಿ ಕಾರಣ ಅಥವಾ ಸಾರ ಪದವು (ಕ್ರಮವಾಗಿ) ಆವೃತ್ತವಾಗುತ್ತದೆ. ಆವೃತ್ತವಾಗುವುದರಿಂದಲೇ ಈ ಅಲಂಕಾರಗಳು ಅಚ್ಚುಕಟ್ಟಾಗಿರುತ್ತವೆ. ಹಾಗಿಲ್ಲದಿದ್ದರೆ ಭಗ್ನ ಪ್ರಕ್ರಮತಾದೋಷ ತಗಲುತ್ತದೆಯೆಂದು ವಿವರಿಸಿಯಹಾಗಿದೆ. ಆವೃತ್ತಿಯಿದ್ದು ಪೂರ್ವೋತ್ತರ ಸಂಬಂಧಕ್ಕೆ ಪ್ರಾಮುಖ್ಯ ಶೃಂಖಲಾಲಂಕಾರಗಳಲ್ಲಿ.

ಹೀಗೆ ರಶನಾ, ಮಾಲಾ, ಆವೃತ್ತಿ ಮತ್ತು ಶೃಂಖಲಾ ಪದಗಳಿಗಿರುವ ಪರಸ್ಪರ ಅರ್ಥಸಾಮ್ಯ ಮತ್ತು ವೈಷಮ್ಯಗಳನ್ನು ಗುರುತಿಸುವುದರೊಂದಿಗೆ ಅವುಗಳನ್ನಾಧರಿಸಿದ ಶೃಂಖಲಾ ಮೂಲಾಲಂಕರಗಳಿಗೂ ಮತ್ತು ಮಾಲಾಲಂಕಾರಗಳಿಗೂ ಇರುವ ಅಂತರ ಮತ್ತು ಪ್ರತ್ಯೇಕ ನೆಲೆಗಳನ್ನು ಸ್ಥಿರಪಡಿಸಿದಂತಾಗುತ್ತದೆ.

ಅಡಿ ಟಿಪ್ಪಣಿಗಳು

1. ಋ. 1. 2. 1; 7. 29. 3; 10. 14. 13;......
2. ಪು. 15 ಅಲಂಕಾರಶಾಸ್ತ್ರ. ಬಿ. ಕೆ. ಶಿವರಾಮಯ್ಯ
3. ......ಕೋಽಲಂಕಾರೋಽನಯಾ ವಿನಾ ॥ ಕಾವ್ಯಾಲಂಕಾರ 2. 85
4. ಕಾವ್ಯಾದರ್ಶ 2. 1
5. ಯಚ್ಚ ಸಂಧ್ಯಂಗ ವೃತ್ತ್ಯಂಗ ಲಕ್ಷಣಾದ್ಯಾಗಮಾಂತರೇ ।
   ವ್ಯಾವರ್ಣಿತಮಿದಂ ಚೇಷ್ಟಮಲಂಕಾರತಯೈವ ನಃ ॥ ಕಾವ್ಯಾದರ್ಶ 2. 367
6. ಕಾವ್ಯಂ ಗ್ರಾಹ್ಯಮಲಂಕಾರಾತ್ । ಕಾವ್ಯಾಲಂಕಾರ ಸೂತ್ರವೃತ್ತಿ 1.1.1.
   ಸೌಂದರ್ಯಮಲಂಕಾರಃ । ಕಾವ್ಯಾಲಂಕಾರ ಸೂತ್ರವೃತ್ತಿ 1.1.2.
7. If : "Rudrata intends these figures which are more rletorical than poetic, involving arrangements and sequences of terms, or descriptive intimations." P 263. A Glossary of Indian figures of speech. Edwin Zerow.
8. (i) ನನು ಕೋಽಯಂ ವಿಚ್ಛಿತ್ತಿಃ ? ಉಚ್ಯತೇ–ಅಲಂಕಾರಾಣಾಂ ಪರಸ್ಪರ ವಿಚ್ಛೇದಸ್ಯ ವೈಲಕ್ಷಣ್ಯಸ್ಯ ಹೇತು ಭೂತಾಜನ್ಯತಾ ಸಂಸರ್ಗೇಣ ಕಾವ್ಯನಿಷ್ಠಾ ಕಾವ್ಯಪ್ರತಿಭಾ, ತಜ್ಜನ್ಯತ್ವ ಪ್ರಯುಕ್ತಾ ಚಮತ್ಕಾರಿತಾ ವಾ ವಿಚ್ಛಿತ್ತಿಃ । ಪು. 571, ರಸಗಂಗಾಧರ.

(ii) If : But it just as strongly conveys tbe connotation of clothing the stuff of the imagination. P 52. Edwin Zerow

9. If : "often, as in upama, his eriteria for sub classifications are not formal, but contatual (Nindopama, Catupama etc) aware of this, Dandin may indeed be unwilling to over-extend himself in subtieties still, even on this level, the problem is really one of context and exemplification. Dandin's lead in trying to involve contextual definitions as subvarieties was not followed by his successors, who stayed, by and large, within the limits of pure formation." P 53.

10 ಶ್ಲೇಷಃ ಸರ್ವಾಸು ಪುಷ್ಣಾತಿ ಪ್ರಾಯೋ ವಕ್ರೋಕ್ತಿಷ್ಯ ಶ್ರಿಯಮ್‌ರ । ಕಾವ್ಯಾದರ್ಶ. 2, 363.

11 (i) ಸಂಪ್ರತ್ಯರ್ಥಾಲಂಕಾರಾಣಾಂ ಪ್ರಸ್ತಾವಃ. ತನ್ಮೂಲಂ ಚೋಪಮೋಲಿ ಸ್ವೈವ ವಿಚಾರ್ಯತೇ । ಕಾವ್ಯಾಲಂಕಾರ ಸೂತ್ರವೃತ್ತಿ 4–2.

(ii) ಸಂಪ್ರತ್ಯುಪಮಾಪ್ರಪಂಚೋ ವಿಚಾರ್ಯತೇ । ಕಾವ್ಯಾಲಂಕಾರ ಸೂತ್ರ ವೃತ್ತಿ, 4.3.

(iii) ಪ್ರತಿವಸ್ತು ಪ್ರಭೃತಿಶುಪಮಾಪ್ರಪಂಚಃ। ಕಾವ್ಯಾಲಂಕಾರ ಸೂತ್ರವೃತ್ತಿ, 4.3.1

12 (i) ಸರ್ವೇಸ್ವಲಂಕಾರೋಪಮಾ ಜೀವಿತಾಯತೇ । ವ್ಯಕ್ತಿ ವಿವೇಕ 2.79.

(ii) ವಿಪುಲಾಲಂಕಾರವರ್ತಿನ್ಯುಪಮಂ । ಪು. 157, ರಸಗಂಗಾಧರ.

13 ರೂಪಕಾದಿರಲಂಕಾರಸ್ತಸ್ಯಾನ್ಯೈರ್ಬಹುಧೋದಿತಃ । ಕಾವ್ಯಾಲಂಕಾರ 1.13.

14 ರುದ್ರಟ ಕಾವಾಲಂಕಾರ 7.10 ; 8.1 ; 9.1 : 10.1.

15 ಅರ್ಥಸ್ಯಾಲಂಕಾರಾ ವಾಸ್ತವೌರವಮತಿಶಯಃ ಶ್ಲೇಷಃ । ಏಷಾಮೇನ ವಿಶೇಷಾ ಅನ್ಯೇ ತು ಭವಂತಿ ನಿಃಶೇಷಾಃ ॥ ರುದ್ರಟಕಾವ್ಯಾಲಂಕಾರ 7.9.

16 If : ''But the outward arrangement of figures, through it may techincally be that of a list, can not hide the intutional structure which underlines the definition of each figure and, imfact, relates each figure to others in terms of significant variations, simplying, if stating, of a universe of figures, a system (at least) of definition". P. 21 Edwin Zerow.

17 If ''But the principles and criteria of definition are exhaustive their possible Combinations and Permutations are difficult to encompass still, each new figure can easily be placed in the system of infantra'' P. 54, Edwin Zerow.

18 ಪಂಕ್ತಿರೂಪೇಣ ನಿಬದ್ಧಾನಾಮರ್ಥಾನಾಂ ಪೂರ್ವ ಪೂರ್ವಸ್ಯೋತ್ತರೋತ್ತರಸ್ಮಿನ್ ಉತ್ತರೋತ್ತರಸ್ಯವಾ ಪೂರ್ವ ಪೂರ್ವರಸ್ಮಿನ್ ಸಂಸ್ಪೃಷ್ಟತ್ವಂ ಶೃಂಖಲಾ । ಪು. 550 ರಸಗಂಗಾದರ.

19 2.39. 5–7 ; 7.5.1.5 ; 8. 101.15 ; 9.96_6 ; 10_78.2 ; 10–146.3–4 ;

20 ಹೋಲಿಸಿ : ಪರಂತು ಮನ್ಯೇ ಹೇತುರಿತ್ಯಸ್ಯಾರ್ಥೋಲಂಕಾರ ಪಕ್ಷ ಉತ್ಪತ್ತಿ ಹೇತುಂ ನ ವ್ಯನಕ್ತಿ । ಕತ್ರಕಾರಿಯಂ ತತ್ । ಪು. 233. ಋಗ್ವೇದೇಽಲಂಕಾರಾಃ, ಡಾ॥ ಪ್ರಹಾದ ಕುಮಾರ್.

21 ಮುಂ. ಉಪ. 11.7 ; ಪ್ರ. ಉಪ. 2.5 ; ಬೃ. ಉಪ. 4.4 ;

22 ರಾಮಾಯಣ. ಬಾಲ. 1.17-19 ; ಸುಂ. 17.29-30 ; 24.9-13 ; ಹೋಲಿಸಿ: ನ. ಭಾರತ, ಆದಿ. 24.4. ವನ. 198.62 : 201—2.5 ;

23 ಮ. ಭಾರತ, ಉದ್ಯೋಗ, 36.12 ; 40.22 ;

24 ಮ. ವ್ಯಾ. 7 ; 52 ; ಚಾರು. 19 ; ಕುಮಾರ. 6.54 ; ರಘು. 3.9 ; ಅಭಿ. 2.11 ; ವಿಕ್ರಮ. 1.7 ;

25 ಪ್ರಭಾಮಹತ್ಯಾ. ಶಿಖಯೇವ ದೀಪಃ (ಕುಮಾರ. 1.28)—ಶೇಷಾಂಶದಲಂಕಾರಾಣಾಂ ಪರಸ್ಪರ ಗರ್ಭತಾಪಿ ಸಂಭವತಿ । ಯಥಾದೀಪ ಕೋಪಮಂತೋಃ । ತತ್ರ ದೀಪಕ ಮುಕಮಾಗರ್ಭತ್ವೇನ ಪ್ರಸಿದ್ಧಮ್ । ಉಪಮಾಪಿ ಕದಾಚಿದ್ದೀಪಕಚ್ಛಾಯಾನುಯಾಯಿನೀ। ಯಥಾಮಾಲೋಪಮಾ । ಧ್ವನ್ಯಾಲೋಕ, 3.86.

26 ಕುಮಾರ. 4.33 ; ಅಭಿ. 1.20 ; ವಿಕ್ರಮ 1.8 ;...

27 ಕಿರಾತ. 10.29 ; 17.46 ; ಶಿಶುಪಾಲ 13.23 : 65 ;...

28 'ಉತ್ಸಾಹ ಹೀನನಾದವನನ್ನು ಅನಂತ ವಿಪತ್ತುಗಳು ಮುತ್ತುತ್ತವೆ : ವಿಪತ್ತಿಗೊಳಗಾದ ವನನ್ನು ಭವಿಷ್ಯದ ಅಭಿವೃದ್ಧಿಯು ತ್ಯಜಿಸುತ್ತದೆ : ಉತ್ತಮ ಭವಿಷ್ಯವಿಲ್ಲದವನನ್ನು ಎಲ್ಲರೂ ಲಘುವಾಗಿ ಕಾಣುತ್ತಾರೆ : ಗೌರವ ಹೀನನನ್ನು ರಾಜ್ಯಲಕ್ಷ್ಮಿಯು ತೊರೆಯು ತ್ತಾಳೆ'—ಕಿರಾತಾರ್ಜುನೀಯ, 2.14.

29 'ಹದಿನಾಲ್ಕು ಲೋಕಗಳಲ್ಲಿ ಸ್ವರ್ಗವು ಅಧಿಕ, ಸ್ವರ್ಗದಲ್ಲಿಯಾದರೊ ದೇವತೆಗಳು ; ದೇವತೆಗಳಲ್ಲಿ ಇಂದ್ರನು ; ಆ ಇಂದ್ರನು ಪ್ರೀತಿಯಿಂದ ನಳನನ್ನು ಸೇವಿಸಲು ಪ್ರಾರ್ಥಿಸು ತ್ತಾನೆಂದರೆ ಇದಕ್ಕಿಂತ ಉತ್ಕರ್ಷವೇನಿದ್ದೀತು ?' ನೈಷಧ, 6.81.

30 ಅಥ ಶೃಂಖಲಾನ್ಯಾಯ ಮೂಲಾಲಂಕಾರಾಃ ನಿರೂಪ್ಯಂತೇ । ಪು. 316. ಪ್ರತಾಪರುದ್ರೀಯ.

31 ಗ್ರಂಥಃ ಕಾರಣಮಾಲಾ ಸ್ಯಾದ್ಯಥಾಪ್ರಾಕ್ಪ್ರಾಂತಕಾರಣೈಃ । ಕುವಲಯಾನಂದ, 104. (ಉತ್ತರೋತ್ತರ ಕಾರಣಭೂತ ಪೂರ್ವಪೂರ್ವೈಃ ಪೂರ್ವಪೂರ್ವಧಾರಣ ಭೂತೋತ್ತ ರೋತ್ತರೈರ್ವಾ ವಸ್ತುಭಿಃ ಕೃತೋ ಗುಂಫಃ ಕಾರಣಮಾಲಾ) ।

32 ಯದಾ ತು ಕಾರ್ಯೋಕ್ತಿಸ್ತದಾ ತಸ್ಯ ಕಾರ್ಯಂ ತಸ್ಯಾಪಿಕಾರ್ಯಮಿತಿ ತತ್ ಕಸ್ಯಚಿತ್ ಕಾರ್ಯಂ ತದಪಿ ಕಸ್ಯಚಿದಿತಿ ವಾ ಯುಕ್ತಾ । ಸರ್ವಥೈವ ಯಃ ಶಬ್ದಃ ಕಾರ್ಯ ಕಾರಣೋಪಸ್ಥಾಪಕ ಆದೌ ಪ್ರಯುಕಃ ಸ ಏವ ನಿರ್ವಾಹ್ಯಃ । ಏವಂ ಕ್ರಮೇಣ ನಿಬಂಧನವಾಕಾಂಕ್ಷಾನು ರೂಪತ್ವಾಪ್ರಮಣೇಯಮ್ । ಅನ್ಯಥಾ ಭಗ್ನಪ್ರಕ್ರಮಂ ಸ್ಯಾತ್ । ಪು. 553. ರಸಾಗಂಗಾಧರ.

33 ಆತ್ರ ಜೀತೇಂದ್ರಿಯತ್ವಂ ವಿನಯ ಸ್ಯ ಕಾರಣಂ ಶ್ರುತ್ವಾ ಜಿತೇಂದ್ರಿಯತ್ವಸ್ಯಾಪಿ । ಕಿಂಕಾರಣಮಾಲಾ ವಿನಯಃ ಕಸ್ಯ ಕಾರಣಮಿತಿ ವಾ ಆಕಾಂಕ್ಷೋದೇತಿ । ಕಾರಣಸ್ಸ್ಯೆವ ಶ್ರುತಿವಶಾತ್ ಪೂರ್ವಮುಪಸ್ಥಿತೇಃ... ನತ್ವಸೌಸಾರ್ವತ್ರಿಕೀ । ಏವಂ ಚ ವಿನಯಃ ಕಸ್ಯ ಕಾರಣಮ್...ವಾಕ್ಯಂಯದ್ಯಪಿ ಫಲಕಃ ಪರಿಪೂರಕಂ ಭವತಿ ತಥಾಪಿ ನ ಸಾಕ್ಷಾದಿತ್ಯ ಹೃದಯಗಮಗಮೇಪ । ಪು. 553—554. ರಸಗಂಗಾಧರ.

34 ಅತ್ರ ಕಥಿತಪದತ್ವಂ ನ ದೋಷಃ । ಪು. 554, ರಸಗಂಗಾಧರ.

35 (i) ತತ್‌ಚ್ಛಬ್ದಸ್ಯ ವಿಶಿಷ್ಟಾರ್ಥಃ ಸ್ವರೂಪೇಣಾಭಿನ್ನೋಽಪಿ ವಿಶೇಷಣಭೇದಾದ್ವಿಲಕ್ಷಣಃ । ಪ್ರತೀಯತೇ ಕುಂಡಗೋಲಕಾದಿವತ್ । ಪು. 553—554 ರಸಗಂಗಾಧರ.

(ii) ನ ಚಾಸಾವ ನಿಬಂಧನಾ ಶಕ್ಯಾ ಕಲ್ಪಯಿತುಮಿತಿ ವಕ್ಷ್ಯತೇ । ಪು. 389. ವ್ಯಕ್ತಿವಿವೇಕ.

(iii) ಅರ್ಥ ಭೇದಾದ್ವಿಭಿನ್ನೇಽಪಿ ಶಬ್ದೇ ಸಾದೃಶ್ಯಮಾತ್ರಜಃ ।
ಆವೃತ್ತಿ 'ವ್ಯವಹಾರೋಽಯಂ ಮೂಲಮಸ್ಯೋಕತಾಭ್ರಮಃ ॥
ವ್ಯಕ್ತಿ ವಿವೇಕ, 2.71.

36 ಪ್ರತ್ಯುತ ಪದಾಂತಶೀಣ ತಸ್ಯಂರ್ಥ ಸ್ಯೋಕ್ತಾ ರೂಪಾಂತರೇಣ ಸ್ಥಿತಸ್ಯ ನಟಸ್ಯೇದ ಪ್ರತ್ಯಬಿಜ್ಞಾಪತಿಶೋಧಕತ್ವಾದ್ವಿವಕ್ಷಿಕಾರ್ಥ ಸಿದ್ಧೇರ-ಕುಂಠಿತತ್ವ ವಿರಹಾದ್ದೋಷಃ ಸ್ಯಾತ್। ಪು. 553-554. ರಸಗಂಗಾಧರ.

37. ಗೃಹೀತಮುಕ್ತರೀತ್ಯಾಽರ್ಥ ಶ್ರೇಣಿರೇಕಾವಳಿರ್ಮತಾ । ಕುವಲಯಾನಂದ 105.

(ಉತ್ತರೋತ್ತರಸ್ಯ ಪೂರ್ವಪೂರ್ವ ವಿಶೇಷಣ ಭಾವಃ ಪೂರ್ವಪೂರ್ವಸ್ಯೋತ್ತರೋತ್ತರ ವಿಶೇಷಣ ಭಾವೋ ವಾ ಗೃಹೀತ ಮುತ್ತರೀತಿಃ ।)

38. ಏಕಾವಳಿಯು ಪರಿಕರ ಅಲಂಕಾರಕ್ಕಿಂತಲೂ ಬೇರೆಯಲ್ಲವೆಂಬುದು ಭೋಜನ ನಿಲುವು- ಏಕಾವಳೀತಿ ಯಾ ಸಾಪಿ ಭಿನ್ನಾ ಪರಿಕರಾನ್ನೇಹಿ । ಸರಸ್ವತೀ ಕಂಠಾಭರಣ 4.76.

39. ದೀಪಕೈಕಾವಲೀ ಯೋಗಾನ್ಮಾಲಾದೀಪಕಮಿಷ್ಯತೇ । ಕುವಲಯಾನಂದ 107.

(...ಏವಂ ವಾಕ್ಯದ್ವಯಾನ್ವಯಿ । ಅತೋ ದೀಪಕಮಾಗೃಹೀತ ಮುಕ್ತರೀತಿ ಸದ್ಭಾವಾ ದೇಕಾವಳೀ ಚೇತಿ ದೀಪಕೈಕಾವಳೀ ಯೋಗಃ ।)

40. (i) ಭೋಜನು ದೀಪಕದಲ್ಲಿ ಮಾಲಾದೀಪಕ, ರಸನಾದೀಪಕ ಮತ್ತು ಚಕ್ರವಾಳವೆಂಬ 3 ವಿಧಗಳನ್ನು ಮಾಡಿದ್ದಾನೆ. ರುದ್ರಟನು ಏಕಾವಳೀ ಅಲಂಕಾರಕ್ಕೆ ಉದಹರಿಸುವ—

ಸಲಿಲಂ ವಿಕಾಸಿಕಮಲಂ ಕಮಲಾನಿ ಸುಗಾಧಿಮಧುಸಮೃದ್ಧಾನಿ ।
ಮಧುಲೀನಾಲಿಕುಲಾಕುಲಮಲಿಕುಲಮಪಿ ಮಧುರಣಿತಮಿಹ ॥

ಸರಸ್ವತೀಕಂಠಾಭರಣ 4.204

—ಪದ್ಯವನ್ನು ಈತನು ರಸನಾದೀಪಕಕ್ಕೆ ಉದಹರಿಸಿದ್ದಾನೆ. ಮತ್ತು ಮಾಲಾದೀಪಕಕ್ಕೂ ರಸನಾದೀಪಕಕ್ಕೂ ಇರುವ ವ್ಯತ್ಯಾಸ ಕ್ರಮವಾಗಿ ಕೇವಲ ಸಮಸ್ತ ಮತ್ತು ಅಸಮಸ್ತಪದಗಳಿಂದ ಉಂಟಾಗುತ್ತದೆಯೆಂದು ಹೇಳುತ್ತಾನೆ–ಪೂರ್ವತ್ರ ವೃತ್ತಿಚ್ಛಿನ್ನಂ ರಸನಾಯಾಂ ಇಹತು ಸ್ವತಂತ್ರಮಾಲಾ ಪುಷ್ಪವತ್ ಪದಂ ಪದೇನ ಯುಜ್ಯಮಾನಂ ಕ್ರಿಯಾದಿಭಿಃ ಸಂಬಧ್ಯತ ಇತಿ. ॥ ಸರಸ್ವತೀ ಕಂಠಾಭರಣ. 4.205.

(ii) ಭೋಜನು ಈ ಪದ್ಯವನ್ನು ಚಕ್ರವಾಳ ದೀಪಕ ವಿಧಕ್ಕೆ ಉದಾಹರಿಸಿದ್ದಾನೆ: ಇಲ್ಲಿ ಪೂರ್ವಪೂರ್ವ ಪದಗಳಾದ ಶರ, ಶಿರ...ಗಳು ಉತ್ತರೋತ್ತರದೊಡನೆ ಚಕ್ರಾಕಾರದಂತೆ ಸಂಬದ್ಧವಾಗಿರುತ್ತದೆಯಾದುದರಿಂದ ಚಕ್ರವಾಳದೀಪಕ ವಿಧವು ಕಂಡುಬರುತ್ತದೆಯೆಂದು ಭೋಜನು ಅಭಿಪ್ರಾಯಪಡುತ್ತಾನೆ. ಆದರೆ ಚಕ್ರವು ಪೂರ್ಣವಾಗಿಲ್ಲವಷ್ಟೆ.

(iii) cf : "Figurative poetics is not a study af examples, a pasterieris one example per definition is generally sufficient. It is infact an a priori science, which treats its exemplification more as a justification and, ofcourse, as a means of conveying an idea". P. 54. Edwin Zerow.

(iv) cf :" Although the alankaras inply a system of classification, that system is capable of several representations, for it is essentially multivalent. A faitor selected as and basic by one writer, may, to another writer, appear secondary. Indeed the figures are defined principally in terms of such emphases, and one is always free to "distort" a figure'. P. 53, Edwin Zerow.

(v) cf : "The primary characteristic of the figurative universe is note its fixity, but its selectivity.". P. 55, Edwin Zerow.

41. ಮಾಲಾ ಶಬ್ದೇನಾತ್ರ ಶೃಂಖಲಾ ಲಕ್ಷ್ಯತೇ । ತಸ್ಯಾ ಏವೋಪಕ್ರಾಂತತ್ವಾತ್ । ನ ಜಾತ್ರ ಮಾಲೋಪಮಾವನ್ಮಾಲಾ ಶಬ್ದೋ ಜ್ಞೇಯಃ । ಪು. 178, ಅಲಂಕಾರ ಸರ್ವಸ್ವ, ಜಯರಥಕೃತ ಟೀಕಾ.

42. ಏಕಾಸ್ಯೋಪಮೇಯಸ್ಯ ಬಹೂಪಮಾನೋಪಾದಾನಾಭಾವಾತ್ । ಅತ್ರ ಔಪಮ್ಯಮೇವನಾಸ್ತಿ । ಪು. 178, ಅಲಂಕಾರ ಸರ್ವಸ್ವ–ಜಯರಥಕೃತ ಟೀಕಾ.

43. ಪೂರ್ವಸ್ಯಪೂರ್ವಸ್ಯೋತ್ತರೋತ್ತರೋತ್ಕರ್ಷ ನಿಬಂಧನತ್ವೇತು ಮಾಲಾದೀಪಕವತ್ । ಉತ್ತರೋತ್ತರಸ್ಯ ಪೂರ್ವಂಪೂರ್ವಂ ಪ್ರತ್ಯುತ್ಕರ್ಷಹೇತುತ್ವೇ ಏಕಾವಳೀ । ಅ.ಪು. 178. ಅಲಂಕಾರ ಸರ್ವಸ್ವ.

44. cf : "This also is a problem that does not touch the structure of figuration itself, but rather involves its concrete application in cases where several figures co-occur." P. 53, Edwin Zerow.

45. (i) ಉತ್ತರೋತ್ತರಸ್ಮಿನ್ ಪೂರ್ವಪೂರ್ವಸ್ಯೋಪಕಾರಕತಾಯಾಂ ಮಾಲಾ ದೀಪಕಮ್ । ಪು. 79. ರಸಗಂಗಾಧರ.

(ii) ಏತಚ್ಚ ಪ್ರಾಚಾಮಸುರೋಧಾದಸ್ಮಾಭಿರಿಹೋದಾಹೃತಮ್ । ಪು. 18. ರಸ ಗಂಗಾಧರ.

(iii) ತತ್ರಮಾಲಾ ಶಬ್ದೇನ ಶೃಂಖಲೋಚ್ಯತೇ ದೀಪಕ ಶಬ್ದೇನ ದೀಪ ಇವೇತಿ ವ್ಯುತ್ಪತ್ತ್ಯಾ ಏಕದೇಶಸ್ಥಂ ಸರ್ವೋಪಕಾರಕಮುಚ್ಯತೇ । ಪು. 567. ರಸಗಂಗಾಧರ.

46. (i) ಉತ್ತರೋತ್ತರಮುತ್ಕರ್ಷಃ ಸಾರಃ ಇತ್ಯಭಿಧೀಯತೆ । ಕುವಲಯಾನಂದ 108.

(ii) ನದೀಷು ಗಂಗಾ ನಗರೀಷು ಕಾಂಚೀ ಪುಷ್ಪೇಷು ಜಾತೀ ರಮಣೀಷು ರಂಭಾ...॥ 7-96

–ಇಂತಹ ಶ್ಲೋಕಗಳಲ್ಲಿ ಸಾರಾಭಾಸವಿದೆಯೇ ಹೊರತು ಸಾರವಿಲ್ಲವೆಂದು ರುದ್ರಟನ ಕಾವ್ಯಾಲಂಕಾರದ ಮೇಲಿನ ವ್ಯಾಖ್ಯಾನಕಾರ ನಮಿಸಾಧು ಸ್ಪಷ್ಟಪಡಿಸುತ್ತಾನೆ. ಕಾರಣ, ಇಲ್ಲಿ ಶೃಂಖಲಾ ಮಾದರಿಯ ನಿರ್ಧಾರಣವಿಲ್ಲವೆಂದು ತಿಳಿಸುತ್ತಾನೆ—ನಕ್ಷತ್ರ ಶೃಂಖಲಾಕಟಕವತ್ ನಿರ್ಧಾರಣಮ್ । ಕಸ್ತರ್ಹ್ಯೇ-ಷೋಽಲಂಕಾರಃ ಸಾರಾಭಾಸ ಉಚ್ಯತೇ ।

47. (i) ಪದಾರ್ಥಾನಾಂ ತು ಯಃ ಸಾರಸ್ತದುತ್ತರಮಿಹೋಚ್ಯತೇ । ಸರಸ್ವತೀ ಕಂಠಾಭರಣ 3-23.

(ii) ಪೂರ್ವಪೂರ್ವಾಪೇಕ್ಷಮೋತ್ತಮೋತ್ತರಸ್ಯೋತ್ಕರ್ಷ ನಿಬಂಧನತ್ವಮುದಾರಾಖ್ಯೋಽಲಂಗಾರಃ । ಪು. 179, ಅಲಂಕಾರಸರ್ವಸ್ವ.

(iii) ಅತ್ರ ಸಾರಾಲಂಕಾರಃ ಕೈಶ್ಚಿದುಕ್ತಃ ಸ ಚಾನ್ಯಪೋಹಮಂತರೇಣ ನ ಚಮತ್ಕಾರಕಾರೀತಿ ಪರಿಸಂಖ್ಯೈವ ಯುಕ್ತೋಽಲಂಕಾರಃ । ಪು. 345, ಕಾವ್ಯಾನುಶಾಸನ.

(iv) ಶ್ಲಾಘ್ಯಗುಣೋತ್ಕರ್ಷ, ಅಶ್ಲಾಘ್ಯಗುಣೋತ್ಕರ್ಷ ಮತ್ತು ಉಭಯಗುಣೋತ್ಕರ್ಷ ಎಂದು ಅಪ್ಪಯ್ಯದೀಕ್ಷಿತನು ಮಾಡಿರುವ ಸಾರಾಲಂಕಾರದ 3 ಭೇದಗಳು. ಕುವಲಯಾನಂದನ. 108.

(v) ಜಗನ್ನಾಥನು ಸಾರಾಲಂಕಾರವನ್ನು ಕೆಲವೊಮ್ಮೆ (ಅನೇಕ ವಿಷಯಕ) ಶೃಂಖಲಾಧಾರಿತ ವೆಂತಲೂ ಕೆಲವೊಮ್ಮೆ (ಏಕ ವಿಷಯಕ) ಪ್ರತ್ಯೇಕ ಅಲಂಕಾರವಾಗುತ್ತದೆಯೆಂದು ಅಭಿಪ್ರಾಯಪಡುತ್ತಾನೆ. ಎರಡನೆಯದನ್ನು ಕೆಲವು ಆಲಂಕಾರಿಕರು 'ವರ್ಧಮಾನ' ಎಂಬುದಾಗಿ ಕರೆದಿದ್ದಾರೆಂತಲೂ ತಿಳಿಸುತ್ತಾನೆ. ಪು. 569, ರಸಗಂಗಾಧರ.

48 ಪೂರ್ವಂ ಗುಣಕೃತ ಉತ್ಕರ್ಷಃ ಇಹತು ಸ್ವರೂಪ ಕೃತ ಇತಿ ವಿಶೇಷಃ । ಪು. 566, ರಸಗಂಗಾಧರ.

49 ಹೃದ್ಯತ್ವಂ ಚಾಲಂಕಾರ ಸಾಮಾನ್ಯ ಲಕ್ಷಣಗತಂ ಸಕಲಾಲಂಕಾರ ಸಾಧಾರಣ ಮೇವೇತ್ಯ ಸಕೃದುಕ್ತಮ್ । ಪು. 189, ರಸಗಂಗಾಧರ.

50 (i) ರೂಪಕಾದಿ ಸಾಮಾನ್ಯಸ್ಯ ಪೂರ್ಣಾದಯಃ ಸಾವಯುಪಾಶ್ಚ ಭೇದಾ ಉಕ್ತಾ... ಪು. 441 ರಸಗಂಗಾಧರ.

(ii) ಅನುಗತಲಕ್ಷಣಂ ಪೃಥಗಲಂ ಕಾರೋಕ್ತಿರೇವ ರಮಣೀಯಾ । ಪು. 538 ರಸಗಂಗಾಧರ.

51 (i) ಕಿಂಚಿದ್ವೈಲಕ್ಷಣ್ಯ ಮಾತ್ರೇಣೈವಾಲಂಕಾರಭೇದೇ ವಚನಭಂಗೀನಾಮಾನಂತ್ಯಾತ್ ಅಲಂಕಾರಾನಂತ್ಯಪ್ರಸಂಗಾತ್ । ಪು. 202, ರಸಗಂಗಾಧರ.

(ii) ನೈವ ಪ್ರಮಾಣೀಕುರ್ಮದೇ ವಯಂ ಮೃಷಾ ಮುಕುಲಿತವಿಲೋಚನಾನ್ ಪ್ರಾಚಃ, ನಿವೇತ್ಯತಾ ಜೇಯಮಲಂಕಾರಾಂತರಭವನೋದರಂ ವರಾತೀಕಿ ಪ್ರಭುತ್ಮೈವ ಕೇವಲಾ । ನಸಹೃದಯಸ್ಪೃಷ್ಟಮ್ । ಪು. 202, ರಸಗಂಗಾಧರ.

52 P. 24. Edwin Zerow.

53 P. 17. Edwin Zerow.

54 ಹೋಲಿಸಿ :

(i) ವಾಮನನು ಯಮಕಾಲಂಕಾರದ ಪ್ರಕಾರಕ್ಕೆ 'ಶೃಂಖಲಾ' ಎಂಬ ಹೆಸರನ್ನಿತ್ತಿದ್ದಾನೆ-ಕಾವ್ಯಾಲಂಕಾರ ಸೂತ್ರವೃತ್ತಿ. 4. 1. 5.

(ii) ಹಾಗೂ ಯಮಕದ ವೈಚಿತ್ರ್ಯವನ್ನು ಹೆಚ್ಚಿಸುವುದಕ್ಕೆ 'ಶೃಂಖಲಾ ಮಾಲೆಯು, ಕಾರಣವಾಗುತ್ತದೆ ಎಂದಿದ್ದಾನೆ—ಕಾವ್ಯಾಲಂಕಾರ ಸೂತ್ರ ವೃತ್ತಿ 4. 1. 7.

55 (i) ಸೈವ ಶೃಂಖಲಾ...ಕಾರಣಮಾಲಾ । ಪು. 551, ರಸಗಂಗಾಧರ.

(ii) ಸೈವ ಶೃಂಖಲಾ...ಏಕಾವಳೀ । ಪು. 560, ರಸಗಂಗಾಧರ.

(iii) ಸೈವ ...... ಸಾರಃ । ಪು. 565, ರಸಗಂಗಾಧರ.

56 ಪು. 550-551, ರಸಗಂಗಾಧರ.

57 (i) ನಾಟ್ಯಶಾಸ್ತ್ರ. 16-45. (ii) ಕಾವ್ಯದರ್ಶ. 2-40.

(iii) ದರ್ಪಣಕಾಂಸ್ತು ಇಮಾಂ ಮಾಲೋಪಮಾ ಮಾಹ ಯಥಾ ಮಾಲೋಪಮಾ ಯದೇಕಸ್ಯೋಪಮಾನಂ ಬಹು ದೃಶ್ಯತೇ ಇತಿ । ಕಾವ್ಯದರ್ಶ. ಜೀವಾನಂದ ವಿದ್ಯಾಸಾಗರ ವ್ಯಾಖ್ಯಾನ, 2-40.

(iv) ಮಾಲೋಪಮಾ ಮಾಲಾಯಾಂಯಥಾ ಗ್ರಥಿಕಸ್ಯ ಏಕಸ್ಯ ಕುಸುಮಸ್ಯ ಅಪರೇಣ ತಸ್ಯಾಪಿ ಅಪರಣ ಇತಿ ಪರಸ್ಪಿತಸ್ಯ ಕುಸುಮಸ್ಯ ಸಂಶ್ಲೇಷೋ ಭವತಿ ತಥಾ ಪೂರ್ವ ಪೂರ್ವ ವಾಕ್ಯಸ್ಥಿತಾಧಿಕರಣ ಪದಾರ್ಥ ಸ್ಯೋತ್ತರೋತ್ತರೋತ್ತರ ವಾಕ್ಯಸ್ಯೋಪಮಾನತ್ವ ನಿವೇಶನೇನ ಸಂಬಂಧಾತ್ ಇಯಂ ಮಾಲೋಪಮಾ । ಬಹೂಪಮಾಯಾಂ ಕೇವಲಮು ತಮಾಬಾಹುಲ್ಯಮ್ । ಅಸ್ಯಾಂತು ಪೂರ್ವವಾಕ್ಯಸ್ಥ ಪದಸ್ಯ ಉತ್ತರತ್ರ ಸಂಬಂಧ ಏವಮುಪಮಾ ಬಾಹುಲ್ಯಮ್ । ಸವ್ಯಾಸ್ತು ಪ್ರಕಾರ ದ್ವಯೋತಪಿ ಮಾಲೋಪಮಾಮೇವ ಮನ್ಯಂತೇ । ಕಾವ್ಯಾದರ್ಶ ರಡ್ಡಿ ರಂಗಾಚಾರ್ಯವ್ಯಾಖ್ಯಾನ 242.

58 (i) ಪಂಕ್ತಿರೂಪೇಣ ನಿಬದ್ಧಾನಾಮರ್ಥಾನಾಂ ಪೂರ್ವ ಪೂರ್ವ ಸ್ಯೋತ್ತರೋತ್ತರಸ್ಮಿನ್ ಉತ್ತರೋತ್ತರಸ್ಯವಾ ಪೂರ್ವ ಪೂರ್ವಸ್ಮಿನ್ ಸಂಸೃಷ್ಟತ್ವಂ ಶೃಂಖಲಾ । ಪು. 550, ರಸಗಂಗಾಧರ.

(ii) ಏಕಂ ಪ್ರಕಾಶಕಂ ಸಂತಿ ಭೂಯಸಾಂಸಿ ಭೂಯಸಾಂ ಕ್ವಚಿತ್ । ಕೇವಲಂ ಪಂಕ್ತಿಸಂಸ್ಥಂ ವಾ ದ್ವಿವಿಧಂ ಪರಿದೃಶ್ಯತೇ ॥ ವಕ್ರೋಕ್ತಿ ಜೀವಿತ 3-18.

(iii) ಅತ್ರ ಉತ್ತರೋತ್ತರಾಣಿ ಪೂರ್ವ ಪೂರ್ವ ಪದ ದೀಪಕಾನಿ ಮಾಲಾಯಾಂ ಕವಿನೋಪನಿಬದ್ಧಾನಿ । ವಕ್ರೋಕ್ತಿ ಜೀವಿತ, 3-84.

(iv) ಮಾಲಾಶ್ವೇನ ಚಾರುತ್ವವಿಶೇಷಮಾಶ್ರಿತ್ಯ ದೀಪಕ ಪ್ರಸ್ತಾವೊಲ್ಲಂಘನೇನೇಹ ಲಕ್ಷಣಂ ಕೃತಮುರ । ಪು. 179, ಅಲಂಕಾರಸರ್ವಸ್ವ.

59 (i) ಸೇಯಂ ಕವಿಪ್ರಸಿದ್ಧಾ ಕಾರಣಮಾಲಾ । ರುದ್ರಟಕಾವ್ಯಾಲಂಕಾರ 7-84.

(ii) ಹೇತ್ವಲಂಕಾರೋಽತ್ರ ನಲಕ್ಷಿತಃ । ಆಯುರ್ಘೃತಮಿತ್ಯಾದಿರೂಪೋ ಹ್ಯೇಷನ ಭೂಷಣತಾಂ ಕದಾಚಿದರ್ಹತಿ ವೈಚಿತ್ರ್ಯಭಾದಾತ್ । ಕಾವ್ಯಪ್ರಕಾಶ, 10-34.

(iii) ಕಾರಣಮಾತ್ರೇತಿ ತುವ ವೈಚಿತ್ರ್ಯಮಿತಿ । ನ ಹೇತುರಲಂಕಾರಾಂತರಮ್ । ಪು. 346, ಕಾವ್ಯಾರ್ಣನಂ.

(iv) ಯಸ್ತು ಕಾರಣಮಾಲೇತಿ ಹೇತುಸಂತಾನ ಉಚ್ಯತೇ ।... ॥ ಸರಸ್ವತೀಕಂಠಾಭರಣ, 3-19-20.

60 (i) "The Laksana called Mala is an element which has been associatel with many alankaras like Malopama etc. The candraloka actually mentions mala as an element helping many alankaras, ಮಾಲಾ ಪರಂಪರಾ ಚೈಷಾಂ ಭೂಯಸಾಮನುಕೂಲೇ । (5-121). We can see the value of Bhattatauta's suggestion in such cases". p 15. Some concepts of Alankar S'astra, Dr. V. Raghavan.

(ii) ಉಪಮಾ, ಉತ್ಪ್ರೇಕ್ಷೆ...ಗಳಿಗೆ ಮಾಲೆಯು ಅಧಿಕ ವೈಚಿತ್ರ್ಯವನ್ನು ಕೊಡಬಹುದು. ನಿಜ ಆದರೆ ಈ ಮಾಲಾ ಪ್ರಕಾರಗಳಿಗೆ ಭರತನ ಮಾಲಾ ಲಕ್ಷಣವು ಪ್ರೇರಕ ಎಂದು ಹೇಳುವವರು ಭರತನು 'ಬಹೂಪಮೆಯ ಪ್ರಕಾರದ ಉದಾಹರಣೆ'ಯನ್ನೂ ಕೊಟ್ಟಿದ್ದಾನೆಂಬುದನ್ನು ಗಮನದಲ್ಲಿಡಬೇಕು. ಅಲ್ಲದೆ, ಭರತನು ಕೊಟ್ಟ ಮಾಲಾ ಲಕ್ಷಣದ ಲಕ್ಷಣ ಹೀಗಿದೆ—'ಇಷ್ಟಾರ್ಥ ಸಿದ್ಧಿಗಾಗಿ ಅನೇಕ ಪ್ರಯೋಜನಗಳ ವರ್ಣನೆ ಎಲ್ಲಿದೆಯೊ ಅಲ್ಲಿಮಾಲಾ'_ 16-29.

ಈ ತತ್ವವನ್ನು ಮಾಲಾಲಂಕಾರಗಳಿಗೆ ಅನ್ವಯ ಮಾಡುವುದಾದರೆ ನಾವು ಇದನ್ನು ಈ ರೀತಿ ಅರ್ಥಮಾಡಿಕೊಳ್ಳಬೇಕಾಗುತ್ತದೆ-ಉಪಮೇಯಕ್ಕೆ ಸಾದೃಶ್ಯವನ್ನು ಒಂದು ಉಪಮಾನದಿಂದ ಹೇಳಲಾಗದ್ದನ್ನು ಅನೇಕ ಉಪಮಾನಗಳಿಂದ ಹೇಳುವುದಾದರೆ ಉಪಮೇಯದ ಉತ್ಕರ್ಷ ಹೆಚ್ಚಿ ಅಧಿಕ ಪ್ರಯೋಜನವುಂಟಾಗುತ್ತದೆ ಎಂದು.

(iii) ಹಾಗೆ ನೋಡಿದರೆ ಭಾಮಹ ಮುಂತಾದ ಆಲಂಕಾರಿಕರು ಮಾಲಾ ಪ್ರಕಾರವನ್ನು ಪ್ರತ್ಯೇಕವಾಗಿ ಪರಿಗಣಿಸದೆ ತಳ್ಳಿಹಾಕಿದ್ದಾರೆ. (ಅ) ಮಾಲೋಪಮಾದಿ ಸರ್ವೋಽಪಿ ನಜ್ಯಾಯಾನ್ವಿಸ್ತರೋ ಮುಧಾ । ಭಾಮಹ ಕಾವ್ಯಾಲಂಕಾರ. 2.38. (ಆ) ಮಾಲೋಪಮಾದಯ ಸ್ತೂಪಮಾಯಾ ನಾತಿರಿಜ್ಯತೇ ಇತಿ ನಲಕ್ಷತಃ । ಪೃ. 295. ಕಾವ್ಯಾನುಶಾಸನ.

(iv) ಭರತನನ್ನು ಅನುಸರಿಸಿ ವಿಶ್ವನಾಥನು ಮಾಲಾ ಎಂಬ ನಾಟ್ಯ ಲಕ್ಷಣವನ್ನು ಲಕ್ಷಿಸಿದ್ದಾನೆ–ಮಾಲಾ ಸ್ಯಾದ್ಯಭೀಷ್ಟಾರ್ಥಂ ನೈಕಾರ್ಥ ಪ್ರತಿಪಾದನಮ್ । ಸಾಹಿತ್ಯದರ್ಪಣ, 6-189.

61 (i) ಅರ್ಥಾನಾವತಾಮೇಕ್ಯ ಯತ್ರ ಬಹೂನಾಂ ಭವೇದ್ಯಥಾಪೂರ್ವಮ್ । ಉಪಮಾನಮುತ್ತರೇಷಾಂ ಸೇಯಂ ರಶನೋಪಮೇತ್ಯನ್ಯಾ ॥ ರುದ್ರಟ ಕಾವ್ಯಾಲಂಕಾರಂ, 8–27.

(ii) ಅತ್ರಯಥೋತ್ತರ ಮುಪಮೇಯಸ್ಯೋಪಮಾನತ್ವೇ ಪೂರ್ವವದಭಿನ್ನ ಭಿನ್ನಧರ್ಮತ್ವೇ ರಸನೋಪಮಾ । ಪೃ. 296, ಕಾವ್ಯಾನು ಶಾಸನ.

ಜೈನ ಸನ್ಯಾಸಿನಿಯರ ಪರಿಕಲ್ಪನೆ

ಪ್ರೊ. ವಸಂತಕುಮಾರಿ

ಅಹಿಂಸಾ ಧರ್ಮ ಪ್ರವರ್ತನೆ ಮಾಡಿದ ವೃಷಭಾದಿ ವರ್ಧಮಾನ ಮಹಾವೀರ– 24 ತೀರ್ಥಂಕರರೂ ಶ್ರಾವಕ, ಶ್ರಾವಕಿ, ಆಚಾರ್ಯ ಮತ್ತು ಆರ್ಯಿಕೆಯರನ್ನೊಳಗೊಂಡಂತೆ ಪ್ರತ್ಯೇಕ ಚತುರ್ಸಂಘ ಸ್ಥಾಪನೆ ಮಾಡಿದರು. ಈ ಸಂಘಗಳಲ್ಲಿ, ಶ್ರಾವಕಿಯರು, ಆರ್ಯಿಕೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದ ಅಂಕಿ ಅಂಶಗಳು ವಿಶೇಷವಾಗಿ ಗಮನ ಸೆಳೆಯುವ ವಿಚಾರವೇ ಆಗಿದೆ. ಬಹುಪತ್ನೀತ್ವ, ಪಿತೃಪ್ರಧಾನ ಕುಟುಂಬ ಜೀವನ ವಿಕಾಸ ಹೊಂದುತ್ತಿದ್ದ ಅಂದಿನ ಸಾಮಾಜಿಕ ಪರಿಸರದಲ್ಲಿ ಚತುರ್ಸಂಘಗಳಲ್ಲಿ ಸ್ತ್ರೀಯರ ಸಂಖ್ಯೆ ಹೆಚ್ಚಾಗಿದ್ದುದರ ಔಚಿತ್ಯ ಕಂಡುಬಂದರೂ ಅಹಿಂಸಾ ಧರ್ಮಾನುಯಾಯಿಗಳಲ್ಲಿ, ಸ್ತ್ರೀಯರದೇ ಮುಂದಾಳುತನವಾಗಿತ್ತು ಎಂಬುದನ್ನು ತಳ್ಳಿಹಾಕುವಂತಿಲ್ಲ. ಸ್ತ್ರೀಯರಿಗೆ ಪ್ರತ್ಯೇಕ ಸಂಘ ವ್ಯವಸ್ಥೆಮಾಡಿ ಅವರನ್ನು ಜಿನದೀಕ್ಷೆಗೆ ಅಣಿಗೊಳಿಸಿದುದರಲ್ಲಿ ಜೈನಸಿದ್ಧಾಂತದ ಔಚಿತ್ಯ ಕಂಡುಬರುತ್ತದೆ.

ಕಂತಿ, ಅಜ್ಜಿಕೆ, ಆರ್ಯಿಕೆ, ಅಜ್ಜಿ, ಅವ್ವೆ, ಪರಿವ್ರಾಜಿಕೆ, ನಿರ್ಗಂಧಿ, ಕುಲ್ಲಕೆ ಥೇರಿ–ಈ ಪರ್ಯಾಯ ಪದಗಳು ಜೈನ ಸನ್ಯಾಸಿನಿಯರನ್ನು ಸೂಚಿಸುತ್ತವೆ. 24 ತೀರ್ಥಂಕರರ ಕಾಲದಲ್ಲಿ 24 ಆರ್ಯಿಕಾ ಸಂಘ ನಾಯಕಿಯರು–ಬ್ರಾಂಹ್ಮಿಪ್ರಾಕುಬ್ಜಾ, ಧರ್ಮಾರ್ಯೆ ಪೌರುಷೇಣಾ, ಅನಂತಾರ್ಯೆ, ರತಿಷೇಣಾ, ಮೀನಾರ್ಯೆ, ವಾರುಣಾ, ಘೋಷಾರ್ಯೆ, ಧಾರಣಾ, ಸೇನಾರ್ಯಿಕೆ, ಪದ್ಮಾರ್ಯಿಕೆ, ಸಂಖ್ಯಾತ ಸರ್ವಶ್ರೀ, ಸುವ್ರತೆ, ಹರಿಷೇಣಾ, ಭವಿತಾ, ರಕ್ಷಲಾ, ಬಂಧುಷೇಣಾ, ಪುಷ್ಪದಂತೆ, ಮಂಗಿನಿ, ರಾಜಮತಿ, ಸುಲೋಚನೆ, ಮತ್ತು ಚಂದನೆ ಇವರೆಲ್ಲರೂ, ತೀರ್ಥಂಕರರ ಪರಿವಾರ ವರ್ಗದವರೇ ಆಗಿದ್ದು ಪರಿತ್ಯಾಗಿಗಳಾಗಿ ಅನುಕ್ರಮವಾಗಿ ಧರ್ಮ ಪ್ರಭಾವನೆಮಾಡಿ, ಆರ್ಯಿಕೆ ಸಂಘ ವೃದ್ಧಿಗೊಳಿಸಿದ ಅಗ್ರಗಣ್ಯರು.[1]

ಮುಕ್ತಿಗೆ ಬೇಕಾದ ಪರೀಷಹಗಳನ್ನು ತಾಳಿಕೊಳ್ಳಲು ಯೋಗ್ಯವಾದ ಧೃಡವಾದ ಶರೀರ ಸ್ತ್ರೀಯರಿಗೆ ಇರುವುದಿಲ್ಲ. ಆ ಕಾರಣ ಸ್ತ್ರೀಭವದಲ್ಲಿ ಮುಕ್ತಿ ಅಸಾಧ್ಯವೆಂದು ದಿಗಂಬರ ಪರಂಪರೆಯ ಶಾಸ್ತ್ರರಚನೆಗಾರರ ಹೇಳಿಕೆ. ಈ ನಂಬಿಕೆಗೆ ತದ್ವಿರುದ್ಧವಾಗಿ ಶ್ವೇತಾಂಬರ ಪರಂಪರೆಯಲ್ಲಿ ಸ್ತ್ರೀ ಮುಕ್ತಿಯನ್ನು ಹೇಳಿದೆ. ಅಲ್ಲದೆ, ಶ್ರಾವಕಿಯಾಗಿಯೇ ಮೋಕ್ಷಕ್ಕೆ ಸಂದವರಲ್ಲಿ ವೃಷಭ ತೀರ್ಥಂಕರರ ತಾಯಿ ಮರು

ದೇವಿಯೇ ಮೊದಲಿಗಳು. ಈ ವ್ಯತ್ಯಾಸಗಳು ಮೂಲಭೂತವಾಗಿ ನಗ್ನತ್ವದ ವಿಷಯವಾಗಿ ಬಂದಿರುವ ಎರಡು ಸಂಪ್ರದಾಯಗಳು ನಂಬಿಕೆಗಳಾಗಿವೆ.[2] ಈ ಪರಂಪರೆಯಲ್ಲಿ ರಚಿತವಾಗಿರುವ ಹೇಮಚಂದ್ರರ ತ್ರಿಶಷ್ಠಿ ಶಲಾಕ ಪುರುಷ ಚರಿತ ಮರುದೇವಿಯ ಸುಂದರ ವ್ಯಕ್ತಿತ್ವದ ಚಿತ್ರಣವಿದೆ. ಅಯೋಧ್ಯೆಯ ಪುರಿಮತಾಲ ನಗರದ ಶಕಾಟಾಯುಲ ವನದಲ್ಲಿ ಆಲದ ಮರದ ಕೆಳಗೆ ಪ್ರತಿಮಾ ಯೋಗದಲ್ಲಿ ತಪಸ್ಸನ್ನಾಚರಿಸಿದ ವೃಷಭಸ್ವಾಮಿಗೆ ಘಾತಿ ಕರ್ಮಗಳು ನಾಶವಾಗಿ ಕೇವಲ ಜ್ಞಾನ ಪ್ರಾಪ್ತಿ ಆಯಿತು. ಆಗ ಇಂದ್ರನ ಆಸನ ಕಂಪನವಾಗಿ ಕೇವಲ ಜ್ಞಾನ ಮಹೋತ್ಸವ ವನ್ನು ಆಚರಿಸಲು ಧರೆಗೆ ಬಂದಿಳಿದ ದೇವತೆಗಳಿಂದ ಸಮವಸರಣದ ರಚನೆ ಆಯಿತು. ಸ್ವಾಮಿ ಸಮವಸರಣವನ್ನು ಪೂರ್ವಾನುಮುಖವಾಗಿ ಪ್ರವೇಶಿಸಿದರು. ಇತ್ತ ತನ್ನ ಮಗನ ಘೋರ ತಪಸ್ಸನ್ನು ನೆನೆದು ದುಃಖತಪ್ತಳಾಗಿದ್ದ ಮರುದೇವಿಯನ್ನು ಭರತನು ವೃಷಭನ ಕೇವಲ ಜ್ಞಾನೋತ್ಪತ್ತಿಯನ್ನು ತಿಳಿಸಿ, ಸ್ವಾಮಿಯನ್ನು ಪೂಜಿಸಲು ಮರು ದೇವಿಯನ್ನೂ ಆನೆಯ ಮೇಲೆ ಕುಳ್ಳಿರಿಸಿಕೊಂಡು, 'ನಿನ್ನ ಮಗನ ವೈಭವವನ್ನು ನೋಡು' ಎಂಬುದಾಗಿ ಹೇಳಿ, ಸಮವಸರಣಕ್ಕೆ ಕರೆದೊಯ್ದನು. ಸ್ವಾಮಿಯ ದರ್ಶನವಾಗುತ್ತಿದ್ದಂತೆ ಮರುದೇವಿ, ಕ್ಷಪಣಕ ಶ್ರೇಣಿಯನ್ನು ಪಡೆದು ಎಂಟು ಕರ್ಮ ಗಳನ್ನು ನಾಶಮಾಡಿ ಕೇವಲ ಜ್ಞಾನ ಪಡೆದಳು. ಆನೆಯ ಮೇಲೆ ಕುಳಿತಿರುವಂತೆಯೇ, ದೇಹತ್ಯಾಗ ಮಾಡಿದ ಮರುದೇವಿ ಮುಕ್ತಿಹೊಂದಿದಳು. ಅವಸರ್ಪಿಣಿಯ ಕಾಲದಲ್ಲಿ ಮೊದಲು ಸ್ತ್ರೀಭವದಲ್ಲಿ ಶ್ರಾವಕಿಯಾಗಿ ಮುಕ್ತಿ ಪಡೆದವರಲ್ಲಿ ಮರುದೇವಿಯೇ ಮೊದಲಿಗಳು. ಅಂದರೆ, ಆದಿತೀರ್ಥಂಕರರ ಜನನಿ ಮರುದೇವಿಗೆ ಮಾತ್ರ ಈ ಸ್ಥಾನ ಸೀಮಿತ. ಮುಂದೆ ರಚಿತವಾಗಿರುವ ದಂತ ಕಥೆಗಳು ಶ್ರಾವಕ ನೆಲೆಯಲ್ಲಿ ಮುಕ್ತಿ ಯನ್ನು ಅನುಮೋದಿಸುವುದಿಲ್ಲ.[4]

ಶ್ವೇತಾಂಬರ ಪರಂಪರೆಯಲ್ಲಿ ಮಲ್ಲಿ ತೀರ್ಥಂಕರ :

ಶ್ವೇತಾಂಬರ ಪರಂಪರೆಯಲ್ಲಿ ಸ್ತ್ರೀಭವದಲ್ಲಿ ಪರಿತ್ಯಾಗದ ಹಿನ್ನೆಲೆಯಲ್ಲಿ ಮುಕ್ತಿಯ ಕಲ್ಪನೆ ವಿಸ್ತರಿಸಲ್ಪಟ್ಟಿದೆ. 24 ತೀರ್ಥಂಕರರಲ್ಲಿ ಹತ್ತೊಂಬತ್ತನೇ ತೀರ್ಥಂಕರರಾದ ಮಲ್ಲಿಯನ್ನು ಸ್ತ್ರೀಭವದಲ್ಲಿಯೇ ಚಿತ್ರಿಸಲಾಗಿದೆ. ಮಿಥಿಲಾ ದೇಶದ ದೊರೆ ಕುಂಬಿ ಮತ್ತು ಆತನ ರಾಣಿ ಪ್ರಭಾವತಿಗೆ ಜನಿಸಿದ ಸುಪುತ್ರಿ ಮಲ್ಲಿ. ಪ್ರಭಾವತಿ ಗರ್ಭವತಿಯಾಗಿದ್ದಾಗ, ಮಲ್ಲಿಗೆಯ ಹಾಸಿಗೆಯ ಸುಪ್ಪತ್ತಿಗೆಯಲ್ಲಿಯೇ ಮಲಗಬೇಕೆಂಬ ಬಯಕೆ ಉಂಟಾದ ಕಾರಣ, ಹುಟ್ಟಿದ ಮಗುವಿಗೆ ಮಲ್ಲಿ ಎಂದೇ ಹೆಸರಿಡಲಾಯಿತು. ಯೌವನಾವಸ್ಥೆಯಲ್ಲಿ ಚಂದ್ರನನ್ನು ನಾಚಿಸುವಂತಹ ಸೌಂದರ್ಯ, ಸೂರ್ಯನನ್ನು ಹಿಮ್ಮೆಟ್ಟಿಸುವ ಮೈಕಾಂತಿಯನ್ನು ಹೊಂದಿದ್ದ ಮಲ್ಲಿಯನ್ನು ವರಿಸಲು ಅನೇಕರು ಉತ್ಸುಕರಾಗಿದ್ದರು. ಆರು ಜನ ಅರಸು ಮಕ್ಕಳು–ಸಾಕೇತದ ದೊರೆ ಅಚಲ, ಚಂಪಾನಗರ ದೊರೆ ಚಂದ್ರಾವಾಯ, ಶ್ರಾವಸ್ಥಿಯ ರಾಜ ರುಕ್ಮಿಮಿನ್,

ವಾರಣಾಸಿಯ ದೊರೆ ಶಂಬ, ಹಸ್ತಿನಾಪುರದ ಆಧೀನ ಶತ್ರು ಮತ್ತು ಕಂಪಿಲ್ಯದ ದೊರೆ ಜಿತ ಶತ್ರು–ಮಲ್ಲಿಯನ್ನು ಅರಸಿ ಬಂದರು. ವೈರಾಗ್ಯಪರಳಾದ ಮಲ್ಲಿ ತನ್ನ ಚಿನ್ನದ ಪ್ರತಿಮೆಯನ್ನು ತಯಾರಿಸಿ ಆರು ಜನ ರಾಜಪುತ್ರರನ್ನೂ ಒಬ್ಬೊಬ್ಬರನ್ನಾಗಿ ಬರಮಾಡಿಕೊಂಡಳು. ಮೊದಲೇ ಯೋಜಿಸಿಕೊಂಡಂತೆ ಚಿನ್ನದ ಪ್ರತಿಮೆಗೆ ಹಳಸಿದ ಅನ್ನದ ಲೇಪ ಮಾಡಿ ಅದರಿಂದ ದುರ್ಗಂಧ ಬರುವ ವ್ಯವಸ್ಥೆ ಮಾಡಿ, ಜೀವನದ ಸುಖ, ಭೋಗ, ಸೌಂದರ್ಯದ ನಶ್ವರತೆಯ ಕಲ್ಪನೆಯು, ತೀವ್ರ ಪ್ರಭಾವ ಬೀರುವಂತೆ ವ್ಯವಸ್ಥೆ ಮಾಡಿಸಿದಳು. ಒಳಗೆ ಪ್ರವೇಶಿಸಿದ ಒಬ್ಬೊಬ್ಬ ರಾಜಕುಮಾರರಲ್ಲಿಯೂ ಕರ್ಮದ ಬಂಧನ ಆತ್ಮನ ಪ್ರಭೆಗೆ ಗ್ರಹಣ ಹಿಡಿದಂತೆ ಬಂಧಿಸಿರುತ್ತದೆ. ಕರ್ಮ ನಿರ್ಜರೆಯೇ ಪರಮ ಧ್ಯೇಯ, ಅದೇ ಸತ್ಯ ಎಂದು ಸಮ್ಯಕ್ ದರ್ಶನ, ಜ್ಞಾನದ ಪರಿಚಯ ಮಾಡಿಸಿ, ಅರಸು ಮಕ್ಕಳಲ್ಲಿ ಧರ್ಮ ಪ್ರಭಾವನೆಯನ್ನು ಬೀರಿದಳು. ಮಲ್ಲಿಯನ್ನು ಅರಸಿ ಬಂದ ಅರಸು ಮಕ್ಕಳಲ್ಲಿಯೂ ವೈರಾಗ್ಯವಾಗಿ ಮಲ್ಲಿಯೊಂದಿಗೆ ಪರಿತ್ಯಾಗಿಗಳಾಗಿ ದೀಕ್ಷೆ ಕೈಗೊಂಡು ತಪೋವನಕ್ಕೆ ತೆರಳಿದರು. ಮಾತಾಪಿತೃಗಳ ಅನುಮತಿ ಪಡೆದು ಮಲ್ಲಿಯೂ ದೀಕ್ಷೆ ಪಡೆದಳು. ದೀಕ್ಷಾ ಸಮಾರಂಭ ವೈಭವದಿಂದಲೇ ನಡೆಯಿತು — ಬಂಧುಗಳು ಮತ್ತಿತರ ಪರಿವಾರದವರಿಗೆ ಔತಣ, ಉಪಚಾರದ ನಂತರ ಪವಿತ್ರ ಅಭ್ಯಂಜನ, ಅಮೂಲ್ಯ ವಸ್ತ್ರಾಭರಣಗಳಿಂದ ಅಲಂಕೃತಗೊಳಿಸಿ ಪೂರ್ವಾನುಮುಖವಾಗಿ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮೆರವಣಿಗೆ ಎಲ್ಲವನ್ನೂ ವಿಧಿಪೂರಕವಾಗಿಯೇ ಆಚರಿಸಲಾಯಿತು. ನಂತರ ಪಲ್ಲಕ್ಕಿಯನ್ನು ಊರ ಹೊರಗೆ ಕೊಂಡೊಯ್ದು ಪ್ರಶಾಂತ ಸ್ಥಳದ ಮರದಡಿಯಲ್ಲಿ ಇಳಿಸಲಾಯಿತು. ಮಲ್ಲಿ ತನ್ನ ಎಲ್ಲಾ ಶೃಂಗಾರವನ್ನು ಒಂದೊಂದೇ ತೆಗೆದು, ಸಿದ್ಧ ಸ್ತುತಿಯೊಂದಿಗೆ ಪಂಚ ಮುಷ್ಟಿಯಲ್ಲಿ ಕೇಶಲೋಚನವನ್ನು ಮಾಡಿಕೊಂಡು ಸನ್ಯಾಸ ದೀಕ್ಷೆಯನ್ನು ಸ್ವೀಕರಿಸಿ ಆರ್ಯಿಕೆಯ ಸಂಘ ಪ್ರವೇಶಿಸಿದಳು. ಸಮ್ಮೇಧದ ಶಿಖರದಲ್ಲಿ ಐನೂರು ಜನ ಸನ್ಯಾಸಿ, ಸನ್ಯಾಸಿನಿಯರೊಂದಿಗೆ ಮಾಸೋಪವಾಸ ಮಾಡಿ ಮುಕ್ತಿ ಹೊಂದಿದಳು. ಇಂದ್ರ ಮತ್ತು ಭವನವಾಸಿ ದೇವತೆಗಳು ಮಲ್ಲಿ ತೀರ್ಥಂಕರ ನಿರ್ವಾಣ ಮಹೋತ್ಸವ ಆಚರಿಸಿದರು.[9]

ಹೀಗೆ, ಶ್ವೇತಾಂಬರ ಪರಂಪರೆಯಲ್ಲಿ ಸ್ತ್ರೀಭವದಲ್ಲಿ ಅರ್ಹಂತ ಸ್ಥಾನದ ಕಲ್ಪನೆಗೆ ಪುರಸ್ಕಾರವಿದ್ದು, 24 ಅರ್ಹಂತ ಪರಮೇಷ್ಠಿಗಳಲ್ಲಿ ಒಂದು ಸ್ಥಾನ ಸ್ತ್ರೀಭವದ ತೀರ್ಥಂಕರರಿಗೆ ಮೀಸಲಾಗಿಟ್ಟಿರುವುದು ಶ್ಲಾಘನೀಯವೂ ಆಗಿದೆ. ಇಂದಿಗೂ ಶ್ವೇತಾಂಬರ ಪರಂಪರೆಯಲ್ಲಿ ದೀಕ್ಷಾ ಮಹೋತ್ಸವವನ್ನು ವೈಭವದಿಂದಲೇ ಆಚರಿಸುವ ಪದ್ಧತಿ ಇರುವುದು ಗಮನಾರ್ಹವಾಗಿದೆ. ಜಟಾಸಿಂಹ ನಂದಿಯಿಂದ ರಚಿಸಲ್ಪಟ್ಟ ವರಾಂಗ ಚರಿತೆಯಲ್ಲಿಯೂ ಪರಿತ್ಯಾಗದ ಮಹೋತ್ಸವದ ಉಲ್ಲೇಖವಿದೆ. ವರಾಂಗನ ರಾಣಿಯರು ಸನ್ಯಾಸಿ ವ್ರತ ಸ್ವೀಕರಿಸುವ ಪೂರ್ವದಲ್ಲಿ ತಮ್ಮ ಗುರುಗಳಿಗೆ ನಮಸ್ಕರಿಸಿ.

ಅವರ ಅಪ್ಪಣೆ ಪಡೆದು ಪ್ರಶಾಂತ ಸ್ಥಳಕ್ಕೆ ಹೋಗಿ ಅಮೂಲ್ಯ ವಸ್ತ್ರಾಭರಣವನ್ನು ತೆಗೆದು ಬಿಳೀ ವಸ್ತ್ರ ಧರಿಸಿ, ದೀಕ್ಷಾ ವಿಧಿ ಸಂದರ್ಭದಲ್ಲಿ ಕೇಶಲೋಚನ ಮಾಡಿ ಕೊಂಡರು ಎಂದು ವರ್ಣಿಸಲಾಗಿದೆ.[6]

ನೇಮಿ ತೀರ್ಥಂಕರ ವಿವಾಹದ ಘಟನೆಯು ಹಿನ್ನೆಲೆಯಲ್ಲಿ ಜೈನಸಂಸ್ಕೃತಿ ಜೈನ ಪುರಾಣ, ಸಾಹಿತ್ಯ, ವಾಸ್ತುಶಿಲ್ಪ, ಚಿತ್ರಕಲೆ ಸಮೃದ್ಧವಾಗಿಯೇ ಬೆಳೆದಿದೆ.

ಸತ್ಯಭಾಮೆಯ ಸೋದರಿ ರಾಜಮತಿಯೊಂದಿಗೆ ನೇಮಿನಾಥನ ವಿವಾಹವನ್ನು ನಿರ್ಧರಿಸಲಾಯಿತು. ವಿವಾಹ ಸಿದ್ಧತೆ ವೈಭವದಿಂದಲೇ ಜರುಗಿತು. ಆದಾಗ್ಯೂ, ಸುಕೋಮಲೆ ಸುರದ್ರೂಪಿ ರಾಜಮತಿಯು ಮನಸ್ಸಿನಲ್ಲಿ ಆತಂಕ, ಅಹಿತ ಘಟನೆಯ ಮುನ್ಸೂಚನೆಯಂತೆ ಅವಳ ಬಲ ಕಣ್ಣು, ಎಡ ಬುಜ ಅದುರಿತು. ಮನಸ್ಸಿನಲ್ಲಿ ಬೇಗೆ, ತಳಮಳ, ಅಶಾಂತತೆಯ ಭಾವನೆಗಳು ಮೂಡಿದವು.

ವಿವಾಹೋತ್ಸವಗಳು ರಾಜಧಾನಿಯಲ್ಲಿ ವೈಭವದಿಂದ ಜರುಗುತ್ತಿದ್ದಂತೆ, ನೇಮಿ ರಥದಲ್ಲಿ ಕುಳಿತು ಬರುತ್ತಿರುವಾಗ, ಅಲ್ಲಲ್ಲಿ ಕೇಳಿಬರುತ್ತಿದ್ದ ಆರ್ತನಾದ ಮನಸ್ಸಿನ ಕ್ಷೋಭೆ ಹೆಚ್ಚಿಸಿತು. ತನ್ನ ವಿವಾಹ ಭೋಜನಕ್ಕಾಗಿ ಸಹಸ್ರಾರು ಪ್ರಾಣಿ ವಧೆಯ ಅರಿವಾದಾಗ, ರಥಿಕನನ್ನು ಪ್ರಾಣಿವಧಾ ಸ್ಥಾನಕ್ಕೆ ಕರೆದೊಯ್ಯುವಂತೆ ಆದೇಶ ನೀಡಿದ. ವಧಾಸ್ಥಾನದಲ್ಲಿ ಬಂದಿಸಲ್ಪಟ್ಟಿದ್ದ, ಸಾವಿನ ಭಯದಿಂದ ನಡುಗುತ್ತಿದ್ದ, ಮೂಕ ಪ್ರಾಣಿಗಳು ರಕ್ಷಿಸಿ, ರಕ್ಷಿಸಿ ಎನ್ನುವಂತಿದ್ದ ಅವುಗಳ ಆರ್ತನಾದ—ಈ ಎಲ್ಲಾ ಭಾವನೆಗಳು ಕ್ಷಣದಲ್ಲಿ ನೇಮಿಯಲ್ಲಿ ಪ್ರತಿಬಿಂಬಿಸಿ ಸಮಸ್ತ ಪ್ರಾಣಿಗಳನ್ನೂ ಬಂಧನ ದಿಂದ ವಿಮುಕ್ತಗೊಳಿಸುವಂತೆ ಆಜ್ಞೆ ನೀಡಿದ. ರಥ ಹಿಂತಿರುಗಿತು. ನೇಮಿಯಲ್ಲಿ ವೈರಾಗ್ಯ ಭಾವನೆಗಳು ಉದ್ದೀಪನಗೊಂಡವು. ಆತಂಕಗೊಂಡ ಪರಿವಾರಕ್ಕೆ ಸಹಸ್ರ ಪ್ರಾಣಿ ಸಮೂಹ ಬಂಧನಕ್ಕೊಳಗಾದಂತೆ ತಾನೂ ಸಹ ಕರ್ಮದ ಬಂಧನಕ್ಕೊಳ ಗಾಗಿದ್ದು ಕರ್ಮ ನಿಗ್ರಹಕ್ಕಾಗಿ ತಪಶ್ಚರ್ಯೆ ಕೈಗೊಳ್ಳುವ ನಿರ್ಧಾರ ಮಾಡಿರುವುದಾಗಿ ಅರುಹಿದ...ವಿಚಾರ ತಿಳಿದ ರಾಜಮತಿ ಮೂರ್ಛೆ ಹೋದಳು. ನೇಮಿಯ ನೆನಪಿ ನಲ್ಲಿಯೇ ಉಳಿದಳು.

ಮುಂದೆ, ನೇಮಿಯ ಸೋದರ ರಥನೇಮಿ ತನ್ನಲ್ಲಿ ಆಸಕ್ತನಾದಾಗ ಅವನಿಗೆ ರಾಜಮತಿ ಧರ್ಮೋಪದೇಶ ಮಾಡಿದಳು. ಕೇವಲ ಜ್ಞಾನ ಪ್ರಾಪ್ತಿಯಾದ ನೇಮಿ ತೀರ್ಥಂಕರರಿಂದ ತನ್ನ ಪೂರ್ವಭವದ ವಿವರ ತಿಳಿದು ವೈರಾಗ್ಯ ಹೊಂದಿ ಅರ್ಜಿಕೆ ಆದಳು. ರಥನೇಮಿ ಮುನಿ ಆಗಿಯೂ ಪುನಃ ರಾಜಮತಿಯಲ್ಲಿ ಆಸಕ್ತನಾದಾಗ ಅವನ ವ್ಯಾಮೋಹ ಭಾವನೆಗಳು ಕಳಚುವಂತೆ ಮಾಡಿದಳು. ರಥನೇಮಿ ತೀರ್ಥಂಕರ ರಲ್ಲಿ ಕ್ಷಮೆ ಕೇಳಿದ. ನಿರ್ಮಲ ಭಾವನೆಯಿಂದ ತಪಸ್ಸನ್ನಾಚರಿಸಿ ಮುಕ್ತಿ ಹೊಂದಿದ ; ರಾಜಮತಿಯೂ ತಪಸ್ಸನ್ನಾಚರಿಸಿ ಮುಕ್ತಿ ಹೊಂದಿದಳು.[7]

ದಿಗಂಬರ ಪರಂಪರೆಯಲ್ಲಿ ರಾಜಮತಿ ನೇಮಿ ತೀರ್ಥಂಕರರ ಚತುರ್ಸಂಘ ನಾಯಕಿಯಾಗಿ ಧರ್ಮ ಪ್ರಭಾವನೆ ಮಾಡಿದ ಉಲ್ಲೇಖ ಮಾತ್ರವಿದೆ.[8]

ಜಿನಸೇನಾಚಾರ್ಯರ ಮಹಾ ಪುರಾಣದಲ್ಲಿ ರಥನೇಮಿಯ ಪ್ರಕರಣ ಇಲ್ಲ, ಆದರೆ ಬಂಧುವರ್ಮನ ಹರಿವಂಶಾಭ್ಯುದಯದಲ್ಲಿ ರಥನೇಮಿಯ ಪ್ರಕರಣ ಇದೆ.[9]

ಬಂಧುವರ್ಮನ ಹರಿವಂಶಾಭ್ಯುದಯದಲ್ಲಿ ಪರಿತ್ಯಾಗದ ಚಿತ್ರಣ :

ಬಂಧುವರ್ಮನ ಹರಿವಂಶಾಭ್ಯುದಯದಲ್ಲಿ ಈ ಕಥೆಯು ವಿಸ್ತೀರ್ಣಗೊಂಡು, ಸತ್ಯಭಾಮೆ, ರುಕ್ಮಿಣಿ, ನೇಮಿ ತೀರ್ಥಂಕರರ ಸಮವಸರಣದಲ್ಲಿ ತೀರ್ಥಂಕರರ ಧರ್ಮೋಪದೇಶದಿಂದ ಪ್ರಭಾವಿತರಾಗಿ ದೀಕ್ಷೆ ಕೈಗೊಂಡು ಉಗ್ರೋಗ್ರ ತಪಸ್ಸನ್ನಾಚರಿಸಿದ.[10] ನೇಮಿನಾಥನು ವೈರಾಗ್ಯಪರನಾದಾಗ "ಅತಂಗೆ ಕುಡಲೆಂದಿರ್ದ ರಾಜಮತೀ ವೆರಸಯ್ನೂರ ಕನ್ಯೆಯರು ತಪಂಬಟ್ಟರ್"[11] ಎಂದು ದಿಗಂಬರ ಪರಂಪರೆಗನುಸಾರವಾಗಿಯೇ ಮಹಾಕಾವ್ಯದ ನಾಯಕ ನಾಯಕಿಯರ ಪಾತ್ರ ಚಿತ್ರಣವನ್ನು ಕಾಣುತ್ತೇವೆ.

ಶ್ರೀಕೃಷ್ಣ ರುಕ್ಮಿಣಿಯರ ಮಗ ಪ್ರದ್ಯುಮ್ನ, ಧೂಮಕೇತು ಎಂಬ ಅಸುರ ಪೂರ್ವಜನ್ಮ ವೈರ್ಯದಿಂದ ಮಗುವನ್ನು ಅಪಹರಿಸಿದ. ವಿದ್ಯಾಧರ ದಂಪತಿಗಳಾದ ಕಾಳ ಸಂಬರ ಮತ್ತು ಕಾಂಚನಮಾಲೆಗೆ ಮಗು ದೊರಕಿತು. ಯೌವ್ವನಾವಸ್ಥೆಯಲ್ಲಿದ್ದ ಪ್ರದ್ಯುಮ್ನನಲ್ಲಿ ಸಾಕುತಾಯಿ ಕಾಂಚನಮಾಲೆಯೇ ಮೋಹಗೊಂಡಳು. ಪ್ರದ್ಯುಮ್ನ ತಾಯಿಗೆ ತಿಳಿ ಹೇಳಿದ. ಕಾಂಚನಮಾಲೆ ಪ್ರದ್ಯುಮ್ನನನ್ನು ದೂಷಿಸಿ, ಕಾಳಸಂಬರನಲ್ಲಿ ಪ್ರದ್ಯುಮ್ನನ ವಿರುದ್ಧವಾಗಿಯೇ ದೂರು ಹೇಳಿದಳು. ಕಾಳಸಂಬರ ಪ್ರದ್ಯುಮ್ನನನ್ನು ಕೊಲ್ಲಲು ಆಜ್ಞೆ ಮಾಡಿದ. ಪ್ರದ್ಯುಮ್ನ ಎಲ್ಲರನ್ನೂ ಬಂಧಿಸಿದ. ಈ ಸಮಯಕ್ಕೆ ನಾರದ ಪ್ರವೇಶಿಸಿ ಸತ್ಯಾಂಶ ತಿಳಿಸಿದ. ಕಾಂಚನಮಾಲೆ ಪಶ್ಚಾತ್ತಾಪಗೊಂಡು ಕಾಳಸಂಬರನ ಅಪೇಕ್ಷೆಯಂತೆ ದೀಕ್ಷೆ ಕೈಗೊಂಡಳು.[12] ಹೀಗೆ ಪಶ್ಚಾತ್ತಾಪದ ಹಿನ್ನಲೆಯಲ್ಲಿ ಕಾಂಜನಮಾಲೆ ಪರಿತ್ಯಾಗಿಯಾದ ವೃತ್ತಾಂತ ಇಲ್ಲಿ ದೊರಕುತ್ತದೆ.

ಪೂರ್ವಭವದಲ್ಲಿ ರುಕ್ಮಿಣಿ ಲಕ್ಷ್ಮಿಮತಿಯಾಗಿದ್ದಾಗ ರಾಜಪುತ್ರಿ ಶ್ರೀಮತಿಯ ಸ್ನೇಹಿತಳೂ ಆಗಿದ್ದಳು. ಒಮ್ಮೆ ಜಿನಭಟ್ಟಾರಕರನ್ನು ಕಂಡು ನಿಂದಿಸಿದ ಕಾರಣ ಕುಷ್ಠರೋಗಿಯಾಗಿ ಸತ್ತು ಅನೇಕ ಭವಗಳ ನಂತರ ಅಂಬಿಗನ ಮನೆಯಲ್ಲಿ ತುಂಬಿಯಾಗಿ ಹುಟ್ಟಿದಳು. ಭಟ್ಟಾರಕರು ತುಂಬಿಗೆ ಧರ್ಮೋಪದೇಶ ಮಾಡಿದರು. ತುಂಬಿಗೆ ಸನ್ಯಾಸಿನಿಯಾಗಿ ದೇಹವನ್ನು ಪರಿಸಹದಿಂದ ದಂಡಿಸಿದಳು. ಶ್ರೀಮತಿ ಕಂತಿಯು ಕೈಗೊಂಡಿದ್ದ ಅಷ್ಟಾಹ್ನಿತ ವ್ರತ ಮಹಿಮೆಯನ್ನು ಅರಿತ ಸಮಾಧಿಗುಪ್ತರನ್ನೊಳ

ಗೊಂಡಂತೆ, ಮುನಿ ಸಂಘಗಳು ರಾಜಗೃಹದಲ್ಲಿ ಸೇರಿದರು. ತುಂಬೆಗೆಯೂ ಕಂತಿಯರ ಸಂಘದೊಂದಿಗೆ ಬಂದಳು. ಭಟ್ಟಾರಕರು ತುಂಬೆಗೆಗೆ ಅವಳ ಪೂರ್ವಭವವನ್ನು ತಿಳಿಸಿ, ಪೂರ್ವಭವದ ರಾಜಪುತ್ರಿ ಪ್ರಸ್ತುತ ಶ್ರೀಮತಿ ಕಂತಿಯಾಗಿ ಕೈಗೊಂಡಿರುವ ವ್ರತ ಮಹಿಮೆಯನ್ನು ಹೇಳಿದರು.[13] ಕಂತಿಯ ಬೇಟಿ ಆಯಿತು. ತನ್ನ ಹಿಂದಿನ ಭವವನ್ನು ಅರಿತ ತುಂಬೆಗೆಯು ಅಂದಿನ ಪುಣ್ಯದಲ್ಲಿ ರಾಜಪುತ್ರಿ ಪ್ರೇಯಸಿಯಲ್ಲಿ ಸ್ನೇಹ ಬೆಳೆಸಿದ ಹಿರಿಮೆಯಲ್ಲಿಯೂ ಧರ್ಮದ ಅನುಬಂಧ ಕೆಡುವಂತೆ ಮುನೀಂದ್ರರನ್ನು ನಿಂದಿಸಿದ್ದ ಅವಳಿಗೆ ತನ್ನಲ್ಲಿಯೇ ನೋವುಂಟಾಗಿ, ಜೀವನದ ನಶ್ವರತೆಯ ಅರಿವಾಗಿ ಪ್ರತ್ಯಾಖ್ಯಾನ ಸನ್ಯಾಸ ಮರಣ ಬಯಸಿ ಗುಹೆ ಪ್ರವೇಶಿಸಿದಳು.

ಸಮಾಧಿಗುಪ್ತ ಮುನೀಂದ್ರರಿಂದ ವಿಚಾರ ತಿಳಿದ ಶ್ರೀಮತಿ ತುಂಬೆಗೆಯನ್ನು ಕಂಡಳು. ಪೂರ್ವಭವವನ್ನು ತಿಳಿದಳು. ಇಬ್ಬರೂ ದುಃಖಿಗೊಂಡರೂ, ಅರಿವಿನಿಂದ ಸೈರಿಸಿದರು. ಆರಾಧನಾ ಗ್ರಂಥವನ್ನು ಪೂಜಿಸಿ ತುಂಬೆಗೆ ಧರ್ಮ ಬೋಧನೆ ಮಾಡಿ ಆಚಾರ್ಯರು ತೆರಳಿದರು. ಅಂಬಿಗರ ತುಂಬಿಗೆ ಪ್ರತ್ಯಾಖ್ಯಾನ ಸಮಾಧಿ ಮರಣ ಹೊಂದಿ ದೇವಲೋಕದಲ್ಲಿ ದೇವಿಯಾಗಿ ಹುಟ್ಟಿ, ಮುಂದೆ ರುಕ್ಮಿಣಿಯಾಗಿ ಜನಿಸಿದಳು.[14] ಹೀಗೆ ಪರಿತ್ಯಾಗದ ಕಲ್ಪನೆಯ ಹಿನ್ನೆಲೆಯಲ್ಲಿ ರುಕ್ಮಿಣಿಗೆ ರಾಜಪುತ್ರಿಯಾಗಿ ಪಟ್ಟ ಮಹಿಮೆಯಾಗುವ ಪುಣ್ಯಪ್ರಾಪ್ತಿಯಾದ ಚಿತ್ರಣ ಇಲ್ಲಿ ಮೂಡಿ ಬಂದಿದೆ.

ನೇಮಿನಾಥ ಪುರಾಣದಲ್ಲಿ ಸ್ತ್ರೀ ಪರಿತ್ಯಾಗದ ಚಿತ್ರಣ :

ಪಾಂಡು ರಾಜನು ಸುವ್ರತ ಮುನಿಗಳಲ್ಲಿ ದೀಕ್ಷೆಗೊಂಡಾಗ ಮಾದ್ರಿಯೂ ಅವನನ್ನು ಅನುಸರಿಸಿದಳು. ಹಾಗೂ ಅವರಿಬ್ಬರೂ ಸನ್ಯಾಸನ ವಿಧಿಯಿಂದ ಸಮಾಧಿ ಮರಣ ಹೊಂದಿ ಸ್ವರ್ಗದಲ್ಲಿ ಹುಟ್ಟಿದ ವಿವರಣೆ ಇದೆ.

ಶಂತನು ಮಹಾರಾಜ ವೈರಾಗ್ಯಪರನಾದಾಗ ಆತನ ಪತ್ನಿ ಸತ್ಯವತಿ ಹಾಗೂ ಸೊಸೆಯರಾದ ಅಂಬೆ, ಅಂಬಾಲೆ ಮತ್ತು ಅಂಬಿಕೆಯರು ದೀಕ್ಷಿತರಾಗುತ್ತಾರೆ.[15]

ಜೈನ ರಾಮಾಯಣದಲ್ಲಿ ಸೀತೆಯ ಪರಿತ್ಯಾಗದ ಚಿತ್ರಣ :

ರಾಮನು ನಿರ್ಧರಿಸಿದ ಅಗ್ನಿಪರೀಕ್ಷೆಗೆ ಗುರಿಯಾದ ಸೀತೆಯಲ್ಲಿ ವೈರಾಗ್ಯ ಭಾವನೆಗಳು ಮುಡಿದವು. ಪಶ್ಚಾತ್ತಾಪದಿಂದ ಬೇಯುತ್ತಿದ್ದ ರಾಮನನ್ನು ಕುರಿತು ಸೀತೆ ಹೀಗೆ ಹೇಳಿದಳು. ನಿನ್ನ ನಿರ್ಧಾರದಲ್ಲಿಯೇ ಆಗಲಿ, ಅಥವಾ ಜನಗಳ ನಂಬಿಕೆಯ ಬಗ್ಗೆಯೇ ಆಗಲಿ ಯಾವ ದೋಷವೂ ಇಲ್ಲ. ಇವೆಲ್ಲಕ್ಕೂ ಕಾರಣ, ನನ್ನ ಭವದ ಕರ್ಮದ ಫಲ" ಎಂದು ಹೇಳಿ, ಶಿರಕೇಶವನ್ನು ಐದು ಮುಷ್ಟಿಯಲ್ಲಿ ಕಿತ್ತು ರಾಮನಿಗೆ

ನೀಡಿ, ಜಯಭೂಷಣ ಮುನಿಯ ಆದೇಶದ ಮೇರೆಗೆ ಆರ್ಯಿಕೆ ಸುಪ್ರಭಳಿಂದ ದೀಕ್ಷೆ ಪಡೆದು ಸುಮಾರು 60 ವರ್ಷಗಳ ಕಾಲ ತಪಸ್ಸನ್ನಾಚರಿಸಿ, ಮೂವತ್ತೆರಡು ದಿನಗಳ ಕಾಲ ಉಪವಾಸ ಆಚರಿಸಿ ದೇಹತ್ಯಾಗ ಮಾಡಿ, ಅಚ್ಯುತೇಂದ್ರ ಲೋಕದಲ್ಲಿ ಜನ್ಮ ಪಡೆದಳು.[16]

ಸೀತಾಮಹಾದೇವಿ, ಶ್ರುತವತಿ ಕ್ಷಾಂತಿಯೆಂಬ ಆರ್ಯಿಕೆಯಂ ಬಳಿ ತಪಸ್ವಿನಿಯಾದ ವಿವರ ದಿಗಂಬರ ಪರಂಪರೆಯಲ್ಲಿ ಅನುಮೋದಿಸುತ್ತದೆ.[17]

ನಯಸೇನನ ಧರ್ಮಾಮೃತ ಕಥೆಯಲ್ಲಿ ಪರಿತ್ಯಾಗದ ಚಿತ್ರಣ :

ನಯಸೇನನ ಧರ್ಮಾಮೃತ ಕಥೆಗಳಲ್ಲಿ ಶೀಲಾವತಿ ಮಹಾದೇವಿಯ ಸನ್ಯಾಸನದ ವಿವರಣೆ ಈ ರೀತಿ ಇದೆ. ಶೀಲಾವತಿಯ ಪತಿಗೆ ಪರಿತ್ಯಾಗದ ಮನೋಭಾವನೆಯುಂಟಾಗಿ, ರಾಜ್ಯವನ್ನು ಮಗನಿಗೆ ವಹಿಸಿ ದೀಕ್ಷೆಗೊಳ್ಳುತ್ತಾನೆ. ಶಿಲಾವತಿ ಕೆಲವು ಕಾಲ ಧಾನ, ಧರ್ಮ, ಪೂಜೆ, ವ್ರತನಿಯಮ, ಆಚಾರ್ಯಭಕ್ತಿ ಮತ್ತು ಆರಾಧನೆ ಇವುಗಳನ್ನು ನಿಷ್ಠೆಯಿಂದ ಆಚರಿಸುತ್ತಾ ಗುಪ್ತಭಟ್ಟಾರಕರ ಪ್ರಚೋದನೆಯ ಮೇರೆಗೆ ಸುವ್ರತ ಆರ್ಯಿಕೆಯಿಂದ ದೀಕ್ಷೆ ಹೊಂದುತ್ತಾಳೆ. ಏಕದಶಾಧಾರಿ ಆಗಿ ತಪಸ್ಸನ್ನಾಚರಿಸುತ್ತಿರುವಾಗ ಅವಳಲ್ಲಿ ಜಿನಮಂದಿರಗಳಲ್ಲಿ ಪೂಜೆ ನಡೆಸುವ ಇಚ್ಛೆ ಉಂಟಾಗಿ ಆರ್ಯಿಕಾ ಸಂಘದ ಜೊತೆ ದೇಶ ಸಂಚಾರ ಕೈಗೊಂಡು ಭಯಂಕರ ರೋಗಪೀಡಿತಳಾಗಿ ನೋವಿನಿಂದ ಬಾಹ್ಯ ಚಟುವಟಿಕೆಯಲ್ಲಿ ನಿರಾಶಕ್ತಿ ಹೊಂದಿ ಸನ್ಯಾಸನವಿಧಿಯಿಂದ ಸಮಾಧಿ ಮರಣ ಹೊಂದುತ್ತಾಳೆ.[18]

ಅನಂತಕುಮಾರಿ ಮತ್ತು ವಿಜಯಕುಮಾರಿ ಕಥೆಗಳಲ್ಲಿ ಸ್ತ್ರೀ ಪರಿತ್ಯಾಗದ ಚಿತ್ರಣ :

'ಸ್ತ್ರೀ' ಕುರಿತು ಸ್ವತಂತ್ರ ಜೈನ ಕಾವ್ಯಗಳು ಹೆಚ್ಚಿಗೆ ರಚನೆ ಆಗಿಲ್ಲ. 15ನೇ ಶತಮಾನದಲ್ಲಿ ಶಾಂತವರ್ಣಿಯ ಅನಂತಕುಮಾರಿ ಚರಿತೆಯನ್ನೂ 16ನೇ ಶತಮಾನದಲ್ಲಿ ಶ್ರುತಕೀರ್ತಿಯು ವಿಜಯಕುಮಾರಿ ಚರಿತೆಯನ್ನೂ ರಚಿಸಿ, ಸ್ತ್ರೀ ಸ್ವತಂತ್ರ ಕಾವ್ಯಗಳ ಕೊರತೆ ತುಂಬಿದರೆಂದೇ ಹೇಳಬಹುದು.

ಬಾಲ್ಯದಲ್ಲಿ ವಿವಾಹ ಆಟ ಆಡಿದ ಅನಂತಕುಮಾರಿಗೆ ತಂದೆ ಪ್ರೀತಿದತ್ತ ಶೆಟ್ಟಿ ಜಿನಮುನಿಯಿಂದ ಬ್ರಹ್ಮಚಾರಿಣೀ ವ್ರತ ಕೊಡಿಸಿದ. ನಂತರ ಎಲ್ಲರೂ ಅನಂತಕುಮಾರಿಗೆ ಬ್ರಹ್ಮಚಾರಿಣಿ ಎಂದು ಕರೆದರು. ಪ್ರಾಪ್ತ ವಯಸ್ಸಿಗೆ ಬಂದಾಗ ಅನಂತಮತಿಯು ವಿವಾಹವಾಗಲು ತಿರಸ್ಕರಿಸಿ ಕಮಲಶ್ರೀ ಎಂಬ ಕಂತಿಯಿಂದ ಜನೇಂದ್ರ

ದೀಕ್ಷೆ ಪಡೆದಳು. ಅನಂತಮತಿ ಆರ್ಯಿಕೆ ಎಂದು ಕೀರ್ತಿ ಪಡೆದು, ಧರ್ಮ ಪ್ರಭಾವನೆ ಮಾಡಿ, ರತ್ನತ್ರಯ ಸುಖ ಆಶಿಸಿ ತಪಸ್ಸಾಚರಿಸಿದಳು. ಸಲ್ಲೇಖನ ವಿಧಿ ಪೂರ್ವಕ ವಾಗಿ ದೇಹತ್ಯಾಗ ಮಾಡಿ, ಮುಂದೆ ಸ್ವರ್ಗದಲ್ಲಿ ಸ್ತ್ರೀ ಜನ್ಮವನ್ನಳಿಸಿ, ಪುರುಷ ಜನ್ಮ ಪಡೆದಳು.[19]

ಹನ್ನೆರಡನೇ ಶತಮಾನನವರೆಗೂ, ಪ್ರಗತಿಯ ಪಥದಲ್ಲಿಯೇ ಹರಿದು ನಡೆದ ಜೈನ ಧರ್ಮ ನಂತರ ಅನೇಕ ಅಡೆ ತಡೆಗಳನ್ನು ಎದುರಿಸಿತು. ವೀರಶೈವರ ಪ್ರಾಭಲ್ಯ ಹೆಚ್ಚಿದಂತೆ ಜೈನರ ಪ್ರಾಬಲ್ಯ ಕುಗ್ಗಿತು. ಈ ಹಿನ್ನೆಲೆಯಲ್ಲಿ ಧಾರ್ಮಿಕ ಘರ್ಷಣೆಗಳೂ ನಡೆದವು. ವೀರಶೈವ, ಜೈನರ ಭಿನ್ನಾಭಿಪ್ರಾಯ, ಮತಾಂತರ, ಜಿನಮುನಿಗಳ ಮತ್ತು ವೀರಶೈವ ಸಂತರ ಖಂಡನೆ, ಇಂತಹ ಧಾರ್ಮಿಕ, ಸಾಮಾಜಿಕ ಕಲುಷಿತ ವಾತಾವರಣದ ಚಿತ್ರಣವೇ ವಿಜಯಕುಮಾರಿ ಕತೆಯ ವಸ್ತು. ಚಿತ್ರಣ ಕೇವಲ ಕವಿಯ ಕಲ್ಪನೆಯಲ್ಲಿ ಇತಿಹಾಸದ ಸತ್ಯಾಂಶವನ್ನೂ ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ಜೈನ ಧರ್ಮದ ಶ್ರೇಷ್ಠತೆಯನ್ನರಿತ ವಿಜಯಕುಮಾರಿ ವೀರಶೈವ ಧರ್ಮಾವಲಂಬಿಯಾಗಿದ್ದ ಸೋದರ ಮಾವನ ಮಗನನ್ನು ವಿವಾಹವಾಗಲು ನಿರಾಕರಿಸಿದಳು. ನಂತರ ಉತ್ತರಾಭಿಮುಖವಾಗಿ ಕುಳಿತು ವಿಜಯಕುಮಾರಿ ಪಂಚಮುಷ್ಟಿಯಿಂದ ನಿರಿಗುರುಳನ್ನು ಕಿತ್ತು ಪರಿತ್ಯಾಗಿ ಯಾದಳು. ದೀಕ್ಷಾ ಗ್ರಂಥವನ್ನೋದಿ ಮುಮುಕ್ಷುಗಳು ವಿಸ್ತಾರವಾಗಿ ದೀಕ್ಷೆಯನ್ನು ಕೊಟ್ಟು ಹರಸಿ ಶ್ರೀಮತಿ ಕಂತಿ ಎಂಬ ದೀಕ್ಷಾ ಹೆಸರನ್ನು ನೀಡಿದರು. ಮಗಳ ಅಗಲಿಕೆ ಯನ್ನು ಸಹಿಸದ ತಾಯಿ ಪದ್ಮಾವತಿಯೂ ದೀಕ್ಷೆ ಪಡೆದಳು. ಪದ್ಮಾವತಿಯ ಅಣ್ಣನಲ್ಲಿಯೂ ಪಶ್ಚಾತ್ತಾಪ ಉಂಟಾಗಿ ಅಣುವ್ರತ ಸ್ವೀಕರಿಸಿದ. ಶ್ರೀಮತಿ ಕಂತಿ ಸಲ್ಲೇಖನಾ ವಿಧಿಯಿಂದ ದೇಹತ್ಯಾಗ ಮಾಡಿ ಅಮರ ಲೋಕದಲ್ಲಿ ದೇವೇಂದ್ರನಾಗಿ ಹುಟ್ಟಿದಳು. ವಿಜಯಕುಮಾರಿಯ ತಾಯಿ ಪದ್ಮಾವತಿಯೂ ಸಲ್ಲೇಖನ ವಿಧಿಯಿಂದ ತ್ಯಾಗ ಮಾಡಿ ಸ್ವರ್ಗದಲ್ಲಿ ಸುಖ ಪಡೆದಳು.[20]

ನೋಂಪಿ ಕಥೆಗಳಲ್ಲಿ ಪರಿತ್ಯಾಗದ ಚಿತ್ರಣ :

ಶ್ರೀಮದನಂತ ನೋಂಪಿನ ಕಥೆ :—

ಗೌತಮಗಣಧರರು, ಮಹಾವೀರ ಸ್ವಾಮಿಯ ಸಮವಸರಣದಲ್ಲಿ ಚೇಳನಿಗೆ ಶ್ರೀಮದನಂತ ನೋಂಪಿಯ ಮಹತ್ವದ ಹಿನ್ನೆಲೆಯಲ್ಲಿ ಗುಣವತಿಯ ಕಥೆಯನ್ನು ಹೇಳಿದರು :– ಕರುಜಾಂಗಲ ನಗರದ ರಾಜ ಶ್ರೇಷ್ಠಿ ಸುದರ್ಶನ. ಆತನ ಧರ್ಮಪತ್ನಿ ಸನ್ಮತಿ, ಅವರಿಗೆ ಹುಟ್ಟಿದ ಗುಣವತಿ ಬಾಲ್ಯದಿಂದಲೇ ಅರ್ಜಿಕಾಮಾತೆಯರ ಸಹಚರ ವನ್ನು ಪಡೆದು ಸತ್ಸಂಗದಿಂದ ಧರ್ಮ ಜ್ಞಾನವನ್ನು ಹೊಂದಿದ್ದಳು. ವಿದ್ಯಾವಿನಯ ಸಂಪನ್ನೆಯೂ ಆಗಿದ್ದಳು.

ಆರ್ಯಿಕೆ ಸುಪ್ರಭಾ ಭಾರತಿ ಧರ್ಮ ಪ್ರಭಾವನೆ ಮಾಡುತ್ತಾ ಭವ್ಯ ಜನರಿಂದ ನೋಂಪಿಯನ್ನು ಮಾಡಿಸುತ್ತಿದ್ದರು. ಗುಣವತಿ ತಾನೂ ಅನಂತ ನೋಪಿ ವ್ರತ ಕೈಗೊಂಡಳು.

ಕಾಶ್ಮೀರದ ಅರಸು ಉತ್ತುಂಗ ಭುಜಬಲ ಮಹಾರಾಜ ಗುಣವತಿಯನ್ನು ಕಪಟದಿಂದ ಅಪಹರಿಸಿ, ಅವಳ ಮನವೊಲಿಸಿ ವಿವಾಹವಾದ. ಗುಣವತಿ ಧರ್ಮ ಆಚರಣೆಯಲ್ಲಿಯೇ ಸಂತುಷ್ಟಳಾಗಿದ್ದಳು. ರಾಜನಿಗೆ ಅವಳ ಸಾತ್ವಿಕ ಶ್ರದ್ಧೆ ಹಿಡಿಸುತ್ತಿರಲಿಲ್ಲ. ಆದರೂ ಅವಳ ಪ್ರೇಮಕ್ಕೆ ಕಟ್ಟುಬಿದ್ದು ಮಿಥ್ಯಾ ದೃಷ್ಟಿಯಾಗಿ ನಟನೆ ಮಾಡುತ್ತಿದ್ದ. ಒಮ್ಮೆ ಗುಣವತಿ ಆಚರಿಸುತ್ತಿದ್ದ ಅನಂತ ನೊಂಪಿಗೆ, ವ್ರತಕ್ಕೆ ಭಂಗ ಮಾಡಿದ. ಅಶಾಂತತೆ ಆವರಿಸಿತು. ದಾಯಾದಿಗಳು ಭುಜಬಲನಿಂದ ರಾಜ್ಯ ಕಿತ್ತುಕೊಂಡರು. ತನಗಾದ ತೇಜೋವಧೆಯಿಂದ ಅಪಮಾನಿತನಾದ ಭುಜಬಲ ಮಹಾರಾಜ ಗುಣವತಿಯೊಡನೆ ರಾಜ್ಯ ಬಿಟ್ಟು ಹೊರಟನು. ಹೀಗೆ ಅಲೆದಾಡುತ್ತಿರುವಾಗ, ತಪಸ್ಸನ್ನು ಆಚರಿಸುತ್ತಿದ್ದ ಮುನಿವೃಂದವನ್ನು ಕಂಡು ತನಗೊದಗಿದ ಆಪತ್ತನ್ನು ಅರುಹಿದನು. ಅನಂತ ನೋಂಪಿಯ ವ್ರತಭಂಗ ಮಾಡಿ ಅನಂತ ವ್ರತ ಧಾರವನ್ನು ವಶೀಕರಣ ದಾರವೆಂದು ಅವಹೇಳನ ಮಾಡಿದುದರಿಂದ ಹೀಗಾಯಿತೆಂದೂ, ಆ ಕಾರಣ ಅನಂತಮತಿ ಯಕ್ಷಿ ಶ್ರೀವಾತಾಳಯಕ್ಷ ಕೈಬಿಟ್ಟರೆಂದು ಮುನಿಗಳು ಹೇಳಿದರು. ದೊರೆಯು ಮನಸ್ಸು ವಿಹ್ವಲವಾಯಿತು. ಭಕ್ತಿಯಿಂದ ಯಕ್ಷ ಯಕ್ಷಿಯರನ್ನು ಪ್ರಾರ್ಥಿಸಿದನು ; ಭಕ್ತಿಯಿಂದ ಪತ್ನಿಯೊಡನೆ ಅನಂತ ವ್ರತವನ್ನು ಚೈತ್ಯಾಲಯದಲ್ಲಿ ಮಾಡಿದನು. ಅವನ ಭಕ್ತಿಯ ಪ್ರಭಾವದಿಂದ ಕಳೆದುಹೋದ ರಾಜ್ಯ ಪುನಹ ದೊರಕಿತು.

ವೃದ್ಧಾಪ್ಯವು ಸಮೀಪವಾಗಲು, ಮಗ ವಿಶ್ವಸೇನನಿಗೆ ಪಟ್ಟಕಟ್ಟಿ ಸಾಗರದತ್ತ ಮುನಿಗಳ ಸಮಕ್ಷಮ ದೀಕ್ಷೆ ಹೊಂದಿ ತಪಸ್ಸಾಚರಿಸಿದನು. ಸಮಾಧಿ ವಿಧಿಯಿಂದ ಶರೀರತ್ಯಾಗ ಮಾಡಿ ಅಚ್ಯುತ ಕಲ್ಪದಲ್ಲಿ ದೇವನಾಗಿ ಹುಟ್ಟಿದನು. ಗುಣವತಿ ಶ್ರೀಕಂತಿಯರ ಸಮಕ್ಷಮ ದೀಕ್ಷೆಗೊಂಡು ಸಮಾಧಿ ವಿಧಿಯಿಂದ ಶರೀರತ್ಯಾಗಮಾಡಿ ಇಂದ್ರ ಲೋಕದಲ್ಲಿ ದೇವನಾಗಿ ಹುಟ್ಟಿ ಸ್ತ್ರೀ ಜನ್ಮ ತಳೆದಳು. ಗುಣವತಿಯ ಕಥೆ ಕೇಳಿ ಪ್ರಭಾವಿತರಾದ ಚೇಳಿನಿಯೂ ಅನಂತ ನೋಂಪಿಯನ್ನು ಕೈಗೊಂಡು ನಂತರ ದೀಕ್ಷೆ ಸ್ವೀಕರಿಸಿ ಸಮಾಧಿ ವಿಧಿಯಿಂದ ಸ್ತ್ರೀ ಜನ್ಮ ಕಳೆದು ಸುರೇಂದ್ರತ್ವ ಪಡೆದಳು. ನಂತರ ರಾಜಪದವಿಯನ್ನನುಭವಿಸಿ, ದೀಕ್ಷೆ ಪಡೆದು ಉಗ್ರೋಗ್ರತ ತಪಸ್ಸನ್ನಾಚರಿಸಿ ಮುಕ್ತಿ ಪಡೆದಳು.

ಹೀಗೆ ನೋಂಪಿಯ ಆಚರಣೆಯಿಂದ ಶ್ರಾವಕರಲ್ಲಿ ಧರ್ಮಧ್ಯಾನದಲ್ಲಿ ವಿಶೇಷ ಆಸಕ್ತಿ ಬೆಳೆದು, ಪರಿತ್ಯಾಗಿಗಳೂ ಆದ ವಿವರಣೆ ಇಲ್ಲಿ ದೊರಕುತ್ತದೆ.[2]

ಆರ್ಯಿಕಾ ಸಂಘ ನಿಯಮಗಳು :

ಚತುರ್ವಿಧ ಸಂಘ ಸ್ಥಾಪನೆಗೊಂಡಂತೆ ಮುನಿ ಸಂಘ ಅವಸ್ಥೆಗಳೂ ರೂಪುಗೊಂಡವು. ಆಚಾರಾಂಗ ಸೂತ್ರ, ಸೂತ್ರ ಕೃತಾಂಗ, ಸ್ಥಾನಾಂಗ, ಮೂಲ ಸೂತ್ರ ಅಂದರೆ, ಉತ್ತರಾಧ್ಯಯನ, ಅವಶ್ಯಕ, ದಶವೈಕಾಲಿಕ ಮತ್ತು ಪಿಂಡ ನಿರ್ಯುಕ್ತಿ, ಈ ಕೃತಿಗಳು ವಿಶೇಷಿತವಾಗಿ ಮುನಿಗಳ ಅಧ್ಯಯನ ಚಿಂತನೆಯ ಬಗ್ಗೆ ಸಂಘ ನಿಯಮಾವಳಿಯ ಬಗ್ಗೆ ವಿವರಣೆಗಳನ್ನೊಳಗೊಂಡಿದೆ. ಅವಶ್ಯಕ ಸೂತ್ರದಲ್ಲಿ ಸಾಧುಗಳ ನಿತ್ಯ ಕ್ರಿಯೆಯ ಬಗ್ಗೆಯೂ ಪಿಂಡ ನಿರ್ಯುಕ್ತಿಯಲ್ಲಿ ಮುನಿ ಆಹಾರ ಸ್ವರೂಪದ ವಿವರಣೆ ಇದೆ. ದಶವೈಕಾಲಿಕ, ಉತ್ತರಾಧ್ಯಯನದಲ್ಲಿ ಮುನಿ ಆಚಾರದ ಪ್ರರೂಪಣೆ ಇದೆ.

ವಟ್ಟಕೇರ ಸ್ವಾಮೀಕೃತ ಮೂಲಾಚಾರವು ದಿಗಂಬರ ಸಂಪ್ರದಾಯದಲ್ಲಿ ಮುನಿ ಧರ್ಮವನ್ನು ವಿವರಿಸುವ ಪ್ರಥಮ ಗ್ರಂಥವಾಗಿದೆ. ಶಿವಾಚಾರ್ಯರ ಭಗವತೀ ಆರಾಧನಾ ದಿಗಂಬರ ಸಂಪ್ರದಾಯದ ಮುನಿ ಧರ್ಮವನ್ನು ವಿವರಿಸುವ ಮತ್ತೊಂದು ಕೃತಿಯೂ ಆಗಿದೆ.[22]

ಮುನಿ ಸಂಘ ಆಚಾರದ ಪ್ರರೂಪಣೆಯೇ ಆರ್ಯಿಕಾ ಸಂಘಕ್ಕೆ ಅನ್ವಯವಾಗಿದ್ದು, ಆರ್ಯಿಕೆಯರ ಪ್ರತ್ಯೇಕ ಸಂಘ ನಿಯಮಗಳ ರಚನೆ ಏನೂ ಆಗಲಿಲ್ಲ. ಆರ್ಯಿಕೆಯರ ಸಂಘ ವಾಸ್ತವವಾಗಿ ಪ್ರತ್ಯೇಕ ಸಂಘವಾಗಿ ವಿಂಗಡನೆಗೊಂಡರೂ, ಮುನಿ ಸಂಘಗಳ ಪೂರ್ಣ ಅಧೀನತೆಗೆ ಒಳಪಟ್ಟಿದ್ದವು. ಸ್ಥಾನಾಂಗದಲ್ಲಿ ಮುನಿ ಸಂಘ ಸನ್ಯಾಸಿನಿಯರ ಸಂಘ ರಕ್ಷಣೆಯನ್ನು ಮಾಡಬೇಕಾದ ನಿಯಮಾವಳಿಯ ಬಗ್ಗೆ ವಿವರಣೆ ಇದೆ.

ಪ್ರತ್ಯೇಕ ಆರ್ಯಿಕೆಯರ ಸಂಘ ವ್ಯವಸ್ಥಿತಗೊಳ್ಳಲು ಸಾಕಷ್ಟು ಸಮಯವೇ ಹಿಡಿದಿರಬೇಕು. ಆರ್ಯಿಕೆಯರೇ ಆಗಲೀ, ಮುನಿಗಳೇ ಆಗಲಿ, ಶ್ರಾವಕರ ಧಾನ ಪ್ರವೃತ್ತಿಯನ್ನು ಅವಲಂಭಿಸಿದ್ದರು. ಆ ಕಾರಣ ಅನೇಕ ರೀತಿಯ ಉಪದ್ರವಗಳನ್ನು ಎದುರಿಸುವುದು ಸಾಮಾನ್ಯ ವಿಚಾರವೇ ಆಗಿದ್ದಿತು.

'ಆಹಾರ' ಅಥವಾ 'ಚರಿಗೆ'ಗಾಗಿ ಆರ್ಯಿಕೆಯರ ಸಂಘ ತೆರಳುತ್ತಿದ್ದ ಸಂದರ್ಭಗಳಲ್ಲಿ ಅನೇಕರು ಯುವಕರು ಗೇಲಿ ಮಾಡುತ್ತಿದ್ದಂತಹ ನಿದರ್ಶನಗಳಿವೆ.[23] ಸನ್ಯಾಸಿನಿಯರ ರಜಸ್ರಾವ ದಿನಗಳಲ್ಲಿ ಕಾಪಾಲಿಕ ಸನ್ಯಾಸಿಗಳು ಆರ್ಯಿಕೆಯರನ್ನು ಕಾಮ ಚೇಷ್ಟೆಗೆ ಪ್ರಚೋದಿಸುತ್ತಿದ್ದ ಹಲವಾರು ಪ್ರಕರಣಗಳ ಉಲ್ಲೇಖವು ಕಂಡುಬರುತ್ತದೆ. ಅಪ್ರಾಪ್ತ ವಯಸ್ಸಿನ ಬಾಲಿಕಾ ಸನ್ಯಾಸಿನಿಯರು, ಯುವಕರ ಕಾಮ ಚೇಷ್ಟೆ ಇಂತಹ ಅನೇಕ ಉಪದ್ರವಗಳನ್ನು ಸಹಿಸಬೇಕಾಗಿದ್ದಿತು. ಸುಖುಮಾಲಿ, ಸುರದ್ರೂಪಿ ಸನ್ಯಾಸಿನಿ, ಆಹಾರಕ್ಕಾಗಿ ಹೊರಟಾಗ ಅವಳನ್ನು ಯುವಕರು ಹಿಂಬಾಲಿಸಿ ಉಪಾಸರವನ್ನು

ಬಲವಂತವಾಗಿ ಪ್ರವೇಶಿಸಿದ ಸಂದರ್ಭದಲ್ಲಿ ಆರ್ಯಿಕಾ ಸಂಘದ ಪ್ರಧಾನ ಆರ್ಯಿಕೆಯು ಮುನಿ ಸಂಘದ ಆಚಾರ್ಯರಿಗೆ ದೂರು ನೀಡಬೇಕಾಯಿತು. ಆಚಾರ್ಯರು ಸುಖ ಮಾಲಿಯ ಸನ್ಯಾಸಿ ಸಹೋದರರಿಗೆ ಅವಳ ರಕ್ಷಣೆಯ ಭಾರವನ್ನು ವಹಿಸಿದರು.[24] ಚರಿಗೆ ನೀಡುವ ಸಂದರ್ಭದಲ್ಲಿ ಗೃಹಾಧಿಪತಿಯೇ ಕಾಮಚೇಷ್ಟೆಯ ಮೂಲಕ ಸನ್ಯಾಸಿನಿಯರ ಮನಸ್ಸೆಳೆಯುವ, ಹಾಗೂ ಅತ್ಯಾಚಾರ ಎಸಗಿದ ನಿದರ್ಶನಗಳುಂಟು. ಇಂತಹ ಘಟನೆಗಳ ಪರಿಣಾಮವಾಗಿ ಸನ್ಯಾಸಿನಿಯರು ಗರ್ಭವತಿಯರಾದರೆ, ಅವಳನ್ನು ಸಂಘದಿಂದ ಹೊರದೂಡದೆ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸುವ ಮತ್ತು ಶ್ರಾವಕರ ಮನೆಯಲ್ಲಿ ಅಥವಾ ಉಪಾಸರಗಳಲ್ಲಿಯೇ ಅವರನ್ನು ರಕ್ಷಿಸಲು ವ್ಯವಸ್ಥೆ ಮಾಡ ಲಾಗುತ್ತಿತ್ತು.[25] ಸನ್ಯಾಸಿನಿಯರನ್ನು ಅಪಹರಿಸುವುದು ಅಂದಿನ ಸಾಮಾಜಿಕ ಬೆಳವಣಿಗೆಯಲ್ಲಿ ಅಸಂಭವವಾದುದ್ದೇನೂ ಆಗಿರಲಿಲ್ಲ. ಉಜ್ಜೇನಿಯ ದೊರೆ ಗದಬಿಲ್ಲಾ, ಜೈನ ಆಚಾರ್ಯ ಕಲಕಾಚಾರ್ಯನ ಸೋದರಿ ಸನ್ಯಾಸಿನಿಯನ್ನು ಅಪಹರಿಸಿ ತನ್ನ ಅಂತಃಪುರದಲ್ಲಿ ಬಂಧಿಸಿದ. ಕಲಕಾಚಾರ್ಯನು ಪರ್ಶಿಯಾ ದೇಶದ 99 ರಾಜರ ಸಹಾಯ ಪಡೆದು ಗದಬಿಲ್ಲನನ್ನು ಸೋಲಿಸಿದ.[26] ಬಹುಪ್ರಿಯಮಾಚ ಎಂಬ ವರ್ತಕ ಸನ್ಯಾಸಿನಿಯರನ್ನು ಹಡಗಿನಲ್ಲಿ ಅಪಹರಿಸಿದ ; ಅನೇಕ ಸಂದರ್ಭಗಳಲ್ಲಿ ಸನ್ಯಾಸಿನಿಯರ ವಸ್ತ್ರ ಅಪಹರಣ ನಡೆದವು ; ಪ್ರಣಯ ಪ್ರಸಂಗಗಳೂ ನಡೆದವು.

ಆರ್ಯಿಕೆ ಸಂಘ ನಿರ್ದಿಷ್ಟ ಬೆಳವಣಿಗೆ ಕಾಣಬೇಕಾದರೆ ಇಂತಹ ಉಪದ್ರವಗಳು ಸಹಜವಾಗಿಯೇ ಸಂಭವಿಸಿದವು. ಕಾಲಕ್ರಮದಲ್ಲಿ ಸನ್ಯಾಸಿನಿಯರಲ್ಲಿ ಹಾಗೂ ಜನಸಾಮಾನ್ಯರಲ್ಲಿ ಪರಿತ್ಯಾಗದ ನೈಜ ಸ್ವರೂಪದ ಅರಿವು ಆದಂತೆ ಸನ್ಯಾಸಿನಿಯರ ಉಪದ್ರವಗಳೂ ಕ್ರಮೇಣ ಕ್ಷೀಣಿಸಿದವು. ಮುನಿ ಸಂಘದ ನಡವಳಿಕೆಯ ಕಠಿಣ ನಿಯಮ ಸೂತ್ರಗಳೂ ರಚನೆಗೊಂಡವು.

ಆರ್ಯಿಕೆಯ ನಡವಳಿಕೆಯ ನಿಯಮಗಳ ಸಂಕ್ಷಿಪ್ತ ವಿವರಣೆ ;

1 ಪರಿವಾರದವರೊಂದಿಗೆ ಯಾವುದೇ ರೀತಿಯ ಸಂಪರ್ಕ ಬೆಳೆಸುವಂತಿಲ್ಲ. ಆಕಸ್ಮಿಕ ಏನಾದರೂ ಹಾಗೆ ನಡೆದಿದ್ದೇ ಆದಲ್ಲಿ ಪ್ರಾಯಶ್ಚಿತ್ತವಾಗಿ ಉಪವಾಸ ಮಾಡಬೇಕು.[28]

2 ಇಂದ್ರಿಯ ನಿಗ್ರಹ, ಪರಿತ್ಯಾಗದ ಮೂಲ ಧ್ಯೇಯವೂ ಆಗಿದೆ. ಆಕಸ್ಮಿಕ ವಾಗಿಯೂ ಉಂಟಾಗುವ ಲೈಂಗಿಕ ಆಸಕ್ತಿ ಉಂಟಾಗುವಂತಿಲ್ಲ. ಅಂತಹ ಸಂದರ್ಭಗಳಲ್ಲಿ ರಾಗದ್ವೇಶ ವ್ಯಾಮೋಹ ಇವುಗಳ ಕ್ಷಣಿಕತೆಯ ಅರಿವು ಮೂಡುವಂತಹ ಚಿತ್ರಗಳನ್ನು ತೋರಿಸಲಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ಉಪವಾಸ ವ್ರತ ಆಚರಿಸಿ ಪ್ರಾಯಶ್ಚಿತ್ತ ಮಾಡಿಕೊಳ್ಳು ತ್ತಿದ್ದರು.[29]

3 ಮನಸ್ಸನ್ನು ಕ್ಷೋಭೆಗೊಳಿಸದಂತಹ, ಇಂದ್ರಿಯಗಳ ವಿಷಯದಲ್ಲಿ ಉತ್ಸುಕಾ ಪೂರ್ವಕವಾದ ಗಮನವು ಹರಿಯದಂತಹ ವಸತಿಗಳಲ್ಲಿ ಸನ್ಯಾಸಿನಿಯರು ಮನ, ವಚನ ಕಾಯವನ್ನು ರಕ್ಷಿಸಿಕೊಂಡು ಧ್ಯಾನ ಮಾಡುತ್ತ ನಿವಾಸ ಮಾಡಬೇಕು.[30]

4 ಕೇಶಲೋಚನ, ಪಿಂಚ ವಸ್ತ್ರ ಇಂತಹ ಅಲ್ಪ ಪ್ರಮಾಣದ ಪರಿಗ್ರಹ ನಿಯಮವನ್ನು ಸನ್ಯಾಸಿನಿಯರು ಪಾಲಿಸಬೇಕು. ಪರಿಗ್ರಹ ಬಂದು ವಸ್ತ್ರಕ್ಕೆ ಮಾತ್ರ ಸೀಮಿತವಾಗಿರಬೇಕು. ಕೇಶಲೋಚನ ನಿರ್ವಿಕಾರತ್ವದ ಕಲ್ಪನೆಯ ಮೊದಲನೆಯ ಹಂತ. ಲೌಕಿಕ ಸುಖಾಶಕ್ತಿ ಇದರಿಂದ ಕ್ಷೀಣಿಸಿ, ಆತ್ಮ ಚಿಂತನೆಯಲ್ಲಿ ಶ್ರದ್ಧೆ ಬೆಳೆಯುತ್ತದೆ. ಕೇಶಲೋಚನ ಉಗ್ರ ತಪಸ್ಸಿನ ಕ್ರಿಯೆ. ಪಿಂಚದಿಂದ ಈರ್ಯಾ ಸಮಿತಿ ಪಾಲನೆ ಆಗುತ್ತದೆ.[31]

5 ಥೇರಾಪಂಥಿ ಪಂಗಡದಲ್ಲಿ ಈರ್ಯಾ ಸಮಿತಿ ಪಾಲನೆಯು ಸೂಕ್ಷ್ಮ ಕಲ್ಪನೆಯೇ ಇದ್ದು ವಾಕ್‌ಗುಪ್ತಿ ನಿರ್ಬಂಧತೆ ಇದೆ. ಅವರು ಬಾಯಿ ಮೂಗುಗಳಿಗೆ ಬಟ್ಟೆಯ ಮುಸುಕುಗಳನ್ನು ಧರಿಸುತ್ತಾರೆ.

6 ಪರ್ಯೂಷಣ ಅಥವಾ ಚಾತುರ್ವಾಸ ಸಮಯದಲ್ಲಿ, ಅಂದರೆ, ಮಳೆಗಾಲದಲ್ಲಿ ಸನ್ಯಾಸಿನಿಯರು ಒಂದೇ ಸ್ಥಳದಲ್ಲಿ ನೆಲಸಬೇಕು. ಈ ಕಾಲದಲ್ಲಿ, ಹಾಲು, ಬೆಣ್ಣೆ, ಮಜ್ಜಿಗೆ, ಎಣ್ಣೆ, ಸಕ್ಕರೆ ಇಂತಹ ಆಹಾರ ವನ್ನು ಸ್ವೀಕರಿಸುವಂತಿಲ್ಲ.[32]

7 ಚಾತುರ್ವಾಸ ಕಾಲದಲ್ಲಿ ಆರ್ಯಿಕೆಯರು ಒಮ್ಮೆ ಮಾತ್ರ ಆಹಾರ ಸ್ವೀಕರಿಸಬೇಕು.[33]

8 ಆರ್ಯಿಕೆಯರು ಆಹಾರ, ಚಲನೆ, ವಾಕ್, ಈ ನಿರ್ಬಂಧತೆಯ ಕಠಿಣ ನಿಯಮವನ್ನು ಪರಿತ್ಯಾಗದ ಹಿನ್ನೆಲೆಯಲ್ಲಿ ಪಾಲಿಸುತ್ತಾ, ತಪಸ್ಸನ್ನಾ ಚರಿಸುತ್ತಾ, ಪರಿಮಿತ ದೇಶೀವ್ರತ. ಇವುಗಳ ನಿಯಮವನ್ನು ಕಠೋರ ವಾಗಿ ಪಾಲಿಸಬೇಕು.

ಆಚಾರಾಂಗ ಸೂತ್ರ. ಕಲ್ಪ ಸೂತ್ರದ ವಿಸ್ತಾರ, ಆಹಾರ, ದೇಶೀವ್ರತ ನಿಯಮಾವಳಿಗಳು ನಾಗರೀಕತೆಯ ಸೌಕರ್ಯಗಳು ಬೆಳೆದಂತೆ ಮಾರ್ಪಾಡು ಹೊಂದಿದ್ದರೂ, ಪರಿತ್ಯಾಗದ ನಡಾವಳಿಕೆಯ ಚೌಕಟ್ಟು. ಬಲವಾಗಿಯೇ ಉಳಿದಿದೆ.

ಆರ್ಯಿಕಾ ಸಂಘದ ಸ್ವರೂಪ :

ಮುನಿ ಸಂಘದ ಆಚಾರ್ಯ, ಉಪಾಧ್ಯಾಯ ಮತ್ತು ಆರ್ಯಿಕಾ ಸಂಘದ ಪ್ರವರ್ತಿನಿ ಇವರುಗಳು ಸನ್ಯಾಸಿನಿಯರ ಸಂಘ, ಪಾಲನೆ, ರಕ್ಷಣೆ ಮಾಡುವ ಜವಾಬ್ದಾರಿ ಹೊಂದಿದ್ದರು. ಉಪಾಧ್ಯಾಯರು ಸನ್ಯಾಸಿನಿಯರ ಶಿಕ್ಷಣ ವ್ಯವಸ್ಥೆಯ ಬಗ್ಗೆ ಹಾಗೂ ಶಾಸ್ತ್ರ ಅಧ್ಯಯನದ ಅನುಷ್ಠಾನವನ್ನು ಪರಿಹರಿಸುವ ಜವಾಬ್ದಾರಿ ಹೊಂದಿದ್ದರು.[34]

ಗಣಿನಿ : ಬೃಹತ್ ಕಲ್ಪಭಾಷ್ಯದಲ್ಲಿ ಗಣಿನಿ ಪ್ರವರ್ತಿನಿಗಿಂತಲೂ ಉನ್ನತ ಪದವಿ ಉಳ್ಳವರೆಂದು ಹೇಳಿದೆ. ಮುನಿ ಸಂಘಕ್ಕೆ ಆಚಾರ್ಯರು ಹೇಗೋ ಹಾಗೆಯೇ ಆರ್ಯಿಕಾ ಸಂಘಕ್ಕೆ ಗಣಿನಿಯೂ ಉನ್ನತ ಅಧಿಕಾರಿ. ಸನ್ಯಾಸಿ ಸಂಘದ ಆಡಳಿತ ಮತ್ತು ಆಧ್ಯಾತ್ಮಿಕ ಸಾಧನೆಯ ಜವಾಬ್ದಾರಿಯುತ ಕಾರ್ಯವನ್ನು ನಿರ್ವಹಿಸಿ ನಿರ್ದೇಶಿಸುವ, ಆಕಸ್ಮಿಕವಾಗಿ ನಡೆಯುವ ಘರ್ಷಣೆಯನ್ನು ಪರಿಹರಿಸುವಂತೆ ಪ್ರವರ್ತಿನಿಗೆ ಆಜ್ಞೆ ನೀಡುವ ಅಧಿಕಾರ ಗಣನಿಗಿತ್ತು.

ಪ್ರವರ್ತಿ : ಚೇದಿ ಸೂತ್ರದಲ್ಲಿ ಪ್ರವರ್ತಿನಿಯು ಸನ್ಯಾಸಿ ಸಂಘದ ಶ್ರೇಷ್ಠ ಆರ್ಯಿಕೆ ಎಂಬ ವಿವರಣೆ ಇದೆ. ಮುನಿ ಸಂಘದ ಆಚಾರ್ಯರಿಗಿರುವ ಅಧಿಕಾರವನ್ನು ಪ್ರವರ್ತಿನಿ ಪಡೆದಿದ್ದರು. ತನ್ನ ಅವಸಾನದ ನಂತರ ಉತ್ತರಾಧಿಕಾರಿಯನ್ನು ನೇಮಿಸುವ ಅಧಿಕಾರ ಪ್ರವರ್ತಿನಿಗಿದೆ. ಯಾವುದೇ ಸಂದರ್ಭದಲ್ಲಿಯೂ ಪ್ರವರ್ತಿನಿ ಇಬ್ಬರು ಮೂವರು ಸನ್ಯಾಸಿನಿಯರ ಒಡಗೂಡಿಯೇ ಇರಬೇಕಿತ್ತು.[35]

ಗುಣವಚ್ಛನಿ : ಅಭಿನಿಕಾ, ಥೇರಿ ಅಥವಾ ಸ್ಥಾವಿರ ಚಿಕ್ಷುಣ. ಕ್ಷುಲ್ಲಿಕಾ ಇವರುಗಳು, ಸಂಘದಲ್ಲಿ ನಿಯಮಿತ ಜ್ಯೇಷ್ಠ ಸ್ಥಾನವನ್ನು ಪಡೆದಿದ್ದರು. ಥೇರಿ ಎಂಬ ಪದಕ್ಕೆ ಹಿರಿಯ ಅಥವಾ ವೃದ್ಧ ಎನ್ನುವ ಅರ್ಥ ಇರುವುದರಿಂದ. ಅವರು ಸಂಘದ ವೃದ್ಧ ವಯೋವೃದ್ಧರಾಗಿದ್ದರು.[36]

ಸನ್ಯಾಸಿ ಸಂಘ ಪ್ರವೇಶದ ನಿಯಮ :

ಎಂಟು ವರ್ಷಕ್ಕಿಂತ ಸಣ್ಣ ವಯಸ್ಸಿನವರನ್ನು ಸಂಘಕ್ಕೆ ಸೇರಿಸುವಂತೆ ಇರಲಿಲ್ಲ. ಹೊಸದಾಗಿ ಸಂಘ ಪ್ರವೇಶಿಸುವ ಸನ್ಯಾಸಿನಿಯ ಬಗ್ಗೆ ಆಚಾರ್ಯರು ಸನ್ಯಾಸಿನೀ ಸಂಘದ ಹಿರಿಯ ಸನ್ಯಾಸಿನಿ, ಥೇರಿಯ ಅಭಿಪ್ರಾಯ ಪಡೆಯುತ್ತಿದ್ದರು.[37]

ಯಾವ ಸಂದರ್ಭದಲ್ಲಿಯೇ ಆಗಲಿ ಸನ್ಯಾಸಿನಿಯರು ಒಂಟಿಯಾಗಿ ಇರುವ ಅನುಮತಿಯೇ ಇರಲಿಲ್ಲ. ಇದು ಸಂಘ ನಿಯಮ ಉಲ್ಲಂಘನೆ ಆದಂತೆ.

ಸಂಕ್ಷಿಪ್ತವಾಗಿ ಹೇಳುವುದಾದರೆ,

"ಜೇ—ಭಿಕ್ಷುಂ ಬಿಕ್ಷುಣೀವಾ
ಅಥವಾ
ನಿಗ್ರಂಥೋಃ ನಿಗ್ರಂಥೀವಾ"

ಎಂಬ ಈ ಹೇಳಿಕೆ, ಬಿಕ್ಷು, ಬಿಕ್ಷುಣಗಳಿಗೆ ವಿಭಿನ್ನವಾದ ಆಚಾರವೇನೂ ಇರಲಿಲ್ಲ ಎಂಬುದನ್ನು ಸ್ಪಷ್ಟೀಕರಿಸುತ್ತದೆ.[38]

ದಿಗಂಬರ ಸಂಪ್ರದಾಯದಲ್ಲಿ ಸನ್ಯಾಸಿನಿಯರು:

ದಿಗಂಬರ ಸಂಪ್ರದಾಯದಲ್ಲಿ ಸನ್ಯಾಸಿನಿಯರ ವ್ರತ ನಿಯಮಗಳು ಶ್ವೇತಾಂಬರ ಪರಂಪರೆಗಿಂತ ಹೆಚ್ಚೇನೂ ವ್ಯತ್ಯಾಸವಿಲ್ಲದಿದ್ದರೂ. ವ್ರತ ನಿಯಮ ಪಾಲನೆ ಇನ್ನೂ ಹೆಚ್ಚು ಕಠಿಣವಾಗಿಯೇ ಇವೆ. ಆದಾಗ್ಯೂ ಸನ್ಯಾಸಿನಿಯರಿಗೆ ಮೋಕ್ಷದ ದಾರಿ ಸುಲಭವೇನಲ್ಲ, ಪರಿತ್ಯಾಗ, ಸಮ್ಯಕ್ ದರ್ಶನ, ಜ್ಞಾನ ಚಾರಿತ್ರದ ಹಿನ್ನೆಲೆಯಲ್ಲಿ ಮಾಡುವ ಉಗ್ರ ತಪಸ್ಸು, ಸ್ತ್ರೀಭವದಿಂದ ವಿಮುಕ್ತಿ ಪಡೆದು ಪುರುಷ ಭವದಲ್ಲಿ ಹುಟ್ಟುವುದಕ್ಕೂ ಹಾಗೂ ಸ್ವರ್ಗದಲ್ಲಿ ಇಂದ್ರ ದೇವೇಂದ್ರನಾಗಿ ಹುಟ್ಟುವುದಕ್ಕೆ ಮಾತ್ರ ದಾರಿ.

ದಿಗಂಬರ ಸಂಪ್ರದಾಯದ ಮುನಿಗಳ ಔತ್ಸರ್ಗಿಕ ಕಠಿಣ ನಿಯಮಗಳು ಸನ್ಯಾಸಿನಿಯರಿಗೆ ಅನ್ವಯಿಸುವುದಿಲ್ಲವಾದರೂ ಅಚೇಲತ್ವ. ಅಂದರೆ ಕೇಶಲೋಚನ ಪಿಂಛ, ವಸ್ತ್ರ ಇಂತಹ ಅಲ್ಪ ಪ್ರಮಾಣದ ಪರೀಷಹ ನಿಯಮವನ್ನು ಶ್ವೇತಾಂಬರ ಸಂಪ್ರದಾಯಕ್ಕಿಂತಲೂ ಇನ್ನೂ ಕಠಿಣವಾಗಿ ಅನುಸರಿಸುತ್ತಾರೆ.

ಸ್ತ್ರೀಯರ ಯೋನಿ ಸ್ಥಾನದಲ್ಲಿ ಪ್ರಸವಾದಿಗಳಿಂದ ನಿರಂತರ ಅಶುದ್ಧಮಯವೂ ತಿಂಗಳಿಗೆ ಒಂದಾವರ್ತಿನಿಂದ ನೀಯವೂ, ಹೇಸಿಗೆಕರವೂ ಆದ ರಜೋ ಧರ್ಮವು ಆಗುತ್ತಲಿರುವುದು. ಈ ಶರೀರದ ಸ್ಥಾನಗಳಾದ, ಯೋನಿ, ಕಕ್ಷ, ಸ್ತನ ಮೊದಲಾದ ಸ್ಥಾನಗಳಲ್ಲಿ ಅತಿ ಸೂಕ್ಷ್ಮವಾದ ಅಪರ್ಯಾಪ್ತಕ ಜೀವಿಗಳು ಉತ್ಪತ್ತಿಯಾಗುತ್ತವೆ. ಜೊತೆಗೆ, ಸ್ತ್ರೀಯರು ಸ್ವಭಾವದಿಂದಲೇ ಕುತ್ಸಿತ ಸ್ವಭಾವ ಉಳ್ಳವರು ಅತೀನಿಂದನೀಯ ವಾದ ಲಿಂಗಧಾರಕರಾಗಿರುವುದರಿಂದ ಮಹಾವ್ರತವು ಉಂಟಾಗಲಾರದು, ಆ ಕಾರಣ ಮೋಕ್ಷವು ಸಿದ್ಧಿಸದು. ಸ್ತ್ರೀಯರಿಗೆ ಚಕ್ರವರ್ತಿ, ನಾರಾಯಣ, ಬಲಬದ್ರ, ಮಂಡಲೇಶ್ವರ ಮೊದಲಾದ ಸ್ಥಾನವೂ ಹೇಗೆ ಲಭ್ಯವಾಗಿಲ್ಲವೋ, ಹಾಗೆಯೇ ಶ್ರುತ ಜ್ಞಾನವೂ ಮನಃ ಪರ್ಯಾಯ ಜ್ಞಾನವೂ ಅಸಾಧ್ಯ ಮತ್ತು ಗಣಧರ ಸ್ಥಾನವೂ ಆಚಾರ್ಯ, ಉಪಾಧ್ಯಾಯ ಮೊದಲಾದ ಪವಿತ್ರ ಆತ್ಮಗಳ ಸ್ಥಾನವೇ ಸಿಕ್ಕದಿರುವಾಗ

ಸ್ತ್ರೀಭವದಲ್ಲಿ ತ್ರೈಲೋಕ್ಯ ಪೂಜನೀಯವಾದ ಸರ್ವಜ್ಞತ್ವದ ಅಸ್ತಿತ್ವವನ್ನು ದಿಗಂಬರ ಪರಂಪರೆ ಒಪ್ಪುವುದಿಲ್ಲ. ಸತ್ಕುಲ ಪ್ರಸೂತನೂ, ಕುಶಲನೂ ಸಂಯಮಿಯೂ ಪರಿಗ್ರಹ ರಹಿತನೂ ಮತ್ತು ಜಿತೇಂದ್ರಿಯನೂ ಆದ (ಮಾನವನಿಗೆ) ಪುರುಷನಿಗೆ, ಮಾತ್ರ ಮುಕ್ತಿ ಸಾಧ್ಯ.[39]

ಶಾಸನಗಳಲ್ಲಿ ಸನ್ಯಾಸಿನಿಯರ ಪರಿತ್ಯಾಗದ ಚಿತ್ರಣ :

ಕರ್ನಾಟಕದಲ್ಲಿ ಸನ್ಯಾಸಿನಿಯರ ಸಂಘ, ಗಚ್ಚದ ಉಲ್ಲೇಖಗಳು ಶಾಸನಗಳಲ್ಲಿ ದೊರಕುತ್ತವೆ. ಸನ್ಯಾಸಿನಿಯರ ಬಗ್ಗೆ ಉಲ್ಲೇಖವಿರುವ ಶಾಸನಗಳೂ ಹೆಚ್ಚಾಗಿ ಅವರ ತಪಸ್ಸು, ಸನ್ಯಾಸನ, ಸಲ್ಲೇಖನ ಮರಣದ ಬಗ್ಗೆಯೇ ಮಾಹಿತಿಗಳನ್ನು ನೀಡುತ್ತವೆ. ಬಸದಿಗಳಿಗಾಗಿ ದಾನ ಸ್ವೀಕರಿಸಿದ ಉಲ್ಲೇಖನವೂ ಇರುವುದಾದರೂ, ಅಂತಹ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿ ಏನೂ ಇಲ್ಲ.

ಧರ್ಮ ಮುಖೇನ ಮರಣ ಹೊಂದಿದ ಅಂದರೆ, ಸಲ್ಲೇಖನ ವ್ರತ ವಿಧಿಪೂರ್ವಕ ವಾಗಿ ಸನ್ಯಾಸನ, ಸಮಾಧಿ, ಪ್ರತ್ಯಾಖ್ಯಾನ, ಆರಾಧನಾ ಮರಣ ಹೊಂದಿದ ಕಂತಿಯರ ಉಲ್ಲೇಖಗಳು ಕರ್ನಾಟಕದಲ್ಲಿ ಕ್ರಿ.ಶ. 7ನೇ ಶತಮಾನದಿಂದಲೂ ಕಂಡು ಬರುತ್ತವೆ. ಶ್ರವಣಬೆಳಗೊಳ, ಹುಂಚ, ಕಾರ್ಕಳ, ಮೂಡಬಿದ್ರಿ, ಸೊರಬ, ಹನಸೋಗೆ ಮುಂತಾದ ಸ್ಥಳಗಳಲ್ಲಿ ನಿಷಧಿ ಶಾಸನಗಳು ಗುಂಪು ಗುಂಪಾಗಿಯೇ ಇವೆ.

ಸಮಾಧಿ ಮರಣ ಬಹುಜನ ಜೈನ ಸನ್ಯಾಸಿನಿಯರು ಹಾರೈಸುತ್ತಿದ್ದ ಸಲ್ಲೇಖನ ವ್ರತವಾಗಿದ್ದಿತು. ಸಲ್ಲೇಖನ, ಈ ಶಬ್ದವು 'ಸಮ್+ಲಹ್' ಎಂಬ ಧಾತುಗಳಿಂದ ಬಂದಿದೆ. ಅಂದರೆ, ಅಂತರಿಕ ಕಷಾಯಗಳನ್ನು ಗೆಲ್ಲುವುದು ಎಂದರ್ಥ. ಕ್ಷಾಮ ಕಾಲದಲ್ಲಿ, ಮುಪ್ಪಿನಲ್ಲಿ ವಾಸಿ ಆಗದ ರೋಗ ಬಂದಾಗ, ಅವುಗಳಿಗೆ ಇನ್ನು ಪರಿಹಾರ ವಿಲ್ಲವೆಂದು ಖಚಿತವಾದಾಗ ಅಥವಾ ಮತ್ಯಾವುದೊ ನಿಮಿತ್ತದಿಂದ ಧಾರ್ಮಿಕ ವಿಧಿಗಳಿಗನುಸಾರವಾಗಿ ದೇಹತ್ಯಾಗ ಮಾಡುವುದೇ ಸಲ್ಲೇಖನ ಅಥವಾ ಸಮಾಧಿ ಮರಣ ಎನ್ನುತ್ತಾರೆ.[41]

ನಿಷ್ಠಾವಂತ ಶ್ರಾವಕಿಯೂ ಕೂಡ ತನ್ನ ಕೊನೆಯ ದಿನಗಳಲ್ಲಿ ಸನ್ಯಾಸನ ವ್ರತ ಧಾರಿಯಾಗಿ ನಿರ್ಗ್ರಂಥಿಕಳಾಗಿ ಯಾವ ಪರಿಗ್ರಹ ಮತ್ತು ನೋವು ಇಲ್ಲದೆ ದೇಹತ್ಯಾಗ ಮಾಡಬೇಕು. ದ್ವಾದಶಾನು ಪ್ರೇಕ್ಷೆಯನ್ನು ಭಾವಿಸುತ್ತಾ ನಾನು ಒಂಟೀ, ನಾನು ಯಾರಿಗೂ ಸೇರಿದವಳಲ್ಲ, ಯಾರೂ ನನ್ನವರಲ್ಲ ಎಂಬ ಚಿಂತನೆಯನ್ನು ದೃಢೀಕರಿಸಿ ಕೊಂಡು ಏಕಾಗ್ರತೆಯಿಂದ ಚಿಂತನೆ ಮಾಡಬೇಕು ಎಂದು ಶ್ರಾವಕಾಚಾರ ಗ್ರಂಥಗಳು ಅನುಮೋದಿಸುತ್ತವೆ. ಸನ್ಯಾಸನ ಎಂದರೆ ಎಲ್ಲಾ ಪರಿಗ್ರಹವನ್ನೂ ತೊರೆಯುವುದು

ಎಂದರ್ಥ. ಸನ್ಯಾಸನ ನಾಲ್ಕು ದೀಕ್ಷಾವ್ರತಗಳಲ್ಲಿ ಒಂದು (ಪ್ರೋಸದ, ಅತಿಥಿ ಸಂವಿಭಾಗ ಮತ್ತು ಸಾಮಾಯಿಕ) ವಡ್ಡಾರಾಧನೆಯಲ್ಲಿ ಶಿವಕೋಟಿ ಆಚಾರ್ಯರು ಸನ್ಯಾಸನವು ಅನುಸ್ಥಾನ ಕ್ರಿಯೆ ಎಂದು ಹೇಳುತ್ತಾರೆ. ಸನ್ಯಾಸನ ವಿಧಿಯಲ್ಲಿ ಸಲ್ಲೇಖನ ವ್ರತಧಾರಣೆ ಮಾಡಿದವರು ಧರ್ಮ ಧ್ಯಾನ ಮತ್ತು ಶುಕ್ಲ ಧ್ಯಾನದಲ್ಲಿ ನಿರತರಾಗಿರುತ್ತಾರೆ. ರತ್ನತ್ರಯ ಆರಾಧಕರಾಗಿರುತ್ತಾರೆ. ಸನ್ಯಾಸನಾ ವಿಧಿ ಮರಣ ವನ್ನಪ್ಪುವವರು. 'ಏಕತ್ವ' ಚಿಂತಕರೂ ಆಗಿರುತ್ತಾರೆ.

ಧವಲ ಹಸ್ತಪ್ರತಿಯಲ್ಲಿ ರವಿದೇವಿಯಕ್ಕನ ಬಗ್ಗೆ ಶ್ರೀ ಮಲಧಾರಿ ದೇವರ ಶಿಷ್ಯರು ಸಿದ್ಧಾಂತ ವಿಧ್ಯಾನಿಧಿಯು ಆದ ಶ್ರೀ ಶುಭಚಂದ್ರ ದೇವ ಮುನಿಪರಿಗೆ ಸಮಸ್ತ ಗುಣಗಣಾಲಂಕೃತ ಸತ್ಯಶೌಚಾಚಾರ ಚಾರು ಚರಿತ್ರ ವಿನಯ ಸಂಪನ್ನರೂ ವಿಭುಧ ಕರುಗಳಿಗೆ ಪ್ರಸನ್ನರೂ, ಆಹಾರಾಭಯ ಬೈಷಜ್ಯ ಶಾಸ್ತ್ರ ಧಾನ ವಿನೋದೆಯರೂ, ಸಮ್ಯಕ್ತ್ವ ಚೂಡಾಮಣಿಯರೂ, ಮಂಡಲಿ ನಾಡಿನ ಭುಜಬಲ ಗಂಗ ಪೆರ್ಮಾಡಿ ದೇವನ ಅತ್ತೆಯರೂ ಆದ ರವಿದೇವಿಯಕ್ಕನವರು ಶ್ರುತ ಪಂಚಮಿಯ ನೋಂಪಿ ಯನ್ನು ಮಾಡಿ ತಮ್ಮ ಗುರುಗಳಾದ ಶ್ರೀ ಶುಭಚಂದ್ರ ಸಿದ್ಧಾಂತ ದೇವರಿಗೆ ಶೃತ ಪೂಜೆಯನ್ನು ಮಾಡಿ ಬರೆಸಿಕೊಟ್ಟ ಧವಲ ಪುಸ್ತಕ ಎಂಬ ವಿವರಣೆ ಇದೆ. ಅಂದರೆ, ಕ್ರಿ.ಶ. 1120ಕ್ಕೂ ಮುಂಚಿತವಾಗಿ ಧವಲ ಗ್ರಂಥದ ಪ್ರತಿಗಳನ್ನು ರವಿದೇವಿಯಕ್ಕನು ಮಾಡಿಸಿ, ಅಮೂಲ್ಯ ಶಾಸ್ತ್ರ ಗ್ರಂಥವನ್ನು ಉಳಿಸಿರಬೇಕು.[42]

ಧವಲಾ ಪ್ರತಿಗಳನ್ನು ಮಾಡಿಸಿ ಧಾನ ಮಾಡಿದ ದೇವಿಯಕ್ಕನ ಬಗ್ಗೆ ಶ್ರವಣ ಬೆಳಗೊಳದ ಶಾಸನವೊಂದರಲ್ಲಿ ವಿವರಣೆ ಇದೆ. ಮೂಲ ಸಂಘ ದೇಶೀಗಣ ಪುಸ್ತಕ ಗಚ್ಛದ ಶುಭಚಂದ್ರ ದೇವರ ಶಿಷ್ಯರು ಮತ್ತು ಶ್ರೇಷ್ಠರಾಜ ಚಾಮುಂಡನ ಪತ್ನಿ ಮತ್ತು ಸುಪ್ರಸಿದ್ಧ ಸಮ್ಯಕ್ತ್ವ ಚೂಡಾಮಣಿ ಜೈನ ಧರ್ಮ ಸಂರಕ್ಷಕ, ವಿಷ್ಣುವರ್ಧನನ ಮಹಾ ದಂಡನಾಯಕನ ಗಂಗರಾಜನ ಪತ್ನಿ ಲಕ್ಕಲೆ, ಅಥವಾ ಲಕ್ಷ್ಮೀದೇವಿಯ ಸಹೋದರಿ ರವಿದೇವಿಯಕ್ಕ ಶಾಸ್ತ್ರಾಗಮ ಬರೆಸಿ ದಾನ ಮಾಡಿದಳು ಎಂದೂ ಹಾಗೂ ಸನ್ಯಾಸನ ವಿಧಿಯಿಂದ ಮುಡಿಸಿದಳು, ಎಂದಿದೆ. ಅವಳ ನೆಚ್ಚಿನ ಸೋದರಿ, ಶಾಸ್ತ್ರ ಗ್ರಂಥ ಸಂರಕ್ಷಕಿಯಹಾದ ದೇವಿಯಕ್ಕನ ನಿಶಧಿಯನ್ನು ಲಕ್ಷ್ಮೀದೇವಿ ನಿರ್ಮಿಸಿದಳು.[43]

ಧರ್ಮ ಪ್ರಭಾವನೆ ಕಾರ್ಯದಲ್ಲಿ ಸದಾ ಕಾಲವೂ ತೊಡಗಿದ್ದ ಲಕ್ಷ್ಮೀದೇವಿಯ ಶಾಸನ ಅಧ್ಯಯನಕಾರರಿಗೆ ಚಿರಪರಿಚಿತ. ಶ್ರೀ ಜೈನ ಧರ್ಮಾಮೃತಾಂ ಬುಧಿ ಪ್ರವರ್ಧನ ಸುಧಾಕರ ಗಂಗರಾಜನ ಧರ್ಮಪತ್ನಿ ಲಕ್ಷ್ಮೀಮತಿ ದಂಡ ನಾಯಕಿಯು ಶಾಸ್ತ್ರ ಧಾನ ವಿಧಾನವಂ ಮಾಡಿ ಸನ್ಯಾಸನಂ ಗೆಯ್ದು ಸಮಾಧಿವೆಸಗಿ ಮಡಿದಳು. ಇವಳಿಗೆ ದೇವಲೋಕ ಪ್ರಾಪ್ತವಾಯಿತು. ದಂಡನಾಯಕಿಯ ಪರೋಕ್ಷ ವಿನಯಕ್ಕಾಗಿ ಗಂಗರಾಜ ನಿಶಧಿಯನ್ನು ನಿರ್ಮಿಸಿ ಮಹಾಧಾನ ಪೂಜೆ ಕೈಗೊಂಡ.[44]

ಗಂಗರಾಜನ ಗುರು ಶುಭಚಂದ್ರ ಸಿದ್ಧಾಂತ ದೇವರ ಸಮಕಾಲೀನಳಾದ ದಿವಾಕರ ನಂದಿಯು ಶಿಷ್ಯೆ, ಶ್ರೀಮತೀಗ್ರಂತಿ ಸನ್ಯಾಸನ ವಿಧಿ ಪ್ರಕಾರ ದೇಹತ್ಯಾಗ ಮಾಡಿದಳು. ಅವಳಿಗೆ ದೇವಲೋಕ ಪ್ರಾಪ್ತವಾಯಿತು. ಶ್ರೀಮತಿ ಗ್ರಂತಿಯ ಶಿಷ್ಯ ಮಂಕಬ್ಬೆ ಗ್ರಂತಿ ನಿಷಿಧಿ ನಿರ್ಮಿಸಿದಳು.[45] ಶಾಸನದಲ್ಲಿ ಇವಳು ಸಮಗ್ರ ತದೋನಿಧಿಯಹಾಗಿ ಧಾನ ಚಿಂತಾಮಣಿಯಹಾಗಿ ಸದ್ಗುಣ ಗುಣಾಗ್ರಣಿಯಾಗಿ ವಿನಯ ಚಂದ್ರಿಕೆಯಾಗಿ ಪರಿಶೋಭಿಸಿರುವಳು.[46]

ವಿಷ್ಣುವರ್ಧನನ ಪಟ್ಟದರಸಿ ಶಾಂತಕಲೆಯ ತಾಯಿ ಮಾಚಿಕಬ್ಬೆ ತನ್ನ ಧರ್ಮ ಗುರು ಪ್ರಭಾಚಂದ್ರ ಸಿದ್ಧಾಂತ ದೇವರು, ವರ್ಧಮಾನ ದೇವರು ರವಿಚಂದ್ರ ದೇವರು, ಸಮಸ್ತ ಭವ್ಯ ಜನರ ಸನ್ನಿಧಿಯೊಳು ಸನ್ಯಾಸನ ವಿಧಿ ಪ್ರಕಾರ 'ಸನ್ಯಾಸನ ಮಂತ್ಯೆ ಗೊಂಡವರ ಪೇಳ್ದ ಸಮಾಧಿಯಂ ಕೇಳುತ್ತ ಮುಡಿಪಿದಳು'. ವೀರ ಸನ್ಯಾಸನ, ಪಂಡಿತ ಮರಣ ಹೊಂದಿದ ಮಾಚಿಕಬ್ಬೆ ಶ್ಲಾಘೇಯಳೂ ಆಗಿದ್ದಾಳೆ.[47]

ಹೊಯ್ಸಳ ದೊರೆ ವೀರ ಬಲ್ಲಾಳನ ಕಾಲಕ್ಕೆ ಸೇರಿದ ಶಿಕಾರಿಪುರದ ಶಾಸನದಲ್ಲಿ ಜಕ್ಕಲೆಯು ದೃಷ್ಟಿನಾಸಿಕಾಗ್ರತೆಯೊಳು ಕಾಯೋತ್ಸರ್ಗದಲ್ಲಿ ನಿಂತು ಏಕಚಿತ್ತಳಾಗಿ ಜಿನೇಂದ್ರ ಪಾದಧ್ವಯಮಂ ಚಿತ್ತಯಿಸಿ ಸನ್ಯಾಸನಾ ವಿಧಿಪೂರಕವಾಗಿ ಮುಡಿಪಿದ ಉಲ್ಲೇಖನವಿದೆ.[48]

ದೇವಿಯಕ್ಕ, ಲಕ್ಷ್ಮೀದೇವಿ, ಮಂಚಿಕಬ್ಬೆ, ಜಕ್ಕಲೆ ಇಂತಹ ಶಿಷ್ಟ ವರ್ಗದ ಸ್ತ್ರೀಯರು ಸನ್ಯಾಸಿನಿಗಳಲ್ಲಿದ್ದಿದ್ದರೂ. ತಮ್ಮ ಅಂತಿಮ ಕಾಲದಲ್ಲಿ ಸಲ್ಲೇಖನಾ ವ್ರತಪಾಲನೆಯನ್ನು ಪರಿತ್ಯಾಗದ ವಿಧಿಯಲ್ಲಿಯೇ ಆಚರಿಸಿರುವುದು ಸ್ಪಷ್ಟವಾಗುತ್ತದೆ.

ನವಿಲೂರು ಸಂಘ ಮಯೂರ ಸಂಘ ಪರ್ಯಾಯ ಪದಗಳಾಗಿರಬೇಕು. ಏಳನೇ ಶತಮಾನದಲ್ಲಿ ಮಯೂರ ಸಂಘದ ಆರ್ಯಿಕೆಯರು ಕಟವಪ್ರದಲ್ಲಿ ಸಲ್ಲೇಖನಾ ವಿಧಿಪೂರ್ವಕವಾಗಿ ಮುಡಿಸಿದ ಉಲ್ಲೇಖ ಅನೇಕ ಶಾಸನಗಳಲ್ಲಿವೆ. ಸಸಿಮತಿಗಂತಿ ಆರಾಧನಾ ವಿಧಿ ಪೂರಕವಾಗಿ ತೀರ್ಥಗಿರಿ ಮೇಲೆ ಸ್ವರ್ಗಕ್ಕೆ ಹೋದಳು.[49]

ನವಿಲೂರು ಸಂಘದ ಅನಂತಮತಿಗಂತಿ, ಪ್ರಭಾವತಿ,[50] ರಾಜಮತಿಗಂತಿ,[51] ಗುಣಮತಿ ಅವ್ವೆ.[52] ಅಮಿತಮತಿಗಂತಿ,[53] ಇತ್ಯಾದಿ ಅರ್ಜಿಕೆಯರು ಏಳನೇ ಶತಮಾನ ದಲ್ಲಿ ಸಮಾಧಿ ಮರಣ ಹೊಂದಿದರು.[54] ಇದೇ ನವಿಲೂರು ಸಂಘದ ಬಾಳಂಬಾಕಂತಿ 10ನೇ ಶತಮಾನದಲ್ಲಿ ಸನ್ಯಾಸನ ವಿಧಿಪೂರಕವಾಗಿ ಮುಡಿಪಿದ ಉಲ್ಲೇಖನ ಕಡೂರು ಶಾಸನದಲ್ಲಿ ದೊರಕುತ್ತದೆ.[55] ಅಂದರೆ, ಏಳನೇ ಶತಮಾನದಿಂದ 10ನೇ ಶತಮಾನದ ವರೆಗೂ ಮಯೂರು ಸಂಘದ ಅಜ್ಜಿಕೆಯರ ಪ್ರಭಾವ ಕರ್ನಾಟಕದಲ್ಲಿ ಪ್ರಬಲವಾಗಿತ್ತು ಎಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಕ್ರಿ. ಶ. ಏಳನೆಯ ಶತಮಾನಕ್ಕೆ ಸೇರಿದ ಶ್ರವಣಬೆಳಗೊಳದ ಶಾಸನಗಳಲ್ಲಿ ಆರಾಧನಾ ವಿಧಿ ಪೂರಕವಾಗಿ ಸಲ್ಲೇಖನ ವ್ರತ ಕೈಗೊಂಡ ಜೈನ ಸನ್ಯಾಸಿನಿಯರ ಬಗ್ಗೆ ಮಾಹಿತಿಗಳಿವೆ.

ಸಮ್ಯಕ್ ದರ್ಶನ. ಜ್ಞಾನ ಚಾರಿತ್ರ ಸ್ವರೂಪಳು, ನಿಷ್ಕಪಟಳೂ, ಉತ್ತಮ ತಪವನ್ನಾಚರಿಸಿದ ಶಶಿಮತಿ ಕಂತಿಯು ತನ್ನ ಅವಸಾನದ ಕಾಲ ಸಮೀಪವಾಗುತ್ತಿರುವುದನ್ನು ಅರಿತು ಆರಾಧನಾ ವಿಧಿಪೂರಕವಾಗಿ ಸಲ್ಲೇಖನ ವ್ರತ ಆಚರಿಸಿ ಅವಸಾನ ಹೊಂದಿದಳು.[56]

ನಾಗಿಯಬ್ಬೆ ಕಂತಿಯು ಆರಾಧನಾ ವಿಧಿಯ ಪ್ರಕಾರ ಸಲ್ಲೇಖನ ವ್ರತದಿಂದ ಮುಡಿಪಿದಳು. ಸಮ್ಯಕ್ ದರ್ಶನ, ಜ್ಞಾನ, ಚಾರಿತ್ರ ಪ್ರವರ್ತನೆಯ ಪ್ರತಿಬಿಂಬದಂತಿದ್ದ ನಂದಿದೇವ ನಾಗಿಯಬ್ಬೆಯ ಗುರು. ನಾಗಿಯಕ್ಕ ಶಾಸ್ತ್ರಜ್ಞಾನ ಪಂಡಿತೆಯೂ, ತಪ ವಿಧಾನ ಅರಿತವಳೂ ಆಗಿದ್ದು ತನ್ನ ಅವಸಾನದ ಕಾಲ ಸಮೀಪವಾಗುತ್ತಿರುವುದನ್ನು ಅರಿತು ದೃಢಚಿತ್ತಳಾಗಿ ಪಂಚ ನಮಸ್ಕಾರವನ್ನು ಪಠಣಮಾಡುತ್ತಾ ಅವಸಾನ ಹೊಂದಿದಳು. ಅವಳ ಶಿಷ್ಯೆ ಕರಿಯಮ್ಮ ನಿಶಧಿಗೆಯನ್ನು ನಿರ್ಮಿಸಿದಳು.[57]

ಚಿತ್ತೂರ ಅದೆಯರೆ ನಾಡಿನ ಮೋನಿ ಗುರವಡಿಗಳ ಶಿಷ್ಯೆ ನಾಗಮತಿ ಗಂತಿ ಮೂರು ತಿಂಗಳು ಉಪವಾಸ ಮಾಡಿ ಮುಡಿಪಿದ ಉಲ್ಲೇಖವಿದೆ. ಅದೆಯರೆ ನಾಡು ಉತ್ತರ ಆರ್ಕಾಟು ಜಿಲ್ಲೆಯಲ್ಲಿ ವೆಲ್ಲೂರಿಗೆ ಸಮೀಪದಲ್ಲಿರುವ ಉದಯಂದಿರಮ್ ಇಲ್ಲಿಯ ಸುತ್ತಲಿನ ಪ್ರದೇಶವನ್ನು ಅಡೆಯರ ರಾಷ್ಟ್ರ ಎಂದು ಗುರುತಿಸಲಾಗಿದೆ. ಅಂದು ಈ ಪ್ರದೇಶ ಜೈನ ಕ್ಷೇತ್ರವಾಗಿದ್ದಿತು ಎಂಬುದು ಇಲ್ಲಿ ದೊರೆಕಿರುವ ತಮಿಳು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಇಲ್ಲಿ ದೊರೆಕಿರುವ ಶಾಸನಗಳಲ್ಲಿ ಅನೇಕ ಜನ ಮುನಿಗಳ ವಿವರಣೆಯಿಂದ ಸ್ಪಷ್ಟವಾಗುತ್ತದೆ.[58] ಅಂದರೆ, ಸುಮಾರು ಏಳನೇ ಶತಮಾನದಲ್ಲಿಯೇ ತಮಿಳು ನಾಡಿನ ಆರ್ಯಿಕೆಯ ಸಂಘ ಸಲ್ಲೇಖನಾ ವಿಧಿ ಪೂರಕವಾಗಿ ಮುಡಿಪಲು ಕಟವಪ್ರಕ್ಕೆ ಬರುತ್ತಿದ್ದರು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

10ನೇ ಶತಮಾನದ ಶಾಸನದಲ್ಲಿ ಕುಮಾರ ನಂದಿ ಭಟ್ಟರಕರ ಶಿಷ್ಯೆ ಸಾಯಬ್ಬೆ ಕಂತಿ ಕಬ್ಬಪ್ಪುಗಿರಿಯಲ್ಲಿ ಸಮಾಧಿ ಮರಣ ಹೊಂದಿದಳು.[58]

11ನೇ ಶತಮಾನದ ಮತ್ತೊಂದು ಶಾಸನದಲ್ಲಿ ಪೊಲ್ಲಬ್ಬೆ ಕಂತಿ ಸಮಾಧಿ ಮರಣ ಹೊಂದಿದ ಬಗ್ಗೆಯೂ ಹಾಗೂ ಅವಳ ಶಿಷ್ಯೆಯಾದ ಸಾಯಬ್ಬೆ, ನಿಷಧಿ ನಿರ್ಮಿಸಿದ ಉಲ್ಲೇಖನವಿದೆ.[59]

ಹೆಗ್ಗೆರೆಯ ಮತ್ತಿಕಾಪುರದ ಜಕ್ಕವ್ವೆ ಕಂತಿಯ ಪತಿ ಸುಕವಿ ದೇವೆಂದ್ರ ಪಂಡಿತ, ಜಕ್ಕವ್ವೆ ಸಲ್ಲೇಖನಾ ವಿಧಿಯಿಂದ ಮುಡಿಪಿದಾಗ ನಿಶಧಿಯನ್ನು ಮತ್ತಾವರದ ಬೂಚಿ ಹೆಗ್ಗಡೆ, ನರಸಹೆಗ್ಗಡೆ, ಮಾಘುವ ಮಾಬುಲಯ್ಯನವರು ನಿರ್ಮಿಸಿದರು.[6]

ಕಡೂರಿನ ಅರಕೆರೆಯ ಕರ್ಮ ಭೋಧಿ ಗುರುವರ ಶಿಷ್ಯೆ ಬಕ್ಕೆನೂರಿನ ಪರಮ ಕಂತಿ ;[61] ಅರಸೀಕೆರೆಯ ಸೋಮಶೆಟ್ಟಿ ಹಳ್ಳಿಯ ನೆಲ್ಲೂರು ದೇವಸೇನ ಸಿದ್ಧಾಂತ, ಭಟ್ಟಾರಕರ ಶಿಷ್ಯೆ ವೆಸುರಿಕಂತಿ ಇವರುಗಳು ಸಮಾಧಿ ಮರಣ ಹೊಂದಿದರು.[62]

ಕ್ರಿ. ಶ. 1206ರ ಶ್ರವಣಬೆಳಗೊಳದ ಅರ್ಧ ಅಳಿಸಿರುವ ಶಾಸನದಲ್ಲಿ — ಕಂತಿಯರ ಪ್ರಭಾವಕ್ಕೊಳಗಾಗಿ ಶ್ರಾವಕ ಶ್ರಾವಕಿಯರು, ಗೊಮ್ಮಟ ದೇವರ ಅಷ್ಟವಿದಾರ್ಚನೆಗೆ ದತ್ತಿ ನೀಡಿದ ವಿವರಣೆ ಇದೆ.[63]

ಅಮೃತ ಗಂತಿ ಸಮಾಧಿ ಮರಣ ಹೊಂದಿದಾಗ ಅವರ ಶಿಷ್ಯೆ, ಪದ್ಮನಂದಿ ಭಟ್ಟರಕರು ನಿಷಧಿ ನಿರ್ಮಿಸಿದ ಉಲ್ಲೇಖವಿದೆ.[64]

ಪ್ರಭಾಚಂದ್ರರ ಶಿಷ್ಯೆಯರಾದ ರುಕ್ಕವ್ವೆ ಮತ್ತು ಜಕ್ಕವ್ವೆ ಕಂತಿಯರು ಸ್ವಾಧ್ಯಾಯ ಧ್ಯಾನ ಧಾರಣ, ಮೌನಾನುಷ್ಠಾನ, ಜಪ, ಸಮಾಧಿ ಮರಣ ಹೊಂದಿದಾಗ ಪ್ರಭಾಚಂದ್ರ ಶಿಷ್ಯರು ನಿಷಧಿ ಮಾಡಿಸಿದ ಉಲ್ಲೇಖನ ನಾಗಮಂಗಲ ಶಾಸನಗಳಲ್ಲಿ ಕಂಡುಬರುತ್ತದೆ.[65]

ಹುಣಸೂರು ತಾಲ್ಲೋಕು ಬೊಮ್ಮಲಾಪುರದಲ್ಲಿ ದೊರಕಿರುವ ಹನ್ನೊಂದನೇ ಶತಮಾನದ ಶಾಸನದಲ್ಲಿ ಮಾಕಬ್ಬೆ ಕಂತಿಯು ಸಮಾಧಿ ಮರಣ ಹೊಂದಿದ ಉಲ್ಲೆಖವಿದೆ.

ಅರಕಲಗೂಡು ಸೋಮವಾರ ಗ್ರಾಮದ ಶಾಸನದಲ್ಲಿ ಸೌರಾಷ್ಟ್ರ ಗಣಕಲ್ ನೆಲೆಯ ರಾಮಚಂದ್ರ ದೇವರ ಶಿಷ್ಯೆ ಅರಸವ್ವೆ ಕನ್ತಿಯು ಸಮಾಧಿ ಮರಣ ಹೊಂದಿದ ಉಲ್ಲೇಖವಿದ್ದು, ಮಾಕವ್ವೆ ಕಂತಿಯ ಮೊಮ್ಮಗ ಮಾಚಿಮಯ್ಯ ಪರೋಕ್ಷ ವಿಷಯಕ್ಕಾಗಿ ನಿಷಿಧಿ ಸರ್ಮಿಸಿದ ಉಲ್ಲೇಖವಿದೆ.[66] ಇದೇ ಸ್ಥಳದ ಮತ್ತೊಂದು ಶಾಸನದಲ್ಲಿ ದೇವಶ್ರೀ ಕಂತಿ ಸಲ್ಲೇಖನಾವಿಧಿಯಿಂದ ಮುಡಿಪಿದಾಗ ಗೋಪಸಂದೀವ್ರತೀಂದ್ರರು ನಿಷಿಧಿ ಶಾಸನವನ್ನು ಕೆತ್ತಿಸಿದ ಉಲ್ಲೇಖನವಿದೆ.[67] ಅರಕಲಗೂಡಿನ ಸೋಮವಾರ ಗ್ರಾಮ ಜೈನ ಕ್ಷೇತ್ರವಾಗಿದ್ದಿತು ಹಾಗೂ ಮುನಿವಾಸವಾಗಿದ್ದು ಇಲ್ಲಿ ಆಚಾರ್ಯರು, ಆರ್ಯಿಕೆಯರು ಧರ್ಮ ಪ್ರಭಾವನೆ ಮಾಡುತ್ತಿದ್ದರು ಎಂಬ ವಿಚಾರ ಇಲ್ಲಿ ದೊರೆತಿರುವ ಅನೇಕ ಜೈನ ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಶಿವಮೊಗ್ಗ ಜಿಲ್ಲೆಯ ಹಿರೇಅವಳಿ ಗೌಡ ಪರಿವಾರದವರ ಧರ್ಮನಿಷ್ಠೆ ನಿಷಧಿ ಶಾಸನಗಳಿಂದ ತಿಳಿದುಬರುತ್ತದೆ. ಹಿರೇಅವಳಿ ಮುನಿ ವಾಸ ಕ್ಷೇತ್ರವಾಗಿದ್ದರಬೇಕು. ಇಲ್ಲಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೈನ ಸ್ಮಾರಕಗಳ ಚಿಹ್ನೆ ಅಳಿಸಿ ಹೋಗಿದ್ದರೂ, ನಿಷಿಧಿಗಳು ಈ ಪ್ರದೇಶದಲ್ಲಿ ಜೈನರ ಅಧಿಪತ್ಯವನ್ನು ಸೂಚಿಸುತ್ತವೆ. ಮಾದೇಗೌಡನ

ಮಗಳು ಏಕವುತಿಯಬ್ಬೆ ವೀರಸೇನರ ಧರ್ಮ ಪ್ರಭಾವನೆಯಿಂದ ಪಂಚ ನಮಸ್ಕಾರ ಮಂತ್ರ ಜಪಿಸುತ್ತಾ ಸಮಾಧಿ ಮರಣ ಹೊಂದಿದಳು.[68] ಸಿದ್ಧಾಂತ ಯತೀಶ್ವರರ ಮಾರ್ಗದರ್ಶನದಲ್ಲಿ ಕಾವಿಗೌಡಿ ಸನ್ಯಾಸನ ವಿಧಿ ಪ್ರಕಾರ ಅವಸಾನ ಹೊಂದಿದಳು.[69]

ಲೌಕಿಕ ಜೀವನದ ನಿರಾಸಕ್ತಿ ಯಾವ ಕ್ಷಣವಲ್ಲಾದರೂ ಜೀವನದಲ್ಲಿ ಸಂಭವಿಸಬಹುದು. ಅಂತಹ ಉಲ್ಲೇಖ ಕಡೂರು ಶಾಸನದಲ್ಲಿ ಕಂಡುಬರುತ್ತದೆ. ಪಡಿಯರ ದೋರಪಯ್ಯನ ಪಿರಿಯರಸಿ ಪಾಂಬಬ್ಬೆ, ನಾಣಬ್ಬೆ ಕಂತಿಯರು ಸನ್ಯಾಸನ ಸ್ವೀಕರಿಸಿದ ಪ್ರಸಂಗ ಇದೆ. ರಾಜ ಮೌಲ್ಯದ ವಸ್ತುಗಳು, ಅಕ್ಕರೆಯ ನುಡಿಗಳು. ಹೊಗಳಿಕೆಯ ಮಾತುಗಳು ಇವುಗಳಾವುದನ್ನೂ ಲೆಕ್ಕಿಸದೆ ಪಾಂಬಬ್ಬೆ ತಪೋನಿರತಳಾದಳು.[70]

ಆಚಾರ್ಯರಿಂದಲೇ ದೀಕ್ಷೆ ಪಡೆದ ಸನ್ಯಾಸಿನಿಯರ ಉಲ್ಲೇಖ ಅಧಿಕ ಸಂಖ್ಯೆಯಲ್ಲಿ ಶಾಸನಗಳಲ್ಲಿ ಕಂಡುಬಂದರೂ, ಸನ್ಯಾಸಿನಿಯರಿಂದ ಪುರುಷರು ಶಿಷ್ಯತ್ವ ಸ್ವೀಕರಿಸಿದ ಉಲ್ಲೇಖವೂ ಇದೆ. ವಲಹಾರಿಗಣದ ಅರ್ಹನಂದಿ ಅವರು ಅಯ್ಯಪೋತಿ ಆರ್ಯಿಕೆಯ ಶಿಷ್ಯರಾಗಿದ್ದರು. ಶ್ರವಣಬೆಳಗೊಳದ ಶಾಸನದಲ್ಲಿ ಸೂಚಿಸಿರುವ ಪಟ್ಟಿನೀ ಗುರುವಾಡಿಗಳ ಎಂಬ ಆರ್ಯಿಕೆಗೆ ಉಗ್ರಸೇನ ಗುರುವಾದಿಗಳು ಶಿಷ್ಯರಾಗಿದ್ದರು.[71]

ಕರ್ನಾಟಕದಲ್ಲಿ ಸನ್ಯಾಸಿನಿಯರಿಗಾಗಿ ಪ್ರತ್ಯೇಕ ವಸತಿ ಇದ್ದ ಬಗ್ಗೆ ಮಾಹಿತಿ ದೊರಕುವುದಿಲ್ಲ. ಬಸದಿಗಳೇ ಮುನಿವಾಸಗಳಾಗಿದ್ದವು. ಕೆಲವು ಸಂದರ್ಭಗಳಲ್ಲಿ ಮುನಿಗಳೂ ಆರ್ಯಿಕೆಯರೂ ಒಂದೇ ಬಸದಿಯಲ್ಲಿ ಇರುತ್ತಿದ್ದರು.[72]

ಪ್ರದೇಶಗಳ ಬಸದಿಗಳ ರಕ್ಷಣೆಯನ್ನೂ, ಧರ್ಮ ಪ್ರಭಾವನೆಯನ್ನೂ ಮಾಡುತ್ತಾ, ದಾನ, ದತ್ತಿ ಪಡೆಯುವ, ನೀಡುವ ಕಾರ್ಯದಲ್ಲಿಯೂ ತೊಡಗಿದ್ದುದರ ಉಲ್ಲೇಖ ಶಾಸನಗಳಲ್ಲಿ ಬರುತ್ತದೆ. ಪುಲಿಗೆರೆ, ಶಿರಹಟ್ಟಿ ಶಾಸನದಲ್ಲಿ ಅನೆಸಜ್ಜೆ ಬಸದಿಯ ಅಪ್ಪೋಪ ವಾಸಿ ಕಂತಿಯು ಸಾತಯ್ಯನಿಗೆ ದಯೆಗೈದು ಉಂಬಳಿಯಾಗಿ ಭೂಮಿ ದತ್ತಿ ನೀಡಿದ ಉಲ್ಲೇಖವಿದೆ. ಶ್ರೀಸೌರಾಷ್ಟ್ರಗಣ, ಚಿತ್ರಕೂಟಾನ್ವಯದ ನಂದಿ ಪಂಡಿತರ ಶಿಷ್ಯೆ ಯಲಿಯಬ್ಬೆರ್ಜಿಕೆ ಧಾರವಾಡ ಜಿಲ್ಲೆಯ ಸರತೂರು ಜೈನಕ್ಷೇತ್ರ ರಕ್ಷಣೆಗಾಗಿ ದಾನ ಸ್ವೀಕರಿಸಿದಳು. ಹಾಗೂ ಇದೇ ಪ್ರದೇಶದ ಕಂತಿಯರು ಪಾರ್ಶ್ವನಾಥ ದೇವಾಲಯದ ಸಂರಕ್ಷಣೆ. ನಿತ್ಯ ಪೂಜಾ ವ್ಯವಸ್ಥೆಗಾಗಿ ದತ್ತಿ ಸ್ವೀಕರಿಸಿದ ಉಲ್ಲೇಖವಿದೆ.[75] ಸನ್ಯಾಸಿನಿಯರ ಆಹಾರ ದಾನ ವಸ್ತ್ರ ದಾನಕ್ಕೆ ಶ್ರಾವಕ ಶ್ರಾವಕಿಯರು ಪ್ರತ್ಯೇಕವಾಗಿ ದಾನ, ದತ್ತಿ ನೀಡಿದುದರ ಬಗ್ಗೆ ಹೆಚ್ಚಿನ ಶಾಸನಗಳೇ ದೊರಕಿವೆ.[73]

ಕ್ರಿ.ಶ. 1118ರಲ್ಲಿ ನಡೆದ ಪಂಚಕಲ್ಯಾಣ ಮಹೋತ್ಸವದಲ್ಲಿ ಕಂತಿಯರ ಸಂಘವೇ ಭಾಗವಹಿಸಿತ್ತು–ಕಲಿಯುಗ ಗಣಧರ ಪಂಚಾತಕ ಮುನೀಂದ್ರರುಂ. ಅವರ ಶಿಷ್ಯರು ಗೌರಿಶ್ರೀಕಂತಿಯರಂ, ಸೋಮಶ್ರೀಕಂತಿಯರಂ, ನಶ್ರೀ ಕಂತ್ರಿಯರಂ ದೇವಶ್ರೀ ಕಂತಿಯರಂ ಕನಕ ಶ್ರೀಕಂತಿಯರ ಶಿಷ್ಯೆಯಿಪ್ಪತ್ತು ಎಂಟು ತಂಡ ಶಿಷ್ಯರು–ಗೊಮ್ಮ ಟೇಶ್ವರ ದೇವರ ತೀರ್ಥನಂದ-ಪಂಚ ಕಲ್ಯಾಣ ವೀಕ್ಷಿಸಿದರು.[74]

ತಮಿಳುನಾಡಿನ ಭವ್ಯರು, ಆಚಾರ್ಯರು ಅಬ್ಬೆಯರು ಶ್ರವಣಬೆಳಗೊಳ ದೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಮುನಿ ವೃಂದದವರ ಪ್ರಭಾವನೆಯಿಂದ ಶ್ರಾವಕ ಶ್ರಾವಕಿಯರು ಶ್ರವಣಬೆಳಗೊಳದಲ್ಲಿ ನಡೆಯುತ್ತಿದ್ದ ಉತ್ಸವ ಸಮಾರಂಭ ಗಳಲ್ಲಿ ಭಾಗವಹಿಸುತ್ತಿದ್ದರು. ಧರ್ಮ, ಧಾನ ಕಾರ್ಯಗಳಲ್ಲಿ ನಿರತರಾಗಿದ್ದರು. ತಮಿಳುನಾಡಿನ ತಂಜೂರಿನ ಅಬ್ಬೆಕೆಯರು ಚತುರ್ವಿಂಶಿತೀ ತೀರ್ಥಂಕರ ಬಿಂಬವನ್ನು ಜೈನ ಮಠಕ್ಕೆ ನೀಡಿದ ಬಗ್ಗೆ ಶಾಸನ ಉಲ್ಲೇಖವಿದೆ.[75]

ತಮಿಳು ನಾಡಿನಲ್ಲಿ 9ನೇ ಶತಮಾನದಲ್ಲಿ ಜೈನ ಸನ್ಯಾಸಿನಿಯರ ಪ್ರಭಾವ ಹೆಚ್ಚಾಗಿದ್ದಿತೆಂದೇ ಹೇಳಬಹುದು ಉತ್ತರ ಆರ್ಕಾಟ, 'ವೇದಾಲ್' (Vedal)ನಲ್ಲಿ 900 ಜೈನ ಸನ್ಯಾಸಿನಿಯರನ್ನೊಳಗೊಂಡ ವಸತಿಗೃಹದ ಉಲ್ಲೇಖವಿದೆ. ಈ ಸನ್ಯಾಸಿನಿಯರ ತಂಡದ ಪ್ರವರ್ತಿನಿ ಕನಕವೀರ ಕುರಟ್ಟಿಯಾರ್ ಆಗಿದ್ದು, ಒಮ್ಮೆ ಕನಕವೀರಕುರಟ್ಟಿಯಾರ್ ಮತ್ತು ಆಕೆಯ 500 ಶಿಷ್ಯರಿಗೆ ಹಾಗೂ 400 ಇತರ ಸನ್ಯಾಸಿನಿಯರಿಗೂ ವಾಗ್ವಾದ ವಾದ ಬಗ್ಗೆ ವಿವರಣೆ ಇದ್ದರೂ. ವಾಗ್ವಿವಾದದ ವಿಚಾರದ ಬಗ್ಗೆ ತಿಳಿಯುಬರುವುದಿಲ್ಲ. ವೇದಾಲ್ ಪ್ರದೇಶದ ಜೈನ ಶ್ರಾವಕರು ಕನಕವೀರ ಕುರಟ್ಟಿಯರ್ ಪಂಗಡದ ಸನ್ಯಾಸಿನಿಯರಿಗೆ ಆಹಾರ ದಾನದ ವ್ಯವಸ್ಥೆ ಕೈಗೊಂಡುದರ ಉಲ್ಲೇಖವೂ ದೊರಕುತ್ತದೆ,[75](a)

ಜೈನ ಧರ್ಮ ಪ್ರಭಾವನೆ, ಅವರ ಪಾಂಡಿತ್ಯ ಸ್ವಾಧ್ಯಾಯ, ಇವುಗಳ ಬಗ್ಗೆ ಶಾಸನ ಉಲ್ಲೇಖವಿದ್ದರೂ, ಸನ್ಯಾಸಿನಿಯರ ಗ್ರಂಥ ರಚನೆಯ ಮಾಹಿತಿಗಳು ಲಭ್ಯ ವಾಗುವುದಿಲ್ಲ. ಈ ಬಗ್ಗೆ ಶ್ರೀಮತಿ ಕಮಲ ಹಂಪನಾ ಅವರು ಎರಡು ಉದಾಹರಣೆ ಯನ್ನು ತಮ್ಮ ಸಂಶೋಧನಾ ಲೇಖನ ಒಂದರಲ್ಲಿ ನೀಡಿದ್ದಾರೆ. ಯಾಕಿನಿ ಮಹತ್ತರಾ ಮಹಾವಿದುಷಿಯ ಬಗ್ಗೆ ಉಲ್ಲೇಖಿಸುತ್ತಾ, ಹರಿಭದ್ರಸೂರಿ ಎಂಬ ಬ್ರಾಹ್ಮಣ ಪಂಡಿತನನ್ನು ವಾದದಲ್ಲಿ ಸೋಲಿಸಿ ಅವರನ್ನು ಜೈನ ಧರ್ಮಕ್ಕೆ ಪರಿವರ್ತಿಸಿರುವು ದಾಗಿಯೂ, ಯಾಕಿನಿ ಮಹತ್ತರಾಗೆ ತಮ್ಮ ಕೃತಜ್ಞತೆಯನ್ನು ಸಲ್ಲಿಸುತ್ತಾ, ಹರಿಭದ್ರ ಸೂರಿ ತಮ್ಮನ್ನು ಯಾಕಿನೀ ಸೂನು ಎಂದು ಹೆಮ್ಮೆಯಿದ ಕರೆದುಕೊಂಡಿರುವುದು ವಿಶೇಷವಾಗಿ ಗಮನಿಸಬೇಕಾದ ಅಂಶ ಎಂದೂ. 10ನೇ ಶತಮಾನದ ಆರಂಭದಲ್ಲಿ ಅಂದರೆ, ಕ್ರಿ.ಶ. 905ರಲ್ಲಿ ಸರಸ್ವತೀ ಪ್ರತೀಕ ಸಿದ್ಧಶ್ರೀ ಮಹರ್ಷಿಯು 'ಉಪಮಿತ

ಪ್ರಪಂಚ ಕಥಾ' ಎಂಬ ಗ್ರಂಥ ಕುರಿತು ವ್ಯಾಖ್ಯಾನ ಮಾಡಿದಾಗ ಈ ಅಲಂಕಾರ ಗ್ರಂಥದ ಮೊದಲ ಪ್ರತಿಯನ್ನು ಗುಣಸಾಧ್ವಿ ಎಂಬ ಕಂತಿ ಮಾಡಿದಳು ಎಂಬ ವಿಚಾರ ವನ್ನೂ ಅದೇ ಲೇಖನದಲ್ಲಿ ಸೂಚಿಸಿದ್ದಾರೆ.[76]

ಸ್ವತಂತ್ರ ಸನ್ಯಾಸಿನಿಯರ ಸಂಘಗಳಿದ್ದರೂ ಮುನಿ ಸಂಘದ ಅಧೀನತೆಗೆ ಒಳಪಟ್ಟು ಸನ್ಯಾಸಿನಿಯರ ಕಾರ್ಯಕ್ಷೇತ್ರ ಸಾಹಿತ್ಯ ಪ್ರತಿಭೆಯ ವಿಕಾಸಕ್ಕೆ ಅವಕಾಶ ವಿಲ್ಲದೆ ಕ್ಷಯವಾಗಿದ್ದಿರಬೇಕು, ಅಥವಾ ಹಾಗೆ ಇದ್ದರೂ ಅವುಗಳು ಬೆಳಕಿಗೆ ಬಂದಿರ ದೆಯೂ ಇರಬಹುದು.

ಇತ್ತೀಚಿನ ದಿನಗಳಲ್ಲಿ ಅನೇಕ ಸನ್ಯಾಸಿನಿಯರ ಸ್ವತಂತ್ರ ಕಾರ್ಯ ದಕ್ಷತೆ, ಆಗಮ ಜ್ಞಾನ ಧರ್ಮ ಪ್ರಭಾವನೆ ಕೇಳಿಬರುತ್ತಿದೆ. ಅವರುಗಳಲ್ಲಿ ನನಗೆ ತಿಳಿದ ಮಟ್ಟಿಗೆ ಕ್ಷುಲ್ಲಿಕಾ ರಾಜಮತಿ ಮಾತಾಜಿ ಹಾಗೂ ಆರ್ಯಿಕಾ ಜ್ಞಾನಮತೀ ಮಾತಾಜೀ ಅವರು ಶ್ಲಾಘನೀಯರು. ಕ್ಷುಲ್ಲಿಕಾ ರಾಜಮತಿ ಮಾತಾಜಿಯವರು ಮೈಸೂರು ಸಮೀಪದ ಸಾಲಿಗ್ರಾಮದವರೇ ಆಗಿದ್ದು, ತಮ್ಮ ಕ್ಷೇತ್ರವನ್ನು ಉತ್ತರ ಭಾರತದಲ್ಲಿ ವಿಸ್ತರಿಸಿಕೊಂಡು ಧರ್ಮ ಪ್ರಭವನೆ ಮಾಡಿದ, ಆಗಮಶಾಸ್ತ್ರ ಪಂಡಿತೆಯರು, ಬಹು ಭಾಷಾ ತಜ್ಞರೂ ಆಗಿದ್ದರು, ತುಮಕೂರಿನ ಸಮೀಪ ಮಾಯಸಂದ್ರ ಗ್ರಾಮದಲ್ಲಿ ಅವರ ಮಾರ್ಗದರ್ಶನದಲ್ಲಿ ನಿರ್ಮಿಸಿರುವ ಅಮೃತ ಶಿಲೆಯ ದೇವಸ್ಥಾನ ಸುಂದರ ಜೈನ ಮಂದಿರವಾಗಿದ್ದು, ಉತ್ತರ ದಕ್ಷಿಣ ಜೈನ ಸಂಸ್ಕೃತಿಯ ಸಮನ್ವಯದ ಬಿಂದುವೂ ಆಗಿದೆ. ಹೊಯ್ಸಳರ ಕಾಲದವರೆಗೂ ಜೈನ ಕ್ಷೇತ್ರಗಳಾಗಿದ್ದ ಮಾಯಸಂದ್ರ, ಬೆಳ್ಳೂರು, ಗುಬ್ಬಿ, ಕುಣಿಗಲ್ ಮುಂತಾದ ಪ್ರದೇಶದಲ್ಲಿ ಜೈನ ಧರ್ಮದ ಪ್ರಭಾವನೆ ಇರುವುದರ ಸಂಕೇತವಾಗಿ ಈ ಜಿನ ಮಂದಿರ ನಿರ್ಮಿತವಾಗಿದೆ.

ಆರ್ಯಿಕಾ ಜ್ಞಾನಮತೀ ಮಾತಾಜೀ ಅವರು ಹೆಸರು ರಾಷ್ಟ್ರೀಯ ಮಟ್ಟದಲ್ಲಿ ಜೈನರಿಗೆ ಚಿರಪರಿಚಿತ. ಅವರ ಮಾರ್ಗದರ್ಶನದಲ್ಲಿ ದೆಹಲಿಯ ಸಮೀಪದಲ್ಲಿ ನಿರ್ಮಿ ಸಿರುವ ಜಂಬೂದ್ವೀಪ ಮಂಟಪ, ಆಗಮ ಶಾಸ್ತ್ರಗಳ ವ್ಯಾಖ್ಯಾನದ ವೈಖರಿ, ಧರ್ಮ ನಿಷ್ಠೆ, ಧರ್ಮ ಪ್ರಭಾವನೆ ಮಾಡುತ್ತಿರುವ ಇವರು ಈ ಯುಗದ ಶ್ರೇಷ್ಠ ಅರ್ಯಿಕೆ ಯಾಗಿ ಕೀರ್ತಿ ಪಡೆದಿದ್ದಾರೆ.

ಮೂಲಾರಾಧನೆಯಲ್ಲಿ ಸುಮಾರು 100 ಗಾದೆಗಳು ಸ್ತ್ರೀಭವವನ್ನು ನಿಂದಿಸುವ ಗಾದೆಗಳೇ ಆಗಿವೆ. ಪುರುಷನಿಗೆ ಹೆಂಗಸಿನಂತಹ 'ಅರಿ' ಅಂದರೆ, ಶತ್ರು ಬೇರೆ ಇಲ್ಲವಾದುದರಿಂದ, ಅವಳಿಗೆ ನಾರಿ ಎಂದು ಹೇಳುತ್ತಾರೆ; ಪುರುಷನನ್ನು ಪ್ರಮತ್ತ ನನ್ನಾಗಿ ಮಾಡುವುದರಿಂದ ಅವಳಿಗೆ 'ಪ್ರಮದಾ' ಎಂದು ಹೇಳುತ್ತಾರೆ; ಅವಳ ಹೃದಯದಲ್ಲಿ ಧೈರ್ಯವೆಂಬ ಬಲ ಇರುವುದಿಲ್ಲ. ಅದ್ದರಿಂದ 'ಅಬಲಾ' ಎಂದು ಹೇಳುತ್ತಾರೆ.[77] ಇಂತಹ ನಿಷ್ಠೂರ, ಕಠೋರ ಭಾವನೆಗಳು ಶಾಸ್ತ್ರ ಗ್ರಂಥಗಳಲ್ಲಿ

ವ್ಯಕ್ತವಾಗಿದ್ದರೂ, ಸನ್ಯಾಸಿನಿಯರು ನಿರಂತರವಾಗಿ ಆತ್ಮ ಸಾಧನೆಯನ್ನು ಮಾಡುತ್ತಲೇ ಬಂದಿದ್ದಾರೆ. ಪ್ರಸ್ತುತ ಶಾಸ್ತ್ರ ಅಧ್ಯಯನ ಮಾಡುವ ಸ್ತ್ರೀಗೆ ಇಂತಹ ಸೂತ್ರಗಳು ಅರ್ಥಹೀನವೂ ಅಸಂಬದ್ಧವೂ ಆಗಿ ಕಾಣಬಹುದು. ಇಂತಹ ಈ ಸೂತ್ರಗಳು ಕಾಲಕ್ರಮದಲ್ಲಿ ಆಕಸ್ಮಿಕವಾಗಿ ಸೇರಿಹೋಗಿರುವ ಸೂತ್ರಗಳೇ ಆಗಿದ್ದಿರಬೇಕು. ಈ ಸೂತ್ರಗಳು ಈ ದೃಷ್ಟಿಯಲ್ಲಿ ಮೂಲಾಚಾರ ಶಾಸ್ತ್ರಗ್ರಂಥಗಳ ಪುನರ್ ಪರಿಶೀಲನೆ ಆಗುವುದು ಅಗತ್ಯ. ಇಲ್ಲವಾದರೆ, ಪುರುಷ ಭವದ ಪ್ರಧಾನ ಅಂಶವನ್ನೇ ಎತ್ತಿ ಹಿಡಿಯುವ ದಿಗಂಬರ ಸಂಪ್ರದಾಯದ, ಧಾರ್ಮಿಕ ವಿಚಾರಗಳು ಅರ್ಥಹೀನ ಎನಿಸುವುದರಲ್ಲಿ ಆಶ್ಚರ್ಯ ಸಂಗತಿಯೇನೂ ಇಲ್ಲ. ಈ ಅಭಿಪ್ರಾಯ ಧರ್ಮದ ಅತಿಚಾರವಲ್ಲವೆಂದೇ ನನ್ನ ನಂಬಿಕೆ.

REFERENCES

1. G. Brahmappa, Mahapurana. See respective Chapters on Tirthankars.
2. Saraswati, Kannadadalli Aditirthankarara Charitregalu. (Unpublished) P. 83.
3. ಗುಣ ಸ್ಥಾನಗಳಲ್ಲಿ ಜೀವ ಉನ್ನತಿ ಹೊಂದುತ್ತಾ ಹೋಗುವಾಗ ಚಾರಿತ್ರ ಮೋಹನೀಯ ಕರ್ಮ ನಾಶವಾಗುವುದಕ್ಕೆ ಕ್ಷಪಣಕ ಶ್ರೇಣಿ ಎನ್ನುತ್ತಾರೆ.
4. Helen M. Johnson.
   Trisasti Salaka Purusa Charitre, Vol. 1, Pp. 194-198.
5. Ibid., IV, Ch. Mallitirthankara.
6. Ram Bhaushan Prasad Singh,
   Jainism in early medieval Karnataka, P. 128.
7. Trisasti, Vol. IV, Ch. 11, 12.
8. Mahapurana, Ch. Neminatha, Tirthankara.
9. Bandhuvarma, Harivamsabhyudaya, (Ed.) B. S. Sanniah, P. 317.
10. Ibid.
11. Ibid., Ch. 8, St : 77.
    ಏನಂ ಪೇಳ್ವೆನೋ ಪಾಪಮ
    ನಾನೀತನನಿಂತೆ ಕೊಲಲು ಪಣ್ಣಿದೆನಳಲಿಂ
    ದಾನೆ ಕೊಲೆಗೆಯ್ದಿದೆಂ ಪೆರ
    ದೇನೆನ್ನಂ ಕೊಲ್ಲದಂದು ತಪದೊಳ್ ನಿಲ್ದಂ.

12. Ibid., Ch : 8.

13. Ibid., Ch : 13.

14. Ibid.,

15. Janna, Neminatha Purana, (Ed.) B. S. Sanniah, Ch. IV.

16. Trisasti, Ch : Munisuvrata Tirthankara.

17. Mahapurana, Ch : Munisuvrata Tirthankara.

18. ಬೆದ್ದಳ 300ರಲ್ಲಿ ಮುಳಗುಂದ–12 ಆಡಳಿತ ಕೇಂದ್ರವಾಗಿತ್ತು, ಇಂದಿನ ಧಾರವಾಡ ಜಿಲ್ಲೆಯ ಮುಳಗುಂದ ನಯಸೇನನ ಸ್ಥಳ, ಕ್ರಿ. ಶ. 1112ರಲ್ಲಿ ಮುಳಗುಂದದಲ್ಲಿ ಧರ್ಮಾಮೃತ ರಚಿಸಿದ.

19. Santavarni, Ananta Kumari Charite.(Ed.) G.G. Manjunath

20. Srutakeerti, Vijayakumari Charite (Ed.) Y. C. Banumat.

21. Hampa Nagarajaiah, (Ed.) Kalavu Nompiya Kathegalu, Ch : Srimadananda Nompiya Kathe.

22. Mirji Anna Raya (Trans.) Bharatiya Samskritige Jaina Dharmada Koduge, PP. 82 to 87, 131 to 135.

23. J. C. Jain, Life in Ancient India, P. 166.

24. Ibid., PP. 166–167.

25. ಕೇಶಿ ಮತ್ತು ಸತ್ಯಕಿ, ಸನ್ಯಾಸಿನಿಯರ ಪುತ್ರರು ಎಂಬ ಪ್ರತೀತಿ ಇದೆ.

26. J. C. Jain, Life in Ancient India, P. 167.

27. Ibid., Pp. 167-168.

28. S. B. Deo, History of Jaina Monachism, P. 487.

29. Ibid., 489.

30. Ibid., 488-89.

31. Bhagavati Aradhana, St : 79-80.

32. Hermann Jacobi, Sacred Book of the East, Jaina Sutras, Kalpa Sutra, P. 292-98.

33. Swasti Sri Niyamasagaramuni (Ed.) Bhagavati aradhana, PP. 103-104.

34. S. B. Deo, Op. cit., Pp. 468-471.

35. Ibid.

36. Ibid.

37. Ibid., P. 470.

38. Ibid., P. 474.

39. Acharya Ratnanandi, Bhadrababu Charitam and Ratna prabha Kannada Tike, (Ed.) Srikant Bujabala Sastri, PP. 89-93.

40. Justice T. K. Tukol, Jaina Achara, P. 129.

41. Dr. M. Chidananda Murthy, Kannada Sasanagala Samskritika adhyayana, P. 92.

42. Subbaiah Sastry (Ed.) Shatkandagama, P. 168.

43. E. C., Vol. II, SB. 158 of 1120, A. D.

44. Ibid., 157 of 1122 A.D.

45. E.C., Vol. II, SB. 176 of 1131.

46. Ibid., 486 of 1119.

47. Ibid.

48. E.C., Vol. VII, SK. 196
ಜನವಾಕ್ಯ
ಮೃತಸೇವೆಯಿಂಮನದಮಿಥ್ಯಾತ್ವಾಮಯಂಪಿಂಗೆ ದರ್ಶನಸಂ
ಶುದ್ಧತೆವೆತ್ತ ಚಿತ್ತದೊದವಿಂದನ್ತಮ್ಮರ್ಹಿ ಪ್ತಿಯೆಳ್ಳ
ನಿತುಂತನ್ನ ವಿವಲ್ಲಮಂಬಗೆಯಂಬಿಟ್ಟಕುಶ–ತ್ಮಶುದ್ಧ
ನಯಂತನ್ನ ದೇವತೆ ತಾಳ್ದಿಗುಣ ಮಂಜಕ್ಕ ವಾನಿಶ್ವಯ್ಸುತುಂ । ಅಂತೆ
ಜಿನಪಾದಪಂಕಜದೊಳನ್ವಿತ/ವಾದುದು ದೃಷ್ಟಿನಾಸಿಕಾಗ್ರನೆಯೊಳೆ ನಿದ್ದುವಾಗವ
ಪದಂಗಳ ನಾದೆಸುತಿದ್ದುರ್ವಾಗಳಂ । ಶ್ರುತಿಯುಗಳಂ ....
ದೃಷ್ಟಿಯುತಸನ್ಯಸನಂ ನೆರೆದೊಪ್ಪೆನಾಕ ಸಂಗತಿ ಪಡೆದಳ್ಯಮಾಧಿ
ವಿಧಿಯಿಂದವರೆ ಜಕ್ಕಲೆಯೇಂಕೈತಾರ್ತ್ಧಯೋ ॥

49. E.C.; Vol. II. SB. 86 of 7th C.A.D.
ಸಸಿಮತಿಶ್ರಿಂ ಗಸ್ತಿಯರ್ವ್ವನ್ದು ಮೇಲ್
ಅರಿದಾಯುಷ್ಯಮನೆತ್ತು ನೊಡೆನಗೆ ತಾನಿನ್ತೆನ್ದು
ಕಲ್ಬಪ್ಪಿನುಳ
ತೊರದಾರಾಧನೆ ನೋನ್ತು ತೀರ್ತ್ಥಗಿರಿಮೇಲ್ಸ್ವರ್ಗ್ಗ
ಲಯಕ್ಕೇರಿದಾರ್.

50. E.C. Vol. 11, SB. 132 of 7th C.A.D.

51. Ibid., 112 of 7th C.A.D.

52. Ibid., 129 of 7th C.A.D.

53. Ibid., 113 of 7th C.A.D.

54. Ibid., 122 of 7th C.A.D.

55. E.C., VI, Kd : 159 of 961 A.D.

56. ...ಆರಾಧನೆ ನೋಂನ್ತು ತೀಪರ್ಥಗಿರಿ ಮೇಲ್ಸ್ವರ್ಗಾಗ್ರಾಲಯಕೆ ಅದಾರ್

57. E.C., Vol.V, My. 101 TN.
ಆಯುಮಹಿತ ಕೊಣ್ಣ ಕುನ್ನ್ಬಾನ್ವ
ಯ ಸಂಭವ ದೇಶಿಕಾಖ್ಯಗಣದೊಳ್ಗ್ಗಣಿಗ
ಪ್ರಿಯದಮ್ರ್ಮ್ಮನ್ನೆಗಟ್ಟ್ದರುಪಾತ್ರಯಶ...
ನನ್ದಿ ದೇವರೀ ವಸುಮತಿಯೊಳ್ ॥ ಆ ಗಣಿಗ
ಳ ಶಿಷ್ಯನ್ತಿ ಯುರಾಗ ಮದಿಷ್ಟದೊಳ್ ನೆಗಚ್ಟ್ದತ
ಪದೊಳ್ಲಲಿ ಕಾಲಗಮುಮನ ಜಿದಾತ್ರಿಶಿಸನ್ಬೋ
ಗಡಿಸದೆ ನಾಗಿಯಬ್ಬೆರ್ ಕನ್ತಿಯರಾಗಳು ತೋಟ
—ತಯು ಪರಿಗ್ರಹಮಂ ಗೆಜಿ ನೋಂಪಿ, ರಾಧನಾತೀತ

58. E.C., Vol. II, SB. Intro.

59. Ibid., 168 of 10th C. A.D

60. E.C., Vol. VI, och. 162 of 1143 A.D.

61. E.C., Vol. VI, Kd. 184.

62. Ibid., Vol. V, Ar. 24.

63. E.C., Vol. II, SB. 517 of 1206 A.D.

64. E.C., Vol. VII, Ng, 55 of 975 A.D.

65. Ibid., Ng, 28 of 12th C. A.D.

66. E.C., Vol. VIII, 136 of 1095 A.D.

67. Ibid., 137 of 11th C. A.D.

68. E.C., Vol. VIII. Sb. 112

69. Ibid., 103.

70. E.C. Vol. VI, Kd. 1 of 971 A.D.

71. Ram Bhushan Prasad Singh, Jainism in Early Medieval Karnataka, Pp. 129-130.

72. E.C., Vol. VI, 52 CK of 1120 A.D.

73. I.A. XVIII, 173 (Gudigeri) of 1176 A.D.

74. E.C., Vol. II, 373 of 1118 A.D.

75. Ibid., 491.

75(a) Prof Ekambaran, 'Some aspects of Jainism in Tamil Nadu —An Epigraphical assessment'

76. Madhavi, Gommateswara Mahamastakabhisheka, Swarna Sanchike, 1981.

77. Bhagavati Aradhana, St : 972-975.

ಜೈನ ಪ್ರತಿ ಸಂಸ್ಕೃತಿಯ ನಿರ್ಮಾಣ ಮತ್ತು ಅಸ್ಪೃಶ್ಯತೆ

ಡಾ. ಹಂಪ. ನಾಗರಾಜಯ್ಯ

ಜೈನತತ್ತ್ವ ಉದ್ಘಾಟಿತವಾದ ನೆಲೆಯಲ್ಲಿ ಮೂಲತಃ ಜಾತಿಗಳೇ ಇರಲಿಲ್ಲ. ಹಾಗಾದರೆ ಜಾತಿಗಳು ಆಮೇಲೆ ಹೇಗೆ ಬಂದುವು ಎಂಬ ಪ್ರಶ್ನೆಗೆ ಉತ್ತರಿಸಬೇಕಾಗುತ್ತದೆ. ತನ್ನ ಪ್ರಾರಂಭದ ಹಂತಗಳಲ್ಲಿ ಜಾತಿಮತಗಳ ಸೂತಕವಿರಲಿಲ್ಲವೆಂಬುದನ್ನು ಧೃಢಪಡಿಸಿದ ಪ್ರಾಚೀನ ಆಚಾರ್ಯರೇ ಇದನ್ನೂ ವಿಶದಪಡಿಸಿದ್ದಾರೆ. ಜಿನಸೇನಾಚಾರ್ಯರು (9ನೆಯ ಶತಮಾನ) ಬರೆದ ಸಂಸ್ಕೃತ ಆದಿಪುರಾಣದಲ್ಲಿ ಪ್ರತಿಮೆಗಳ ಮೂಲಕ ಈ ಅಂಶವನ್ನು ಧ್ವನಿಸಿದ್ದಾರೆ:

> ಮನುಷ್ಯಜಾತಿರೇಕೈವ ಜಾತಿನಾಮೋದಯೋದ್ಭವಾ
> ವೃತ್ತಿ ಭೇದಾಹಿತದ್ಭೇದಾಚ್ಚಾತುರ್ವಿಧ್ಯಮಿಹಾಶ್ನುತೇ ॥
>
> ಜಿನಸೇನ, ಆದಿಪುರಾಣ, xxxviii.45

ಇರುವುದೊಂದೇ ಜಾತಿ, ಅದು ಮನುಷ್ಯ ಜಾತಿ, ಅವರವರ ಭಿನ್ನವೃತ್ತಿಗಳ ಕಾರಣದಿಂದ ವ್ಯತ್ಯಾಸಗಳುಂಟಾಗಿವೆ. ಋಷಭನು ಆಯುಧಧಾರಿಯಾಗಿ ರಾಜಧರ್ಮವನ್ನು ಪಾಲಿಸಿದಾಗ ಕ್ಷತ್ರಿಯರು ಬಂದರು. ಕ್ರಮೇಣ ನಾನಾ ಜೀವನೋಪಾಯಗಳನ್ನು ಕಂಡುಹಿಡಿದಾಗ ವೈಶ್ಯ ಜಾತಿ ಹುಟ್ಟಿತು, ನಾನಾ ಕಸುಬುಗಳನ್ನು ಪ್ರಾರಂಭಿಸಿದ್ದರಿಂದ ಶೂದ್ರ ಜಾತಿ ಹುಟ್ಟಿತು; ಇಲ್ಲಿ ಶೂದ್ರಕ್ಕೆ ಇಂದಿನ ಪರಿಮಿತ ಅರ್ಥವಿರಲಿಲ್ಲ. ಋಷಭರ ಅನುಯಾಯಿ ಶ್ರಾವಕ ಸಂಘ ಜೈನಸಮಾಜವನ್ನು ಸ್ಥಾಪಿಸಿದ ಮೇಲೆ, ಚಕ್ರವರ್ತಿ ಭರತನ ಕಾಲದಲ್ಲಿ ಅಣುವ್ರತಧಾರಿಗಳಾದ ದ್ವಿಜರು ಬಂದರು. ಭರತನು ತನ್ನ ಸಿರಿಯನ್ನು ದಾನಮಾಡಿದಾಗ ಅವನ ತಮ್ಮಂದಿರಾಗಲಿ, ಜೈನಮುನಿಗಳಾಗಲಿ (ಉದ್ದಿಷ್ಟ ಆಹಾರ ತ್ಯಾಗ ಮನೋಭಾವದವರಾದುದರಿಂದ) ದಾನ ಸ್ವೀಕರಿಸಲಿಲ್ಲ. ಆಗ ಇಂದ್ರನು ದಾನ ಪಡೆಯಲು ಅರ್ಹರಾದ ಅಣುವ್ರತಧಾರಿ ಗೃಹಸ್ಥರನ್ನು ಭರತನಿಗೆ ತೋರಿಸಿದನು. ಅವರು ದಾನ ಸ್ವೀಕರಿಸಲು ಒಪ್ಪಿ ಬಂದರು. ಅವರೇ ಬ್ರಾಹ್ಮಣರು. ಆಗಮ ಸ್ವಾಧ್ಯಾಯ, ಬೋಧನೆ, ಜಿನಪೂಜೆ—ಇವುಗಳಲ್ಲಿ ನಿರತರಾದ ಇವರು ಹೊಸ ವರ್ಣದ ಲಾಭ ಪಡೆದು ಯಜ್ಞೋಪವೀತ ಧರಿಸಿದ ದ್ವಿಜರು, ದೇವ ಬ್ರಾಹ್ಮಣರು.

ಆದಿಮಾನವರಿಗೆ ಮೊದಲಿಗೆ ದುಡಿದು ತಿನ್ನುವ ಕಾಯಕವಿರಲಿಲ್ಲ. ಬೇಡಿದ್ದನ್ನು ನೀಡುವ ಕಲ್ಪವೃಕ್ಷಗಳ ಸುವರ್ಣಯುಗದ ಭೋಗಭೂಮಿಜರಾಗಿದ್ದರು. ಆ ದಿನಗಳು

---

* ಮಂಗಳೂರು ವಿಶ್ವವಿದ್ಯಾನಿಲಯದ 22-10-1993 ರಲ್ಲಿ ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಸಂಪ್ರಬಂಧ

ಮುಗಿದುವು. ಮೈಮುರಿದು ದುಡಿದು ತಿನ್ನುವ ಕಾಲ ಬಂದಿತು. ಆಗ ಋಷಭನು ವಿವಿಧ ವೃತ್ತಿ-ವೃತ್ತಿಗಳವರನ್ನು ವಿಂಗಡಿಸಿದನು. ಕ್ಷತ್ರಿಯ ವೈಶ್ಯ ಶೂದ್ರ-ಮೂರು ಜಾತಿ-ವರ್ಣಗಳನ್ನು ಚಾಲ್ತಿಗೆ ತಂದನು. ಮುಂದೆ ಭರತನು ಬ್ರಾಹ್ಮಣ ಜಾತಿಯನ್ನು ನಾಲ್ಕನೆಯದಾಗಿ ಕಲ್ಪಿಸಿದನು. ಈ ಹೇಳಿಕೆಯಲ್ಲಿರುವ ಸಾಂಕೇತಿಕೆಯನ್ನು ಅರ್ಥೈಸ ಬಹುದು. ಆದಿಮ ಸಮಾಜದವರು ನಿಸರ್ಗದ ಮಕ್ಕಳಾಗಿದ್ದರು. ಕಲ್ಪವೃಕ್ಷಗಳ ಸುವರ್ಣಯುಗವೆಂದರೆ, ಗಿಡಮರಗಳು ಬಿಡುತ್ತಿದ್ದ ಹಣ್ಣುಗಳೇ ಆಹಾರವಾಗಿ ಕಡಮೆ ಸಂಖ್ಯೆಯಲ್ಲಿದ್ದ ಆದಿಮ ಸಮಾಜಕ್ಕೆ ಸಾಕಾಗುತ್ತಿತ್ತು; ಅದು ಆರೋಗ್ಯಕರ ವಾಗಿಯೂ ಇದ್ದಿತು. ಇದು ಪ್ರಾಥಮಿಕ ನೆಲೆಯ ಆಹಾರ ಪದ್ಧತಿ. ಅನಂತರ ಜನರೂ ಹೆಚ್ಚಿದರು. ವನ್ಯಜೀವನ ದಾಟಿದರು. ಬೇಟೆ, ಕೃಷಿ ವೃತ್ತಿಗಳಿಗೆ ತೊಡಗಿದರು. ಈ ಎರಡನೆಯ ಹಂತದಲ್ಲಿ ವೃತ್ತಿ ಆಧರಿಸಿ ಗುಂಪುಗಳಾದುವು. ಇದಿಷ್ಟೂ ಜೈನ ಪುರಾಣಗಳು ಜಾತಿ-ವರ್ಣ-ವೃತ್ತಿಗೆ ಕೊಟ್ಟ ವಿವರಣೆ. ಜೈನತ್ವದ ಈ ಪ್ರತಿ ಸಂಸ್ಕೃತಿ ನಿರ್ಮಾಣಕ್ಕಿದ್ದ ತುರ್ತುಗಳೇನೆಂಬುದರ ಹಿನ್ನೆಲೆಯನ್ನೂ ಅರಿಯ ಬೇಕಾಗುತ್ತದೆ. ಭಾರತೀಯ ಎಂಬುದಕ್ಕೆ ಸಂವಾದಿಯೆನಿಸಿರುವ ಹಿಂದೂ ಸಂಸ್ಕೃತಿ ಯಲ್ಲೂ ಜಾತಿ ವರ್ಣ ವೃತ್ತಿಗಳಿವೆ. ಹಿಂದೂ ಧರ್ಮದಲ್ಲಿ ಇವುಗಳನ್ನು ಕುರಿತು ಇರುವ ವಿವರಣೆಯನ್ನು ಪರಿಶೀಲಿಸಿದರೆ ಜೈನತ್ವದ ಮತ್ತು ಹಿಂದೂತ್ವದ ನಡುವಣ ಅಂತರ ಬಯಲಾಗುತ್ತದೆ.

ಪಿರಮಿಡ್ ರಚನೆಯ ಶ್ರೇಣೀಕೃತ ಹಿಂದೂ ಸಮಾಜದ ಜಾತಿ ವ್ಯವಸ್ಥೆಯಲ್ಲಿ ಎಲ್ಲ ಮನುಷ್ಯರೂ ಸಮಾನರಾಗಿ ಪರಿಗಣಿತರಾಗಿರಲಿಲ್ಲ. ಹಿಂದೂ ಸಮಾಜ ಪರಿ ಕಲ್ಪನೆಯಲ್ಲಿ ಮಾನವರು ಜನ್ಮತಃ ಅಸಮಾನರು. ಹಿಂದೂ ಜಾತಿ ವ್ಯವಸ್ಥೆಯಲ್ಲಿ ತರತಮ ಭಾವದ ಆರೋಹಣ-ಅವರೋಹಣ ರಚನೆಯಿದೆ. ಇದು ಅಸಮಾನತೆಯನ್ನು ಆಧರಿಸಿ ನಿಂತ ವ್ಯವಸ್ಥೆ. ಈ ಚೌಕಟ್ಟಿನೊಳಗೆ ಬಾಳುವ ವ್ಯಕ್ತಿಯ ಸ್ಥಾನಮಾನ ಅಂತಸ್ತುಗಳನ್ನು, ಮೇಲು-ಕೀಳು ಎಂಬುದನ್ನು ನಿರ್ಧರಿಸುವ ಮಾನದಂಡ ಈ ಜಾತಿಯೇ : "ಬ್ರಾಹ್ಮಣ ಹುಟ್ಟಿನಿಂದಲೇ ಪ್ರಥಮನೂ ಮೇಲಾದವನೂ ಎಂಬುದು ಹೇಗೊ, ಹಾಗೆಯೇ ಶೂದ್ರ ಹುಟ್ಟಿನಿಂದಲೇ ಕಡೆಯವನೂ ಕೀಳಾದವನೂ ಆಗಿದ್ದಾನೆ." [ಜವರಯ್ಯ ಮ.ನ. : 1990 : 93] ಇವರಿಗೆ ವೇದೋಪನಿಷತ್ತುಗಳು ಮಾರ್ಗದರ್ಶಿಗಳು ; ಇವೆಲ್ಲಾ ಆರ್ಯರ ವಿಷಬೀಜಗಳು. ಭಾರತದ ಆದಿವಾಸಿ ಮತ್ತು ಮೂಲ ನಿವಾಸಿ-ಬುಡಕಟ್ಟುಗಳನ್ನು ಅಪಮಾನಿಸಿದ ತಾರತಮ್ಯದ ತಂತ್ರಗಳು.

ಹಿಂದೂ ಸಮಾಜ ಹಲವು ಶಾಶ್ವತ ಪ್ರತ್ಯೇಕ ಜಾತಿಗಳಾಗಿ ಒಡೆದಿದೆ, ಜಾತಿಗಳಲ್ಲಿ ಸಹ ಪಂಕ್ತಿ ಭೋಜನ ಇಲ್ಲ. ದೇಹ ಸಂಬಂಧ ಏರ್ಪಡುವ ಮಾತಂತಿರಲಿ, ಒಬ್ಬರ ನ್ನೊಬ್ಬರು ಮುಟ್ಟುವಂತೆಯೂ ಇಲ್ಲ, ಮುಟ್ಟಿಸಿಕೊಳ್ಳುವಂತೆಯೂ ಇಲ್ಲ ; A Brahman is to be reverenced even though he curses and beat

you and use harsh words—so say the saints. A Brahman must be revered, though he be devoid of goodness or virtue. But a Sudra never, however virtuous and learned. [Zaehner R. C. : 1975 : 142] ಪವಿತ್ರ-ಶುದ್ಧರಾದ ಮೇಲು ಜಾತಿ-ವರ್ಣದವರು ಇರುವ ಹಾಗೆ ಅಪವಿತ್ರ-ಅಶುದ್ಧರಾದ ಕೀಳಜಾತಿ ವರ್ಣದವರುಂಟು. ಈ ಜಾತಿ ಅಂತರಗಳು ದೈವ ಸೃಷ್ಟಿ. ಋಗ್ವೇದದ ಪುರುಷ ಸೂಕ್ತದ ಪ್ರಕಾರ ಆದಿಪುರುಷನ ತಲೆಯಿಂದ ಬ್ರಾಹ್ಮಣನೂ, ಭುಜದಿಂದ ಕ್ಷತ್ರಿಯನೂ, ತೊಡೆಯಿಂದ ವೈಶ್ಯನೂ. ಕಾಲಿನಿಂದ ಶೂದ್ರನೂ ಹುಟ್ಟಿದರು. (Ambedkar B. R. : 1970 : 140) ಇವರೆಲ್ಲ ಸತ್ವ-ರಜ-ತಮಸ್ ಪ್ರಕೃತಿ ಗುಣಾಧಾರಿತವಾಗಿ ತಮ್ಮ ಸ್ವಧರ್ಮ ವೃತ್ತಿಯನ್ನು ಪಾಲಿಸಬೇಕು. ಸ್ವಧರ್ಮವನ್ನು ಮೀರಿದರೆ, ವೇದ ಪಾರಮ್ಯವನ್ನು ನಿರಾಕರಿಸಿದರೆ, ಜಾತಿ ತಿರಸ್ಕರಿಸಿದರೆ ಆತ/ಆಕೆ ಹಿಂದೂ ಧರ್ಮದಿಂದ ಬಹಿಷ್ಕೃತರು.(ರಿಚರ್ಡ್ ಲೆನಾಯ್ : 1975 : 151). ಅಲ್ಪಸಂಖ್ಯಾತ ಬ್ರಾಹ್ಮಣನಿಗೆ ಆನುವಂಶಿಕ ಶ್ರೇಷ್ಠತೆಯಿದ್ದುದರಿಂದ ಬಹುಸಂಖ್ಯಾತರಾದ ಇತರರು ಬ್ರಾಹ್ಮಣನ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕು. ಹೊರಗಿನಿಂದ ಭಾರತಕ್ಕೆ ಬಂದು ಸ್ಥಳೀಯ ಮೂಲ ನಿವಾಸಿಗಳನ್ನು ಗೆದ್ದ ಆರ್ಯರು ತುತ್ತ ತುದಿಯಲ್ಲಿ ಕುಳಿತರು, ಸೋತ ದ್ರಾವಿಡಾದಿಗಳು ಕೆಳಗಿನ ಕಟ್ಟಕಡೆಯ ಊರಾಚೆ ನಿಂತರು : A caste system is one whereby a society is divided up into a number of self contained and completely segregated units; the mutual relations between which are ritually determined in a graded scale. (Hutton J. H : 1963 : 50).

ಶುದ್ಧ ಅಶುದ್ಧವೆಂಬ ತಾರತಮ್ಯಾಧಾರಿತ ಈ ಜಾತಿ ವ್ಯವಸ್ಥೆಯಲ್ಲಿ ಕೆಳಜಾತಿಯವರು ತಮ್ಮ ಕೆಲಸಗಳನ್ನು ಇನ್ನೊಂದು ಜಾತಿಯವರಿಗೆ ವಹಿಸುವಂತಿರಲಿಲ್ಲ. ಸ್ವಂತ ವ್ಯಕ್ತಿತ್ವದ ಅಭಾವ ಮತ್ತು ಅಸ್ವಾತಂತ್ರ್ಯ–ಇದು ಹಿಂದೂ ಸಮಾಜದ ಸದಸ್ಯನ ಹಣೆ ಬರೆಹ. ಮೊದಲನೆಯ ಮೂರುಜಾತಿಗಳಿಗೆ ಇರುವಷ್ಟು ಸ್ವಾತಂತ್ರ್ಯವೂ ಶೂದ್ರ–ಅಸ್ಪೃಶ್ಯರಿಗೆ ಇರಲಿಲ್ಲ. ಸತ್ವಗುಣ ಸ್ವಭಾವ ಪ್ರಕೃತಿಯ ಬ್ರಾಹ್ಮಣರ ಕೆಳಗಿದ್ದ ರಜೋಗುಣದ ಕ್ಷತ್ರಿಯ. ತಮೋಗುಣದ ಶೂದ್ರ, ಸನ್ಯಾಸಿಯಾಗಲೂ ಸಾಧ್ಯವಾಗದ ಸ್ತ್ರೀ–ಇವರಲ್ಲಿ ಕ್ರಮೇಣ ಅರಿವಿನ ಸ್ಫೋಟವಾಗತೊಡಗಿತು. ಆಗ, ಸ್ವಧರ್ಮವನ್ನು ಬಿಡಬೇಡಿ, ಸ್ವಧರ್ಮ ಪಾಲಿಸುತ್ತಿರುವಾಗ ಸತ್ತರೂ ನಿಮಗೆ ಶ್ರೇಯವಿದೆ–ಎಂಬ ಬೋಧನೆಯ ಬೇಲಿ ಹಾಕಲಾಯಿತು: ಭಗವದ್ಗೀತೆಯ ತಾತ್ಪರ್ಯವೇ ಇದು. ಅರ್ಜುನನು ತನ್ನ ಬಂಧುಗಳನ್ನು ಕೊಲ್ಲಲಾರೆ, ಯುದ್ಧ ಮಾಡಲಾರೆ ಎಂದು ಗೋಗರೆದನು. ಕೃಷ್ಣನು ಅರ್ಜುನನಿಗೆ ಯುದ್ಧ ಮಾಡುವ ಕ್ಷತ್ರಿಯರ ಸ್ವಧರ್ಮವನ್ನು ಮೀರದಂತೆ ಬೋಧಿಸಿದನು.

ಮೇಲಿನ ತುದಿಯಲ್ಲಿ ತಾವು ಎಂದೆಂದಿಗೂ ಕುಳಿತುಕೊಳ್ಳುವಂತೆಯೇ ಇಲ್ಲವೆಂಬ ನಿರಾಶೆ–ಹತಾಶೆ ಕೆಳಸ್ತರದ ಜಾತಿಗಳಲ್ಲಿ ಮಡುಗಟ್ಟಿತು. ಈ ಜಾತಿ–ವರ್ಣ ವರ್ಗೀಕರಣ ಅಸಹಜವೆಂದು ಕ್ಷತ್ರಿಯ:ರು, ವೈಶ್ಯರು ಭಾವಿಸಿದರು. ಅವರೆಲ್ಲರಲ್ಲೂ ತಮಗೆ ಅನ್ಯಾಯವಾಗಿದೆಯೆಂಬ ತಿಳಿವಳಿಕೆ ಮೂಡಿತು: "ಜಾತಿಯು ಶ್ರಮ ಅಥವಾ ದುಡಿಮೆಯ ವಿಭಜನೆಯನ್ನು ಆಧರಿಸಿಲ್ಲ; ಅದು ಶ್ರಮಿಕರ ಅಥವಾ ಕಾರ್ಮಿಕರ ವಿಭಜನೆಯಾಗಿದೆ; ಅದರಿಂದ ಅವರು ಅಂತರ್ಜಾತೀಯ ವಿವಾಹ, ಸಹಪಂಕ್ತಿ ಭೋಜನ ಮತ್ತು ಸಮಾನತೆಗಾಗಿ ಕರೆಕೊಟ್ಟರು" [ಅಂಬೇಡ್ಕರ್ ಬಿ. ಆರ್.: 1990 : xvi – xvii] ಹೀಗೆ ದುಮುಗುಟ್ಟುತ್ತಿದ್ದ ಆದಿವಾಸಿಗಳಿಗೆ, ಅಸ್ಪೃಶ್ಯರಿಗೆ ಜೈನ, ಬೌದ್ಧ ಮತ್ತು ಆಜೀವಕ ಶ್ರಮಣ ಪರಂಪರೆ ಬಿಡುಗಡೆಯಾಗಿ ಬಂದಿತು. ಮನುಷ್ಯಜಾತಿಯೆಲ್ಲ ಒಂದೆ, ಜಾತಿವರ್ಣಗಳು ದೈವ ನಿರ್ಮಿತವಲ್ಲ, ಅವತಾರ ವೆಂಬುದಿಲ್ಲ, ಸ್ತ್ರೀಗೂ ಸ್ವಾತಂತ್ರ್ಯವಿದೆ, ಸ್ವಧರ್ಮವನ್ನು ದಾಟಬಹುದು, ಪ್ರತಿ ಯೊಬ್ಬನೂ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಲು ತಾನೇ ಸಮರ್ಥನು–ಎಂಬಿತ್ಯಾದಿ ಹೊಸಮತಗಳ ಪ್ರಣಾಲಿ ಪದದಲಿತ ಜನಮನಕ್ಕೆ ಆಪ್ಯಾಯಮಾನವಾಯಿತು. ಅಸ್ಪೃಶ್ಯರು, ಶೂದ್ರರು, ಕ್ಷತ್ರಿಯರು, ಸ್ತ್ರೀಯರು ಈ ಪ್ರತಿಸಂಸ್ಕೃತಿಯ ಜೈನ–ಬೌದ್ಧ ಮತಗಳಿಗೆ ನುಗ್ಗಿದ ಆದ್ಯರಾದರು. ಕನ್ನಡ ನಾಡಿನಲ್ಲಿ 12ನೆಯ ಶತಮಾನದಲ್ಲಿ ನಡೆದ ಘಟನೆಗಳು ಇನ್ನೂ ವ್ಯಾಪಕವಾಗಿ ಇಡೀ ಭಾರತದಲ್ಲಿ ಒಂದೂವರೆ ಸಾವಿರ ವರ್ಷಗಳ ಹಿಂದೆಯೇ ನಡೆಯಿತು.

ಶೂದ್ರರೂ ವೈಶ್ಯರೂ ಅಸ್ಪೃಶ್ಯರೂ ಹೀಗೆ ಹೆಚ್ಚಿನ ಸಂಖ್ಯೆಯಲ್ಲಿ ನೂತನ ಶ್ರಮಣ ಮತಗಳಿಗೆ ಧಾವಿಸಲು ಮೇಲೆ ಹೇಳಲಾದ ಸಾಮಾಜಿಕ ಕಾರಣಗಳಿದ್ದುವು. ಸಂಸ್ಕಾರವೂ, ಆಸ್ತಿ ಪಾಲೂ, ಸಾಮಾಜಿಕ ಮನ್ನಣೆಯೂ ಇಲ್ಲದೆ ಸ್ತ್ರೀಯರನ್ನು ಶೂದ್ರರ ರೀತಿಯಲ್ಲೇ ಇಟ್ಟಿದ್ದರಿಂದ ಮಹಿಳೆಯರು ಸ್ವತಂತ್ರರಾಗಲು ಹವಣಿಸು ತ್ತಿದ್ದರು. ಪ್ರತಿ ಸಂಸ್ಕೃತಿ ನಿರ್ಮಾಣದ ಘಟ್ಟದಲ್ಲಿ ತಮಗೆ ಸುವರ್ಣ ಅವಕಾಶದ ಹೆಬ್ಬಾಗಿಲು ತೆರೆಯಿತೆಂದು ಹೆಂಗಸರು ಅಧಿಕವಾಗಿ ಮತಾಂತರಿಸಿದರು. ಜೈನ ಸಮಾಜದಲ್ಲಿ ಸನ್ಯಾಸಿನಿಯರ ಮತ್ತು ಶ್ರಾವಕಿ (ಗೃಹಿಣಿ)ಯರ ಸಂಖ್ಯೆ ಪುರುಷರದ ಕ್ಕಿಂತ ಒಂದೂವರೆ ಪಟ್ಟಾಗಲು ಇದೂ ಒಂದು ಕಾರಣ.

ಆದಿಪುರುಷನ ಸೃಷ್ಟಿ. ಸೃಷ್ಟಿಕರ್ತನ, ಸ್ಥಿತಿ ಮತ್ತು ಲಯಕರ್ತನ ಕಲ್ಪನೆ, ಅವತಾರಗಳ ಪರಿಕಲ್ಪನೆ, ಸತ್ವ ರಜತಮೋಗುಣಗಳ ಪರಿಗಣನೆ, ಸ್ವಧರ್ಮ ಪರಿ ಪಾಲನೆ–ಇವೆಲ್ಲವನ್ನೂ ಪ್ರತಿ ಸಂಸ್ಕೃತಿಯಾದ ಬೌದ್ಧ–ಜೈನತ್ವಗಳು ನಿರಾಕರಿಸಿದುವು. ಸಾಂಪ್ರದಾಯಿಕ ಜಾತಿ ವ್ಯತ್ಯಾಸಗಳನ್ನು ಇವರೂ ಒಪ್ಪಿಕೊಂಡರೂ, ಅದು ಚಿರಂತನ ಅಥವಾ ಬದಲಾಯಿಸಲಾಗದ ವ್ಯವಸ್ಥೆಯಲ್ಲ; ಯಾರೇ ಇಚ್ಛಿಸಿದರೂ ಇದನ್ನು ಕಿತ್ತೊ ಗೆಯಬಹುದಿತ್ತು. ಜಾತಿ ವ್ಯವಸ್ಥೆಯೊಳಗೆ ವ್ಯತ್ಯಾಸಗಳಿಗೆ ಅವಕಾಶವಿದ್ದು ಆಯ್ಕೆಯ

ಸ್ವಾತಂತ್ರ್ಯವಿತ್ತು. ಹಿಂದೂ ಚೌಕಟ್ಟಿನಲ್ಲಿ ಜಾತಿಗಳೊಳಗಿನ ಅದಲು ಬದಲುಗಳಿಂದ ವರ್ಣಸಂಕರದ ಹೆದರಿಕೆಯಿತ್ತು. ಈ ಬಗೆಯ ಬೆದರಿಕೆ ಪ್ರತಿ ಸಂಸ್ಕೃತಿಯಲ್ಲಿ ಇರಲಿಲ್ಲ. ಹೊಸ ಶ್ರವಣ ಪರಂಪರೆಯಲ್ಲಿ ಜಾತಿ ಶ್ರೇಣಿಗೆ ವ್ಯಕ್ತಿಯ ನಡೆವಳಿಕೆಯನ್ನು ನೋಡಬೇಕೇ ಹೊರತು ಅವನ ಹುಟ್ಟನ್ನು ಅಲ್ಲ: ಮಾಂ ಜಾತಿಂ ಪುಚ್ಛ. ಚರ್ಣಂ ಪುಚ್ಛ ವ್ಯಕ್ತಿಯ ಚಾರಿತ್ರ್ಯ ಶುದ್ಧಿಗೆ ಅವರವರ ಲಿಂಗ/ಮನೆತನ ಸಂಬಂಧಗಳು ಅಮುಖ್ಯ.

ಪ್ರತಿ ಸಂಸ್ಕೃತಿ ನಿರ್ಮಾಣದಲ್ಲಿ ಸಮಾಜದ ಎಲ್ಲ ಜಾತಿಯ ಸದಸ್ಯರಿಗೂ ರಾಜರಿಗೂ ಪ್ರಜೆಗಳಿಗೂ, ಅವಕಾಶ ವಿಹೀನ ಪದದಲಿತ ಅಸ್ಪೃಶ್ಯರಿಗೂ, ಶೂದ್ರ ಮತ್ತು ಸ್ತ್ರೀಯರಿಗೂ ಸನ್ಯಾಸತ್ವವನ್ನು ನೀಡಲು ಸಹ ಒಪ್ಪಿದರು; ಇಂಥ ಧಾರ್ಮಿಕ ಸಮಾನ ಹಕ್ಕು ಬಾಧ್ಯತೆಗಳು ಅಂತ್ಯಜರಿಗೆ ಹೊಸದಾಗಿತ್ತು. ಗೃಹಸ್ಥಾಶ್ರಮ ವಾನಪ್ರಸ್ಥಾಶ್ರಮ ಸನ್ಯಾಸಾಶ್ರಮ ಎಂಬ, ಕ್ರಮೇಣ ಹಂತಹಂತವಾಗಿ, ಪ್ರವೃತ್ತಿ ಮಾರ್ಗದಿಂದ ಬಿಡಿಸಿಕೊಂಡು ನಿವೃತ್ತಿ ಮಾರ್ಗಕ್ಕೆ ಸಿದ್ಧವಾಗುವ ಹಿಂದೂ ಸನ್ಯಾಸ ಮತ್ತು ಗೃಹತ್ಯಾಗದ ಕಲ್ಪನೆಯನ್ನೂ ಜೈನತ್ವದಲ್ಲಿ ಕೈಬಿಡಲಾಯಿತು. ಯಾರು ಬೇಕಾದರೂ ಯಾವಾಗ ಬೇಕಾದರೂ ಏಕ್‌ದಂ, ಪ್ರಾಯದಲ್ಲಿಯೂ ಸಹ, ವೈರಾಗ್ಯ ಪ್ರೇರಣೆ ಬಂದಾಗ ಸನ್ಯಾಸ ಸ್ವೀಕರಿಸಬಹುದು, ತಪಸ್ಸಿಗೆ ತೆರಳಬಹುದೆಂದರು. ಬುದ್ಧ–ಮಹಾವೀರರೇ ಅಲ್ಲದೆ ಸಾವಿರಾರು ಜನ ಹಿರಿಯ–ಕಿರಿಯರು, ಸ್ತ್ರೀಯರು, ತಲೆಕೂದಲು ಬಿಳಿದಾಗುವ ಮೊದಲೇ ಸನ್ಯಾಸಕ್ಕೆ ಹೊರಳಿದರು.

ಇದಿಷ್ಟೂ ಹಿಂದೂ ಪರಿಕಲ್ಪನೆಯಾದ ಸ್ವಧರ್ಮದ ನಿರಾಕರಣೆ. ಸ್ವಧರ್ಮದ ಹೆಸರಿನಲ್ಲಿ ಬ್ರಾಹ್ಮಣರು ಯಜ್ಞಯಾಗಾದಿಗಳನ್ನು ಆಚರಿಸಿ ಪ್ರಾಣಿ ಬಲಿಕೊಡುವುದು, ರಾಜರು ಬೇಟೆಯಾಡುವುದು (ಮೃಗಯಾ), ವೈಶ್ಯರು ಅಸ್ತ್ರ ಶಸ್ತ್ರ ಮದ್ಯ ಅಫೀಮು ಗಾಂಜಾಗಳನ್ನು ಸರಬರಾಜು ಮಾಡುವುದು–ಇವನ್ನು ಪ್ರತಿ ಸಂಸ್ಕೃತಿಯಲ್ಲಿ ಖಂಡಿಸಲಾಯಿತು. ಸಂಪ್ರದಾಯ ವಿರುದ್ಧವಾಗಿ ಬುದ್ಧ ಮಹಾವೀರರು ಪ್ರತಿಪಾದಿಸಿದ ಪ್ರತಿ ಸಂಸ್ಕೃತಿಯ ಬುನಾದಿ ಸ್ವಧರ್ಮ ಪಾಲನೆಯಲ್ಲ. ಅಹಿಂಸೆಯೇ ಈ ಪ್ರತಿಸಂಸ್ಕೃತಿಯ ತಳಪಾಯ. ಇದರಿಂದ ಆಕರ್ಷಿತರಾದ ರಾಜಮನೆತನಗಳು, ಸಾಮಾಜಿಕರು, ವಿವಿಧ ಜಾತಿ ವರ್ಣಗಳವರು ಜೈನರಾಗಿ ಮತಾಂತರಗೊಂಡರು. ಹಿಂದೂ ಧರ್ಮಿಯಾಗಿ ಸ್ವಧರ್ಮ ಪಾಲಿಸುತ್ತ ಕಳಿಂಗ ಮಹಾಯುದ್ಧವೆಸಗಿ, ಕ್ರೂರಿಯೆನಿಸಿದ್ದ ಅಶೋಕ ಚಕ್ರವರ್ತಿ ಸ್ವಧರ್ಮವನ್ನು ತ್ಯಜಿಸಿ, ಪಶ್ಚಾತ್ತಾಪಗೊಂಡು ಬೌದ್ಧ ಧರ್ಮ ಸ್ವೀಕರಿಸಿ ಧರ್ಮರಾಜ–ರಾಜರ್ಷಿ ಎನಿಸಿದನು. ಸ್ವಧರ್ಮವಾದ ಯುದ್ಧ ಪಾಲನೆಗಿಂತ ನಿಜವಾದ ವಿಜಯ ಆತ್ಮವಿಜಯ, ಅದು ಧರ್ಮದ ಮೂಲಕ ಸಾಧ್ಯ–ಎಂದು ಅಶೋಕನು, ಹಿಂದೂ ಸಂಸ್ಕೃತಿಗೆ ವಿರುದ್ಧವೆನ್ನಬಹುದಾದ ಪ್ರತಿ ಸಂಸ್ಕೃತಿಯ ಸಂದೇಶವನ್ನು ಸಾರಿದನು.

ಪ್ರತಿ ಸಂಸ್ಕೃತಿಯ ನಿರ್ವಾಪಕರಾದ ಶ್ರಮಣರು ಜಾತಿಮದದ ಬುಡಕ್ಕೆ ಕೊಡಲಿಪೆಟ್ಟು ಕೊಟ್ಟರು. ಹಾಗೆಯೇ ಭಾಷಾಮದವನ್ನೂ ಚೂರು ಮಾಡಿದರು. ಬುದ್ಧನು ಜನಭಾಷೆ ಪಾಲಿಗೆ ಒಲಿದನು, ಮಹಾವೀರನು ಜನ ಭಾಷೆಯಾದ ಅರ್ಧ ಮಾಗಧಿಗೆ ಒಲಿದನು. ಒಟ್ಟಾರೆಯಾಗಿ ಈ ಬಗೆಯ ಮನುಷ್ಯಪರ ಕಾಳಜಿಗಳಿಂದ ಪ್ರೇರಣೆ ಪಡೆದ ಪ್ರತಿ ಸಂಸ್ಕೃತಿಯಲ್ಲಿ ವೇದಾದಿ ಶಾಸ್ತ್ರಗಳನ್ನು ತಿರಸ್ಕರಿಸಿದ್ದು ದೈವತ್ವ-ಅವತಾರಗಳನ್ನು ನಿರಾಕರಿಸಿದ್ದು ಪ್ರಗತಿಪರ ಚಿಂತನೆಯಾಗಿತ್ತು ; ಬಾಬಾ ಸಾಹೇಬ್ ಅಂಬೇಡ್ಕರರ ಮಾತುಗಳನ್ನು ನೆನಪಿಗೆ ತಂದುಕೊಳ್ಳಬಹುದು : Caste has a divine basis You must therefore destroy the sacredness and divinity with which caste has become invested. In the last analysis, this means you must destroy the anthority of shastras and the Vedas—[ಅಂಬೇಡ್ಕರ್ ಬಿ. ಆರ್. ; 1975 : 87]; ಪ್ರತಿ ಸಂಸ್ಕೃತಿ ಈ ಕೆಲಸವನ್ನು 1500 ವರ್ಷಗಳ ಹಿಂದೆಯೇ ಮಾಡಿದೆ.

ಋಷಭದತ್ತನ ಬ್ರಾಹ್ಮಣ ಮಡದಿ ದೇವನಂದಾಳ ಗರ್ಭದಿಂದ ಶಿಶು ಮಹಾವೀರನನ್ನು ಕ್ಷತ್ರಿಯ ಸಿದ್ಧಾರ್ಥನ ರಾಣಿ ತ್ರಿಶಲಾಳ ಗರ್ಭಕ್ಕೆ ಇಂದ್ರನ ಆಜ್ಞಾನುವರ್ತಿಯಾಗಿ ಸಾಮಾನಿಕ ದೇವ ಹರಿನೇಗಮೇಶಿಯು ವರ್ಗಾಯಿಸಿದನು ; ಇದು—'ಅರ್ಹಂತನು ಚಕ್ರವರ್ತಿಗಳು ಭೂತ ಭವಿಷ್ಯದ್ ವರ್ತಮಾನಗಳಲ್ಲಿ ಬ್ರಾಹ್ಮಣ, ನೀಚ, ಭಿಕ್ಷುಕ, ದರಿದ್ರ, ಕನಿಷ್ಠ ಕುಲಗಳಲ್ಲಿ ಹುಟ್ಟುವುದಿಲ್ಲ ; ತೀರ್ಥಂಕರರು ಯಾವಾಗಲೂ ಶ್ರೇಷ್ಠ ಕ್ಷತ್ರಿಯ ಕುಲದಲ್ಲಿಯಷ್ಟೇ ಜನಿಸುವುದು (ಕಲ್ಪಸೂತ್ರ)'-ಎಂಬ ನಂಬಿಕೆಗೆ ಅನುಗುಣವಾಗಿದೆ. ಇದು ಸ್ಪಷ್ಟವಾಗಿ ಬ್ರಾಹ್ಮಣ ಶ್ರೇಷ್ಠತೆಯನ್ನು ನಿರಾಕರಿಸಿ ಕ್ಷತ್ರಿಯೋನ್ನತಿಯನ್ನು ಸ್ಥಾಪಿಸಿದ ಪ್ರಯತ್ನ. ಬ್ರಾಹ್ಮಣನಾಗಿ ಹುಟ್ಟುವ ಅವಕಾಶವನ್ನು ಮಹಾವೀರ ಭ್ರೂಣಕ್ಕೆ ನಿರಾಕರಿಸಿದ್ದನ್ನೂ, ಉಳಿದೆಲ್ಲ ತೀರ್ಥಂಕರರೂ ಕ್ಷತ್ರಿಯ ಕುಲೋತ್ಪನ್ನರೆಂಬುದನ್ನೂ ಗಮನಿಸಬೇಕು ; ಅಷ್ಟೇಕೆ ತ್ರಿಷಷ್ಟಿಶಲಾಕಾ ಪುರುಷರೆಲ್ಲ ಕ್ಷತ್ರಿಯರು. ಭಾರತದ ಚರಿತ್ರೆಯಲ್ಲಿ ಮತ್ತು ಕರ್ನಾಟಕದ ರಾಜರಲ್ಲಿ ಬಹುಜನರು ಜೈನ ಮೂಲರಾಗಿರುವುದೂ, ಜೈನ ಪಕ್ಷಪಾತಿಗಳಾಗಿರುವುದೂ ಈ ಕ್ಷತ್ರಿಯ ಮೂಲ ಜನ್ಯವಾದದ್ದು. ಈ ಕೆಲಸ ಕ್ರಿ.ಪೂ. 3-2 ನೆಯ ಶತಮಾನದ ವೇಳೆಗೆ ವ್ಯಾಪಕವಾಗಿ ನಡೆದಿತ್ತು. ಕ್ರಿ.ಪೂ. ಒಂದನೆಯ ಶತಮಾನದ ಮಥುರಾದ ಜೈನ ಶಿಲ್ಪಗಳಲ್ಲಿ ಈ ಜಿನ ಶಿಶುವಿನ ಸಂಬಂಧವಾದ ಗರ್ಭಾಪಹರಣದ ಚಿತ್ರಗಳಿವೆ.

ಬೌದ್ಧೀಯ ಪರಂಪರೆಯೂ ಬ್ರಾಹ್ಮಣ ಶ್ರೇಷ್ಠತೆಯನ್ನು ಅಲ್ಲಗಳೆಯಿತು. ಆದರೆ—'ಬುದ್ಧನು ಕ್ಷತ್ರಿಯ ಅಥವಾ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟುವನೇ ಹೊರತು ವೈಶ್ಯ ಅಥವಾ ಶೂದ್ರ ಜಾತಿಯಲ್ಲಿ ಅಲ್ಲ'—ಎಂಬ ಬೌದ್ಧ ಗ್ರಂಥಗಳ ಹೇಳಿಕೆಯೂ ಇದೆ, ಅಂದರೆ ಅವೈದಿಕ ಪ್ರತಿ ಸಂಸ್ಕೃತಿ ಶ್ರಮಣ ಪರಂಪರೆಗಳಾದ

ಜೈನ–ಬೌದ್ಧ ಮತಗಳಲ್ಲೂ ಸಹ ಒಮ್ಮೊಮ್ಮೆ ವೈಶ್ಯ-ಶೂದ್ರರು ಗೌಣರಾದ ರೆನಿಸುತ್ತದೆ. ವರ್ತಮಾನ ಕಾಲದ 25 ಜನ ಬುದ್ಧರಲ್ಲಿ 22 ಜನ ಕ್ಷತ್ರಿಯ ವಂಶಜರು, ಮೂವರು ಬ್ರಾಹ್ಮಣ ಕುಲಜರು (ಜಯ ವಿಕ್ರಮ, ಎನ್. ಎ. : 1974). ಹಿಂದೂ ಶ್ರೇಣಿಯಲ್ಲಿ ಬ್ರಾಹ್ಮಣ ಶಿಖರವಾಗಿ ಕ್ಷತ್ರಿಯ, ವೈಶ್ಯ, ಶೂದ್ರ, ಅಸ್ಪೃಶ್ಯರು ಅನುಕ್ರಮವಾಗಿ ಕೆಳಗಿನ ತಳಕ್ಕೆ ಇಳಿಯುತ್ತಾರೆ. ಹಿಂದೂ ವರ್ಣ ವ್ಯವಸ್ಥೆಯಲ್ಲಿ ಬ್ರಾಹ್ಮಣ–ಅಸ್ಪೃಶ್ಯ ಎರಡು ಧ್ರುವಗಳು [ಲೂಯಿ ಡುಮೊಂಟ್ : 1970] ಬೌದ್ಧ ಪರಂಪರೆಯಲ್ಲಿ ಕ್ಷತ್ರಿಯ, ಬ್ರಾಹ್ಮಣ, ವೈಶ್ಯ, ಶೂದ್ರ–ಇದು ವರ್ಗೀಕರಣ ಕ್ರಮ. ಜೈನರಲ್ಲಿ ಕ್ಷತ್ರಿಯರಷ್ಟೇ ಒಂದು ವರ್ಗ, ಮತ್ತು ಉಳಿದವರೆಲ್ಲ ಅಕ್ಷತ್ರಿಯರು ಎಂಬ ವಿಂಗಡಣೆ ಪ್ರಥಮ ಹಂತದ್ದು. ಋಷಭನು ತೀರ್ಥಂಕರನಾಗುವ ಮೊದಲು ಇನ್ನೂ ರಾಜನಾಗಿದ್ದಾಗ ಕ್ಷತ್ರಿಯ, ವೈಶ್ಯ, ಶೂದ್ರ ಎಂದು ವೃತ್ತಿಯಾಧಾರಿತ ವರ್ಗೀಕರಣ ವ್ಯವಸ್ಥೆ ಮಾಡಿದನು–ಇದು ಎರಡನೆಯ ಹಂತ. ಭರತನು, ಕ್ಷತ್ರಿಯ ಗುಂಪನ್ನು ಹಾಗೇ ಇಟ್ಟು ಅಕ್ಷತ್ರಿಯರಲ್ಲಿ ವೈಶ್ಯ, ಶೂದ್ರ, ಬ್ರಾಹ್ಮಣ ಎಂದು ವ್ಯವಸ್ಥೆ ಮಾಡಿದನು–ಇದು ಮೂರನೆಯ ಹಂತ. ಇಂದಿಗೂ ಉತ್ತರ ಭಾರತದ ಜೈನ ಸಮಾಜದಲ್ಲಿ ಶ್ವೇತಾಂಬರ-ದಿಗಂಬರವೆಂಬ ಎರಡೂ ಪಂಥಗಳಲ್ಲಿಯೂ, ಅವುಗಳ ಉಪ-ಶಾಖೆಗಳಲ್ಲಿಯೂ ಬ್ರಾಹ್ಮಣವೆಂಬ (ಅರ್ಧ ಮಾಗಧಿ ಪ್ರಾಕೃತ ಭಾಷೆಯಲ್ಲಿ ಮಾಹಣ) ಒಳಜಾತಿಯಿಲ್ಲ. ಜಿನಾಲಯಗಳಲ್ಲಿ ಶ್ರಾವಕರೇ ತಮಗೆ ಮನ ಬಂದಂತೆ ಪೂಜಿಸಿ ಕೊಂಡು ಹೋಗಬಹುದು. ಜಿನಗೃಹಗಳನ್ನು ತೊಳೆದು ಶುಚಿಯಾಗಿಡಲು ಯಾವುದೇ ಜಾತಿಯವರನ್ನು ನೇಮಿಸುತ್ತಾರೆ.

ಜೈನರಲ್ಲಿ ಮೂಲತಃ ಕ್ರಿ.ಪೂ. ದಿಂದ ಕ್ರಿ.ಶ.ದ ವರೆಗೆ ವರ್ಣ ವ್ಯವಸ್ಥೆ ಇರಲಿಲ್ಲ. ಕ್ರಿ.ಶ. 5-6 ನೆಯ ಶ.ದ ವೇಳೆಗೆ ಬ್ರಾಹ್ಮಣವೂ ಸೇರಿಕೊಂಡಿತು. ಇದು ಯಾವ ತುರ್ತು–ಜರೂರಿನಿಂದ ಸೇರಬೇಕಾಯಿತೆಂಬುದಕ್ಕೆ ಸಾಕ್ಷಿ ಚರಿತ್ರೆಯ ಗರ್ಭದಲ್ಲಿದೆ. ಜೈನರೂ ಸಹ ಬ್ರಾಹ್ಮಣರೊಂದಿಗೆ ಮತಾಂತರ ವಿವಾಹಾದಿಗಳಿಂದ ಸಂಕರಗೊಂಡುದರ ಪರಿಣಾಮವಿದು. ಇದು ಪುನಸ್ಕಾರವಲ್ಲ, ಹೊಂದಾಣಿಕೆ.

ಕರ್ನಾಟಕದಲ್ಲಿ, ಅದರಲ್ಲಿಯೂ ದಿಗಂಬರರಲ್ಲಿ ಜೈನ ಬ್ರಾಹ್ಮಣರೆಂಬ ಒಂದು ಗುಂಪಿದೆ: ಜೈನ ಮತಕ್ಕೆ ಮತಾಂತರವಾದ ಬ್ರಾಹ್ಮಣ ಪರಂಪರೆಯವರು ಮತ್ತು ಗೃಹಸ್ಥರಲ್ಲೇ ಹಿಂದಿನಿಂದ ಧಾರ್ಮಿಕ ಆಚರಣೆಗೆ ನೆರವಾಗಲು ನಿಂತ ವರ್ಗದವರು. ಇವರಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಇಂದ್ರ'ರು ಎನ್ನುತ್ತಾರೆ. ಉತ್ತರ ಕರ್ನಾಟಕದ ಕಡೆ, ವಿಶೇಷವಾಗಿ ಬೆಳಗಾವಿ ಜಿಲ್ಲೆಯಲ್ಲಿ 'ಉಪಾಧ್ಯೆ'/ಉಪಾಧ್ರಿ ಎನ್ನುತ್ತಾರೆ. ಹಳೆಯ ಮೈಸೂರು ಭಾಗದಲ್ಲಿ ಪುರೋಹಿತರು/ಅರ್ಚಕರು ಎನ್ನುವರು. ಮದುವೆ ಮುಂಜಿ ವ್ರತ ಪೂಜಾದಿಗಳನ್ನು ಮಾಡುವವರಾದುದರಿಂದ ಇವರು 'ಪುರೋಹಿತ'ರು; ದೇವಾಲಯದಲ್ಲಿ ಅರ್ಚನಾದಿಗಳನ್ನು ಮಾಡುವುದರಿಂದ 'ಅರ್ಚಕ'ರು—ಇವೆರಡೂ

ಹಿಂದೂ ಸಂಸ್ಕೃತಿಯ ಮುಂದುವರಿಕೆ ಶಬ್ದಗಳು. ಜೈನಾಗಮ ಶಾಸ್ತ್ರಾದಿಗಳಲ್ಲಿ ಅಲ್ಪ ಸ್ವಲ್ಪ ಪರಿಶ್ರಮವೂ ಉಳ್ಳವರಾದ ಕಾರಣ ಇವರನ್ನು 'ಪಂಡಿತ'ರು ಎಂದೂ ಸಂಬೋಧಿಸುತ್ತಾರೆ. ಸಂಗ್ರಹವಾಗಿ ಹೇಳುವುದಾದರೆ, ಹಿಂದೂ ಸಮಾಜದ ಸಾಂಪ್ರದಾಯಿಕ ಬ್ರಾಹ್ಮಣರಂತೆಯೇ ಜೈನ ಸಮಾಜದೊಳಗೆ ಅರ್ಚಕ, ಪುರೋಹಿತ, ಇಂದ್ರ, ಉಪಾಧ್ಯೆ, ಪಂಡಿತ–ಇದ್ದಾರೆ. ತಾವು ಶುದ್ಧ ಮಡಿವಂತ ಜೈನ ಬ್ರಾಹ್ಮಣ ರೆಂದು ಪ್ರತಿಷ್ಠೆಯನ್ನು ಪ್ರಕಟಿಸಿದರೂ ಅವರ ಸ್ಥಾನ ಜೈನ ಸಮಾಜದಲ್ಲಿ ದ್ವಿತೀಯ ಸ್ತರದ್ದಾಗಿದೆ. ವ್ರತ ಸ್ವೀಕರಿಸಿದ ಶ್ರಾವಕರು ಈ ಇಂದ್ರ ವರ್ಗದವರಿಂದ ಆಹಾರ ಸಹ ತೆಗೆದುಕೊಳ್ಳುವುದಿಲ್ಲ. ಆದರೆ ಇಂದ್ರರು ಶ್ರಾವಕರಿಂದ ಆಹಾರ–ದಕ್ಷಿಣೆ ಪಡೆಯುತ್ತಾರೆ. ದೇವಸ್ಥಾನಗಳಲ್ಲಿ (ಬಸದಿ) ಶ್ರಾವಕರು ಪೂಜೆಗೋಸ್ಕರ ಇಡುವ ದವಸಧಾನ್ಯ ಫಲಾದಿಗಳನ್ನು 'ದೇವದ್ರವ್ಯ'ವೆಂದು ಈ ಪುರೋಹಿತರು ತಮ್ಮ ಮನೆ ಗೊಯ್ದು ಅನುಭೋಗಿಸುತ್ತಾರೆ. ಆದರೆ ದೇವರಿಗೆ ಅರ್ಪಿಸಿದ್ದನ್ನು ಜೈನ ಶ್ರಾವಕರು 'ನಿರ್ಮಾಲ್ಯ'ವೆನ್ನುವರು, ಮತ್ತು ಅದನ್ನು ವಾಪಸ್ಸು ಪಡಯುವುದಿಲ್ಲ.

ಜೈನ ದೇವಾಲಯವು ಕರ್ನಾಟಕದಲ್ಲಿ 'ಬಸದಿ' ಎಂಬ ಹೆಸರಿನಿಂದ ಸೂಚಿತ ವಾಗುತ್ತದೆ. ಸಂಸ್ಕೃತದ 'ವಸತಿ' ಎಂಬ ಶಬ್ದದ ತದ್ಭವ ರೂಪವಾದ 'ಬಸದಿ' ಎಂಬುದು ತನ್ನ ಮೂಲ ಶಬ್ದಾರ್ಥವನ್ನು ವಿಸ್ತರಿಸಿ, ಉನ್ನತೀಕರಿಸಿಕೊಂಡು ಜಿನಾಲಯ/ಜೈತ್ಯಾಲಯ ಎಂಬರ್ಥದಲ್ಲಿ ಪ್ರಯೋಗವಾಗುತ್ತಿದೆ. ಬಸ್ತಿ, ಬಸ್ದಿ ಎಂಬ ಸಣ್ಣೈಸಿದ ರೂಪಗಳೂ ಚಾಲ್ತಿಯಲ್ಲಿವೆ. ಉತ್ತರ ಭಾರತದಲ್ಲಿ 'ಬಸ್ತಿ' ಎಂದರೆ ವಾಸದ ಮನೆಗಳಿರುವ ಪಟ್ಟಿ, ಹಳ್ಳಿ, ಊರು ಎಂಬರ್ಥವೇ ಹೊರತು 'ಜೈನ ಮಂದಿರ' ಎಂಬರ್ಥವಿಲ್ಲ. ಕರ್ನಾಟಕದ ಸಂದರ್ಭದಲ್ಲಿ ಮಾತ್ರ ಬಸದಿ ಎಂಬ ಶಬ್ದ 'ಜಿನಗೃಹ' ಎಂಬ ವಿಶಿಷ್ಟಾರ್ಥ ಪಡೆದು 7-8 ನೆಯ ಶತಮಾನಗಳಿಂದ ಬಳಕೆಯಾಗು ತ್ತಿದೆ : ಬಸ್ತಿ, ಗ್ರಾಮ, ಬಸ್ತಿಹಳ್ಳಿ, ಬಸ್ತಿಪುರ, ಬಸ್ತಿ ಉಳ್ಳಾಲ—ಹೀಗೆ ಸ್ಥಳವಾಚಿ ಯಾಗಿಯೂ ಕನ್ನಡ ಭಾಷೆಯಲ್ಲಿ ಪ್ರಚಾರ ಪಡೆದಿದೆ, ಇದು ಜೈನ ಧರ್ಮ ಮತ್ತು ಜೈನ ಸಮಾಜ ಕರ್ನಾಟಕದ ಮುಖ್ಯ ಧಾರೆಯಲ್ಲಿ ಹಾಸುಹೊಕ್ಕಾಗಿ ಬೆರೆತು ಬಾಳಿದ ರೀತಿಗೊಂದು ಸಾಕ್ಷಿಯಾಗಿ ನಿಂತಿದೆ. ವೈದಿಕ ಸಂಸ್ಕೃತಿ ಪ್ರತಿಪಾದಿಸಿದ 'ಅವತಾರ ಕಲ್ಪನೆ, ಜಾತಿವರ್ಣಗಳು ದೈವ ನಿರ್ಮಿತ, ಈ ಲೋಕ ದೈವಸೃಷ್ಟಿ' ಎಂಬಷ್ಟನ್ನೂ ನಿರಾಕರಿಸಿದ ಪ್ರತಿ ಸಂಸ್ಕೃತಿ ಜೈನ ಪರಂಪರೆಯಲ್ಲಿ ದೇವಾಲಯ ಎಂಬುದು ದೇವರಿಲ್ಲದ ಗುಡಿ. ಬಸದಿಗಳು ದೇವರುಗಳ ಆಲಯವಲ್ಲ, ಅವು ಜಿನಾಲಯ, ಜಿನಗೃಹ. ಜಿನನು ದೇವರ ಅವತಾರವಲ್ಲ; ಅವನು ಸಾಧನೆಯಿಂದ ಜಿನನಾದ ಸಾಮಾನ್ಯ ಮನುಷ್ಯ. ಅವನಿಗೆ ಎರಡಕ್ಕಿಂತ ಹೆಚ್ಚು ಕೈಕಾಲು ಭುಜಗಳಿಲ್ಲ. ಆಯುಧ-ಆಭರಣಗಳಿಲ್ಲ. ಹಿಂದೂ ದೇವರುಗಳಂತೆ ವರಪ್ರದಾಯಕನೂ ಅಲ್ಲ, ಶಾಪ ಕೊಡು ವವನೂ ಅಲ್ಲ.

ಜಿನನನ್ನು ಪೂಜಿಸುವುದು ಆತ ತನ್ನ ಜೀವಿತ ಕಾಲದಲ್ಲಿ ಮಾಡಿದ ಮಹತ್ ಸಾಧನೆಗೆ, ಏರಿದ ಎತ್ತರಕ್ಕೆ; ಆತ ತೋರಿದ ತ್ಯಾಗದ ಹಾದಿಯಲ್ಲಿ ಹೋಗಲು ಸ್ಫೂರ್ತಿ ಪ್ರೇರಣೆ ಬರಲಿ ಎಂದು ಗೌರವ ತೋರಿಸಲಾಗುತ್ತದೆ. ಈ ಸ್ಫೂರ್ತಿ-ಪ್ರೇರಣೆಗಳನ್ನೂ ಸಹ ಆತ ಕರುಣಿಸುವುದಿಲ್ಲ, ಆತ ಏನನ್ನೂ ಅನುಗ್ರಹಿಸುವುದಿಲ್ಲ. ಜೈನರು ಜಿನ ಭಕ್ತರು ಎಂಬುದಕ್ಕಿಂತ ಜಿನನ ಹಿಂಬಾಲಕರು ಎಂಬುದು ಸಮರ್ಪಕವಾಗಿದೆ. ಈ ಅರ್ಥದಲ್ಲಿ ಬಸದಿ ಎಂಬುದು ಸಮವಸರಣದ ಅನುಕರಣ. ಬಸದಿಯೊಳಗೆ ಪೂಜಾ ಸಾಮಗ್ರಿ ಇಡುವುದು ಅವನ್ನು ಸ್ವೀಕರಿಸಿ ಜಿನನು ಪ್ರಸನ್ನನಾಗುತ್ತಾನೆ ಎಂದಲ್ಲ; ರಿಕ್ತಹಸ್ತರಾಗಿ ಗೌರವ ತೋರುವುದು ಸರಿಯಲ್ಲವೆಂಬ ಲೌಕಿಕ ಕಾರಣಕ್ಕಾಗಿ. ಮತ್ತು ಈ ಪೂಜಾದಿ ವಿಧಾನ ಕೂಡ ಅಜೈನರ ಪ್ರಭಾವದಿಂದ ಬಂದದ್ದು. ಜೈನ ತತ್ವದಲ್ಲಿ ಮೂಲತಃ ಫಲಪುಷ್ಪಾದಿಗಳನ್ನು ಇಡದೆಯೇ ಭಾವಪೂಜೆ ಮಾಡುವುದು ಸಾಕೆಂದು ಶಾಸ್ತ್ರಗ್ರಂಥಗಳು ಸ್ಪಷ್ಟಪಡಿಸಿವೆ. ಜಿನಗೃಹದಲ್ಲಿ ಹಿಂದೂ ಗುಡಿಗಳಂತೆ ಚರುಪು ಪ್ರಸಾದ ಪುಳಿಯೋಗರೆ ವಿತರಣೆ ಪರಿಪಾಟಿಯಿಲ್ಲ. ಜೈನರ ಮೂಲ ಆಗಮ ನಿಯಮದಂತೆ ಮೂರ್ತಿ ಪೂಜೆಯೇ ಮಾಡುವಂತಿಲ್ಲ. ಈ ಬಸದಿಗಳನ್ನು ಕಟ್ಟುವ, ಜಿನಬಿಂಬ ಮಾಡಿಸುವ ಪದ್ಧತಿ ಕ್ರಿ.ಪೂ. ಮೂರು ಎರಡನೆಯ ಶತಮಾನದಿಂದ ಈಚೆಗೆ ರೂಢಿಗೆ ಬಂದಿದೆ. ಕ್ರಿ.ಶ. ಮೂರನೆಯ ಶತಮಾನದ ತರುವಾಯ ಯಕ್ಷಯಕ್ಷಿಯರನ್ನು ಪೂಜಿಸುವ ಪರಂಪರೆ ಪ್ರಾರಂಭವಾಗಿದೆ. [ಸಂಪನಾ: 1976] ಇಂದಿಗೂ ಸ್ಥಾನಕವಾಸಿ ಜೈನಪರಂಪರೆಯವರು ಮೂರ್ತಿ ಪೂಜಾ ಪದ್ಧತಿಯು ಮಿಥ್ಯಾತ್ವವೆಂದು ತಿಳಿದು ಜಿನಬಿಂಬಗಳನ್ನು ನಿರ್ಮಿಸುವುದಿಲ್ಲ, ಬಸದಿಗಳನ್ನು ಕಟ್ಟಿಸುವುದಿಲ್ಲ, ಪೂಜಾದಿಗಳನ್ನು ಮಾಡುವುದಿಲ್ಲ; ಅವರು ಕೇವಲ ಸ್ವಾಧ್ಯಾಯ, ಪ್ರಾರ್ಥನೆಗಳಿಗೆ ಪ್ರಾಧಾನ್ಯ ಕೊಟ್ಟಿದ್ದಾರೆ. ಗುಜರಾತಿನ ಶ್ರಾವಕ ಶ್ರೇಷ್ಠ ಲೋಂಕಾ ಶಾಹ(ಕ್ರಿ.ಶ. 1451) ದೇವಾಲಯ ಪೂಜೆಯನ್ನು ಮಿಥ್ಯಾತ್ವವೆಂಬುದನ್ನು ಆಗಮಾಧಾರಗಳನ್ನಿತ್ತು ಪ್ರತಿಪಾದಿಸಿದನು.

ಪಂಚಮಹಾಭೂತಗಳ ವಿಚಾರವಾಗಿಯೂ ಹಿಂದೂ ಸಂಸ್ಕೃತಿಗಿಂತ ಭಿನ್ನವಾದ ನಿಲುಮೆ ಪ್ರತಿ ಸಂಸ್ಕೃತಿ ಶ್ರಮಣ ಪರಂಪರೆಯಲ್ಲಿ ಪ್ರತಿಪಾದಿತವಾಗಿದೆ. ಅಗ್ನಿ ಚಂದ್ರ ಸೂರ್ಯರಿಗೆ ಜೈನರಲ್ಲಿರುವ ಮಾನ್ಯತೆ ಅವು ದೈವದ ಪ್ರತೀಕವೆಂಬ ಅರ್ಥದಲ್ಲಿ ಅಲ್ಲ. ವೈದಿಕರಂತೆ ಜೈನರೂ ಸುಡುವರು–ಅಗ್ನಿ ಸಂಸ್ಕಾರ ಸಮಾನ. ಆದರೆ ಪವಿತ್ರಾಗ್ನಿಯ ಪೂಜೆಯ ಕ್ರಮ ಇಲ್ಲಿ ಇಲ್ಲ; ಅಗ್ನಿಹೋತ್ರಿಗಳು ಇಲ್ಲಿಲ್ಲ. ನೀರು ನೆಲ ಗಾಳಿ—ಇವುಗಳನ್ನು ದೈವವೆಂದು ತಿಳಿದಿಲ್ಲ; ಜಲಾನಿಲಗಳನ್ನು ಕುರಿತು ಸ್ತೋತ್ರ ಕೃತಿಗಳಿಲ್ಲ. ಗಂಗಾಸ್ನಾನ ಎಂಬಿತ್ಯಾದಿ ಪವಿತ್ರ ನದಿಗಳಲ್ಲಿ ದೈವತ್ವದ ಭಾವನೆಯಿಂದ ಸ್ನಾನ ಮಾಡುವುದನ್ನು ಖಂಡಿಸಿದ್ದಾರೆ. ನೀರು ಕೂಡ ಏಕೇಂದ್ರಿಯ ಜೀವವುಳ್ಳದ್ದಾದ ಕಾರಣ ಜೈನ ಮುನಿಗಳಿಗೆ ತಣ್ಣೀರು ಮುಟ್ಟುವುದು ನಿಷಿದ್ಧ. ವ್ರತ ಸ್ವೀಕರಿಸಿದ

ಶ್ರಾವಕರು ಕೂಡ ಕಾಸಿದ ನೀರನ್ನು ಉಪಯೋಗಿಸುವರು; ವನಸ್ಪತಿ ಪೂಜೆಯೂ ಇಲ್ಲ. ತುಳಸಿ ಪೂಜೆ, ನೆಲ್ಲಿಗಿಡದ ಪೂಜೆ ಮತ್ತು ಕೆಲವು ನಿರ್ದಿಷ್ಟ ಗಿಡ ಮರ ಎಲೆಗಳು ಹಿಂದೂ ದೇವತೆಗಳ ಪ್ರತೀಕವೆಂದು ಪೂಜಿಸುವರು. ಆದರೆ ಜೈನರು ನಿಸರ್ಗದ ತುಂಬ ಜೀವವಿದೆ ಎಂದವರು. ನಿಗೋದ ಜೀವಿಗಳಾದ ವನಸಿರಿಯನ್ನು, ಗಿಡಮರಗಳನ್ನು ನಾಶಮಾಡಬಾರದೆಂದಿದ್ದಾರೆ. ಸುಮಾರು 32 ಬಗೆಯ ತರಕಾರಿ ಗಡ್ಡೆಗೆಣಸು, ಪಡವಲಕಾಯಿ, ಈರುಳ್ಳಿ, ಬೆಳ್ಳುಳ್ಳಿ, ಫಲಗಳನ್ನು, ಮಕಾರ ಕ್ರಿಯಗಳನ್ನು ವ್ರತ ಸ್ವೀಕರಿಸಿದ ಶ್ರಾವಕರು ಸಹ ತಿನ್ನರು [ವಿಲಿಯಮ್ಸ್ ಆರ್. : 1963: 110-116]. ಜೈನರಲ್ಲಿ ಗೋಪೂಜೆ ಮಾಡುವುದು–ಇತ್ಯಾದಿ ಪದ್ಧತಿಗಳಿಲ್ಲ. ಆದರೆ ಹಿಂದೂ ಧರ್ಮದ ಪ್ರಭಾವದಿಂದ ಗಂಗಮ್ಮನ ಪೂಜೆ, ಲಕ್ಕೀಗಿಡ ಪೂಜೆ, ನಾಗರ ಪೂಜೆ ಮೊದಲಾದ ಸಂಪ್ರದಾಯಗಳು ಜೈನ ಸಮಾಜದಲ್ಲಿ ಕ್ರಿ.ಶ. ದ ಕಾಲದಿಂದ ಈಚೆಗೆ ಬಂದಿವೆ.

ಹಾಗಾದರೆ ಹಿಂದೂ ಸಂಸ್ಕೃತಿಯ ಪ್ರಭಾವ ಈ ಪ್ರತಿ ಸಂಸ್ಕೃತಿಯ ಸಮಾಜದ ಮೇಲೆ ಯಾವ ಕಾಲಘಟ್ಟದಲ್ಲಿ ಆಯಿತು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಭಾರತ ದೇಶದ ಚರಿತ್ರೆಯ ಅಧ್ಯಯನದಿಂದ ಇದಕ್ಕೆ ಉತ್ತರಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಕ್ರಿ.ಪೂ. ಆರನೆಯ ಕ್ರಿ.ಶ. ದವರೆಗೆ ಒಂದನೆಯ ಘಟ್ಟವೂ, ಕ್ರಿ.ಶ.ದ ಆರಂಭದಿಂದ 4ನೆಯವರೆಗೆ ಎರಡನೆಯ ಪ್ರಮುಖ ಘಟ್ಟ ಜೈನ ಸಮಾಜದಲ್ಲಿ ಕಂಡುಬರುತ್ತದೆ; ಕ್ರಿ.ಶ. 5 ರಿಂದ 9ನೆಯ ಶತಮಾನದವರೆಗೆ ಮೂರನೆಯ ಘಟ್ಟವಿದೆ. ಇವುಗಳಲ್ಲಿ ಮೊದಲನೆಯ ಘಟ್ಟ ಜೈನ ಶರಣ ಪರಂಪರೆಯ ಪ್ರತಿ ಸಂಸ್ಕೃತಿಯು ಅನ್ಯಪ್ರಭಾವಗಳಿಗೆ ಅಷ್ಟಾಗಿ ಒಳಗಾಗದೆ ತನ್ನ ಮೂಲ ಸ್ವರೂಪದಿಂದ ಬೆಳೆದು ಬಾಳಿದ ಕಾಲ. ಎರಡನೆಯ ಘಟ್ಟದಲ್ಲಿ ಈ ಜೈನತ್ವದೊಳಗೆ ಅನ್ಯಪ್ರಭಾವಗಳು ಸೇರ್ಪಡೆಯಾಗಲು ಪ್ರಾರಂಭವಾದ ಅವಧಿ. ಮೂರನೆಯ ಘಟ್ಟವು ಬೌದ್ಧ ಹಿಂದೂ ಮೊದಲಾದ ಮತಧರ್ಮಗಳ ಪ್ರಭಾವವು ಜೈನ ಪ್ರತಿ ಸಂಸ್ಕೃತಿಯ ರಚನೆಯಲ್ಲಿ ಸ್ಥಿರ ಸ್ವರೂಪದಿಂದ ಅವಿಭಾಜ್ಯ ಅಂಗವೆಂಬಂತೆ ಮಾನ್ಯತೆ ಪಡೆದ ಕಾಲ. ಮುಖ್ಯವಾಗಿ ಗುಪ್ತರ ಕಾಲದಲ್ಲಿ, ಅದರಲ್ಲಿಯೂ ಸಮುದ್ರಗುಪ್ತನ ಕಾಲದಲ್ಲಿ ಜೈನ ಸಮಾಜ ಹೊರಗಿನ ಕೆಲವು ಪ್ರಭಾವಗಳನ್ನು ತನ್ನ ಜೀವನ ವ್ಯವಸ್ಥೆಯಲ್ಲಿ ಸಮಾವೇಶಗೊಳಿಸಿಕೊಂಡಿತು.

ಜಿನಸೇನಾಚಾರ್ಯರು (ಮಹಾ ಪುರಾಣ) ಆದಿಪುರಾಣ ಬರೆಯುವ ವೇಳೆಗೆ ಈ ಪ್ರತಿ ಸಂಸ್ಕೃತಿಯಾದ ಶ್ರಮಣ ಪರಂಪರೆ ಸು. 1500 ವರ್ಷಗಳಷ್ಟು ದಾರಿ ಕ್ರಮಿಸಿತ್ತು. ಅದು ಪ್ರಾರಂಭವಾದ ಉಗಮ ಸ್ವರೂಪಕ್ಕೂ, ಜಿನಸೇನರ ಸಮಕಾಲೀನ ಸ್ವರೂಪಕ್ಕೂ ಸಾಕಷ್ಟು ಮಾರ್ಪಾಟುಗಳು ನಡೆದಿದ್ದುವು; ಈ ವ್ಯತ್ಯಾಸಗಳನ್ನು ಸಮರ್ಪಕವಾಗಿ ಅರ್ಥೈಸುತ್ತ ಒಂದು ವ್ಯಾಪಕವಾದ ಸಮಾಜೊ-ಧಾರ್ಮಿಕ ಚೌಕಟ್ಟನ್ನು ಕಟ್ಟಿ ಅದರೊಳಗೆ ಜೈನ ಸಮಾಜವನ್ನಿಟ್ಟು ಉಳಿದ ದರ್ಶನಗಳ ಸಂದರ್ಭದಲ್ಲಿಟ್ಟು ತೋರಿಸುವ ಮಹತ್ವದ ಹೊಣೆಯನ್ನು ನಿರ್ವಹಿಸಿದವರು ಜಿನಸೇನರು, ಭಾರತೀಯ

ಸಂಸ್ಕೃತಿ, ಷಡ್ದರ್ಶನಗಳು, ಜೈನ ಪರಂಪರೆ, ಪುರಾಣಗಳ ಸಂಪ್ರದಾಯ—ಇವೆಲ್ಲದರ ಸಮಗ್ರ ವಿವೇಚನೆಗೆ ಮಹತ್ವದ ಕೊಡುಗೆ ಮಹಾಪುರಾಣ. ಜೈನ ಪರಂಪರೆಯನ್ನು ಕುರಿತ ಯಾವುದೇ ಬಗೆಯ ವಿವರಣೆ–ವಿಶ್ಲೇಷಣೆಗೆ ತೊಡಗುವವರಿಗೆ ಪ್ರಧಾನ ಆಧಾರ ವಾಗಿರುವುದು ಮಹಾಪುರಾಣ. ಮಹಾಪುರಾಣ ಪೂರ್ವದ ಯುಗ, ಮಹಾಪುರಾಣದ ಅನಂತರದ ಯುಗ–ಹೀಗೆ ವಿಭಜಿತ ಅಧ್ಯಯನಕ್ಕೆ ಇದು ಕೇಂದ್ರ ಬಿಂದು.

ಅಸ್ಪೃಶ್ಯತೆಯನ್ನು ಕುರಿತು ಕೈಗೊಳ್ಳುವ ಚರ್ಚೆಗೂ ಈ ಮಹಾಪುರಾಣದ ಸಾಮಗ್ರಿಯನ್ನು ಪರಿಶೀಲಿಸಬೇಕಾಗುತ್ತದೆ. ಜೈನರಲ್ಲಿ, ಭರತ ಚಕ್ರವರ್ತಿಯು ಪ್ರತಿಪಾದಿಸಿದಂತೆ, ಗೃಹಸ್ಥನು ದ್ವಿಜತ್ವ ಪ್ರಾಪ್ತಿಗೆ 8 ಮೂಲಗುಣಗಳನ್ನಾದರೂ ಕೈಗೊಂಡಿರಬೇಕು; ಉಪನಯನಾದಿ ಧಾರ್ಮಿಕ ಸಂಸ್ಕಾರಕ್ಕೆ ದ್ವಿಜರನ್ನು ಬಿಟ್ಟರೆ ಕ್ಷತ್ರಿಯ-ವೈಶ್ಯರ ಪುರುಷರಷ್ಟೇ ಅರ್ಹರು—ಎಂಬ ವಿವರಣೆಯನ್ನು ಗಮನಿಸಿದಾಗ ಜಿನಸೇನರು ಶೂದ್ರರ ವಿಚಾರವಾಗಿ ಇನ್ನಷ್ಟು ಉದಾರವಾಗಿರಬೇಕಿತ್ತೆನಿಸುತ್ತದೆ. ಶೂದ್ರ ವರ್ಗದ ಬಗೆಗೆ ಜಿನಸೇನರು ಹಿಂದೂಗಳ ಮನೋಧರ್ಮಕ್ಕೆ ಹತ್ತಿರವಾಗು ವಂಥ ನಿಲುವು ತಳೆದದ್ದು ಪ್ರಶ್ನಾರ್ಹವಾಗಿದೆ. ಏಕೆಂದರೆ ಶೂದ್ರನಿಗೆ ಜನಿವಾರ ಧರಿಸುವುದನ್ನೂ ಮುನಿಧರ್ಮ ಸ್ವೀಕಾರವನ್ನೂ ನಿರಾಕರಿಸಿದ್ದು ಮೂಲಭೂತವಾಗಿ ಜೈನ ಧರ್ಮಕ್ಕೆ ಅನುಗುಣವಾದದ್ದಲ್ಲ. ಜಿನಸೇನರಿಗಿಂತ ಹಿಂದಿನ ಜೈನಾಚಾರ್ಯರೂ ಮಹಾವೀರರೂ ಈ ರೀತಿ ಅನುದಾರರಾಗಿರಲಿಲ್ಲ; ಶೂದ್ರ-ಅಸ್ಪೃಶ್ಯರಿಗೆ ಹಕ್ಕು ಬಾಧ್ಯತೆ ಸಮಾನವೆಂಬುದೇ ಜೈನಾಗಮಗಳ ಪ್ರತಿಪಾದನೆ.

ಇದೇ ರೀತಿಯಾಗಿ ಜಾತಿವರ್ಣ ವ್ಯವಸ್ಥೆಯೂ ಮೂಲತಃ ಜೈನ ಚೌಕಟ್ಟಿ ನದಲ್ಲ. ಋಷಭ–ಭರತರು ಈ ಜಾತಿ ವಿಂಗಡಣೆ ಮಾಡಿದ್ದು ಅವರನ್ನೂ ತ್ಯಾಗಿ ಗಳಾಗಿರದೆ ಲೌಕಿಕ ರಾಜರಾಗಿದ್ದ ಸಂಸಾರಿ ಸ್ಥಿತಿಯಲ್ಲಿ. ಅದರಿಂದ ಪ್ರಾಚೀನ ಜೈನಾಚಾರ್ಯರ ವಿವೇಚನೆಯ ಪ್ರಕಾರ ಇರುವ ನಿರೂಪಣೆಗಷ್ಟೇ ಬೆಲೆ.

ಕ್ರಿ.ಪೂ. ಆರನೆಯ ಶತಮಾನದಲ್ಲಿ, 2500 ವರ್ಷಗಳ ಹಿಂದೆ, ಎಲ್ಲ ಜಾತಿ ವರ್ಣಗಳವರು ಜೈನ ಮತಕ್ಕೆ ಸೇರತೊಡಗಿದರು : ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜರು ಈ ಪ್ರತಿ ಸಂಸ್ಕೃತಿಯೊಳಗೆ ವಿಲೀನವಾಗತೊಡಗಿದ ಹಂತದಲ್ಲಿ ಅಂದಿನ ಸಾಮಾಜಿಕ ಪ್ರತಿಕ್ರಿಯೆಗಳು ಹೇಗಿದ್ದುವು ಎಂಬುದನ್ನು ಪ್ರಾಚೀನ ಕೃತಿಗಳು ದಾಖಲಿಸಿವೆ. ಪ್ರಸ್ತುತ ಸಂಪ್ರಬಂಧದ ಪುಟ ಮಿತಿಗೆ ಒಳಪಟ್ಟು, ಕೇವಲ ಎರಡು ಪ್ರತಿನಿಧಿ ಸ್ವರೂಪದ ದೃಷ್ಟಾಂತಗಳಿಂದ ಈ ಚರ್ಚೆಗೆ ಪೂರಕ ಸಾಮಗ್ರಿಯನ್ನು ಒದಗಿಸುತ್ತೇನೆ :

1. ಹೊಸದಾಗಿ ಜೈನತ್ವ ಸ್ವೀಕರಿಸಿ ಮತಾಂತರವಾದ ಬ್ರಾಹ್ಮಣರನ್ನು ಅವರ ಮೂಲ ಸಮಾಜದವರು ಹೇಗೆ ಒರಟಾಗಿ, ನಿಕೃಷ್ಟವಾಗಿ ಕಾಣುತ್ತಿದ್ದರೆಂಬುದರ ವರ್ಣನೆಗೆ ಜಯಘೋಷನ ಪ್ರಸಂಗ ಸೂಕ್ತವಾಗಿದೆ. ಪ್ರಾಚೀನ ಆಗಮ ಗ್ರಂಥನಾದ

ಉತ್ತರಾಧ್ಯಯನದಲ್ಲಿ ಈ ಉದಾಹರಣೆಯಿದೆ (xxv ಯಜ್ಞೀಯ) : ಬ್ರಾಹ್ಮಣನಾಗಿದ್ದ ಜಯಘೋಷನು ಜೈನನಾದನು, ಒಮ್ಮೆ ಕಾಶಿಯ ಬಹಿರುದ್ಯಾನದಲ್ಲಿ ತಂಗಿದ್ದನು, ಮಾಸೋಪವಾಸಾನಂತರ ಚರಿಗೆಗೆ ಹೊರಟನು. ವಿಜಯಘೋಷನೆಂಬ ಬ್ರಾಹ್ಮಣನ ಮನೆಯ ಮುಂದೆ ಬಂದನು, ಆತ ಯಾಗ ನಿರತನಾಗಿದ್ದನು. ಯಾಗಾಂತ್ಯದಲ್ಲಿ ಭೋಜನದ ಏರ್ಪಾಟು ನಡೆದಿತ್ತು. ಊಟ ನಿರತ ಬ್ರಾಹ್ಮಣರು ಜಯಘೋಷನಿಗೆ ಆಹಾರದಾನ ನಿರಾಕರಿಸಿದರು ; ಎಲೈ ಸವಣನೇ, ಮುಂದೆ ಹೋಗು. ಈ ಊಟದ ಏರ್ಪಾಟು ನಿನಗಲ್ಲ. ಇದು ಯಜ್ಞಶಾಸ್ತ್ರ ತಜ್ಞರಾದ ವೇದಪಾರಂಗತ ಬ್ರಾಹ್ಮಣರಿಗೆ ಮಾಡಿರುವ ವ್ಯವಸ್ಥೆ' (-ಅದೇ- : xxv. 5-3). ಜೈನನಾಗಿ ಮತಾಂತರ ಮಾಡಿದ್ದ ಜಯಘೋಷನು ಕುಪಿತನಾಗಲಿಲ್ಲ. ಬದಲು 'ನಿಜವಾದ ಬ್ರಾಹ್ಮಣ' ಯಾರೆಂಬುದನ್ನು ವ್ಯಾಖ್ಯಾನಿಸುವನು ; 'ಪ್ರೀತಿ ದ್ವೇಷ ಭಯಾದಿಗಳಿಂದ ವರ್ಜಿತನು ಬ್ರಾಹ್ಮಣನು. ತನಗೆಂದು ಇನ್ನೊಬ್ಬರು ನೀಡದ ಆಹಾರವನ್ನು ತೆಗೆದುಕೊಳ್ಳದಿರುವವನು ಬ್ರಾಹ್ಮಣನು; ಕಾಮಾದಿಗಳಿಗೆ, ನೀರಿನಲ್ಲಿರುವ ತಾವರೆಯ ಹಾಗೆ, ಅಂಟದಿರುವವನು ಬ್ರಾಹ್ಮಣನು" (ಅದೇ ; xxv. 22-28). (ಜಾತಿಯ) ಹುಟ್ಟಿನ ಬದಲು ಚಾರಿತ್ರ್ಯವನ್ನು ಆಧರಿಸಿ ವ್ಯಕ್ತಿಯ ಹಿರಿಮೆ ಸ್ಥಾಪಿತವಾಗುತ್ತದೆಂಬುದು ಈ ಜೈನರ ಪ್ರತಿಪಾದನೆ. ಕ್ಷತ್ರಿಯನಾದರೂ ಮಹಾವೀರನನ್ನು ಬ್ರಾಹ್ಮಣ (ಮಾಹಣ) ಎಂದಿರುವುದು ಈ ಅರ್ಥದಲ್ಲಿ (ಅದೇ : xxv. 33-34) ತಮ್ಮ ಜಾತಿಯನ್ನು ಬಿಟ್ಟು ಹೊರಗೆ ಹೋದವನು ತಮ್ಮ ಜಾತಿಯವರ ಹತ್ತಿರ ಅನ್ನಕ್ಕಾಗಿ ಬಂದ ಸಂದರ್ಭದಲ್ಲಿ ಹೇಗೆ ನಡೆದುಕೊಂಡರೆಂಬುದನ್ನು ಇಲ್ಲಿ ಕಾಣುತ್ತೇವೆ.

2. ಕೆಳಜಾತಿಯವನಾಗಿದ್ದ (ಶ್ವಪಾಕ). ಹರಿಕೇಶೀಯನು ಜೈನನಾದನು (ಅದೇ; xii) ಎಂಬುದು ಉಲ್ಲೇಖನೀಯ ಉದಾಹರಣೆ. ಶ್ರೇಣೀಕೃತ ಭಾರತೀಯ ಜಾತಿ ವ್ಯವಸ್ಥೆಯಲ್ಲಿ ಚಂಡಾಲರೂ ಶ್ವಪಾಕರೂ ಅತ್ಯಂತ ಕೆಳಗಿನ ಪಾತಳಿಯಲ್ಲಿ ಇರುವವರು, ಅವರನ್ನು ಅಸ್ಪೃಶ್ಯರೆನ್ನಲಾಗಿದೆ. ಅವರು ಮೇಲುಜಾತಿ–ವರ್ಣಗಳವರನ್ನು ಮುಟ್ಟುವುದಿರಲಿ, ಅವರ ನೆರಳೂ ಬೀಳುವಂತಿರಲಿಲ್ಲ. ಅವರನ್ನು ಮುಟ್ಟಿದರೆ ಮೈಲಿಗೆ-ಅಶುಚಿ ಆಗುವುದೆಂಬ ತಿಳಿವಳಿಕೆ. ಅಂಥ ಅಸ್ಪೃಶ್ಯ ಜಾತಿಯ ಹರಿಕೇಶಿಯು ಕ್ರಿ. ಪೂ. ಆರನೆಯ ಶತಮಾನದಲ್ಲಿ ಜೈನನಾಗಿದ್ದುದಷ್ಟೇ ಅಲ್ಲದೆ ಇನ್ನೂ ತುಂಬ ಮುಂದುವರಿದು ಜೈನಮುನಿಯೇ ಆಗಿದ್ದನು. ಒಮ್ಮೆ ಈ ಹರಿಕೇಶಿಯು ಆಹಾರಕ್ಕಾಗಿ ಬ್ರಾಹ್ಮಣರ ಯಾಗದ ಜಾಗಕ್ಕೆ ಬಂದನು. ಈಗ ಜೈನನಾಗಿದ್ದರೂ ಅವನು ವ್ರತ ಸ್ವೀಕಾರಕ್ಕೆ ಮೊದಲು ಅಸ್ಪೃಶ್ಯನಾಗಿದ್ದವನೆಂದು ಅರಿತ ಬ್ರಾಹ್ಮಣರು (='ಪ್ರಾಣಿ ವಧೆ ಮಾಡುವವರು, ಜಾತಿಜನ್ಮದ ಗರ್ವದಿಂದ ಕಠಿಣರಾದವರು')- "ನಿನಗೆ ಈ ಆಹಾರ ದಾನ ಮಾಡುವುದಕ್ಕಿಂತ ಈ ಆಹಾರ ಹಾಗೇ ಕೊಳೆತು ಹಾಳಾಗುವುದು ಮೇಲು" ಎಂದು ದೂಷಿಸಿದರು (ಅದೇ : xii-5,6).

ಹರಿಕೇಶಿಯು ಬ್ರಾಹ್ಮಣರ ನಿಂದನೆಗೆ ಹಿಂದೆಗೆಯಲಿಲ್ಲ. ಶಾಂತಚಿತ್ತನಾಗಿ ಧೃತಿಗೆಡದೆ ನುಡಿದನು : 'ನಿಮ್ಮ ನಡತೆ ಸರಿಯಲ್ಲ'. ಬ್ರಾಹ್ಮಣರು, ಅವನು ಹಾಗೆ ಅಂದದ್ದೇ ತಡ ಹರಿಕೇಶಿಯ ಮೇಲೆ ಹರಿಹಾಯ್ದು ಕೋಲು, ಬಡಿಗೆ, ಚಮ್ಮಟಿಗೆಗಳಿಂದ ಬಡಿದು ಚಚ್ಚಿದರು (ಅದೇ : xii. 19). ಯಕ್ಷನು ಪ್ರತ್ಯಕ್ಷನಾಗಿ ಹರಿಕೇಶಿಯ ಪರವಾಗಿ ನಿಂತು ರಕ್ತಪಾತವನ್ನು ತಪ್ಪಿಸಿದನು. ಇದರಿಂದ ಭೀತರಾದ ಬ್ರಾಹ್ಮಣರು ಹರಿಕೇಶಿಯ ಕ್ಷಮೆ ಯಾಚಿಸಿದರು. ಮಹಾನುಭಾವನಾದ ಹರಿಕೇಶಿಯು ವೈರಭಾವಕ್ಕೆ ಎಡೆಗೊಡದೆ ಬ್ರಾಹ್ಮಣರನ್ನು ಮನ್ನಿಸಿದನು : 'ಯಜ್ಞವೆಂದರೆ ಪವಿತ್ರ ಜಲದಲ್ಲಿ ಮೀಯುವುದಲ್ಲ, ಅಗ್ನಿ ಬೆಳಗಿಸುವುದಲ್ಲ, ದೇವರಿಗೆ ಪ್ರಾಣಿ ಬಲಿ ಕೊಡುವುದಲ್ಲ, ಸಂಯಮಪೂರ್ವಕವಾಗಿ ಜೈನಮುನಿಗಳಂತೆ ಕರ್ಮ ಬಂಧಗಳಿಂದ ಬಿಡುಗಡೆ ಪಡೆಯುವುದೇ ಯಾಗ' ಎಂದೂ ಬೋಧಿಸಿದನು (ಅದೇ : xi. 42). ಅಸ್ಪೃಶ್ಯ ಹರಿಕೇಶಿಯ ಪ್ರಕರಣ ಅರ್ಥಗರ್ಭಿತವಾಗಿವೆ :

1. ಇದು ಹಿಂದೂ ಧರ್ಮದ 'ಜಾತಿವರ್ಣ–ಸ್ವಧರ್ಮ' ಸಿದ್ಧಾಂತದ ಬುಡವನ್ನೇ ಕತ್ತರಿಸಿದೆ.
2. ಜೈನಧರ್ಮಕ್ಕೆ ಮತಾಂತರಗೊಂಡವರು ಸಮಾಜದ ಎಲ್ಲ ಜಾತಿ ವರ್ಣಗಳವರೂ ಇದ್ದರೆಂಬುದು ತಿಳಿದದ್ದೇ. ಆದರೆ ಅವರಲ್ಲಿ ಅಸ್ಪೃಶ್ಯರೂ ಇದ್ದಾರೆಂಬುದು ಜೈನ ಪ್ರತಿ ಸಂಸ್ಕೃತಿ ತಳೆದ ಉದಾರ ನೀತಿಯ ಉದಾಹರಣೆಯಾಗಿದೆ.
3. ಜೈನರು ಅಂತ್ಯಜರನ್ನು ಸ್ವೀಕರಿಸಿದ ಮೇಲೆ ಅವರಿಗೆ ತೋರಿದ ಸಮಾನತೆಯು ಧಾರ್ಮಿಕ ಕ್ಷೇತ್ರದಲ್ಲೂ ಪ್ರಕಟವಾಗಿದೆ. ಅಸ್ಪೃಶ್ಯರಿಗೆ ಜೈನ ಮುನಿಯಾಗಲೂ ಅವಕಾಶ ಮಾಡಿಕೊಟ್ಟಿರುವುದು ಹಿಂದೂ ಪರಿಕಲ್ಪನೆಯ ಜಾತಿವರ್ಣ-ಸ್ವಧರ್ಮ ತತ್ತ್ವವನ್ನು ಸಂಪೂರ್ಣವಾಗಿ ಬುಡಮೇಲಾಗಿದೆ. ವೈದಿಕ ವ್ಯವಸ್ಥೆಯಲ್ಲಿ ಸ್ತ್ರೀಗೆ, ಶೂದ್ರನಿಗೆ ಮುನಿಯಾಗುವುದಕ್ಕೆ ಅವಕಾಶವೇ ಇಲ್ಲ, ಅವನಿಗೆ ಅದು ನಿಷಿದ್ಧ.
4. ಹರಿಕೇಶಿಯು ಬ್ರಾಹ್ಮಣರ ನಿಂದೆ ಗರ್ಹಣೆಗೂ, ಚಾಟಿ ಏಟುಗಳಿಗೂ ಗುರಿಯಾದದ್ದು ಧ್ವನಿಪೂರ್ಣ ದಾಖಲೆ. ಸಾಮಾಜಿಕವಾಗಿ ಅಸ್ಪೃಶ್ಯರಿಗೆ ಪ್ರತಿಸಂಸ್ಕೃತಿಯಲ್ಲಿ ದೊರೆತ ಈ ಹೊಸ ಅಂತಸ್ತು, ಹಿಂದೂಗಳಲ್ಲಿ ಉಂಟು ಮಾಡಿದ್ದ ಅಸಹನೆಯ ಭಾವನೆಗಳ ಸ್ಫೋಟವನ್ನು ಈ ಘಟನೆ ಕಣ್ಣಿಡಿಸಿದೆ. ಇಂದಿನ ದಿನಗಳ ದೃಷ್ಟಾಂತದಿಂದ ಈ ಪ್ರಸಂಗಕ್ಕೆ ಪುಷ್ಟಿ ಕೊಡಬಹುದು. ಅಸ್ಪೃಶ್ಯರನ್ನು ಊರಾಚೆ, ಮನೆಯಾಚೆ, ಗುಡಿಯಾಚೆ ನಿಲ್ಲಿಸುತ್ತಾರೆ. ಅಸ್ಪೃಶ್ಯರು ಹಿಂದೂ ಧರ್ಮವನ್ನು ತ್ಯಜಿಸಿ ಕ್ರೈಸ್ತರಾದೊಡನೆ ಅವರಿಗೆ ಮೊದಲು ನಿಷೇಧಿಸಲಾಗಿದ್ದ ಸ್ಥಳಗಳಲ್ಲಿ ಪ್ರವೇಶ ಸುಲಭ ಸಾಧ್ಯವಾಗುತ್ತದೆ.

5. ಹರಿಕೇಶಿಯು ಬ್ರಾಹ್ಮಣರಿಗೇ ಧರ್ಮಬೋಧೆ ಮಾಡಿದ್ದು ಜಾತಿ ವ್ಯವಸ್ಥೆಯ ವಿಡಂಬನೆಗೆ ಕಿರೀಟ ತೊಡಿಸಿದಂತೆ ಆಗಿದೆ. ಜಾತಿ ಚಕ್ರದ ಅರಗಳು ಕೆಳಗಿದ್ದುದು ಮೇಲೆ ಹೋಗಿ, ಮೇಲಿನದು ಕೆಳಗೆ ಇಳಿದಂತಾದುದನ್ನು ಇದಕ್ಕಿಂತ ಧ್ವನಿಪೂರ್ಣವಾಗಿ ತೋರಿಸುವುದು ಸಾಧ್ಯವೆ ಎಂಬಂತಿದೆ.

ಜೈನ ಸಾಹಿತ್ಯದಲ್ಲಿ ಇಂತಹ ನೂರಾರು ದೃಷ್ಟಾಂತಗಳಿವೆ. ಜೈನತ್ವದ ಪ್ರತಿ ಸಂಸ್ಕೃತಿ ನಿರ್ಮಾಣ ಹಂತದಲ್ಲಿ ಅದು ಮುಖಾಮುಖಿಯಾದ ಸವಾಲುಗಳನ್ನು ಜೀರ್ಣಿಸಿಕೊಂಡ ದಾಖಲೆಗಳನ್ನು, ಅಸ್ಪೃಶ್ಯತೆಯ ಸಂಬಂಧವಾಗಿಯೂ, ಪರಿಶೀಲಿಸಬಹುದಾಗಿದೆ.

ಪ್ರಾಕೃತ–ಸಂಸ್ಕೃತಗಳಲ್ಲಿ ಹೇರಳವಾಗಿರುವ ಸಾಮಗ್ರಿಗೆ ದಿಕ್ಸೂಚಿಯಾಗಿ ಈ ನಿದರ್ಶನಗಳನ್ನಿಲ್ಲಿ ಪ್ರಸ್ತಾಪಿಸಲಾಯಿತು. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಈ ಬಗೆಯ ಸಂವಾದಗಳು ಒದಗಿಸುವ ಮಾಹಿತಿಯನ್ನು ಪರಾಮರ್ಶಿಸಬಹುದು. ಕನ್ನಡದಲ್ಲಿ ಸಿಗುವ ಮೊಟ್ಟಮೊದಲನೆಯ ಕೃತಿ ಭ್ರಾಜಿಷ್ಣುವಿನ ವಡ್ಡಾರಾಧನೆ [ಹಂಪನಾ : 1993 : 38-46] ಕವಿರಾಜಮಾರ್ಗಕ್ಕಿಂತ ಅರ್ಧಶತಮಾನ ಹಿಂದಿನ ರಚನೆಯಾದ ವಡ್ಡಾರಾಧನೆಯಲ್ಲಿ ಜೈನತ್ವದ ಪ್ರತಿ ಸಂಸ್ಕೃತಿಯಲ್ಲಿ ಅಸ್ಪೃಶ್ಯರಿಗೆ ಸಿಕ್ಕ ಮಾನವೀಯ ಸಾನುಕಂಪದ ವರ್ತನೆ ಮತ್ತು ಧೋರಣೆ ಕೆನೆಗಟ್ಟಿದೆ. ಸುಕುಮಾರಸ್ವಾಮಿಯ ಕಥೆಯಲ್ಲಿ 'ಮಾದೆಗರ್ಗ್ಗೆ ಪ್ರಧಾನನಪ್ಪ ನೀಳನೆಂಬ ಮಾದೆಗಂಗಂ ಕೇಶಿಯೆಂಬ ಮಾದೆಗಿಂಗಂ ಮಗಳು' ಪುಟ್ಟುಂ ಗುರುಡಿ ಪೊಲತಿಯಾಗಿ ಪುಟ್ಟಿದ್ದನ್ನೂ, ಆ 'ಪೊಲತಿಯ ಕೂಸಂ ಕಂಡತ್ಯಂತ ಸ್ನೇಹವಾಗಿ ಪರವಸದಿಂ ಕಣ್ಣನೀರ್ಗ್ಗಳಂ ಸೂಸಿ ಎಯ್ತಂದು ಮನ್ನುಮಿಕ್ಕು ಕರುಣದಿಂದಂ ಕುಂಚದ ಕೋಲೊಳ್ ಪರೆದಿರ್ದ್ದ ಪಣ್ಗಳಂ ಕೂಸಿನ ಮುನ್ನೆ ಸಾಚ್ಚುತ್ತುಂ ನೀಡುಂಬೇಗಮಿರ್ದ್ದು'ದನ್ನು ತನ್ಮಯತೆಯಿಂದ ನಿರೂಪಿಸಲಾಗಿದೆ [ಅದೇ : 7] : ಅಷ್ಟೇ ಅಲ್ಲದೆ ಆ ಪೊಲತಿಯ ಕೂಸಿಗೆ 'ಅಣುವ್ರತ ಮೊದಲಾಗಿ ಶ್ರಾವಕ ವ್ರತಗಳನ್ನು' ಕೊಡಲಾಯಿತು [ಅದೇ : 9]. ಇದು ಅಸ್ಪೃಶ್ಯರಿಗೆ ಕೊಟ್ಟ ಮನ್ನಣೆ. ಭದ್ರಬಾಹುಭಟಾರರ ಕಥೆಯಲ್ಲಿ ಚೋಳ ತಲೆಯ ದೇಸಿಗ ನಂದಿಮಿತ್ರನನ್ನು, ಆತ ಜೈನ ಮುನಿಯ ಜತೆಯಲ್ಲಿ ಬಂದವನಾದ್ದರಿಂದ ಆ ಮುನಿಗೆ ಸಂದ ಮರ್ಯಾದೆ–ಆತಿಥ್ಯಗಳನ್ನು ರಾಜರಾಣಿಯರೆಲ್ಲ ತೋರಿಸಿ ಸತ್ಕರಿಸುತ್ತಾರೆ [ಅದೇ : 68-69] ಆತ ಯಾವ ಜಾತಿಯವನೆಂದು ಜಾತಿವರ್ಣಗಳ ಗೊಡವೆಗೇ ಹೋಗುವುದಿಲ್ಲ. ಅಸ್ಪೃಶ್ಯರಾದ ತೋಟಿ–ತಳವಾರರೆಲ್ಲ ಜೈನರಾಗಿ, ವ್ರತ ಸ್ವೀಕರಿಸಿ, ತಪಸ್ಸುಮಾಡಿ ಸ್ವರ್ಗಾಪವರ್ಗ ಸದ್ಗತಿಗೆ ಸಂದ ಸಂಗತಿಗಳನ್ನು ಇಲ್ಲಿನ (ಅದೇ : 108–119) ಕಥೆಗಳೇ ಅಲ್ಲದೆ ಜೈನ ಸಾಹಿತ್ಯದ ಅನ್ಯಕೃತಿಗಳೂ ಸಾದರಪಡಿಸಿವೆ. ಆರಾಧನಾ ಕರ್ಣಾಟ ಟೀಕಾವನ್ನು ರಚಿಸಿದ ಭ್ರಾಜಿಷ್ಣುಕವಿಗೆ ಮೂಲ ಆಕರವಾದ ಆರಾಧನಾ

ಗ್ರಂಥವನ್ನು ಪ್ರಾಕೃತದಲ್ಲಿ ಬರೆದ ಶಿವಕೋಟಿ ಆಚಾರ್ಯನ ಕಾಲ ಕ್ರಿ.ಶ. 1-2ನೆಯ ಶತಮಾನ. ಆ ವೇಳೆಗಾಗಲೇ ಅಸ್ಪೃಶ್ಯರು ಪ್ರಮುಖ ಪಾತ್ರಗಳಾಗಿ ಜೈನತ್ವದ ಭಾಗವಾಗಿ ಬೆರೆತು ಬಾಳಿದ ಸಾಹಿತ್ಯ ಸೃಷ್ಟಿಯಾಗಿತ್ತೆಂಬುದು ಪರಿಭಾವನೀಯವಾಗಿದೆ.

ಭ್ರಾಜಿಷ್ಣುವನ್ನು ದಾಟಿ ಕನ್ನಡ ಸಾಹಿತ್ಯದಲ್ಲಿ ಹೆಜ್ಜೆಗಳನ್ನು ಮುಂದಿಟ್ಟರೆ ಪೊನ್ನನ ಶಾಂತಿಪುರಾಣದಲ್ಲಿ ಒಂದು ಅಪೂರ್ವ ಘಟನೆ ನಿರೂಪಿತವಾಗಿದೆ. ಪೊನ್ನನು ಕಪಿಲನ ಪ್ರಸಂಗವನ್ನು ನಾಟಕೀಯ ದೃಶ್ಯವಾಗಿ ವಿಸ್ತರಿಸಿದ್ದೇಕೆ ಎಂಬ ಪ್ರಶ್ನೆಯಿಂದ ಹೆಕ್ಕಿ ನೋಡಿದರೆ ಅದರ ನಿಜ ಧ್ವನಿ ಕೇಳುತ್ತದೆ [ಹಂಪನಾ : 1982 : 198-200]. ಬ್ರಾಹ್ಮಣರ ಮಗಳಾದ ಸತ್ಯಭಾಮೆಯು ತನ್ನ ಪತಿ ಕಪಿಲನು ಅಬ್ರಾಹ್ಮಣನೆಂದೂ, ದಾಸೀ ಪುತ್ರನೆಂದೂ ತಿಳಿದು ರಾಜನಲ್ಲಿಗೆ ಪೋಗಿ 'ರಕ್ಷ ರಕ್ಷ' ಎಂದು ಹುಯ್ಯಲಿಟ್ಟಳು ; ನೃಪನಿಗೆ "ನೀನುಂ ವರ್ಣಾಶ್ರಮ ಗುರುವಯ್ ಎನ್ನಂ ಕಾವುದು" [ಅದೇ : 6-65ವ] ಎಂದು ಮೊರೆಯಿಟ್ಟಳು. (ರಾಜನು) ಬ್ರಾಹ್ಮಣ ಸ್ತ್ರೀಯನ್ನು ಮದುವೆಯಾಗಿ ಅನುಭವಿಸುತ್ತಿದ್ದ ಅಸ್ಪೃಶ್ಯ ಕಪಿಲನನ್ನು ಅಪಮಾನಗೊಳಿಸಿ ಪಟ್ಟಣದಿಂದ ಓಡಿಸಿದನು. ಅನಂತರ ಆ ಬ್ರಾಹ್ಮಣ ಸ್ತ್ರೀ ಸತ್ಯಭಾಮೆಯನ್ನು ತನ್ನ ಅಂತಃಪುರಕ್ಕೆ ಸೇರಿಸಿಕೊಂಡನು. ಮುಂದೊಂದು ದಿನ ಆ ರಾಜನು ಸತ್ತಾಗ ಅವನ ಮೇಲಿನ ಮೋಹದಿಂದ ಬ್ರಾಹ್ಮಣಿಯೂ ವಿಷಪುಷ್ಪವನ್ನು ಮೂಸಿ ತೀರಿಕೊಂಡಳು [ಅದೇ : 6-95] ಕಪಿಲ-ಸತ್ಯಭಾಮೆಯರ ಕಥೆಯೇ ಕನ್ನಡ ಸಾಹಿತ್ಯದಲ್ಲಿ ಮಾರಮ್ಮನ ಕಥೆಯ ಮೊಟ್ಟಮೊದಲನೆಯ ಪ್ರಾಚೀನತಮ ದಾಖಲೆ: ಪೊನ್ನ ಕವಿಗೇ ಇದರ ಶ್ರೇಯಸ್ಸು.

ಕಪಿಲನ ಕಥೆಯಲ್ಲಿರುವ ಇನ್ನೊಂದು ಸೂಕ್ಷ್ಮವೆಂದರೆ ಅಂತ್ಯಜನಾದ ಕಪಿಲನಿಗೆ ವಿದ್ಯೆ ಕಲಿಯಲು ಅವಕಾಶವಿಲ್ಲದ್ದರಿಂದ, ಬ್ರಾಹ್ಮಣರಿಗೆ ಪಾಠ ಹೇಳಿಕೊಡುವುದನ್ನು ಕೇಳಿಸಿಕೊಂಡು ಕಪಿಲನು ಬ್ರಾಹ್ಮಣರಿಗಿಂತ ಬುದ್ಧಿವಂತನಾದನೆಂಬುದು [ಅದೇ : 6-64ವ.] ; ತನ್ನ ದಾಸಿಯ ಪುತ್ರನಾದ ಕಪಿಲನು ಏಕಪಾಠಿಯಾಗಿದ್ದನೆಂದು ಅವನ ತಂದೆ ಹೇಳುವ ಮಾತುಗಳು ಗಮನಿಕೆಗೆ ತಕ್ಕದ್ದು. ಇದು ಜೈನರ ಪುರಾಣದಲ್ಲಿ ಬರುವ ಒಂದು ಉಪಾಖ್ಯಾನ.

ಕನ್ನಡ ಸಾಹಿತ್ಯದಲ್ಲಿಯೇ ಸರ್ವಸಮಾನತೆಯ ಅಂತಃಕರಣದಿಂದ, ಜನಪರವಾದ ಮಾನವೀಯ ಭಾವನೆಗಳಿಂದ ಸ್ಪಂದಿಸಿದ ಏಕಮೇವಾದ್ವಿತೀಯನಾದ ಕವಿ ಬ್ರಹ್ಮಶಿವ. ಜಿನಸೇನ ಆಚಾರ್ಯನು ಮನುಷ್ಯ ಜಾತಿರೇಕೈವ ಎಂದೂ ಪಂಪನು ಮನುಷ್ಯ ಜಾತಿ ತಾನೊಂದೆ ವಲಂ ಎಂದೂ ಹೇಳಿದ್ದನ್ನು ಬದುಕಿಗೆ ಅಳವಡಿಸಿ ಗುಡುಗಿದವನು ಬ್ರಹ್ಮಶಿವ. ಬ್ರಹ್ಮಶಿವನವಾಣಿ ಕವಿವಾಣಿಯಷ್ಟೇ ಆಗದೆ ಜನವಾಣಿಯೂ ಆಗಿದೆ, ಕೆಲವರಿಗೆ ಸಿಂಹವಾಣಿಯೂ ಆಗಿದೆ. ಹೃದಯ ದಾರಿದ್ರ್ಯದ ಜೀವ ವಿರೋಧಿ ಕಾವ್ಯಗಳ ಮರುಳುಗಾಡಿನಲ್ಲಿ ಬ್ರಹ್ಮಶಿವಕವಿಯ ಸಮಯ ಪರೀಕ್ಷೆ ಕಾವ್ಯ ಒಂದು ನೀರ್ದಾಣ,

ನಲ್‌ದಾಣ. ಅವನ ನಿಲುಮೆಯಲ್ಲಿರುವ ಧೈರ್ಯ ಮತ್ತು ಔದಾರ್ಯ ಇಡೀ ಕನ್ನಡ ಸಾಹಿತ್ಯದಲ್ಲಿ ಅನನ್ಯವೆನಿಸುವಂತಹುದು. ಸಮಾಜೋ – ಧಾರ್ಮಿಕ – ಚಾರಿತ್ರಿಕ ಅಧ್ಯಯನದ ನೆಲೆಯಲ್ಲಿ ಸಮಯ ಪರೀಕ್ಷೆ ಕುರಿತು ವಿಪುಲವಾದ ಚರ್ಚೆಗಳಿಗೆ ಅವಕಾಶವಿದೆ. ಬ್ರಹ್ಮಶಿವಕವಿ ಎತ್ತುವ ಅಸ್ಪೃಶ್ಯರ ಸಂಬಂಧದ ತಾತ್ವಿಕ ವಾಗ್ವಾದದ ನೆಲೆಗಳು ಇಂದಿನ ಸಂದರ್ಭದಲ್ಲಿ ಹೆಚ್ಚು ಮೌಲಿಕವಾಗಿವೆ.

ಕ್ಷತ್ರಿಯ ವೈಶ್ಯ ಶೂದ್ರ ಅಂತ್ಯಜ ಅಸ್ಪೃಶ್ಯ ಅಥವಾ ಮತ್ತಾವುದೇ ಜಾತಿಯಲ್ಲಿ ಹುಟ್ಟಿದರೂ ಜೈನಮತದ ವ್ರತಗಳನ್ನು ಕೈಗೊಂಡ ಮೇಲೆ ಅವರು ಹಿಂದಿದ್ದ ಜಾತಿಗಳನ್ನೆತ್ತಿ ಮಾತನಾಡುವುದು ಸರಿಯಲ್ಲವೆಂಬ ಮಾನಸಿಕ ದೃಷ್ಟಿಯೊಂದು ಜಾಗೃತವಾಗಿತ್ತು. ಒಮ್ಮೆ ಜೈನನಾದ ಮೇಲೆ ಅವರು ಯಾರೇ ಆದರೂ ಗೌರವಾರ್ಹರಾಗುವರೆಂದು ಬ್ರಹ್ಮಶಿವನು ಘೋಷಿಸಿದ್ದಾನೆ. ಬ್ರಹ್ಮಶಿವ ಕವಿಯ ಪದ್ಯಗಳು ವ್ಯಾಖ್ಯಾನ ನಿರಪೇಕ್ಷಿಯಾಗಿವೆ, ಹೃದಯ ಸ್ಪರ್ಶಿಯಾಗಿವೆ, ಅಸ್ಪೃಶ್ಯರ ಪರವಾಗಿವೆ. ಇಡೀ ಕನ್ನಡ ಸಾಹಿತ್ಯದ ಕವಿ-ಕಾವ್ಯ ಪರಂಪರೆಯಲ್ಲಿಯೇ ಏಸು, ಒಟ್ಟಾರೆಯಾಗಿ ಭಾರತೀಯ ವಾಙ್ಮಯದಲ್ಲಿಯೋ ಅಸ್ಪೃಶ್ಯರ ವಕೀಲ-ವಕ್ತಾರನಾಗಿ ಬ್ರಹ್ಮಶಿವಕವಿಯ ಹಾಗೆ, ಅವನಿಗಿಂತಲೂ ಹಿಂದೆ ಮತ್ತು ಅವನ ತರುವಾಯ, ಮಾತನಾಡಿದ ಮಹಾ ಮಾನತಾವಾದಿ ಧೈರ್ಯಶಾಲಿ ಇನ್ನೊಬ್ಬನಿಲ್ಲ ; ಬ್ರಹ್ಮಶಿವನ ಚಿಂತನಲಹರಿಗೆ ಮತ್ತಷ್ಟು ಜೀವಧ್ವನಿ-ಜೀವಕಳೆ ಬಂದದ್ದು ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ, ಡಾ. ಬಿ. ಆರ್. ಅಂಬೇಡ್ಕರರ ಎರಡು ಮುಖ್ಯ ಕೃತಿಗಳಲ್ಲಿ ; ಭಾರತದಲ್ಲಿ ಜಾತಿ, ಮತ್ತು ಜಾತಿ ನಿರ್ಮೂಲನೆ.

ಕ್ರಿ.ಪೂ.ದ ಕಡೆಯ ಹಾಗೂ ಕ್ರಿ.ಶ.ದ ಆರಂಭದ ಶತಮಾನಗಳಲ್ಲಿ ನಡೆಯುತ್ತಿದ್ದ ವೈಯಕ್ತಿಕ ಹಾಗು ಸಾಮುದಾಯಿಕ ಮತ ಪರಿವರ್ತನೆಗಳನ್ನೂ, ತತ್ಸಂಬಂಧವಾದ ಸಂಘರ್ಷಗಳನ್ನೂ ಸವಾಲುಗಳನ್ನೂ ಸಮಾಜ ಸ್ವೀಕರಿಸಿ ಜೀರ್ಣಿಸಿಕೊಂಡದ್ದನ್ನೂ, ಜೈನ ಸಾಹಿತ್ಯ ಕಥಾಂತರ್ಗತ ವಸ್ತು ಪಾತ್ರಗಳನ್ನಾಗಿ ಅಳವಡಿಸಿದ್ದಾರೆ. ಈ ಸಾಮಾಜಿಕ ದೃಷ್ಟಿಕೋನದಿಂದ ಪ್ರಾಚೀನ ಸಾಹಿತ್ಯ ವಸ್ತುವನ್ನು ವಿಶ್ಲೇಷಿಸಿದಾಗ ಅನೇಕ ಸಮಾಜೋ–ಧಾರ್ಮಿಕ-ಐತಿಹಾಸಿಕ ಮಾಹಿತಿಗಳು ಹೊರಬೀಳುತ್ತವೆ.

ಕರ್ನಾಟಕದಲ್ಲಿ ಯಾಪನೀಯ ಪಂಥ ಹುಟ್ಟಿದ್ದು ಇಂಥ ಒಂದು ಐತಿಹಾಸಿಕ ಅಗತ್ಯವನ್ನು ಪೂರೈಸುವ ಸಲುವಾಗಿ, ವೈದಿಕ-ಅವೈದಿಕಗಳ ಮುಖಾಮುಖಿಯ ತಾತ್ವಿಕ ಸಂಘರ್ಷದ ನೆಲೆಯಲ್ಲಿ ಜೈನತ್ವವು ಹೇಗೆ ತನ್ನ ಸೈದ್ಧಾಂತಿಕ ಚೌಕಟ್ಟಿನೊಳಗೆ ಎಲ್ಲರಿಗೂ ಮುಖ್ಯವಾಗಿ ಅಸ್ಪೃಶ್ಯರಿಗೂ ಮಾನ್ಯತೆಯನ್ನು ಕೊಟ್ಟಿದೆ ಎಂಬುದನ್ನು ನಿರ್ದಿಷ್ಟವಾಗಿ ಇನ್ನೊಮ್ಮೆ ಹೇಳಬೇಕಾದ ಜರೂರು ಒದಗಿಬಂದಿತ್ತು. ಹೆಂಗಸರೂ ಅನ್ಯಧರ್ಮಗಳವರೂ (ಪರಶಾಸನಗಳವರು) ಹೆಚ್ಚಿನ ಸಂಖ್ಯೆಯಲ್ಲಿ ಜೈನಮತಕ್ಕೆ

ಹರಿದುಬಂದರು. ಜೈನರಾದವರೆಲ್ಲ ದಿಗಂಬರರೇ ಆಗಿರಬೇಕೆ, ಅಜೈನ ಪಂಥಗಳಿಂದ ಬಂದವರಿಗೆ ಮೋಕ್ಷವಿದೆಯೆ, ಸ್ತ್ರೀಯರಿಗೆ ಅದೇ ಭವದಲ್ಲಿ ಮೋಕ್ಷವಿದೆಯೆ-ಎಂಬಂಥ ಸಾಮಾನ್ಯ ಸಂಶಯಗಳು ಸಾಮಾನ್ಯ ಜನರನ್ನು ಕಾಡುತ್ತಿದ್ದುವು. ಅವರೆಲ್ಲರನ್ನೂ ಶಾಸ್ತ್ರ ಸಮ್ಮತವಾದ ರೀತಿಯಲ್ಲಿ ಸಮಾಧಾನಪಡಿಸುವಂಥ ಧಾರ್ಮಿಕ ನಿರೂಪಣೆಯೊಂದು ಆಚಾರ್ಯ ಸಮುದಾಯದಿಂದ ವಿಧ್ಯುಕ್ತವಾಗಿ ಹೊರಬೀಳುವುದು ಅನಿವಾರ್ಯವೆನಿಸಿತ್ತು. ಶ್ವೇತಾಂಬರ ಮತ್ತು ಅವರ ಉಪ-ಶಾಖೆಗಳು ಉತ್ತರಭಾರತದಲ್ಲಿ ಈ ಕೆಲಸ ಮಾಡಿದ್ದುವು. ಅದಕ್ಕೆ ದಿಗಂಬರ ಪಂಥ ದಕ್ಷಿಣದಲ್ಲಿ ತುರ್ತಾಗಿ ಸ್ಪಂದಿಸಲು ಮೀನ ಮೇಷ ಎಣಿಸುತ್ತಿದ್ದಾಗ ಸಂದರ್ಭಕ್ಕೆ ತಕ್ಕ ಹಾಗೆ ಯಾಪನೀಯ ಶಾಖೆ ದಿಗಂಬರ ಪಂಥದ ಒಡಲಿನಿಂದಲೇ ಹುಟ್ಟಿಕೊಂಡಿತು. ಯಾಪನೀಯವು ಜೈನ ಧರ್ಮದಲ್ಲಿ ಸುಧಾರಣೆಗಾಗಿ ಬಂದ ಸಂಘ [ದೇಸಾಯಿ ಪಿ.ಬಿ. : 1957 : 167-168] ಅಸ್ಪೃಶ್ಯರಾದಿಯಾಗಿ ಹೊಸ ಜೈನರಿಗಾಗಿ ಹುಟ್ಟಿದ ಯಾಪನೀಯದ ರತ್ನತ್ರಯ ಸೂತ್ರಗಳು :

*ಜೈನೇತರ ಪಥಗಳನ್ನು ಅನುಸರಿಸುವವರಿಗೂ ಮೋಕ್ಷವಿದೆ: ಪರಶಾಸನೇ ಮೋಕ್ಷಃ

*ಬಟ್ಟೆ ತೊಟ್ಟಿರುವ ಗೃಹಸ್ಥರಿಗೂ ಮೋಕ್ಷ ಇದೆ: ಸಗ್ರಂಥಾನಾಂ ಮೋಕ್ಷಃ

*ಹೆಂಗಸರಿಗೆ ಈ ಜನ್ಮದಲ್ಲೇ ಮೋಕ್ಷ ಸಾಧ್ಯವಿದೆ: ಸ್ತ್ರೀಣಾಂ ತದ್ಭವೇ ಮೋಕ್ಷಃ

ಡಾ. ಆ.ನೇ. ಉಪಾಧ್ಯೆಯವರು ಯಾಪನೀಯ ಪಂಥದ ಉಗಮ ವಿಕಾಸಗಳನ್ನು ವಿಸ್ತಾರವಾಗಿ ಚರ್ಚಿಸಿದ್ದಾರೆ [ಉಪಾಧ್ಯೆ : 1983 : 192-201]

ಕರ್ನಾಟಕದ ಭೌಗೋಳಿಕ ಸೀಮೆಯಲ್ಲಿ ಜೈನ ಸಮಾಜದೊಳಗೆ ಸಮಾವೇಶಗೊಂಡ ಅಸ್ಪೃಶ್ಯರಾದಿಯಾಗಿ ಮತಾಂತರಿಗಳಿಗಾಗಿ ಹುಟ್ಟಿದ ಪಂಥ ಯಾಪನೀಯ. ಯಾಪನೀಯದ ತಳಪಾಯ ಮುಕ್ಕಾಲು ಮಣೆಯೆಂದು ತಿಳಿಸಿದ್ದೇನೆ : ಅದರಲ್ಲಿರುವ ಮೂರು ಮಂತ್ರಗಳೇ ಈ ಮುಕ್ಕಾಲು ಮಣೆ ಸೂತ್ರಗಳು.

ಯಕ್ಷಾರಾಧನೆಯ ಪರಂಪರೆ ಜೈನ ಸಮಾಜದಲ್ಲಿ ಹೊಸದಾಗಿ ಬಂದು ಸೇರಿದ ಸಮಾಜವವರಿಗೊಂದು ಮಾನಸಿಕ ಸಮೃದ್ಧಿಗಾಗಿ ಕಲ್ಪಿತವಾದ ನವೀನ ಸೃಷ್ಟಿ. ಈ ನೂತನ ಯಕ್ಷಾರಾಧನೆಯ ಪದ್ಧತಿಯನ್ನು ಉದ್ಘಾಟಿಸಿದವರೂ ಯಾಪನೀಯರೇ. ಜೈನತ್ವಕ್ಕೆ ಹೊಸದಾಗಿ ಮತಾಂತರವಾದವರೆಲ್ಲ ಹಿಂದು ಮತದವರು. ಇಲ್ಲಿಗೆ ವಲಸೆ ಬರುವ ಮೊದಲು ಅವರು ಅಲ್ಲಿ ವಿಷ್ಣು ಉಪಾಸಕರು ಇಲ್ಲವೆ ಶಿವಪೂಜಕರು. ವಿಷ್ಣುವಿಗೆ ಲಕ್ಷ್ಮಿ ಇದ್ದಳು, ಶಿವನಿಗೆ ಪಾರ್ವತಿ ಇದ್ದಳು. ಗಂಗೆ ಗೌರಿ ಅಂಬಿಕಾ ಚಾಮುಂಡಾ ಎಂಬಿತ್ಯಾದಿ ಹೆಸರುಗಳಿಂದ ಸ್ತ್ರೀ ದೇವತೆಗಳು ಹಿಂದು ಮತದಲ್ಲಿ ಪೂಜಿತರಾಗಿದ್ದರು [ಹಂಪನಾ : 1976:]

ಜೈನ ಮತದೊಳಗೆ ಅವತಾರಗಳೂ ಇಲ್ಲ, ದೇವರುಗಳೂ ಇಲ್ಲ. ಅನುಗ್ರಹವೂ ಇಲ್ಲ ; ಇರುವ ಜಿನರಿಗೂ ಆಭರಣವಿಲ್ಲ, ಅಲಂಕಾರವಿಲ್ಲ, ಕಿರೀಟವಿಲ್ಲ, ಆಯುಧಗಳಿಲ್ಲ. ಬೆತ್ತಲೆ ದೇವರು. ತಾನೇ ದಿಗಂಬರ, ಇನ್ನು ನಮಗೇನು ಕೊಡಬಲ್ಲ, ನಮ್ಮ ಗತಿ ಏನು, ಸ್ತ್ರೀ ಶಕ್ತಿ ದೇವಿಯರೂ ಇಲ್ಲಿ ಇಲ್ಲ-ಇಂಥ ಪ್ರಶ್ನೆಗಳು ಹೊಸ ಆಗಂತುಕರಲ್ಲಿ ಉದ್ಭವಿಸಿದುವು. ಅವರ ಆತಂಕಗಳನ್ನು ದೂರ ಮಾಡುವಂಥ ಬದಲಿ ವ್ಯವಸ್ಥೆ ಯೊಂದು, ಮರು ಹೊಂದಾಣಿಕೆ ಜರೂರು ಆಗಬೇಕಾಯಿತು. ಆಗ ದಿಢೀರಾಗಿ ಹುಟ್ಟಿದ ಸಮನ್ವಯ ಸಿದ್ಧಾಂತವೇ ಈ ಯಾಪನೀಯ.

ತೀರ್ಥಂಕರರು ಎಲ್ಲವನ್ನು ತೊರೆದವರು ನಿಜ. ಜಿನರು ವರ ಯಾ ಶಾಪ ಏನನ್ನೂ ಕೊಡದ ತಾಟಸ್ಥ್ಯ ಭಾವದವರು ಎಂಬುದೂ ಸರಿ. ಆದರೆ ಅವರದು ಅಸಾಮಾನ್ಯ ಮಹಿಮೆ. ಜಿನರ ಶಕ್ತಿ ಎಷ್ಟೆಂದರೆ ಅವರ ಭಕ್ತ ಸೇವಕರಾದ ಯಕ್ಷ ಯಕ್ಷಿಯರೇ ನಿಮ್ಮ ಕನಸುಗಳನ್ನು ನನಸಾಗಿಸಬಲ್ಲರು. ಲೌಕಿಕದ ಸುಖಾದಿಗಳ ಪೂರೈಕೆಗೆ ಇವರೇ ಸಾಕು. ಇವರಲ್ಲಿ 24 ಜನ ದೇವರೂ, 24 ಜನ ದೇವಿಯರೂ ಇದ್ದಾರೆ. ಇವರಲ್ಲದೆ ವಿದ್ಯಾದೇವಿಯರೂ ಕ್ಷೇತ್ರಪಾಲಕರೂ ಇದ್ದಾರೆ. ವರ ಕರುಣಿಸಲು, ಅನುಗ್ರಹಿಸಲು ಇನ್ನೇನು ಬೇಕು-ಇದು ಯಾಪನೀಯದ ಸಮನ್ವಯ ಜನಪರ ಧೋರಣೆ. ಜಿನಮತವನ್ನು ಜನಪ್ರಿಯತೆಗಾಗಿ ಜಗ್ಗಿದರು, ಸ್ವಲ್ಪ ಶ್ವೇತಾಂಬರರಿಂದ, ತುಸು ದಿಗಂಬರರಿಂದ ಸೂತ್ರಗಳನ್ನು ಸ್ವೀಕರಿಸಿ ಮಧ್ಯ ಮಾರ್ಗ ವನ್ನು ತೆರೆದರು. ಜನಮನದ ಬೇಡಿಕೆಗಳಿಗೆ ಧರ್ಮವೂ ಬಾಗಬೇಕಾಗುತ್ತದೆಂಬು ದನ್ನು ಅರಿತ ಮುನ್ನೋಟದ ಮತಾಚಾರ್ಯರು ಸಮನ್ವಯ ಸೂತ್ರದ ಮಶಾಲು ಹಿಡಿದು ಹೊರಬಂದರು. ಹೊಲೆಯರು ಮಾದಿಗರು ಚಂಡಾಲರು ಆದಿಯಾಗಿ ಅಂತ್ಯಜರು ಸೇರಿದರು ; ಒಕ್ಕಲಿಗರು ಶೂದ್ರರು, ಎಲ್ಲ ವರ್ಗದ ಸ್ತ್ರೀಯರು ಸೇರಿದರು. ಬ್ರಹ್ಮಶಿವ´ಕವಿ ತನ್ನ ಸಮಯ ಪರೀಕ್ಷೆಯಲ್ಲಿ ಈ ಎಲ್ಲ ಸಂವೇದನೆಗಳ ಸೂಕ್ಷ್ಮಗಳನ್ನೂ ಸಂಕೀರ್ಣತೆಯನ್ನೂ. ಮತಗಳ ಮೇಲಾಟದ ಸ್ವರೂಪವನ್ನೂ ಅದ್ಭುತವಾಗಿ ಹಿಡಿದಿಟ್ಟು ಅಪೂರ್ವಕಾವ್ಯದ ಕ್ರಾಂತಿಕಾರಿ ಕವಿ ಎನಿಸಿದ್ದಾನೆ.

ತಪಮಂ ಕೈಕೊಳಲೊಡನೆಂ
ತುಪಾರ್ವರುಂ ಭೂಪ ವೈಶ್ಯ ಶೂದ್ರರುಮೆಲ್ಲಂ
ತಪಸಿಗಳಪ್ಪವೊಲಾರ್ಹತ
ರೆ ಪಾರ್ವರೆನೆ ಸಂದರಾವ ಜಾತಿಯೊಳೊಗೆದುಂ ॥ 2-33

ಪೊಲೆಯಂ ಶ್ರಾವಕನಾದೊಡೆ
ಪಲರೊಳವಂ ಮಾನ್ಯನಪ್ಪೊನೆಂದಡೆ ಮತ್ತಿಂ
ಕುಲಜಂ ಗಡ ಜೈನಂ ಗಡ
ಬೆಲೆಯುಂಟೆ ಪೊಂಗೆ ಕಂಪು ದೊರೆಕೊಂಡತೆಱಂ । 2-41

ಸಲೆ ಪಸುವನೆ ಸೇವಿಸುವಂ
ಹೊಲೆಯಂ ಮೊದಲಾಗಿ ಜೈನನಾದಡೆ ಕುಡಿಯಂ
ಕುಲಹೀನನಾಗಿಯುಂ ತೋ
ಗಲ(ದೊಳ್) ಕೊಳೆ ನೀರನೆಂದೊಡಕ್ಕುಮೆ ಕುಡಿಯಲ್ ॥ 2-21

ಒಕ್ಕಲಿಗನಕ್ಕೆ ಪಂಚಮ
ನಕ್ಕೆಮ ಸದ್ವೃಷ್ಟಿಯಾಗೆ ಕಾಲಂ ಕರ್ಚ್ಚ
ಲ್ತಕ್ಕುದು ಜೈನಂಗೇಕೆನೆ
ಚಿಕ್ಕಯ್ಯಂ ಶೂದ್ರನೆಂದು ಕರ್ಚ್ಚರೆ ಕುಲಜರ್ ॥ 5-141

ಒಕ್ಕಲಿಗಂ ಋಷಿಯಾದೊಡೆ
ಚಿಕ್ಕಯ್ಯನೆ ಕಾಲನೆಂತು ಕರ್ಚ್ಚುವರದಱಿಂ
ಒಕ್ಕಲಿಗಂ ಬ್ರತಿಯಾದಂ
ದಕ್ಕುಂ ಕರ್ಚ್ಚಲ್ಕೆ ಮದಮನುಳಿಗೆ ಕುಲಜ್ಞಂ ॥ 5-142

ಬ್ರತಮುಂ ಶುಚಿತ್ವಮುಂ ಸುಚ
ರಿತಮುಂ ಪೊಲೆಯಂಗೆ ಜೈನನಾದೊಡೆ ಸಲ್ಗುಂ
ಯತಿಪತಿಗಂ ಭೂಪತಿಗಂ
ವ್ರತಾದಿಗಳ್ ಸಲ್ಲ ಕಾಳಸಮಯಿಗಳೆಂತುಂ ॥ 14-103

ಕುಲಹೀನಂ ತೊಸ್ಸಂ ಕಿಸು
ಗುಳಿಗಂ ಪರದೇಶಿ ವಿತ್ತಹೀನಂ ಕುತ್ಸಂ
ಗುಳಿಯಕ್ಕೆ ಜೈನನನೆಜಿನ
ನಿಳಯಕ್ಕೊಯ್ದೋವಿ ಲೇಸು ಮಾಳ್ಪನೆ ಜೈನಂ ॥ 4-31

ವ್ರತ ಸಚ್ಚರಿತ್ರ ಹೀನರ
ಕ್ಷಿತಿಪತಿಯಕ್ಕಮನ ತನುಜನಪ್ಪುದಱಿಂದಂ
ಬ್ರತನಿರತನಪ್ಪ ಪೊಲೆಯನ
ಸುತನಪ್ಪುದು ಪುಣ್ಯಮುಭಯ ಭವಮುಂ ಸಫಲಂ ॥ 14-105

ಸ್ವಪಚಂ ಮೊದಲಾಗಿರೆ ಮಿ
ಕ್ಕಪಾಪದೊಳ್ ಪೊರೆಯದಾವ ಧರ್ಮ್ಮದೊಳೆಸಗಿ
ರ್ದ್ದ ಪವಿತ್ರಮೆನಿಕುಮುದೆ ತಾ
ನಪವರ್ಗ್ಗೋಚಿತಮೆನಿಪ್ಪ ಧರ್ಮ್ಮಂ ಧರೆಯೊಳ್ ॥ 15-5

ಉತ್ತಮರೆಪೆಂದು ಬೆಸವರ
ವಿತ್ತಂತವೆ ಮಾಳ್ಪ ಮಾಟಮಂ ಕೇಳಲೊಡಂ
ತುತ್ತನಿದಂ ಪೊಲೆಯುಮೆನಿ
ಪುತ್ತಮ ಚಾರಿತ್ರ ಮೆಲ್ಲಿತಲ್ಲಿಯೆ ಧರ್ಮ್ಮಂ ॥ 15-6

ಉತ್ತಮರೊಳ್ಪಾರ್ವಂಗಂ
ಮತ್ತತ್ತಲು ಕೀಲಿಗಂಗ ಮೊಂದಂದಂ ತಾ
ನುತ್ತಮ ಚರಿತ್ರ ಮಾದೊಡೆ
ಮತ್ತಂ ಮೋಕ್ಷಕ್ಕೆ ಮಾರ್ಗ್ಗಮದೆಯೆಂಗಜೀವಂ । 15-7

ಕುಲಹೀನಂಗೊಂದಂದಂ
ಕುಲಜಂಗೊಂದಂದಮಕ್ಕುಮಾಚಾರಮದೆಂ
ದೊಲವರಮಂ ಪೇಳ್ವುದು ನಿ
ರ್ಮ್ಮಲ ಧರ್ಮ್ಮಮದಲ್ಲ ಠಕ್ಕಮತಮೆಂಗಜೀವಂ ॥ 15-8

ಪೊನ್ನುಂ ದಯೆಯೊಳ್ಕೂಡಿ ಜ
ಗನ್ನುತಮೆನಿಸಿರ್ದ ಧರ್ಮಮುಂ ಸಕಳಜಗ
ಕ್ಕುಂ ನಿರುತಂ ಸಲೆವೇಳ್ಪುದು
ಪೊನ್ನಜನೆಂಬೆರಡಜಿಲ್ಲಿ ಪೊಲವರಮುಂಟೇ ॥ 15-9

ಪೊಲೆಯುಂ ಪಡೆದ ಸುವರ್ನ್ನಂ
ಕಲುಂಬುಗೊಂಡಿರ್ದ್ದ ತಾಂಬ್ರಮಕ್ಕುಮೆ ಧರ್ಮ್ಮಂ
ಕುಲಜಂಗಮಕುಲಜಂಗಂ
ಸಲವೇಳ್ಪುದು ಕುಲಮದೇವುದಜಿತಮೆ ಮುಖ್ಯಂ ॥ 15-10

ಕ್ಷತ್ರಿಯನಾದಿಯಾಗಿ ಕಡೆಯೊಳ್ಪೊಲೆಯುಂಬರವೆಲ್ಲ ಜಾತಿಗಂ
ಧಾತ್ರಿಯೊಳೆಲ್ಲಿ ನೋಡುವಡಮೇತೆಜದಿಂ ಕಜೆಯಿಲ್ಲ ಶುದ್ಧ ಚಾ
ರಿತ್ರಮದೊಂದೆ ಮಾರ್ಗಮದಜಿಂ ಜಿನಧರ್ಮಮೆಧರ್ಮ್ಮ ಮೈಹಿಕಾ
ಮುತ್ರಿಕ ಸೌಖ್ಯ ಹೇತು ಭುವನತ್ರಯಸಾರಮದೆಂತು ಮೆಲ್ಲಿಯುಂ ॥ 15-11

ಹಿಮಕರನ ಹಿಮಾಂಶುಗಳು
ತ್ತಮಜಾತಿಗ ಮಂತ್ಯಜಾತಿಗಂ ತಣ್ಪಿಂದಂ
ಸಮನಪ್ಪತೆಜದಿನಜನುಂ
ಸಮನಾಗಲೆ ವೇಳ್ಕುಮಾವಜಾತಿಗ ಮೆಂತುಂ ॥ 15-12

ಪಾಲುತ್ತಮಂಗವಕ್ಕಾ ಬಾಂ
ಡಾಲಂಗಂ ಸೀಯನಪ್ಪ ತೆಜನಿಂದಜನುಂ
ಮೇಲಪ್ಪ ಜಾತಿಗಂ ಬಾಂ
ಡಾಲಂಗ ಮದೊಂದೆಯಂದ ಮಾಗಲಿ ಪೇಳ್ಕುಂ ॥ 15-13

ಸಲಿಮಂ ಕಳ್ಗುಡಿವಂ ನಿ
ರ್ಮ್ಮಳವೆನಿಸಿದ ಜೈನ ಧರ್ಮ್ಮಮಂ ಮಱಿಗೊಳಿ ಭೂ
ತಳವಂದ್ಯನಕ್ಕುಮೆನೆ ಮ
ತ್ತೆ ಲೇಸು ಜಿನಧರ್ಮ್ಮಮಲ್ಲದೊಳವೇ ಧರ್ಮ್ಮಂ ॥ 15-33

ಬ್ರಹ್ಮಶಿವ ಕವಿಯ ಪ್ರಕಾರ ಜೈನತ್ವದಲ್ಲಿ ಮೇಲರಿಮೆ ಕೀಳರಿಮೆಗಳನ್ನು ಕಿತ್ತೊಗೆಯುವಂಥ ನೆಲೆಯ ಗುಣಾತ್ಮಕ ಸ್ವೀಕರಣವಿದೆ. ಜಾತಿಯಿಂದ ಬಹಿಷ್ಕೃತರು ಎಂದೆನಿಸಿದವರನ್ನು, ಅಸ್ಪೃಶ್ಯರನ್ನು, ಇನ್ನಾವುದೇ ಜಾತಿಯವರನ್ನು ತನ್ನ ಸಮಾಜದೊಳಗೆ ಸೇರಿಸಿಕೊಳ್ಳಲು ಹಿಂಜರಿಯಲಿಲ್ಲ, ಮುಜುಗರ ಪಡಲಿಲ್ಲ; ಇವರ ಬದಲಿಗೆ ಅವರು ಅಸ್ಪೃಶ್ಯರಾದಿಯಾಗಿ ಕೆಳಗಿನವರನ್ನು ಸೇರಿಸಿಕೊಂಡು ಹೆಮ್ಮೆಪಟ್ಟರು. ಗುಡ್ಡಗಾಡು ಜನಾಂಗಗಳವರೂ ಆದಿವಾಸಿಗಳೂ ಜೈನತ್ವದ ತೆಕ್ಕೆಯೊಳಗೆ ಕೂಡಿದರು. ಇವರೆಲ್ಲರ ನಡುವೆ ಅಂತರ್ಜಾತೀಯ ವಿವಾಹಗಳೂ ಏರ್ಪಟ್ಟವು.

ಇಂದಿನ ಯುಗಮಾನದ ಚಿಂತನೆಗಳಿಗೆ ತಾಳೆಯಾಗುವ ಬ್ರಹ್ಮಶಿವಕವಿಯ ವೈಚಾರಿಕ ಪ್ರಖರತೆ, ಖಚಿತತೆ ಇಲ್ಲಿನ ಪದ್ಯಗಳಲ್ಲಿ ಹರಳುಗೊಂಡಿದೆ. ಎಂಟುನೂರು ವರ್ಷಗಳ ಹಿಂದೆ ಧಾರ್ಮಿಕ ವಲಯದಲ್ಲಿ ನಿಂತು ಜೀವಪರವಾಗಿ ಹೀಗೆ ವೈಚಾರಿಕ ಪ್ರಜ್ಞೆಯಿಂದ, ವೈಜ್ಞಾನಿಕ ದೃಷ್ಟಿಯಿಂದ ಮುಕ್ತ ಸಂವಾದಕ್ಕಿಳಿದ ಬ್ರಹ್ಮಶಿವ ಕವಿ ಆಧುನಿಕ ಸಂವೇದನೆಗಳಿಗೆ ಮಿಡಿಯುತ್ತಾನೆ; ಪ್ರಸ್ತುತನಾಗುತ್ತಾನೆ.

ಬ್ರಹ್ಮಶಿವ ಕವಿಯು ಈ ಯಾಪನೀಯದ ಕಡೆಯ ಕಾಲದ ಘಟ್ಟದಲ್ಲಿ ನಿಂತು ಕೃತಿರಚನೆ ಮಾಡಿದವನು. ಪರಶಾಸನೇ ಮೋಕ್ಷಃ ಕುರಿತೇ ಸಮಯ ಪರೀಕ್ಷೆ ಸಮರ್ಥನೆ ನೀಡಿದೆ: ಸಮಾಜದ ಕೆಳವರ್ಗದವರಿಗಾಗಿ ಹುಟ್ಟಿದ ಸೂತ್ರವಿದು. ಯಾಪನೀಯ ಪಂಥ 12ನೆಯ ಶತಮಾನದಿಂದ ಆಚೆಗೆ ಅದೃಶ್ಯವಾಗಲು ಕಾರಣ ಈ ಮಂಥನದಿಂದ ಹೊರಬರುತ್ತದೆ. ಸಮಾಜದಲ್ಲಿ ದಲಿತವರ್ಗದವರನ್ನೂ ಸಹ ಸೇರಿಸಿಕೊಳ್ಳುತ್ತಿದ್ದ ಯಾಪನೀಯ ಪಂಥದ ಜಿನಾಲಯಗಳನ್ನು ನಾಶಮಾಡಿ, ಯಾಪನೀಯ ಜೈನಾಚಾರ್ಯರನ್ನು ಕೊಂದವರು ಏಕಾಂತದ ರಾಮಯ್ಯ, ಆದಯ್ಯ, ಗೊಗ್ಗಯ್ಯ, ವಿರುಪರಸಾದಿಗಳು. 12ನೆಯ ಶತಮಾನದ ಉತ್ತರಾರ್ಧದಲ್ಲಿ, ಉತ್ತರ ಕರ್ನಾಟಕದ ಪರಿಸರದಲ್ಲಿ, ಈ ಸಂಹಾರ ಕಾರ್ಯ ನಡೆಯಿತು. ಅಲ್ಲಿಂದಾಚೆಗೆ ಯಾಪನೀಯ ಪಂಥ ಮತ್ತೆ ಪುನಶ್ಚೇತನಗೊಳ್ಳಲಿಲ್ಲ.

ಇದಾದ ಮತ್ತು ಈ ಹಿಂಸಾಕಾಂಡ ನಡೆಯುತ್ತಿದ್ದ ಅವಧಿಯಲ್ಲಿ ಕರ್ನಾಟಕದಲ್ಲಿ ಎಲ್ಲ ವರ್ಗದವರಿಗೂ, ಶೂದ್ರ ಅಸ್ಪೃಶ್ಯರಿಗೂ ವೀರಶೈವಧರ್ಮ ಅವಕಾಶವನ್ನು ಮುಂದುವರಿಸಿದ ಸಂಗತಿ ಸರ್ವ ಶ್ರುತವಾಗಿದೆ. ಕ್ರಿ.ಪೂ. ಆರು-ಐದನೆಯ ಶತಮಾನಗಳಲ್ಲಿ, ಅಂದರೆ ವೀರಶೈವ ಶರಣ ಧರ್ಮಕ್ಕಿಂತ 1500ವರ್ಷಕ್ಕೂ ಹಿಂದೆ ಅಸ್ಪೃಶ್ಯರು ಮತಾಂತರಗೊಂಡು ಜೈನ, ಬೌದ್ಧ ಮತ್ತು ಇತರ ಆಜೀವಕರ ಶ್ರಮಣತ್ವದಲ್ಲಿ ವಿಲೀನವಾಗಿದ್ದರು; ಆದಾದ ಒಂದೂವರೆ ಸಾವಿರ ವರ್ಷಗಳ ಮೇಲೆ ಮತ್ತೆ ಕರ್ನಾಟಕದಲ್ಲಿ ಮಾತ್ರ ಅಸ್ಪೃಶ್ಯರು-ಶೂದ್ರರು ವೀರಶೈವಕ್ಕೆ ಮತಾಂತರಗೊಂಡರು. ಅನಂತರ ಕಾಲಘಟ್ಟದಲ್ಲಿ ಅಸ್ಪೃಶ್ಯರು ಇಸ್ಲಾಂ ಮತಕ್ಕೆ ಸೇರಿ ಮುಸಲ್ಮಾನರಾದದ್ದೂ, ಈ ಶತಮಾನದಲ್ಲಿ ಡಾ. ಬಿ. ಆರ್. ಅಂಬೇಡ್ಕರರ ನೇತೃತ್ವದಲ್ಲಿ ಬೌದ್ಧರಾದದ್ದೂ ಈಗ ಚರಿತ್ರೆಯ ಭಾಗವಾಗಿದೆ. ಅವೆಲ್ಲದರ ಹಿನ್ನೆಲೆ ಮತ್ತು ಚರ್ಚೆ ಈ ಸಂಪ್ರಬಂಧದ ವ್ಯಾಪ್ತಿಗೆ ಬರುವುದಿಲ್ಲ.

ಅಸ್ಪೃಶ್ಯರಿಗೆ ಜೈನತ್ವದ ಪ್ರತಿ ಸಂಸ್ಕೃತಿಯಲ್ಲಿ ವಿಶೇಷವಾದ ಮಮತೆ ಮುಂದುವರೆದು ಈ 20ನೆಯ ಶತಮಾನದಲ್ಲೂ ಹೇಗೆ ಜೀವಂತವಾಗಿದೆ ಎಂಬುದಕ್ಕೊಂದು ದೃಷ್ಟಾಂತ ಕೊಡುತ್ತೇನೆ. ಭಾರತದ ಪಶ್ಚಿಮೋತ್ತರ ಭಾಗದಲ್ಲಿ, ಮುಖ್ಯವಾಗಿ ರಾಜಾಸ್ತಾನ-ಮಧ್ಯಪ್ರದೇಶದ ಗಡಿಯಲ್ಲಿ 15-20 ವರ್ಷಗಳ ಹಿಂದೆ ಐತಿಹಾಸಿಕ ಮಹತ್ವದ ಘಟನೆ ನಡೆಯಿತು. ರತ್ಲಮ್, ಚಿತ್ತೋಡ್, ನೀಮುಚ್ ಪ್ರದೇಶ ಪರಿಸರದ 'ಖಟಿಕ್' (ಕಸಾಯಿ : ಕಟುಕ) ಜನಾಂಗದ ಹದಿನೇಳು ಸಾವಿರ ಜನ ಜೈನರಾಗಿ ಮತಾಂತರಗೊಂಡರು. ಸಮಾರು 700 ಜನ ಸ್ಥಾನಕವಾಸಿ ಜೈನ ಮುನಿಸಂಘದ ಆಚಾರ್ಯ ಶ್ರೀ ನಾನಾಲಾಲ್ ಜೈನ್ ಅವರ ಉಪದೇಶಗಳಿಂದ ಖಟಿಕರು ಪ್ರಭಾವಿತರಾಗಿ 'ವೀರವಾಲ್ ಜೈನ' ರೆಂದು ಈ ಹೊಸ ಜೈನ ಸಮಾಜ ಮಾನ್ಯತೆ ಪಡೆದಿದೆ; ಓಸ್ವಾಲ್, ಅಗರವಾಲ್, ಖಂಡೇಲವಾಲ್, ಶ್ರೀಮಾಲ್, ವೀರವಾಲ್ ಇವರು ರಾಜಾಸ್ತಾನ-ಗುಜರಾತಿನ ಜೈನರು. ಜನ್ನನ ಯಶೋಧರ ಚರಿತೆಯಲ್ಲಿ ಹಿಂಸಾರಭಸ ಮತಿಯಾದ ಮಾರಿದತ್ತನು ಪ್ರಾಣಿವಧೆ ನಿಲ್ಲಿಸಿ ಅಹಿಂಸಾ ಸರಸ ಮತಿಯಾದ ಪುರಾಣ ಕಥೆಗೆ ಕಟುಕರು ಜೈನರಾಗಿ ಮತಾಂತರಿಸಿ ವಾಸ್ತವ ಸ್ಪರ್ಶ ಕೊಟ್ಟಿದ್ದಾರೆ.

ಬೌದ್ಧರು–ಜೈನರು ಪ್ರಾರಂಭಿಸಿದ ಈ ಹೊಸ ಜನಾಂದೋಲನಕ್ಕೆ ವೈಚಾರಿಕ ನೆಲೆಯ ಹಾಸು ಮತ್ತು ಜನಪರ ಕಾಳಜಿಯ ತುಡಿತ ಇದ್ದುದರಿಂದ ಅದು ವ್ಯಾಪಕ ಪ್ರಮಾಣದ ಸಾಮಾಜಿಕ ಕ್ರಾಂತಿಯನ್ನು ನಡೆಸಲು ಸಾಧ್ಯವಾಯಿತು. ಭಾರತೀಯ ಚರಿತ್ರೆಯಲ್ಲಿ ಸಂಭವಿಸಿದ ಮೊತ್ತ ಮೊದಲನೆಯ ಹಾಗೂ ಪ್ರಾಚೀನತಮ ಸಾಮಾಜಿಕ ಕ್ರಾಂತಿ ಇದೇನೆ. ಇದು ಜನ ಭಾಷಾತ್ಮಕ ಚಳವಳಿಯೂ ಆಗಿತ್ತು. ಏಕ ಕಾಲದಲ್ಲಿ ಜಾತಿ ಮದ ಮತ್ತು ಭಾಷಾ ಮದಗಳನ್ನು ಪ್ರತಿಭಟಿಸಲಾಯಿತು. ಜಾತೀಯ

ದಬ್ಬಾಳಿಕೆಯ ಸರ್ವಾಧಿಕಾರಿ ಧೋರಣೆಯನ್ನು ಹುದಿಗಟ್ಟಲು ಸಂಘಟಿತವಾದ ಮನ್ವಂತರದ ಹೋರಾಟಕ್ಕೆ ಕ್ರಿ. ಪೂ. ಆರನೆಯ ಶತಮಾನದಲ್ಲಿ ಮುನ್ನುಡಿ ಬರೆಯ ಲಾಯಿತು. ಮಾನವ ಜನಾಂಗದ ಬೌದ್ಧಿಕ-ವೈಚಾರಿಕ ವಿಕಾಸದ ಇತಿಹಾಸದಲ್ಲಿ ಕ್ರಿ.ಪೂ. ಆರನೆಯ ಶತಮಾನ ಮಹತ್ವದ್ದು ಎನಿಸಿದೆ. ಪ್ಯಾಲಸ್ತೈನಿನಲ್ಲಿ ಇಸಯ್ಯನೂ, ಅಯೋನಿಯಾದಲ್ಲಿ ಹೆರಕ್ಲಿಟಸನೂ, ಪರ್ಷಿಯಾದಲ್ಲಿ ಜೊರಾಸ್ಟರನೂ, ಚೀನಾದಲ್ಲಿ ಕನ್‌ಪ್ಯೂಶಿಯಸನೂ ಲಾವೋ-ತ್ಸೆವೂ, ಗ್ರೀಸಿನಲ್ಲಿ ಪೈಥಾಗರೊಸನೂ-ತತ್ವಜ್ಞಾನಿ ಸೆಲೋಲನೂ ಭಾರತದಲ್ಲಿ ಬುದ್ಧನೂ-ಮಹಾವೀರನೂ-ಹೀಗೆ ಅವರವರ ದೇಶಗಳಲ್ಲಿ ಹೊಸ ಜನಪರ ಸಿದ್ಧಾಂತಗಳನ್ನು ಪ್ರತಿಪಾದಿಸಿದರು. ಸಮಸ್ತ ಜೀವರಾಶಿಗೆಲ್ಲ ಅವಕಾಶಗಳ ಸಮಾನತೆ ಮತ್ತು ವಿಶ್ವ ಭ್ರಾತೃತ್ವದ ವಿಚಾರ ಪ್ರಜ್ಞೆಯೊಂದಿಗೇನೆ ಸುಧಾರಣೆಯ ಕಾರ್ಯವನ್ನೂ ಕೈಗೆತ್ತಿಕೊಂಡರು.

ಜೀವೋ ಜೀವಸ್ಯ ಜೀವಿತಮ್ (live and let live) ಎಂಬ ಜೀವಪರ ನಿಲುವೆಯಿಂದ ಪರಿವರ್ತನೆಯ ಆಂದೋಲನದ ಮುಂಚೂಣಿಯಲ್ಲಿ ನಿಂತ ನೇತಾರ ಮಹಾವೀರನು ಸಾಮಾನ್ಯ ಜನರ ಹೃದಯ ಸೂರೆಗೊಂಡ ಕ್ರಾಂತಿಕಾರಿಯಾದನು. ಆತನದು ಪ್ರಾಂತೀಯ-ಪ್ರಾದೇಶಿಕ ಚಳವಳಿಯಾಗದೆ ಆದೇಶ ವ್ಯಾಪಿಯಾಗಿ ಆಸೇತು ಹಿಮಾಚಲ ಹಬ್ಬಿದ ರಾಷ್ಟ್ರೀಯ ಚಳವಳಿ. ಹಿಂದು ಆಲೋಚನೆಯ ಸರಣಿಯಲ್ಲಿ ಮಹಾವೀರನು ಕ್ರಮೇಣ ಸ್ಥಿತ್ಯಂತರದ ಮಾರ್ಪಾಟುಗಳನ್ನು ತರಲು ಸಾಧ್ಯವಾದುದಕ್ಕೆ ಒಂದು ಬಲವಾದ ಕಾರಣವೆಂದರೆ ಮಹಾವೀರನ ಹೋರಾಟಕ್ಕೆ ಇದ್ದ ನೈತಿಕ ಅಹಿಂಸಾ ತ್ಮಕ ಬೆನ್ನು. ದೃಢ ವ್ಯವಸ್ಥೆಯ ಹಿಂದು ಬೆಟ್ಟವನ್ನು ಕದಲಿಸಲು ನವಜಾಗೃತಿಯ ಮತ್ತು ಜನ ಸ್ವಾತಂತ್ರ್ಯದ ಆಂದೋಲನಕ್ಕಾಗಿ, ಆಕ್ರೋಶದಿಂದ ಎದುರಾಳಿಗಳ ಮೇಲೆ ಎರಗುವುದನ್ನಾಗಲಿ, ಅಸ್ತ್ರಶಸ್ತ್ರ ಸನ್ನದ್ಧ ಆಕ್ರಮಣದ ರಕ್ತಪಿಪಾಸು ಹಿಂಸಾಪಥವನ್ನಾ ಗಲಿ, ಹಿಂದೂ ಗುಡಿಗಳ ಮೂರ್ತಿಗಳನ್ನು ನಾಶಮಾಡುವುದನ್ನಾಗಲಿ, ಹಿಂದೂ ಗುರುಗಳ ಮತ್ತು ಸ್ತ್ರೀಯರ ಮೇಲೆ ಅತ್ಯಾಚಾರ ಮಾಡುವುದನ್ನಾಗಲಿ ಪ್ರತಿಪಾದಿಸಲಿಲ್ಲ ಎಂಬುದು ಭಾರತದ ಚರಿತ್ರೆಯಲ್ಲಿ ಗಮನಿಸಬೇಕಾದ ದೊಡ್ಡ ಪಾಠ.

ತಾಳ್ಮೆಯಿಂದ ಆದರೆ ಆತ್ಮವಿಶ್ವಾಸದಿಂದ ಹಿಂದೂ ಧರ್ಮ ವ್ಯವಸ್ಥೆಯ ವಿರುದ್ಧ ತಮ್ಮ ಆಲೋಚನೆಗಳನ್ನು ನಿರಾಯುಧರಾಗಿಯೇ ಮಹಾವೀರನ ಶ್ರಮಣ ಪರಂಪರೆ ಸ್ಥಾಪಿಸಿತು. ಅಹಿಂಸೆಯ ಕವಚತೊಟ್ಟು ವೈಚಾರಿಕ ವಾಗ್ವಾದಗಳ ಮೂಲಕ ಹಿಂಮತ್ವದ ಓರೆಕೋರೆಗಳನ್ನು ತೋರಿಸುತ್ತ, ಜನಬಲದಿಂದ ತಮ್ಮ ಪ್ರಾಬಲ್ಯವನ್ನು ಊರ್ಜಿತಗೊಳಿಸಿದ ಜೈನತ್ವದ ಪ್ರತಿಸಂಸ್ಕೃತಿ ಮನೋಧರ್ಮವನ್ನು ಮೈಗೂಡಿಸಿ ಕೊಂಡು ಅದೇ ಚರಿತ್ರೆಯ ಪಾಠವನ್ನು ಈ ಶತಮಾನದಲ್ಲಿ ಪುನರಭಿನಯಿಸಿ ವಿಜಯ ಗಳಿಸಿದವರು ಮಹಾತ್ಮಾಗಾಂಧೀಜಿ. ಭಾರತದ ಇತಿಹಾಸವನ್ನು ಸೂಕ್ಷ್ಮವಾಗಿ ಗಮನಿ ಸಿದರೆ ಒಂದಂಶ ಸ್ಪಷ್ಟವಾಗುತ್ತದೆ. ಸಿಥಿಯನ್ನರು, ಹೂಣರು, ಯವನರು, ಗ್ರೀಕರು,

ಮುಸಲ್ಮಾನರು. ಬ್ರಿಟಿಷರು-ಇವರೆಲ್ಲರ ವಿರುದ್ಧ ಹಿಂದೂ ರಾಜರು ಸೋಲಲು ಮುಖ್ಯ ಕಾರಣ ಹಿಂದುತ್ವದಲ್ಲಿರುವ ಕ್ರೂರ ಜಾತಿ ವರ್ಣ ವ್ಯವಸ್ಥೆಯೇ. ಒಟ್ಟಿಗೆ ಬಾಳದ, ಒಟ್ಟಿಗೆ ಉಣ್ಣದ ಈ ಜಾತಿ ವರ್ಣಗಳ ಜನ ಒಟ್ಟಿಗೆ ನಿಂತು ಯುದ್ಧ ಮಾಡುವುದು ಸಾಧ್ಯವಾಗಲಿಲ್ಲ. ಭಾರತೀಯ ಸೈನಿಕ ಶಕ್ತಿ ದುರ್ಬಲವಾಗಲು ಇದ್ದ ಕಾರಣಗಳಲ್ಲಿ ಹಿಂದು ಮೂಲದ ಸಿದ್ಧಾಂತವಾದ ಸ್ವಧರ್ಮ ಪಾಲನೆಯನ್ನು ಬಲಾತ್ಕಾರವಾಗಿ ಹೇರಿದ್ದರಿಂದ ಯುದ್ಧ ಮಾಡಬೇಕಾಗಿದ್ದ ಕ್ಷತ್ರಿಯರು, ಯುದ್ಧಗಳಿಗಾಗಿ ಆರ್ಥಿಕ ನೆರವು ನೀಡಬೇಕಾಗಿದ್ದ ವೈಶ್ಯರು, ಸಮಾಜದ ಇತರ ಜಾತಿಗಳವರಿಗೆಲ್ಲ ತಮ್ಮ ಚಾಕರಿ ಸೇವೆ ಸಲ್ಲಿಸಬೇಕಾಗಿದ್ದ ಶೂದ್ರ ಅಸ್ಪೃಶ್ಯರು–ಇವರು, ಇವರ ಮೇಲೆ ಹೇರಲಾಗಿದ್ದ 'ಸ್ವಧರ್ಮ'ವನ್ನು ಸಂತೋಷದಿಂದಾಗಲಿ, ಸಹಜ ಸ್ಫೂರ್ತಿಯಿಂದಾಗಲಿ ಪಾಲಿಸಲಿಲ್ಲ. ಇಲ್ಲಿ ಎದ್ದು ಕಾಣುವ ಸ್ವಾರಸ್ಯವಾದ ವೈರುಧ್ಯವೆಂದರೆ, ಇದಕ್ಕೆ ತದ್ವಿರುದ್ಧವಾಗಿ ಅಹಿಂಸಾಧಾರಿತ ಚಳುವಳಿಗೆ ದೊರೆತ ಸ್ವಾತಂತ್ರ್ಯದ ವಿಜಯ.

ನಮ್ಮ ಕಾಲದಲ್ಲಿ ಸಂಭವಿಸಿದ ಅದ್ಭುತ ಜಯವಾದ ಸ್ವಾತಂತ್ರ್ಯ ಪ್ರಾಪ್ತಿಯ ಹೋರಾಟದ ಹಂತಗಳನ್ನು ವಸ್ತುನಿಷ್ಠವಾಗಿ ಪರಿಭಾವಿಸಬೇಕು. ಅಹಿಂಸಾ ಸಿದ್ಧಾಂತವನ್ನೇ ಪಟ್ಟಾಗಿ ಹಿಡಿದು ಮಹಾತ್ಮಾ ಗಾಂಧೀಜಿಯವರು ಹಿಂಸಾಧಾರಿತ ಯುದ್ಧಗಳಿಂದ ಅಸಾಧ್ಯವಾಗಿದ್ದ ಗೆಲುವನ್ನು ಗಳಿಸಿದರು. ಇನ್ನೂ ಸ್ವಾರಸ್ಯವೆಂದರೆ ಬಾಪೂಜಿಯವರು ಕೈಗೆತ್ತಿಕೊಂಡ ಈ ಅಹಿಂಸಾತ್ಮಕ ರಾಷ್ಟ್ರೀಯ ಚಳವಳಿಯಲ್ಲಿ ಹಿಂದೂಧರ್ಮ ಪ್ರತಿಪಾದಿಸಿದ ಜಾತಿ-ಲಿಂಗ ಆಧಾರಿತ ಸ್ವಧರ್ಮ ಪಾಲನೆಗೆ ತಿಲಾಂಜಲಿ ಕೊಡಲಾಯಿತು. ಈ ಅಪೂರ್ವ ಅಹಿಂಸಾತ್ಮಕ ಆಂದೋಲನದಲ್ಲಿ ಎಲ್ಲ ಜಾತಿವರ್ಣ ವರ್ಗಗಳವರಲ್ಲೂ ಭ್ರಾತೃತ್ವ ಶಾಂತಿ ಸೌಹಾರ್ದಗಳು ಸಾಧ್ಯವಾಯಿತು. ಅಹಿಂಸೆಯ ಮಹಾಸತ್ವದ ವಿರಾಡ್ ರೂಪವು ಅಂತಿಮ ಜಯ ಪಡೆದದ್ದು ಮಾತ್ರವಲ್ಲದೆ ಇಡೀ ಜಗತ್ತಿನ ಪ್ರಶಂಸೆಗೂ ಪಾತ್ರವಾಯಿತು. ಜಗತ್ತಿನಲ್ಲಿ ಅತ್ಯಂತ ಪ್ರಬಲವಾದದ್ದು ಮಾರಕಾಸ್ತ್ರಗಳಿಗಿಂತ ಶಕ್ತಿಶಾಲಿಯಾದದ್ದು ಅಹಿಂಸೆಯೇ ಎಂಬ ಸಾರ್ವಕಾಲಿಕ ಸತ್ಯವೊಂದು ಸ್ಥಾಪಿತವಾಯಿತು.

ಆರ್ಯರ ಆಗಮನಕ್ಕೂ ಮೊದಲಿನಿಂದ ಇದ್ದು, ಇಂದಿಗೂ ಉಳಿದು ಬಂದಿರುವ ಭಾರತದ ಮೂಲ ಧರ್ಮ ಮತ್ತು ಮೂಲ ಸಮಾಜ ಜೈನರದು. ಅಹಿಂಸೆ ಮತ್ತು ಶಾಂತ ಸ್ವಭಾವದ ಶ್ರಮಣ ಧರ್ಮೋಪಾಸಕರು ಆಜೀವಕರು, ಬೌದ್ಧರು ಮತ್ತು ಜೈನರು. ಆರ್ಯರು ಯುದ್ಧ ಸ್ವಭಾವದವರು, ಗೋವು ಅವರ ಸಾಕು ಪ್ರಾಣಿ. ಬೌದ್ಧರು-ಜೈನರು ಮತ್ತು ಅಸ್ಪೃಶ್ಯರು ದ್ರಾವಿಡರು. ಎಮ್ಮೆ ಇವರ ಸಾಕು ಪ್ರಾಣಿ. ಆರ್ಯರು ಅಸ್ಪೃಶ್ಯರನ್ನು ಕೀಳಾಗಿ ಕಾಣಲು, ಜೈನತ್ವದಲ್ಲಿ ಅಸ್ಪೃಶ್ಯರನ್ನು ಆಲಿಂಗಿಸಿಕೊಳ್ಳಲು ಈ ಬಗೆಯ ಹಿನ್ನೆಲೆಗಳೂ ಕಾರಣವಾಗಿದ್ದಿರಬಹುದು. ಇಂಥ ಒಳನೋಟಗಳಿಂದ ಈ ಅಧ್ಯಯನವನ್ನು ಇನ್ನೂ ಆಳಕ್ಕೆ ಕೊಂಡೊಯ್ಯಲು ಅವಕಾಶಗಳಿವೆ.

ಮಹಾವೀರ, ಬುದ್ಧ, ಬಸವಣ್ಣ ಮೊದಲಾದ ಮಾನವತಾವಾದಿಗಳು ತೋರಿದ ಬೆಳಕಿನ ಹಾದಿಯಲ್ಲಿ ಮಹಾತ್ಮರುಗಳಾದ ಗುರುನಾನಕರು, ಸಂತಕಬೀರರು, (ಮಹಾನುಭಾವ ಪಂಥ ಮತ್ತು ಅದರ ಚಾಲಕ ಶಕ್ತಿ) ಚಕ್ರಧರರು, ಸಂತ ಶ್ರೇಷ್ಠರಾದ ಜ್ಞಾನೇಶ್ವರರು, ಮಹಾಜ್ಞಾನಿ ನಾಮದೇವರು, ಭಕ್ತ ಗೋರಾ, ಸಂತ ತುಕಾರಾಮರು, ಆತ್ಮಜ್ಞಾನ ಶಿಶುನಾಳ ಷರೀಫರು, ಸ್ವಾಮಿ ವಿವೇಕಾನಂದರು, ಸಂತ ನಾರಾಯಣ ಗುರೂಜಿಯವರು.—ಹೀಗೆ ಒಂದು ಸಾಧುಸಂತರ ಪರಂಪರೆಯೇ ಅಸ್ಪೃಶ್ಯರಿಗೆ ಸಮಾನ ಅವಕಾಶಗಳಿಗಾಗಿ ಶ್ರಮಿಸಿದೆ. ಇಂತಹವರ ಹೃದಯವಂತಿಕೆಯಿಂದ ಬ್ರಿಟಿಷರ ಕಾಲ ದಿಂದೀಚೆಗೆ ದೊರೆತ ಶಿಕ್ಷಣ ಸೌಲಭ್ಯದಿಂದ ಅಸ್ಪೃಶ್ಯರನ್ನು ಕುರಿತು 20ನೆಯ ಶತಮಾನದವರೆಗೆ ಇದ್ದ ಧೋರಣೆಯಲ್ಲಿ ಬದಲಾವಣೆಗಳಾಗಿವೆ. ಜ್ಯೋತಿಬಾಫುಲೆ, ಡಾ. ಬಿ. ಆರ್. ಅಂಬೇಡ್ಕರ್ ಅಂತಹವರ ನಿರಂತರ ಪ್ರಯತ್ನಗಳು ಈ ದಿಕ್ಕಿನಲ್ಲಿ ಸಂಘಟನೆಗೆ ಶಕ್ತಿವರ್ಧಕಗಳು.

ಹಿಂದೂ ಸಂಘಟನೆಗಳೇ ಆದ ಆರ್.ಎಸ್.ಎಸ್., ಬಿ.ಜೆ.ಪಿ., ಮತ್ತು ವಿ.ಹೆಚ್.ಪಿ–ಮೊದಲಾದ ಪಕ್ಷಗಳಲ್ಲೂ ಹೊಸಕಾಲದ ಅಪೇಕ್ಷೆ ಅಗತ್ಯಗಳಿಗೆ ಅನುಗುಣ ವಾಗಿ ಹಿಂದೂ ಧರ್ಮವನ್ನು ಪುನರುಜ್ಜೀವಿಸಿ ಪುನರುತ್ಥಾನಿಸುವ ಪ್ರೇರಣೆಗಳು ಹುರಿಗೊಳ್ಳುತ್ತಿವೆ. ಇದು ಆರೋಗ್ಯಕರವಾದ ಹೊಸ ಸಮಾಜ ರಚನೆಗೆ ನಾಂದಿ ಯಾಗಲೂಬಹುದು. ಇತ್ತೀಚೆಗೆ ಬಿ.ಜೆ.ಪಿ. ಪಕ್ಷದಲ್ಲಿ ಮುಸಲ್ಮಾನರೂ ಅಸ್ಪೃಶ್ಯರೂ ಅಧಿಕ ಸಂಖ್ಯೆಯಲ್ಲಿ ಸೇರುತ್ತಿರುವುದನ್ನೂ ಇಲ್ಲಿ ಉಲ್ಲೇಖಿಸಬಹುದು. "ಹಿಂದೂಗಳು, ಸತ್ತುಹೋದ ಒಂದು ಜಗತ್ತು ಮತ್ತು ಜನ್ಮ ತಳೆಯಲು ಶಕ್ತಿಯಿಲ್ಲದ ಇನ್ನೊಂದು ಜಗತ್ತು–ಇವೆರಡರ ನಡುವೆ ಎಡತಾಕುತ್ತಿದ್ದಾರೆ" ಎಂಬ ಮ್ಯಾಥ್ಯೂ ಆರ್ನಾಲ್ಡನ ಮಾತನ್ನು ಹುಸಿಗೊಳಿಸುವುದರ ಮೂಲಕವೇ ಹಿಂದೂತ್ವಕ್ಕೆ ಅಮೃತತ್ವವನ್ನು ಕೊಡಲು ಸಾಧ್ಯ. ಈ ದಿಕ್ಕಿನ ಪ್ರಯತ್ನಗಳು ಹುರಿಗೊಳ್ಳಲು ಜೈನತ್ವದ ಪ್ರತಿ ಸಂಸ್ಕೃತಿಯ ನಿರ್ಮಾಣದಲ್ಲಿ ಅಸ್ಪೃಶ್ಯರು ಪಡೆದುಕೊಂಡ ಉನ್ನತಿಕೆಯ ಉತ್ಥಾನಪಾದ ವನ್ನು ಒಂದು ಅನುಕರಣ ಯೋಗ್ಯ ಮಾದರಿಯಾಗಿ ಅಳವಡಿಸಿಕೊಳ್ಳಬೇಕು; ಅದಕ್ಕಾಗಿ ಮೊದಲು ಮಾಡಬೇಕಾದ ತ್ಯಾಗ ಜಾತಿಯ ಮದವನ್ನು ತ್ಯಜಿಸುವುದು : Pride of Cast has never made any man Holy, but the untouchables have crossed the ocean of life by devotion to God [R.C. Zaehner : 1975 : 144].

ಈ ಸಂಪ್ರಬಂಧವನ್ನು ಬರೆದು ಮುಗಿಸುವಾಗ ಈ ವಾರದ 'ಸುಧಾ' ಪತ್ರಿಕೆ ಯಲ್ಲಿ ಶ್ರೀ ಕಲ್ಲಿನಾಥ ಮಾಧವನವರು (ಬಿಜಾಪುರ) ಬರೆದಿರುವ ಲೇಖನದ ಕೆಲವು ವಾಕ್ಯಗಳು ಈ ಸಂಪ್ರಬಂಧದ ಅಭಿಪ್ರಾಯಕ್ಕೆ ಅನುಗುಣವಾಗಿರುವುದು ಕಂಡು ಬಂದಿದೆ : "ಹಿಂದೂ ಸಮಾಜದಲ್ಲಿ ಐಕ್ಯಮತ್ಯ ಅಥವಾ ಸಹಬಾಳ್ವೆಯಿಂದ ಕೂಡಿದ

ಒಗ್ಗಟ್ಟು ಇದ್ದಿದ್ದರೆ ಹೂಣರು ಕುಶಾನರು ಮುಸಲ್ಮಾನರು ಫ್ರೆಂಚರು ಬ್ರಿಟಿಷರು ಭಾರತವನ್ನು ಗುಲಾಮಗಿರಿಗೊಳಪಡಿಸಿ ಆಳಲು ಸಾಧ್ಯವಾಗುತ್ತಿರಲಿಲ್ಲ. ಸಾವಿರಾರು ವರ್ಷಗಳಿಂದ ದಲಿತರು ಶೋಷಣೆಗೆ ಒಳಗಾಗಿರುವುದರಲ್ಲಿ ಹಿಂದೂ ಸಂಸ್ಕೃತಿ ಮತ್ತು ಧರ್ಮದ ಪಾಲು ಕಡಿಮೆಯದಲ್ಲ. ಜಾತಿ ಪದ್ಧತಿ ಎಲ್ಲಾ ಮತಗಳಲ್ಲಿಯೂ ಇಲ್ಲ. ಈ ಜಾತಿ ಪದ್ಧತಿ ಶೋಷಣೆಗಾಗಿ ಹುಟ್ಟಿದ್ದೇ ಹೊರತು ಅಂತರಿಕ ಭಿನ್ನಾಭಿಪ್ರಾಯ ಗಳಿಂದ ಅಲ್ಲ. ಕರ್ಣ ಏಕಲವ್ಯರಂಥವರು ಜಾತಿ ಕಾರಣದಿಂದ ಘೋರ ಅನ್ಯಾಯಕ್ಕೊಳಗಾಗಿದ್ದಾರೆ. ಇಂದಿನ ದಿನಗಳಲ್ಲಿ ಸಹ ಶೃಂಗೇರಿ ಸ್ವಾಮೀಜಿಯವರು ದಲಿತರಿಗೆ ವೇದಾಧ್ಯಯನ ಮಾಡಲು ಶಾಸ್ತ್ರಗಳ ವಿರೋಧವಿದೆ ಎಂದು ಹೇಳಿದ್ದಾರೆ" [ಸುಧಾ : 24-10-93, ಪುಟ. 9].

ಜಾತಿ ಪದ್ಧತಿಯು ಹಿಂದುತ್ವದ ಕೇಂದ್ರ ಪ್ರಜ್ಞೆಯಾಗಿರುವುದರಿಂದ, ಜಾತಿ ವಿನಾಶವಾದರೆ ಹಿಂದೂ ಧರ್ಮವೂ ಕಣ್ಮರೆಯಾಗುತ್ತದೆಂಬುದು ಪ್ರಸಿದ್ಧ ಸಮಾಜ ವಿಜ್ಞಾನಿ ಎಂ. ಎನ್. ಶ್ರೀನಿವಾಸರ ಅಭಿಪ್ರಾಯ [1956:495]. ಬಾಲ್ಶೆವಿಷ್ಟರು, ಈ ಕಮ್ಯೂನಿಷ್ಟರು ಮೊದಲಾದ ಎಲ್ಲ ತೀವ್ರಗಾಮಿ ಚಳವಳಿಗಾರರನ್ನು ವಿರೋಧಿಸಲು ಇಟಲಿಯಲ್ಲಿ, ಮಹಾಯುದ್ಧ ಕಾಲದಲ್ಲಿ (1919) ಏರ್ಪಟ್ಟು ಸಿನ್ಯಾರ್ ಮುಸಲೋನಿಯನ ನೇತೃತ್ವದಲ್ಲಿ ಬೆಳೆದ ಸರ್ವಾಧಿಕಾರ ತತ್ವವಾದ ಫ್ಯಾಸಿಸಮ್ ಸಿದ್ಧಾಂತಕ್ಕೆ ಆರ್ಯರು ಪ್ರತಿಪಾದಿಸಿದ ಈ ಜಾತಿ ಪದ್ಧತಿಯೇ ಸ್ಫೂರ್ತಿಯೆಂದು ಮಹಾನ್ ಚಿಂತಕರಾದ ಎಂ. ಎನ್. ರಾಯ್ ಪ್ರತಿಪಾದಿಸಿದ್ದಾರೆ [ಫ್ಯಾಸಿಸಮ್ : 40]. ಈ ಬಗೆಯ ಮತ್ತು ಇದಕ್ಕೆ ಪೂರಕವಾದ ನೂರಾರು ಅಭಿಪ್ರಾಯಗಳು ಪ್ರಚಲಿತವಾಗಿವೆ. ಇವೆಲ್ಲದರ ಸಾರಾಂಶವೂ ಹಿಂದುತ್ವದ ಒಂದು ದುರ್ಬಲ ಭಾಗವನ್ನು ಸರಿಪಡಿಸಿಕೊಳ್ಳುವುದರ ಅಗತ್ಯವಿದೆಯೆಂಬುದು. ಬುದ್ಧ-ಮಹಾವೀರರಿಂದ ಹಿಡಿದು ಇಂದಿನ ಅಂಬೇಡ್ಕರರವರೆಗೆ ಇದೇ ದಿಕ್ಕಿನ ಚಿಂತನೆಗಳು ನಡೆದು, ಅಸ್ಪೃಶ್ಯರಿಗೆ ನ್ಯಾಯಯುತವಾದ ಮಾನವೀಯ ಅವಕಾಶಗಳನ್ನು ಕೊಡಬೇಕಾದ ಅಂಶವನ್ನು ಪ್ರತಿಪಾದಿಸಲಾಗಿದೆ.

Ambedkar Dr.B.R. : 1 Caste in India, IA.XLI, (1917)
2 Annhilation of Cast (1975)
3 Who were the Shudras (1970)

Hutton J. H. : Caste in India, Oxford (1963)
Lannoy, Richard : Speaking Tree, Oxford (1975)
Louis Dumont : Homo Hierarchicus, Chicago (1970)

Jaini P. S. : The Jaina Path of Purification California, Berkeley (1979)

Jayawickrama N. A. : ed. Buddhavamsa and Cariyapitaka, Pali Text Society (1974)

Padmanabha S. Jaini : The Jaina Path of Purification Berkeley (1979)

Roy M. N. : Facism

Srinivasa M. N. : A Note on Sanskritisation and Westernisation, Far East Qtly, 15 (1956)

Upadhye Papers : Mysore University, Mysore (1983)

Williams R. : Jaina Yoga, A Survey of the Medieaval Sravakacaras, London (1963)

Zaehner R. C. : Hinduism, Oxford (1975)

ಡಾ. ಬಾಬಾಸಾಹೇಬ್ ಅಂಬೇಡ್ಕರ್ : ಬರಹಗಳು ಮತ್ತು ಭಾಷಣಗಳು : ಕರ್ನಾಟಕ ಸರ್ಕಾರ, ಬೆಂಗಳೂರು (1990)

ಡಾ. ಕಮಲಾ ಹಂಪನಾ : ಜಾತಿ ನಿರ್ಮೂಲನೆ (ಅನುವಾದ) ಮೂಲ, ಡಾ. ಅಂಬೇಡ್ಕರ್

ಡಾ. ಮ. ನ. ಜವರಯ್ಯ : ಅಂಬೇಡ್ಕರ್ ವಿಚಾರ ಸಾಹಿತ್ಯ ಮೈಸೂರು (1991)
ದಲಿತ ವರ್ಗದ ಶರಣರು : ಒಂದು ಅಧ್ಯಯನ (1990)

ಡಾ. ಬಿ. ಎಸ್. ಕುಲಕರ್ಣಿ : (ಸಂ) ಸಮಯ ಪರೀಕ್ಷೆ. ಧಾರವಾಡ, 1957

ಡಾ. ಹಂಪ. ನಾಗರಾಜಯ್ಯ : (ಸಂ) ವಡ್ಡಾರಾಧನೆ, ಬೆಂಗಳೂರು ವಿಶ್ವವಿದ್ಯಾಲಯ (1993)
ಯಕ್ಷಯಕ್ಷಿಯರು, ಬೆಂಗಳೂರು (1976)
ವೀರಜಿನೇಂದ್ರ ಚರಿತೆ, ಬೆಂಗಳೂರು (1975)
(ಸಂ) ಪೊನ್ನನ ಶಾಂತಿ ಪುರಾಣಂ, ಬೆಂಗಳೂರು (1981)

ವಾಜಿವಂಶ ಮತ್ತು ತೈಲಪ ಭುಜಾದಂಡ ದಲ್ಲಿಪ

ಹಂಪ. ನಾಗರಾಜಯ್ಯ

ಧಾರವಾಡ ಜಿಲ್ಲೆಯ ಗದಗ ತಾಲೂಕಿಗೆ ಸೇರಿದ ಲಕ್ಕುಂಡಿಯ 52ನೆಯ ಸಂಖ್ಯೆಯ ಶಿಲಾಶಾಸನ ಕರ್ನಾಟಕದ ಚರಿತ್ರೆಯಲ್ಲಿ ಮಹತ್ವವನ್ನು ಪಡೆದಿದೆ [SII. XI-i. 52-53. 1007-08] ಈ ಶಾಸನವನ್ನು ಮಹಾಕವಿ ರನ್ನನ ರಚನೆಯೆಂದು ಪ್ರಾಸ್ಯ ಮಾಡಲಾಗಿದೆ. ಲಕ್ಕುಂಡಿಯ ಶಾಸನದ ಆಧಾರದಿಂದ, ತೈಲಪ ಚಕ್ರವರ್ತಿಯ ಸಾಮ್ರಾಜ್ಯ ವಿಸ್ತರಣೆಗೆ ಕಾರಣರಾದ ಮತ್ತು ಆರಂಭ ಘಟ್ಟದಲ್ಲಿ ಸುಭದ್ರವಾದ ತಳಪಾಯ ಹಾಕಿಕೊಟ್ಟ ಮಹಾವೀರರ, ಮಹಾತ್ಯಾಗಿ ರಾಷ್ಟ್ರ ಭಕ್ತರ ವಿವರಗಳನ್ನು ತಿಳಿಯಬಹುದು. ತರ್ದವಾಡಿಯ ಮಹಾಸಾಮಂತನಾಗಿದ್ದ ತೈಲಪನು ಚಾಳುಕ್ಯ ಸಾಮ್ರಾಜ್ಯವನ್ನು ಕಟ್ಟುವ ಸಾಹಸದಲ್ಲಿ ನಿರತನಾದಾಗ ಆತನಿಗೆ ಭುಜಾದಂಡವಾಗಿ ನಿಂತವರಲ್ಲಿ ದಲ್ಲಪಯ್ಯ ಮತ್ತು ಮಲ್ಲಪಯ್ಯ ಹಾಗೂ ಇವರಿಬ್ಬರ ಇಡೀ ಮನೆತನದ ಕಲಿಗಳು ಪ್ರಮುಖರು.

ವೆಂಗಿ ವಿಷಯದ ಕಮ್ಮೆನಾಡಿನ ಪುಂಗನೂರಿನಲ್ಲಿ ಪ್ರತಿಷ್ಠಿತವಾದ ಮನೆತನ ನಾಗಮಯ್ಯನದು, ಪುಂಗನೂರು ಪುರವರಾಧೀಶನಾದ ನಾಗಮಯ್ಯನು ದಾನಿಯಾಗಿ, ಜನಹಿತ ಕಾರ್ಯನಿರತನಾಗಿ, ಜ್ಞಾನಿಯಾಗಿ, ಜೈನ ಆಗಮ ಶಾಸ್ತ್ರ ನಿಪುಣನಾಗಿ ಹಿರಿಮೆ ಗಳಿಸಿದ್ದನು. ಅವನ ಮಗಂದಿರಾದ ಮಲ್ಲಪಯ್ಯ ಪುನ್ನಮಯ್ಯರು ಶಸ್ತ್ರ-ಶಾಸ್ತ್ರ ವಿದ್ಯಾ ಕುಶಲರು. ಕೌಂಡಿನ್ಯಕುಲ ಪ್ರದೀಪನಾದ ಮಲ್ಲಪಯ್ಯನು ರಾಜ ನೀತಿ ವಿಶಾರದನಾಗಿ ಶೌರ್ಯಾವಷ್ಟಂಬದಿಂದ ತೈಲಪನ ಸಾಮ್ರಾಜ್ಯ ಲಕ್ಷ್ಮೀ ಪ್ರವರ್ಧಮಾನಕ್ಕೆ ಕಾರಣವಾಗಿದ್ದನು. ಮಲ್ಲಪಯ್ಯನ ತಮ್ಮನಾದ ಪುನ್ನಮಯ್ಯನು ಚಾಳುಕ್ಯರ ಸೈನ್ಯಾಧಿಪತಿಯಾಗಿ, ತೈಲಪನಿಗಾಗಿ ಸಾಹಸದಿಂದ ಕಾವೇರೀ ಸರಿತ್ತೀರದಲ್ಲಿ ಹೋರಾಡುತ್ತಿರುವಾಗ ಶತ್ರುಗಳಿಂದ ರುತನಾಗಿ ಸುರಲೋಕದ ಅತಿಥಿಯಾದನು.

ಮಲ್ಲಪನ ಮಡದಿ ಜಿನಪಾದ ಪಯೋಜ ಭೃಂಗಿಯಾದ ಅಪ್ಪಕಬ್ಬೆ. ಆಕೆ ಅನೂನಗುಣ ಸಂಪನ್ನನಾದ ನಾಗಮಯ್ಯನ ಮತ್ತು ವಿನಯಮತಿ ನಾಗಿಯಬ್ಬೆಯ ಮಗಳು. ಮಲ್ಲಪಯ್ಯನ ತಂದೆಯ ಹೆಸರೂ ನಾಗಮಯ್ಯ. ತಂದೆಗೆ ಸಮಾನರಾದ ಮಾವನ ಹೆಸರೂ ನಾಗಮಯ್ಯ ಮಲ್ಲಪಯ್ಯ-ಅಪ್ಪಕಬ್ಬೆ ದಂಪತಿಗಳಿಗೆ ಮಕ್ಕಳು ಎಂಟು ಜನ. ಅವರಲ್ಲಿ ಮಗಂದಿರು ಐವರು, ಮಗಳಂದಿರು ಮೂವರು. ಹೆಣ್ಣು ಮಕ್ಕಳಲ್ಲಿ ಅತ್ತಿಮಬ್ಬೆ-ಗುಂಡಮಬ್ಬೆ ಎಂಬ ಅಕ್ಕ ತಂಗಿಯರನ್ನು ಸಚಿವೋತ್ತಮನಪ್ಪ ಗಲ್ಲಪಯ್ಯನ ಹಿರಿಯ ಮಗನಾದ ನಾಗದೇವನಿಗೆ ಕೊಟ್ಟು ಮದುವೆ ಮಾಡಲಾಗಿತ್ತು.

ಅತ್ತಿಮಬ್ಬೆಯ ಮಾವನಾದ ದಲ್ಲಪಯ್ಯನು ತೈಲಪ ಚಕ್ರವರ್ತಿಗೆ ಭುಜಾದಂಡ ವಾಗಿದ್ದನು. ದಲ್ಲಪಯ್ಯನಿಗೂ ತೈಲಪನಿಗೂ ಇದ್ದ ಮೈತ್ರಿ ಎಷ್ಟು ಮಧುರತಮ ವಾಗಿತ್ತೆಂದರೆ ಅದು ಅರಸ–ಆಳು ಎಂಬ ರೀತಿಯದಾಗಿರಲಿಲ್ಲ. ಪ್ರಭುವೂ ಪ್ರಜೆಯೂ ಗಾಢವಾದ ಸ್ನೇಹದ ಬೆಸುಗೆಯಿಂದ ಪರಸ್ಪರರು ಅನ್ಯೋನ್ಯವಾಗಿದ್ದರು. ದಲ್ಲನಿಗೂ ಆಹವಮಲ್ಲನಿಗೂ ಸಿಂಹಾಸನವೊಂದು ಭೇದವೇ ಹೊರತು ಉಳಿದುದೆಲ್ಲ ಸಮಾನ ಸಂಬಂಧ ಸಖ್ಯ.

ಇಷ್ಟು ಹಿರಿಮೆಯುಳ್ಳ ದಲ್ಲಪನನ್ನು ಶಾಸನದಲ್ಲಿ ಮಂಡಳಿಕ ಸಿದ್ಧಿ ಮತ್ತು ವಿವೇಕ ಬೃಹಸ್ಪತಿ ಎಂಬ ಎರಡು ವಿಶೇಷಣಗಳಿಂದ ನಿರ್ದೇಶಿಸಲಾಗಿದೆ. ಇದು ಆಲೋಚನೀಯ ವಿಷಯ. ಕ್ರಿ.ಶ. 973–74 ರಲ್ಲಿ ತೈಲಪನು ತಾನು ಸರ್ವ ತಂತ್ರ ಸ್ವತಂತ್ರ ಸಾಮ್ರಾಟನೆಂದು ಘೋಷಿಸಿದನು. ಇದಕ್ಕೆ ಮೊದಲು ಅರಸು ರಾಷ್ಟ್ರ ಕೂಟರ ಮಹಾ ಸಾಮಂತನಾಗಿದ್ದನು. ದಲ್ಲಪಯ್ಯನು ತೈಲಪನಿಗೆ ಸಹಾಯಕನಾಗಿ ಸೇರಿದ್ದು ಯಾವಾಗ ಎಂಬ ಸೂಚನೆಗಳು ಸ್ಪಷ್ಟವಾಗಿ ಕಾಣುವುದಿಲ್ಲ. ತೈಲಪ–ದಲ್ಲಪ ರಲ್ಲಿ ಅಧಿಕಾರದ ಆಚೆಗೂ ಚಾಚಿಕೊಂಡ ಅನ್ಯೋನ್ಯತೆ ಆತ್ಮೀಯತೆಯನ್ನು ಕಂಡಾಗ, ಅವರಿಬ್ಬರೂ ತರ್ದವಾಡಿಯ ಪರಿಸರದಲ್ಲಿ ಇದ್ದಾಗಿನಿಂದ ಒಂದುಗೂಡಿರಬೇಕೆನಿಸುತ್ತದೆ. ಮಹಾ ಸಾಮಂತನಾಗಲೂ, ಅದರಲ್ಲಿ ಯಶಸ್ವಿಯಾಗಲೂ, ಸ್ವತಂತ್ರನೆಂದು ಘೋಷಿಸಿ ಕೊಳ್ಳಲೂ, ಮುಂದೆ ಚಕ್ರಾಧಿಪತ್ಯ ಸ್ಥಾಪನ–ವಿಸ್ತರಣೆಗೂ ತೈಲಪನಿಗೆ 'ಕೆಳೆಯ ತತ್ವಜ್ಞಾನಿ ಮಾರ್ಗದರ್ಶಿ' ಯಾಗಿದ್ದವನು ದಲ್ಲಪ. ದಲ್ಲಪನು ತೈಲಪನ ಚಮೂಪ ನಾಗಿ ಯುದ್ಧಗಳಲ್ಲಿ ಜತೆಗೆ ನಿಂತು ಭುಜಕ್ಕೆ ಭುಜಕೊಟ್ಟು ಹೋರಾಡಿದನು : ತೈಲಪನಿಗೆ ನೆಚ್ಚಿನ ನೇಹಿಗನಾದನು. ಆ ಕಾರಣಗಳಿಗಾಗಿ, ಋಣಕ್ಕಾಗಿ ತೈಲಪನು ದಲ್ಲಪನಿಗೆ ಮಂಡಳಿಕಸಿದ್ಧಿ, ವಿವೇಕ ಬೃಹಸ್ಪತಿ ಎಂಬ ರಾಜ ಪ್ರಶಸ್ತಿಗಳನ್ನಿತ್ತು ಸಂಮಾನಿಸಿದನು.

ದಲ್ಲಪನು ದೊರೆ ತೈಲಪನಿಗೆ ಆಡಳಿತ ನಿರ್ವಹಣೆಯಲ್ಲಿ ಸಭಾ ಸಂವಾದನಾಗಿ ಸೂಕ್ತ ಸಕಾಲಿಕ ವಿವೇಕಯುಕ್ತ ಮಾರ್ಗದರ್ಶಕ ಆಗಿದ್ದನೆಂಬುದನ್ನು ಶಾಸನ ದಾಖಲಿಸಿದೆ. ದಲ್ಲಪನು ತೈಲಪ ಚಕ್ರವರ್ತಿಯ ಅಖಿಲ ರಾಜ್ಯಭರ ನಿರೂಪಿತ ಮಹಾ ಮಂತ್ರಾಕ್ಷ ಪಟಳಕ್ಕೆ ಅಧಿಪತಿ ಎನಿಸಿದ್ದ ಎಂಬುದು ವಿಶೇಷ ಗಮನಿಕೆ ಅರ್ಹವಾಗಿದೆ. ಸಮಸ್ತ ರಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ನಿರೂಪಣೆ ಆಗುತ್ತಿದ್ದ ಪ್ರಮುಖ ರಾಜತೀರ್ಪು, ರಾಜಾಜ್ಞೆಗಳ ಮೂಲ ತಾಮ್ರ ದಾಖಲೆ ಪ್ರತಿಗಳ ರಾಜ ಪತ್ರಾಗಾರಕ್ಕೆ ರಾಜಕೋಶಕ್ಕೆ ದಲ್ಲಪನು ಮುಖ್ಯನು. ರಾಜ್ಯಾಡಳಿತದಲ್ಲಿ ನ್ಯಾಯ ಸಂಬಂಧದ ದಾಖಲೆಗಳು ಇರುವ ಭಂಡಾರವೇ ಅಕ್ಷಪಟಲ. ಈ ಅಂಶವು, ತೈಲಪ ಚಕ್ರವರ್ತಿಯು ದಲ್ಲಪನಲ್ಲಿ ಇಟ್ಟಿದ್ದ ನಂಬಿಕೆಗೆ ಸಾಕ್ಷಿ ಪಟಲವೂ ಆಗಿದೆ. ದಲ್ಲಪನು ಎಷ್ಟು ಜನಪ್ರಿಯನಾಗಿದ್ದನೆಂದರೆ ಆತನ ಹೆಸರಿನ ನಾನಾ ರೂಪಗಳು ಪ್ರಚಲಿತವಾಗಿವೆ : ದಲ್ಲ, ಧಲ್ಲ, ದಲ್ಲಪ, ಧಲ್ಲಪ, ದಲ್ಲಪಯ್ಯ, ಧಲ್ಲಪಯ್ಯ.

ತೈಲಪ ಚಕ್ರಿಯು ದಲ್ಲಪನನ್ನು ಇಷ್ಟೊಂದು ಹತ್ತಿರವಾಗಿಟ್ಟು ಗೌರವಿಸಲು ಇದ್ದ ಇನ್ನೊಂದು ಪ್ರಬಲವಾದ ಕಾರಣ, ದಲ್ಲಪನು ತೋರಿದ ಯುದ್ಧ ನೈಪುಣ್ಯ. ಆಹವ ಕೌಂಡನಾದ ದಲ್ಲಪನ ಪರಾಕ್ರಮದ ಉಗ್ಗಡಣೆಗೆ ಲಕ್ಕುಂಡಿಯ ಶಾಸನ ಅಗ್ರಾಸನ ಕೊಟ್ಟಿದೆ :

ಮಲ್ಲಾ ಮಲ್ಲಿಯೊಳಾನ್ತರಿ
ಮಲ್ಲರನಾಹವದೊಳೊತ್ತಿ ಗೊಳ್ಗುರಿಗೊಳ್ವೀ
ಬಲ್ಲಾಳ್ತನ ದಿಸ್ಸಾಹವ
ಮಲ್ಲನ ಭುಜಾದಣ್ಡಮೆನಿಸಿ ಧಲ್ಲಂ ನೆಗಳ್ದಂ ॥

ಪೊಣರ್ದಿರ್ದಿದಿರಾಗಿ ತಾಗಿದೊರನಾನೆಯೊಳೊಕ್ಕುವನೆಂದು ಬೆರ್ಚ್ಚಿಕೊಂ
ಕಣಮೆಟ್ಟಿಯುಕ್ಕೆ ಬೆಂಗಿ ಬೆಜಗಾಗೆ ತಿವುಳ್ದೆಸಳ್ಕೆ ಮಾಳವ
ಮಣಿಯಂ ಪೊಪಳ್ದುದಿರ್ಕ್ಕೆಲದ ಮುಂದಣ ಪಿಂದಣ ಮಣ್ಡಲಕ್ಕೆ ಭೀ
ಷಣಮತಿರೌದ್ರಮದ್ಭುತ ಮಗುರ್ವ್ವಿನೆ ತೇಜದಳುರ್ಕ್ಕೆ ಧಲ್ಲನ ॥

ಧಲ್ಲಂಗಂ ನೆಗಳ್ದಾಹವ
ಮಲ್ಲಂಗಂ ಭೇದಮುಂಟೆ ವಿಭವದೊಳದನೇ
ನೆಲ್ಲರುಮರಿಯರೆ ಧರಣೀ
ವಲ್ಲಭ ಸಿಂಹಾಸನೈಕ ಭೇದಮೆ ಭೇದಂ ॥

ಮೇಲಿನ ಮೂರು ಪದ್ಯಗಳನ್ನು ತೈಲಪನನ್ನೂ, ಚಾಳುಕ್ಯ ಸಾಮ್ರಾಜ್ಯದ ಇತಿಹಾಸ ವನ್ನೂ ಕುರಿತು ಬರೆಯುವ ಚರಿತ್ರಕಾರರು ಅವಶ್ಯ ಗಮನಿಸಬೇಕು. ಗಂಗರ ಸೇನಾನಿ ಸಚಿವ ಚಾವುಂಡರಾಯನು ಕೈಗೊಂಡ ಹಲವು ಯುದ್ಧಗಳಲ್ಲಿ 'ಅಲ್ಲ' ಎಂಬುವನ ವಿರುದ್ಧ ಹೂಡಿದ ಯುದ್ಧವೂ ಒಂದು. ಈ 'ಅಲ್ಲ' ನನ್ನು ಜೆ. ಎಫ್. ಫ್ಲೀಟರು ಸರಿಯಾಗಿ ಗುರುತಿಸಲು ಆಗಿರಲಿಲ್ಲ. ರೈಸರು ಈ ಹೆಸರಿನ ರೂಪ ಕುರಿತು 'ದಲ್ಲ' ಎಂದಿದ್ದಾರೆ. ಹೀಗಾಗಿ ದಲ್ಲನು ತೈಲಪನ ಪರವಾಗಿ ರಾಷ್ಟ್ರಕೂಟರ ಮತ್ತು ಗಂಗರ ವಿರುದ್ಧ ಯುದ್ಧವೆಸಗಿದ್ದಕ್ಕೆ ಅನ್ಯಾನ್ಯ ಆಧಾರ ಉಂಟು [EI. V. p. 170. note 2 : EC. 11 (1973) ಪೀಠಿಕೆ, ಪು. iii]

ಈ ರೀತಿ ನಾಡಿನಲ್ಲಿ ಗಣ್ಯನಾಗಿದ್ದ ದಲ್ಲಪನ ಮಗನಾದ ನಾಗದೇವನು ತನ್ನ ತಂದೆಯಂತೆಯೇ ಮಹಾಪರಾಕ್ರಮಿಯಾಗಿದ್ದನು. ತೈಲಪ ಚಕ್ರವರ್ತಿ ಈ ನಾಗ ದೇವನ ಸಾಹಸವನ್ನು ಮನಗಂಡು ಅವನನ್ನು ತನ್ನ ಸೈನ್ಯಕ್ಕೆ ಸೇನಾಧಿಪತಿಯನ್ನಾಗಿ ನೇಮಿಸಿದನು. ನಾಗದೇವನು ಅನೇಕ ಸಂಗ್ರಾಮಗಳಲ್ಲಿ ಭಾಗವಹಿಸಿ ಚಾಳುಕ್ಯ ಸಾಮ್ರಾಜ್ಯಕ್ಕೆ ಸುಭದ್ರವಾದ ಅಡಿಪಾಯ ಹಾಕಿದನು. ತೈಲಪನ ಆಡಳಿತ ನಿಷ್ಕಂಟಕ ವಾಗುವಂತೆ ಹಗೆಗಳೊಂದಿಗೆ ನಾಗದೇವನು ನಡಸಿದ ಚರಿತಾರ್ಹ ಸಮರಗಳನ್ನು

ಶಾಸನ ಕಂಡರಿಸಿದೆ. ಆಹವದಕ್ಷತೆಯಿಂದ ಸೆಣಸುತ್ತ ರಣ ಭೂಮಿಯಲ್ಲೇ, ತನ್ನ ಚಿಕ್ಕಪ್ಪನಾದ ಪುನ್ನಮಯ್ಯನಂತೆ ಹತನಾದ. ನಾಗದೇವ–ಅತ್ತಿಮಬ್ಬೆಯರ ಮಗನಾದ ಅಣ್ಣಿಗದೇವನೂ ತನ್ನ ತಂದೆ ತಾತಂದಿರಂತೆಯೇ ಆಹವರಂಗವನ್ನೇರಿದ. ಆಹವದುರ್ಜಯನೆನಿಸಿ ಸಾಹಸವನ್ನೂ ದಕ್ಷತೆಯನ್ನೂ ರಾಷ್ಟ್ರಪ್ರೇಮವನ್ನೂ ಪ್ರಕಟಿಸಿದ ಈ ಅಣ್ಣಿಗದೇವನನ್ನು ಮೆಚ್ಚಿದ ತೈಲಪನೂ, ತೈಲಪನ ಮಗನಾದ ಇರಿವ ಬೆಡಂಗ ಸತ್ಯಾಶ್ರಯನೂ ಅನೇಕ ಪ್ರಶಸ್ತಿಗಳ ಮಾಲೆ ತೊಡಿಸಿದರು ; ಚಕ್ರವರ್ತಿ ಸನ್ಮಾನಮಾಡಿ ಗೌರವಿಸಿದರು. ಚಾಳುಕ್ಯ ಚಕ್ರವರ್ತಿಯ ಸೈನಾಧೀಶನಾದ ಅಣ್ಣಿಗ ದೇವನಿಗೆ ಪಡೆವಳ ತೈಲಪ, ಆಳ್ದನ ಚಕ್ರಂ, ನನ್ನಿ ನಾರಾಯಣ, ಕರ್ಪೂರ ವರ್ಷ, ಗುಣಮೇರು, ಆಯುಧಾಚಾರ್ಯ, ಪತಿಮೆಚ್ಚೆ ಗಂಡ, ಚತುರ ಚತುರಾನನ–ಎಂಬ ರಾಜಬಿರುದುಗಳನ್ನು ಇತ್ತುದಕ್ಕೆ ಶಾಸನಾಧಾರವಿದೆ.

ಅಣ್ಣಿಗ ದೇವನನ್ನು ಶಾಸನದಲ್ಲಿ ಶ್ರೀಮತ್ ಪಡೆವಳ ತೈಲಪಯ್ಯ ಎಂದು ಪರಿಚಯಿಸಲಾಗಿದೆ. ಈತನನ್ನು ಮಾಸವಾಡಿ ಸೂಜನಾಲ್ವತ್ತು ಪ್ರದೇಶಕ್ಕೆ ಬೀಳ ವೃತ್ತಿಯಿಂದ ಆಳುವಂತೆ ನೇಮಿಸಲಾಯಿತು. ಬೀಳ ವೃತ್ತಿ ಮತ್ತು ಅಣುಗವೃತ್ತಿಯನ್ನು ರಾಜರು ತಮ್ಮ ಮಕ್ಕಳಿಗೆ. ಯುವರಾಜರಿಗೆ ಮಾತ್ರ ಕೊಡುವ ಅಧಿಕಾರ ಗೌರವ. ಅಪರೂಪಕ್ಕೊಮ್ಮೆ ರಾಜರು ತಮ್ಮ ಆಪ್ತರೂ ಬಹುಸಮರ್ಥರೂ ಆದಂಥ ನಿಷ್ಠಾವಂತ ಮೇಧಾವಿಗಳಿಗೆ ಈ ವೃತ್ತಿ ಪ್ರತಿಪತ್ತಿಯನ್ನಿತ್ತು ತಮ್ಮ ವಿಶ್ವಾಸವನ್ನು ಸಾರ್ವಜನಿಕವಾಗಿ ಪ್ರಕಟಿಸುತ್ತಿದ್ದರು. ಅಣ್ಣಿಗ ದೇವನಿಗೆ ಈ ನಂಬಿಕೆಯ ವಿಶಿಷ್ಟಗೌರವ ಸಂದಿತ್ತು ಎಂಬುದು ಗಮನಾರ್ಹ. ಹೀಗೆ ಅಣ್ಣಿಗದೇವನ ಮೇಲೆ ಚಕ್ರವರ್ತಿಯ ವಾತ್ಸಲ್ಯ ವರ್ಷಿತವಾಗಲು ಮುಖ್ಯಕಾರಣ ಈ ಮನೆತನದಲ್ಲಿ ಹೆಪ್ಪುಗಟ್ಟಿದ್ದ ದೇಶಪ್ರೇಮ ಮತ್ತು ರಾಜನಿಷ್ಠೆ. ಅಣ್ಣಿಗದೇವನ ತಾಯಿಯ ಮತ್ತು ತಂದೆಯ ಎರಡೂ ಮನೆತನಗಳಲ್ಲಿ ಪ್ರಭುಭಕ್ತಿ ಕೆನೆಗಟ್ಟಿತ್ತು. ಮಲ್ಲಪಯ್ಯನ ಕುಟುಂಬದಲ್ಲಿ ಈ ರಾಜಭಕ್ತಿಯ ಪರಾಕಾಷ್ಠ ಸ್ಥಿತಿಯಾಗಿ ಆತ ತನ್ನ ಒಬ್ಬ ಮಗನಿಗೆ ತೈಲಪನ ಬಿರುದುಗಳಲ್ಲಿ ಒಂದಾದ 'ಆಹವಮಲ್ಲ' ಎಂಬುದನ್ನೇ ಹೆಸರಾಗಿಟ್ಟು ನಾಮಕರಣ ಮಾಡಿ ಆ ಪರಂಪರೆಯನ್ನು ಉದ್ಘಾಟಿಸಿದನು. ಆತನ ಒಡಹುಟ್ಟಿದ ತಮ್ಮನಾದ ಪುನ್ನಮಯ್ಯನು ಅರಾತಿ ಸೇನೆಯಿಂದ ರಣಭೂಮಿಯಲ್ಲೇ ಹತನಾದ ದುರ್ಘಟನೆ ನಡೆದಿದ್ದರೂ, ತಾನೂ ಮಗಂದಿರೂ ಅಳಿಯನೂ ಮೊಮ್ಮಗನೂ ಆಹವಾಂಗಣದಲ್ಲಿಯೇ ಆಯುಸ್ಸು ಸವೆಸಿದರು ; ರಾಷ್ಟ್ರರಕ್ಷಣೆಗೇ ಅರ್ಪಿತ ಬುದ್ಧಿಯುಳ್ಳವರಾದರು.

ಅಣ್ಣಿಗ ದೇವನನ್ನು, ಆತನ ತಂದೆಯ ನಿಧನಾ ನಂತರ, ಮಾಸವಾಡಿ 140 ಕಂಪಣ ವಿಭಾಗಕ್ಕೆ ಬೀಳ ವೃತ್ತಿಯಿಂದ ಆಳುವಂತೆ ನೇಮಿಸಲಾಯಿತೆಂಬುದು ಸರಿಯೆ. ಆದರೆ ಬಹು ವಿಸ್ತಾರವಾದ ಚಾಳುಕ್ಯ ಸಾಮ್ರಾಜ್ಯದಲ್ಲಿ, ಬೇರೆ ಎಲ್ಲಾ ಭಾಗಗಳನ್ನು

ಬಿಟ್ಟು, ಪಾಸವಾಡಿ ಪ್ರದೇಶಕ್ಕೇ ಸೇವಿಂಸಿದ್ದು ಏಕೆ ? ಅಣ್ಣಿಗನ ತಾತ ಮುತ್ತಾತಂದಿರು ಆಳಿ ಬಾಳಿ ಉಚ್ಛ್ರಾಯಕ್ಕೇರಿದ ವೆಂಗಿ ವಿಷಯವೊ ಕಮ್ಮೆನಾಡೊ ಪುಂಗನೂರೊ ಆಗಬಹುದಿತ್ತಲ್ಲವೆ ? ನೆಲೆವೀಡು ಮಳಖೇಡದ ಸೆರೆಹೊರೆಯಲ್ಲೇ ಒಂದು ಪ್ರದೇಶವನ್ನು ಕೊಡಬಹುದಿತ್ತು ಅಲ್ಲವೆ ? ಇಂತಹ ಕೆಲವು ಸಂಶಯಗಳು ಪ್ರಶ್ನೆಗಳಾಗಿ ಎದುರು ನಿಲ್ಲುತ್ತವೆ. ಈ ಸವಾಲುಗಳಿಗೆ ಚರಿತ್ರೆಯ ಒಡಲಿನಲ್ಲಿಯೇ ನಿಂತು ಉತ್ತರಗಳನ್ನು ಕಂಡುಕೊಳ್ಳಬೇಕಾಗಿದೆ.

ಅಣ್ಣಿಗದೇವನಿಗೆ ತಾಯಿಯ ಕಡೆಯಿಂದ ಇದ್ದ ಅಜ್ಜಪಜ್ಜರೆಲ್ಲಾ ವೆಂಗಿ ಮಂಡಲದ ಕಡೆಯವರೆಂಬುದು ನನ್ನಿ. ಆದರೆ ಅವನಿಗೆ ತಂದೆಯ ಕಡೆಯಿಂದ ಇದ್ದ ತಾತಂದಿರು ಯಾವ ಕಡೆಯ ಸ್ಥಳ ಮೂಲದವರು ಎಂಬುದು ಚಿಂತನೀಯವಾಗಿದೆ. ಈ ದಿಕ್ಕಿನ ಜಿಜ್ಞಾಸೆಗೆ ತೊಡಗಿದಾಗ ಕೆಲವು ಬೆಳಕಿನ ಕಿರಣಗಳು ಬೀಳುತ್ತವೆ. ಅಣ್ಣಿಗ ದೇವನ ತಂದೆಯಾದ ನಾಗದೇವನನ್ನು ಲಕ್ಕುಂಡಿಯ ಶಾಸನವು 'ವಾಜಿಕುಳತಿಳಕ' ನೆಂದಿದೆ. ಹಾಗೆಯೇ ಇನ್ನೊಂದೆಡೆಯಲ್ಲಿ ಆತನನ್ನು 'ಮಹೀದೇವಕುಳಗಗನ ಗಭಸ್ತಿಮಾಳಿ' ಎಂದು ವಿಶೇಷಣಿಸಿದೆ. ಮಹೀದೇವ ಎಂದರೆ ಭೂಸುರ (ಬ್ರಾಹ್ಮಣ)ರು ಎಂದರ್ಥ. ಅವರು ಜೈನ ಬ್ರಾಹ್ಮಣರಾಗಿದ್ದರು : ವಾಜಿಕುಳವು ಜೈನ ಬ್ರಾಹ್ಮಣ ಕುಲವಾಗಿತ್ತು.

ದಲ್ಲಪಯ್ಯನ ಬೀಗರಾದ ಮಲ್ಲಪಯ್ಯನ ಮನೆತನವೂ ಇದೇ ರೀತಿ ಜೈನ ಬ್ರಾಹ್ಮಣ ವಂಶವಾಗಿತ್ತು. ಮಲ್ಲಪಯ್ಯ–ಪುನ್ನಮಯ್ಯ ಒಡಹುಟ್ಟುಗರು. ಇವರ ತಂದೆಯಾದ ನಾಗಮಯ್ಯನನ್ನು ಪೊನ್ನಕವಿ ತನ್ನ ಶಾಂತಿಪುರಾಣಂ ಕಾವ್ಯದಲ್ಲಿ ಹೀಗೆ ಪರಿಚಯಿಸಿದ್ದಾನೆ :

> ಅತಿವಿಖ್ಯಾತಿಯ ಕಮ್ಮೆನಾಡನುದಾತ್ತಂ ಕಾವನೀವಂ ದ್ವಿಜೋ
> ನ್ನತ ವಿದ್ಯಾನಿಧಿಗಳ್ಗನೂನನುಪಮಾತೀತ ಧೈರ್ಯಂ ಬಹು
> ಶ್ರುತನಾಜ್ಞಾನಿಧಿ ಯಾಜ್ಞವಲ್ಕ್ಯ ಸದೃಶಂ ಕೌಂಡಿನ್ಯಗೋತ್ರಂ ನಿರಾ
> ಕೃತದೋಷಸ್ಥಿತಿ ನಾಗಮಯ್ಯನನಘಂ ಶ್ರೀ ಭೂಮಿದೇವೋತ್ತಮಂ ॥ (1-44)

ಪೊನ್ನನ ತರುವಾಯ ಈ ದೊಡ್ಡ ಕುಟುಂಬವನ್ನು ಪರಿಚಯಿಸುವ ಪರಂಪರೆಯನ್ನು ಮುಂದುವರಿಸಿದವನು ರನ್ನಕವಿ. ರನ್ನನು ಅಜಿತ ಪುರಾಣ ಕಾವ್ಯದಲ್ಲಿ ಮಲ್ಲಪನನ್ನು ಕೌಂಡಿನ್ಯ ಕುಲ ಪ್ರದೀಪನೆಂದೂ (1-?8), ಕೌಂಡಿನ್ಯ ಗೋತ್ರ ಮಂಡನ ಎಂದೂ (1-35) ತಿಳಿಸಿದ್ದಾನೆ. ಪೊನ್ನಕವಿ ಮುಂದುವರಿದು ಮಲ್ಲಪ–ಪುನ್ನಮರನ್ನು 'ಭೂಮಿ ದೇವತನಯರ್' (1-46) ಎಂದಿದ್ದಾನೆ. ಮಲ್ಲಪನನ್ನು ಬಭ್ರುವರಾಹ ಮಿಹಿರ ಶೌನಕ ಸುನಂದಗಾರ್ಗ್ಯ-ಇವರಿಗೆ ಸಮಾನನೆಂದಿದ್ದಾನೆ (1-47) ; ಅಲ್ಲದೆ

ಈ ನೆಲದೊಳ್ ಮಲ್ಲಪನಸ
ಮಾನರ್ ನರರೀಗಳಿಲ್ಲ ಮುನ್ನುಳ್ಳೊಡೆ ಕಾ
ನೀನಂ ದಧೀಚಿ ಶಿಬಿ ವೃಷ
ಸೇನಂ ಯಮಾತ್ಮಜನರ್ಜುನಕ್ಕುಮಲ್ಲದೊಡನಲ್ಲಂ ॥ (1–49)

ಎಂದು ಪರಿಚಯಿಸಿದ್ದಾನೆ. ಬಭ್ರುವರಾಹಮಿಹಿರ ಶೌನಕ ಸುನಂದಗಾರ್ಗ್ಯರು ಯಾರೂ ಜೈನರಲ್ಲ ; ಕರ್ಣ ದಧೀಚಿ ಶಿಬಿ ವೃಷಸೇನ ಧರ್ಮಜ-ಇವರೂ ಅಜೈನರು, ಪೌರಾಣಿಕರು. ಈ ಹೋಲಿಕೆಯಲ್ಲಿ ಮತ್ತು 1–44ರಲ್ಲಿರುವ ಯಾಜ್ಞವಲ್ಕ್ಯರೊಂದಿಗೆ ಸಾದೃಶ್ಯ ಕಲ್ಪಿಸಿರುವುದರಲ್ಲಿ ಬ್ರಾಹ್ಮಣ್ಯಪರವಾದ ವೈದಿಕ ವಿವರಣೆಯಿದೆ. ಇದರಿಂದ ಇವರು ನಾಗಮಯ್ಯನಿಗಿಂತ ಒಂದೆರಡು ತಲೆಮಾರು ಹಿಂದೆಯಷ್ಟೇ ಬ್ರಾಹ್ಮಣತ್ವದಿಂದ ಜೈನತ್ವಕ್ಕೆ ಸರಿದಂತೆ, ಮತಾಂತರ ಮಾಡಿದಂತೆ ಕಾಣುತ್ತದೆ. ಈ ಚರ್ಚೆಯನ್ನು ಮತ್ತೆ ಕೈಗೆತ್ತಿಕೊಳ್ಳಬಹುದು.

ಈ ಹಿನ್ನೆಲೆಯಲ್ಲಿ ಚರ್ಚಿಸಬೇಕಾದ ಮುಖ್ಯ ವಿಷಯವೆಂದರೆ ದಲ್ಲಪಯ್ಯನ ಮನೆತನದ ಮೂಲ ಸ್ಥಳ ಯಾವುದೆಂಬುದು. ಈ ಪ್ರಶ್ನೆಯ ಗಂಟನ್ನು ಬಿಡಿಸಲು ಬೇಕಾದ ಸುಳಿವು ರೋಣದ ಒಂದು ಶಾಸನದಲ್ಲಿ ಸಿಗುತ್ತದೆ. ರಾಷ್ಟ್ರಕೂಟ ಚಕ್ರವರ್ತಿ ಕನ್ನರ ದೇವನ (ಕೃಷ್ಣ III) ಭಾವನೂ, ಮಹಾಮಂಡಲಿಕನೂ ಆದ ಇಮ್ಮಡಿ ಬೂತುಗ ಪೆರ್ಮಾಡಿಯು ಗಂಗವಾಡಿ 96,000, ಬೆಳ್ವೊಲ-300 ಮತ್ತು ಪುಲಿಗೆರೆ-300 ಪ್ರದೇಶವನ್ನು ಆಳುತ್ತಿದ್ದನು. ಆಗ ಛತಾಯ (ಕಪ್ಪ) ವನ್ನು ಕೊಡಲೊಲ್ಲದ ಪಂಪಯ್ಯ ಎಂಬಾತನನ್ನು ರೋಣದಲ್ಲಿ ಎದುರಿಸಿ ಬೂತಯ್ಯನು ಕೊಂದನು. ಮಹಾಮಾಣ್ಡಲಿಕ ಬೂತಾರ್ಯ (ಬೂತಯ-ಬೂತುಗ)ನಿಗೆ ತಾನೊಂದು ಅಕ್ಷತೆಯನಪ್ಪಂದ ಮೀಯಿಸೆನ್ನು ತಱಿ ಸನ್ದ ಮಾನ್ಯ ಪಂಪಯ್ಯನು ವಾಜಿಕುಳಕ್ಕೆ ಮತ್ತು ಕೌಂಡಿಲ್ಯ ಗೋತ್ರಕ್ಕೆ ಸೇರಿದವನೆಂಬುದು ಮುಖ್ಯವಾಗಿ ಪರಿಶೀಲಿಸಬೇಕಾದ್ದು.

ತಱಿಸಂದೆಮ್ಮೊಡೆ ರೋಣಮುಂ ಕಿಡಿಸಿ ತಾ ಬೂತಾರ್ಯ ಪೆರ್ಮಾಡಿ(ಸಿ)
ರ್ವಿಱಿಸುತ್ತಿಱಿವ್ವೊಡೆ ತನ್ನಸ್ವಾಱಿದು ಮೇಣುತ್ಸಾಹದಿಂ ರೋಣಮು
ಣ್ಣಿಱಿ ಕಾದು(ತ್ತಸಿ)ಮತ್ತು ಸತ್ವಸಧಿಕಂ ಪಂಪಯ್ಯನುದ್ದಾಮ ಸದ್
ಗುಣಿಕಂ ವಾಜಿಕುಳೋದಯಂ ಬುಧನುತಂ ಕೌಣ್ಡಿಲ್ಯ ಗೋತ್ರೋನ್ನತಮ್ ॥

ಧರೆಯೆಲ್ಲಂ ಪೊಗೞ್ವಿ
ನ್ನಿರೆ ಪುರಿಗೆಱೆಯೊಳಗುರ್ತು ರೋಣಮಂ ಕಾದ
ಮರೇಶ್ವರ ಪುರಮನೆಯ್ದಿ ಪೆ
ಸರಿಂ ಕೀರ್ತ್ತಿಶ್ರೀಪತಾಕನಭಿನುತಂ ಪಂಪಯ್ಯಂ ॥

[SII. XI-i. 36. ಕ್ರಿ.ಶ. 942, ರೋಣ (ಧಾರವಾಡ ಜಿಲ್ಲೆ) ಪುಟ. 22]

ರೋಣದ ಶಾಸನದಲ್ಲಿ ಪ್ರಸ್ತಾಪಿತನಾಗಿರುವ ಸಾಹಸಿ, ಪ್ರತಿಭಟಸಕಾರ ಮತ್ತು ಬೂತುಗನೊಂದಿಗೆ ಸೆಣಸಿ ಸತ್ತ ಪಂಪಯ್ಯನು ವಾಜಿಕುಳೋದಯನೂ, ಕೌಂಡಿನ್ಯ ಗೋತ್ರದ ಉನ್ನತನೂ ಆಗಿದ್ದನೆಂಬುದು ಪ್ರಸ್ತುತ ಚರ್ಚೆಗೆ ಜೀವ ತುಂಬಿದೆ. ಈ ಶಾಸನದ ಕಾಲ ಕ್ರಿ.ಶ. 942. ಪಂಪಯ್ಯನು ದಲ್ಲಪಯ್ಯನ ತಂದೆಯೊ, ಹಿರಿಯ ಸೋದರನೊ ಆಗಿರುವ ಸಾಧ್ಯತೆಯನ್ನು ಸುಲಭವಾಗಿ ತಳ್ಳಿಹಾಕಲು ಬರುವುದಿಲ್ಲ: ಪ್ರಾಯಃ ತಂದೆಯೇ ಆಗಿರುವ ಸಂಭವವಿದೆ. ತನ್ನ ತಂದೆ ಅಥವಾ ಸೋದರ ಪಂಪಯ್ಯನಂತೆ, ಯುದ್ಧ ನಿಪುಣನೂ ಸಾಹಸಿಯೂ ಆಗಿದ್ದ ದಲ್ಲಪನನ್ನು ತೈಲಪನು ತನ್ನವನನ್ನಾಗಿಸಿಕೊಂಡನು. ರಾಷ್ಟ್ರಕೂಟರ ಕನ್ನರದೇವನ ಮಹಾಸಾಮಂತನಾಗಿ ಕ್ರಿ.ಶ. 965 ರಲ್ಲಿ ತರ್ದವಾಡಿಯನ್ನು ಆಳುತ್ತಿದ್ದಾಗ ತೈಲಪನು ಈ ದಲ್ಲಪನನ್ನು ಗುರುತಿಸಿ ತನ್ನೊಂದಿಗೆ ಸೇರಿಸಿಕೊಂಡಿರುವುದು ಸಾಧ್ಯವಿದೆ. ಅಲ್ಲಿಂದ ಮುಂದೆ ತೈಲಪನು ಚಕ್ರವರ್ತಿಯಾದಾಗ ದಲ್ಲಪನು, ತನ್ನ ಬಂಧು ಪಂಪಯ್ಯನನ್ನು ಹಿಂದೆ ಕೊಂದಿದ್ದ ಗಂಗ ದೊರೆಗಳ ಮೇಲೆ ಸೇಡಿಗಾಗಿ ಹಾತೊರೆದು ನುಗ್ಗಿ ಬಂದಾಗ ಚಾವುಂಡರಾಯನೊಂದಿಗೆ ಕಾದನ ಮಾಡಿದನು. ಚಾವುಂಡರಾಯನಿಗೂ ಪ್ರತೀಕಾರ ವಿತ್ತು : ತನ್ನ ದೊರೆ ಬೂತುಗನ ಮೇಲೆ ಕತ್ತಿ ಹಿರಿದ ಪಂಪಯ್ಯನ ರಕ್ತಸಂಬಂಧಿಯ ಮೇಲೆ ಹಗೆ. ಈ ಕಾರ್ಯ ಕಾರಣ ಸಂಬಂಧದ ಸರಪಳಿಯನ್ನು ಹಿಡಿದಾಗ (ಅಲ್ಲ) ದಲ್ಲ ಮತ್ತು ಚಾವುಂಡರಾಯರು ಯುದ್ಧದಲ್ಲಿ ಯಾಕೆ ಮುಖಾಮುಖಿಯಾಗಿ ನಿಂತರು ಎಂಬುದು ನಿಚ್ಚಳವಾಗುತ್ತದೆ.

ದಲ್ಲಪ ಮತ್ತು ಪಂಪಯ್ಯ ಒಂದೇ ವಂಶದ ಕುಡಿಗಳೆಂಬ ಈ ಸಮೀಕರಣವನ್ನು ಧೃಡಪಡಿಸುವ ಸಾಧಕಾಂಶಗಳನ್ನು, ಅಂತರ ಬಾಹ್ಯ ಪ್ರಮಾಣಗಳನ್ನು ಸಂಚಯಿಸಿ ಹೀಗೆ ಹರಳುಗೊಳಿಸಿ ಹೇಳಬಹುದು :

1. ಇಬ್ಬರೂ ವಾಜಿಕುಳಕ್ಕೆ ಸೇರಿದ ಐತಿಹಾಸಿಕ ವ್ಯಕ್ತಿಗಳು
2. ಇಬ್ಬರೂ ಕೌಂಡಿನ್ಯ ಗೋತ್ರ ಮಂಡನರು
3. ಇಬ್ಬರ ನಡುವೆ ಇರುವ ಕಾಲದ ಅಂತರವೂ ಕಾಲೈಕ್ಯಕ್ಕೆ ಅನುಗುಣ ವಾಗಿದೆ.
4. ಸ್ಥಳೈಕ್ಯವೂ ಸಮರ್ಪಕವಾಗಿದೆ.
5. ದಲ್ಲಪಯ್ಯ–ಪಂಪಯ್ಯ ಎಂಬ ನಾಮ ಸಾದೃಶ್ಯವೂ ಕಂಡು ಬರುತ್ತದೆ.
6. ದಲ್ಲಪ–ಚಾವುಂಡರಾಯರ ನಡುವೆ ನಡೆದ ಪ್ರತೀಕಾರ ಯುದ್ಧ ಸಕಾರಣ ವಾಗಿ ಸ್ಥಾಪಿತವಾಗುತ್ತದೆ.

ಮೇಲಿನ ಆರು ಕಾರಣಗಳ ಜತೆಗೆ ಏಳನೆಯ ಅಂಶ ಇನ್ನೊಂದು ಇದೆ. ಅತ್ತಿಮಬ್ಬೆಯ ಮಗನಾದ ಅಣ್ಣಿಗದೇವನನ್ನು ಪಾನಸವಾಡಿ-140ರ ಪ್ರದೇಶವನ್ನೇ ಆಳಲು ಚಾಳುಕ್ಯ ಚಕ್ರವರ್ತಿಗಳು ಏಕೆ ನಿಯೋಜಿಸಿದರು ಎಂಬುದಕ್ಕೆ ಸಮರ್ಪಕವಾದ ಉತ್ತರ ಇಲ್ಲಿದೆ. ಅಣ್ಣಿಗದೇವನ ಪೂರ್ವಜರು, ತಂದೆಯ ಕಡೆಯ ಹಿರಿಯರು ಈ ಫಿರ್ಕಾದವರು. ಪ್ರಾಯಃ ಲಕ್ಕುಂಡಿಯೇ ಅವರ ಮೂಲಸ್ಥಳ. ಆದ್ದರಿಂದ ಅಣ್ಣಿಗದೇವನ ಅಧಿಕಾರ ಉತ್ತರೋತ್ತರ ಪ್ರದೇಶದತ್ತ ದಾಂಗುಡಿಯಿಡದೆ, ದಕ್ಷಿಣೋತ್ತರಕ್ಕೆ ಇಳಿದುಬಂದದ್ದು ಅವರು ಇಲ್ಲಿನ ಮೂಲನಿವಾಸಿಗರೆಂಬ ಕಾರಣಕ್ಕಾಗಿ. ಹೀಗಾಗಿ ಮೇಲೆ ಪ್ರತಿಪಾದಿಸಿದ ಏಳು ಅಂಶಗಳು ಒಂದಕ್ಕೊಂದು ಹುರಿಗೊಂಡು ಬಲವಾಗಿವೆ. ಈ ಸಾಧಕ ಅಂಶಗಳ ಜತೆಗೆ ಬಾಧಕವಾಗಿರುವ ಒಂದು ಕಾರಣವನ್ನೂ ಮುಂದಿಡಬೇಕು ; ದಲ್ಲಪನನ್ನು ಪರಿಚಯಿಸುವಾಗ ಪಂಪಯ್ಯನ ಹೆಸರು ಬಂದಿಲ್ಲ ಎಂಬುದು. ಆದರೆ ಇದು ತಳ್ಳಿಹಾಕಬಹುದಾದ ತೆಳ್ಳನೆಯ ಎಳೆಯಾಗಿದೆ.

ತೈಲಪನು ಚಕ್ರವರ್ತಿಯಾಗಿ ಘೋಷಿಸಿಕೊಂಡು ಚಾಳುಕ್ಯ ಸಾಮ್ರಾಜ್ಯವನ್ನು ಮತ್ತೆ ಪುನರುಜ್ಜೀವಿಸಿದನು. ತೈಲಪನು ತನ್ನ ರಾಜಧಾನಿಯನ್ನಾಗಿ ಆರಿಸಿಕೊಂಡಿದ್ದು, ತಾನು ಸೋಲಿಸಿದ ರಾಷ್ಟ್ರಕೂಟರ ನೆಲೆವೀಡಾಗಿದ್ದ ಮಾನ್ಯಖೇಟವನ್ನೇ. ಪರಮಾರರ ಸೀಯಕ ಹರ್ಷನು ದಾಳಿಯಿಟ್ಟು ಸುಟ್ಟು ಲೂಟಿ ಮಾಡಿಹೋಗಿದ್ದ ಮಾನ್ಯಖೇಟಕ್ಕೆ ಮತ್ತೆ ಮರುಹುಟ್ಟನ್ನು ಕೊಟ್ಟವನು ತೈಲಪ. ತನ್ನ ಎಡಗೈ ಬಲಗೈ ಆಗಿ, ಅಂತರಂಗಕ್ಕೆ ಹತ್ತಿರವಾದ ಉನ್ನತ ಅಧಿಕಾರಿಗಳನ್ನಾಗಿ ತೈಲಪನು ಆರಿಸಿಕೊಂಡಿದ್ದು ದಲ್ಲಪ ಮತ್ತು ಮಲ್ಲಪರನ್ನು. ಇತ್ತ ಲಕ್ಕುಂಡಿಯ ಕಡೆಯಿಂದ ದಲ್ಲಪನೂ, ಅತ್ತ ಪುಂಗನೂರಿನಿಂದ ಮಲ್ಲಪನೂ ಬಂದು ತೈಲಪನ ರಾಜಧಾನಿ ಮಳಖೇಡದಲ್ಲಿ ನೆಲಸಿದರು. ತೈಲಪ ಚಕ್ರವರ್ತಿ ಸೂಚೀ-ಸಾಕ್ಷಿಯಾಗಿ ದಲ್ಲಪ-ಮಲ್ಲಪರು ಬೀಗರಾದರು. ಅತ್ತಿಮಬ್ಬೆ ನಾಗದೇವ ದಂಪತಿಗಳಾದರು. ವಾಜಿಕುಲವೂ ಕೌಂಡಿನ್ಯ ಗೋತ್ರವೂ ಬೆಸೆದುಕೊಂಡವು.

ಕ್ರಿ.ಶ. 9-10ನೆಯ ಶತಮಾನ ಜೈನ ಸಮಾಜಕ್ಕೆ ಶುಕ್ರದೆಸೆಯ ಹೊಂಗಾಲ. ರಾಷ್ಟ್ರಕೂಟ ಚಕ್ರವರ್ತಿಗಳೂ, ಗಂಗಕುಲದ ರಾಜರೂ ಜೈನಧರ್ಮದ ಪಾಲಕರು. ಜಿನಸೇನರು, ಗುಣಭದ್ರರು, ಜಿನಚಂದ್ರರು, ಅಜಿತಸೇನರು-ಮೊದಲಾದ ಮಹಾನ್ ಜೈನ ಆಚಾರ್ಯರು ರಾಷ್ಟ್ರವ್ಯಾಪಿ ಪ್ರಭಾವಿಗಳಾಗಿದ್ದರು. ಚಕ್ರವರ್ತಿಗಳೂ ರಾಜಗುರುಗಳೂ ಮಹಾ ಸಾಮಂತ-ಮಹಾಮಂಡಲೇಶ್ವರ-ಮಹಾ ದಂಡನಾಯಕರೂ ಪ್ರಜೆಗಳೂ ಜಿನಧರ್ಮವತ್ಸಲರಾಗಿದ್ದರು. ರಾಷ್ಟ್ರಕೂಟ ಸಾಮ್ರಾಜ್ಯದ ಮತ್ತು ದಕ್ಷಿಣ ಭಾರತದ ಮೂರನೆಯ ಒಂದಂಶದಷ್ಟು ಪ್ರಜಾಕೋಟಿ ಜೈನಧರ್ಮೀಯರಿಂದ ಕೂಡಿತ್ತು. ಈ ಗಾಢವಾದ ವರ್ಚಸ್ಸಿನ ಜೈನ ಪರಿಸರದಲ್ಲಿ ನೂರಾರು ಪ್ರತಿಷ್ಠಿತ

ಬ್ರಾಹ್ಮಣ ಮನೆತನಗಳು ಜೈನ ಧರ್ಮಕ್ಕೆ ಮತಾಂತರಗೊಂಡರು. ಪಂಪನ ತಂದೆ ಭೀಮಪಯ್ಯ, ಪಂಪನ ತಾಯಿಯ ತಂದೆ (ತಾತ) ಜೋಯಿಸ ಸಿಂಘ, ಅತ್ತಿಮಬ್ಬೆಯ ತಾತ ನಾಗಮಯ್ಯನ ಹಿರಿಯರು, ಅತ್ತಿಮಬ್ಬೆಯ ಮಾವ ದಲ್ಲಪಯ್ಯನ ಮನೆತನ, ಪ್ರಾಕೃತಕವಿ ಪುಷ್ಪದಂತನ ಹಿರಿಯರು-ಹೀಗೆ ಹಲವು ಪ್ರತಿಭೆಗಳು ಸಮವಸರಣ ಸೇರಿದುವು, ದಿವ್ಯಧ್ವನಿಗೆ ಓಗೊಟ್ಟುವು.

ವಾಜಿಕುಳ ಹತ್ತನೆಯ ಶತಮಾನದ ಚಾಳುಕ್ಯ ರಾಜ್ಯದಲ್ಲಿ ಒಂದು ಪ್ರತಿಷ್ಠಿತ ಮನೆತನವಾಗಿ ಪ್ರತಿಷ್ಠಾಪಿತವಾಯಿತು. ಪಂಪಯ್ಯ, ದಲ್ಲಪಯ್ಯ, ನಾಗದೇವ, ಅಣ್ಣಿಗದೇವ-ಈ ನಾಲ್ಕು ತಲೆಮಾರಿನವರು, ರಕ್ತ ಸಂಬಂಧದವರು, ಒಬ್ಬರಾದ ಮೇಲೆ ಒಬ್ಬರು ಸೈನ್ಯದಲ್ಲಿ ಪ್ರಮುಖರೆನಿಸಿದರು. ಇವರ ತರುವಾಯವೂ ಈ ವಂಶದ ಕುಡಿಗಳು ಕಾಣಿಸಿಕೊಂಡಿರುವುದನ್ನು ಸಹ ಈ ಸಂಪ್ರಬಂಧದ ಕಕ್ಷೆಯಲ್ಲಿ ಚರ್ಚಿಸಬಹುದಾಗಿದೆ. ಕರ್ನಾಟಕದ ಶಾಸನಗಳಲ್ಲಿ, ಕಾವ್ಯಗಳಲ್ಲಿ ವಾಜಿಕುಳ ಮತ್ತು ಆ ಕುಲಕ್ಕೆ ಸೇರಿದ ಪ್ರಮುಖರ ಕೆಲವು ಪ್ರಸ್ತಾಪಗಳಿವೆ. ಅವುಗಳನ್ನು ಕಾಲಾನು ಕ್ರಮಣಿಕೆಯಿಂದ ವಿವೇಚಿಸಬಹುದು.

1. ದಲ್ಲಪ-ನಾಗದೇವ-ಅಣ್ಣಿಗದೇವ ಇವರ ತರುವಾಯ ವಾಜಿಕುಳದ ಮತ್ತು ಇವರ ಮನೆತನದವನೇ ಆದ ಕಾಳಿಮಯ್ಯ ದಂಡನಾಯಕನು ಕಂಡುಬರುತ್ತಾನೆ. ಭುವನೈಕಮಲ್ಲ ಇಮ್ಮಡಿ ಸೋಮೇಶ್ವರನ ಕಾಲದ ಇಬ್ಬರು ಪ್ರಮುಖ ಮಹಾಮಣ್ಡಳೇಶ್ವರರು ಲಕ್ಷ್ಮರಸ ಮತ್ತು ಕಾಳಿಮಯ್ಯ. ಇವರಿಬ್ಬರಲ್ಲಿ ಕಾಳಿಮಯ್ಯನು ಚಾಳುಕ್ಯ ಸಾಮ್ರಾಜ್ಯದ ಉತ್ತರಕ್ಕೂ, ಲಕ್ಷ್ಮನೃಪನು ದಕ್ಷಿಣ ಭಾಗಕ್ಕೂ ತಮ್ಮ ಆಡಳಿತ ನಿರ್ವಹಣೆ ಮಾಡಿರುವುದು ಗಮನಾರ್ಹ. ಕಾಳಿಮಯ್ಯನು ಜಿನಭಕ್ತನಾಗಿ ತನ್ನ ವಂಶದ ಹಿರಿಯರಂತೆ ಜಿನಗೃಹವನ್ನು ಕಟ್ಟಿಸಿದನು. ಅವನನ್ನು ಕುರಿತು ಮಹಾರಾಷ್ಟ್ರದ ನಾಂದೇಡು ಜಿಲ್ಲೆಯ ದೇಗಲೂರು ತಾಲ್ಲೂಕಿನ ತಡಕಲ್ಲು ಗ್ರಾಮದ ಶಾಸನ ಪರಿಚಯ ಮಾಹಿತಿಯನ್ನು ಒದಗಿಸಿದೆ :

> (ಭದ್ರಂ)ಭೂಯು(ತಾ)ಜ್ಜಿನೇಂದ್ರಾ(ಣಾಂ) (ಶಾಸನಾಯಾ) ಘನಾ (ಶಿನೇ)
> ಕುತೀರ್ತ್ಥ (ಧ್ವಾನ್ತಸಂಘಾ)ತ ಪ್ರಭಿನ್ನಘನ (ಭಾನವೇ) ॥
> (ಸ್ವಸ್ತಿ) ಸಮಸ್ತಭುವನಾಶ್ರಯ ಶ್ರೀ । ಪೃಥಿವೀ ವಲ್ಲಭ ಮಹಾರಾಜಾಧಿರಾಜ
> ಪರಮೇಶ್ವರ ಪರಮಭಟ್ಟಾರಕಂ ಸತ್ಯಾಶ್ರ । ಯಕುಳತಿಳಕಂ ಚಾಳುಕ್ಯಾಭರಣಂ
> ಶ್ರೀಮದ್ಭು । ವನೈಕಮಲ್ಲದೇವರ ವಿಜಯರಾಜ್ಯಮುತ್ತ । ರೋತ್ತರಾಭಿವೃದ್ಧಿ
> ಪ್ರವರ್ದ್ಧಮಾನಮಾಚಂದ್ರಾರ್ಕ್ಕ । ತಾರಂ ಸಲುತ್ತಮಿರೆ ತತ್ಪಾದ ಪದ್ಮೋಪಜೀವಿ
> ಸಮಧಿಗತ ಪಂಚಮಹಾಶಬ್ದ ಮಹಾಮ । ಣ್ಡಳೇಶ್ವರನಮರಾವತೀಪುರವರೇ
> ಶ್ವರಂ । ಸಂಗ್ರಾಮರಾಮಂ ಭುಜಬಳಭೀಮಂ ನೆರೆವೊಡೆ । ಗಣ್ಡಂ
> ವೈರಿಭೇರುಣ್ಡಂ ನಿಗಳಂಕಮಲ್ಲಂ ಕೀರ್ತ್ತಿ । ಗೆ ನಲ್ಲ ಕಟಕದ ಗೋಪಂ
> ಭಂಟರ ಬಾವಂಬಿ । ಉದತ್ತಿನೇತ್ರಂ ಪರನಾರೀಪುತ್ರಂ ಸಾಹ ।

ಸೋತ್ತುಂಗನನ್ನಸಿಂಗ ನಾಮಾದಿ । ಸಮಸ್ತ ಪ್ರಶಸ್ತಿ ಸಹಿ । ತಂ
ಶ್ರೀಮನ್ಮಹಾಮಂಡಳೇಶ್ವರಂ ಕಕ್ಕ । ... . ।
ಕರಗುಡ್ತ ಸಮಸ್ತ ರಾಜ್ಯಭರನಿರೂ । ಪಿತ ಮಹಾಮಾತ್ಯ ಪದವೀ ಪಿರಾ ।
ಜಮಾನ ಮಾನೋನ್ನತ ಪ್ರಭುಮಂತ್ರೋ । ತ್ಸಾಹ ಶಕ್ತಿತ್ರಯ ಸಂಪನ್ನಂ ಸುಜನ
ಪ್ರಸನ್ನಂ ಬನ್ಧುಜನಚಿನ್ತಾಮಣಿ ವಾಜಿಕುಳಾಂ । ಬರದ್ಯುಮಣಿ...
ಸಿಂಗನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ । ಶ್ರೀಮದ್ದಂಡನಾಯಕಂ ಕಾಳಿಮಯ್ಯಂ
ಕರಡಕಲ್ಲೊಳ್ಮಾಡಿಸಿದ ನಿಗಳಂಕಮಲ್ಲ । ಜಿನಾಲಯಕ್ಕೆ ಶಕವರ್ಷ ೯೯೩ನೆಯ
ಸಾಧಾರಣ ಸಂವತ್ಸರದ ಪುಷ್ಯ ಬಹುಳ । ಪಂಚಮಿ ೫ ಶುಕ್ರವಾರ
ದನ್ದುತ್ತರಾಯಣ । ಸಂಕ್ರಾನ್ತಿ ಪರ್ವ್ವ ನಿಮಿತ್ತದಿಂ ಧಾರಾ । ಪೂರ್ವ್ವಕಂ
ಮಾಡಿದೆಯಿಂಗಾವೆಯ ತಡಕ । ಲ್ಲದೆಪ್ಪೊಲನಲೆರಡೂರ ಪ್ರಜೆಗಳ
ಸನ್ಮತದಿಂ । ಬಿಟ್ಟ ಕರಿಯನೆಲಂ ಮಾವನ ಸಿಂಗಂ ಕೋಲ । ಮತ್ತರೈ
ವತ್ತಂಕದೊಳಂ ಮತ್ತರು ೫೦ । ಆಣಲಿಗೆಯೂರ ಮುಂದಣ ಪೊಲ
ಮೇರೆಯ ಪಕ್ಕದ ತವಿಸುಲು ಬಾಯಿಂಗಾವೆಯ ಪೊಲದಲು ಬಿಟ್ಟ
ಪೂವಿನ ತೋಂಟ ಆ ಕೋಲ ಮತ್ತರು ೧ ತಡಕಲ್ಲ ಪ್ರಭು । ದಣ್ಡನಾಯಕಂ
ನಾಗವರ್ಮ್ಮಯ್ಯನು ಮಲ್ಲಿಯು । ಮಹಾಜನಮುಮೂರಿಂ ಮೂಡಲು ನಾಗೇ
ಶ್ವರದೇವರ ತೋಟದಿಂ ಬಡಗಲುಪಕ್ಕದ ತವಿಸುಲೊಟ್ಟ ಪೂವಿನ
ತೋಂಟಂ ಮತ್ತರು ೧ ಖಾಣ ೧.

[Inscriptions from Nanded District : No. 8, 1071. pp. 18-20 lines [1-46].

ತಡಕಲ್ಲು ಶಾಸನವನ್ನು ಇಷ್ಟು ದೀರ್ಘವಾಗಿ ಉದಾಹರಿಸಿರುವುದಕ್ಕೆ ಕಾರಣವೂ ಔಚಿತ್ಯವೂ ಉಂಟು. ಕಾಳಿಮಯ್ಯನು ವಾಜಿವಂಶದ ಮೇಲಾಳು: ವಾಜಿಕುಳಾಂಬರ ದ್ಯುಮಣಿ (ವಾಜಿಕುಲವೆಂಬ ಆಕಾಶವನ್ನು ಬೆಳಗುವ ಸೂರ್ಯನು). ದಲ್ಲಪನ ನಾಗದೇವನನ್ನು ಲಕ್ಕುಂಡಿಯ ಶಾಸನ ವಾಜಿಕುಳತಿಳಕನುಂ ತೇಜೋಭಾಸ್ಕರನುಂ- ಎಂದಿರುವುದನ್ನು ನೆನೆಯಬಹುದು [SII xi-i. 52. 1007. ಸಾಲು: 13].

ಕಾಳಿಮಯ್ಯನು ವಾಜಿಕುಳದವನು: ಅತ್ತಿಮಬ್ಬೆಯ ಮಗನಾದ ಮೇಲೆ ಕಾಣುವ ಮತ್ತೊಬ್ಬ ಈ ವಾಜಿವಂಶದ ಮಹಾಮಾತ್ಯನೂ ದಂಡನಾಯಕನೂ ಆಗಿದ್ದಾನೆ. ಅತ್ತಿಮಬ್ಬೆ ಲಕ್ಕುಂಡಿಯಲ್ಲಿ ಜಿನಾಲಯ ಕಟ್ಟಿಸಿದಂತೆ ಕಾಳಿಮಯ್ಯನು ಕರಡಕಲ್ ಎಂಬಲ್ಲಿ ಜಿನಾಲಯ ಕಟ್ಟಿಸಿದನು: ಅದಕ್ಕೆ 'ನಿಗಳಂಕಮಲ್ಲ ಜಿನಾಲಯ' ಎಂಬ ಹೆಸರಾಯಿತು. ಕಾಳಿಮಯ್ಯನು ಅಣ್ಣಿಗದೇವನಿಗೆ ಏನಾಗಬೇಕು ಎಂಬುದು ಪರಿಶೀಲನಾರ್ಹ. ಅಣ್ಣಿಗದೇವನು ಅಪುತ್ರಕ ಮತ್ತು ಅವಿವಾಹಿತನೆಂದು ತೋರುತ್ತದೆ. ಅಜಿತ ಪುರಾಣದಲ್ಲಿ, ಲಕ್ಕುಂಡಿಯ ಶಾಸನದಲ್ಲಿ ಆತನ ದಾಂಪತ್ಯ-ಸಂತಾನ ಕುರಿತು ಪ್ರಸ್ತಾಪಗಳಿಲ್ಲ. ನಾಗದೇವನಿಗೆ ಅಣ್ಣಿಗನು ಪಿರಿಯಮಗಂ-ಅಗ್ರಸುತಂ ಆಗಿದ್ದನೆಂದು ಶಾಸನ ಮತ್ತು ಕಾವ್ಯದಿಂದ ತಿಳಿದುಬರುತ್ತದೆ. ಹಾಗಾದರೆ ನಾಗದೇವನಿಗೆ

ಕಿರಿಯಮಗನೂ ಒಬ್ಬನಿದ್ದನೆಂದು ಭಾವಿಸಬಹುದು. ಅದೇ ರೀತಿಯಲ್ಲಿ ದಲ್ಲಪನಿಗೂ ನಾಗದೇವನು ಪಿರಿಯಮಗನೆಂದು ಅದೇ ಲಕ್ಕುಂಡಿಯ ಶಾಸನದಲ್ಲಿದೆ. ಕಾಳಿಮಯ್ಯನು ದಲ್ಲಪನಿಗಿದ್ದ ಕಿರಿಯ ಮಗನ ಮಗನೊ, ಇಲ್ಲವೇ ನಾಗದೇವನ ಕಿರಿಯ ಮಗನ ಮಗನೊ, ಆಗಿರಬಹುದು.

ತಡಕಲ್ಲು ಶಾಸನದಲ್ಲಿ ಇಪ್ಪತ್ತನೆಯ ಸಾಲು ಸಂಪೂರ್ಣವಾಗಿ ನಶಿಸಿಹೋಗಿರುವುದರಿಂದ ಒಂದು ಸಂಶಯಕ್ಕೆಡೆಯಾಗಿದೆ. ಈ ಶಾಸನದ ಹತ್ತನೆಯ ಪಂಕ್ತಿಯಿಂದ ಇಪ್ಪತ್ತನೆಯ ಪಂಕ್ತಿಯವರೆಗೆ ಬರುವ ವಿವರಣೆಯಷ್ಟೂ ಒಬ್ಬ ಮಹಾಮಂಡಲೇಶ್ವರನಿಗೆ ಸಂಬಂಧಪಟ್ಟಿದ್ದು, ಇಪ್ಪತ್ತೊಂದನೆಯ ಪಾದದಿಂದ ಮುಂದಕ್ಕೆ 41ನೆಯ ಪಾದದವರೆಗೆ ಇರುವ ವರ್ಣನೆ ಮಾತ್ರ ಕಾಳಿಮಯ್ಯ ದಂಡನಾಯಕನದಿರಬಹುದು. ಈ ಸಂಶಯವನ್ನು ಕಳಚಬಹುದಾಗಿದ್ದ ಕೊಂಡಿಯಾದ 20ನೆಯ ಸಾಲು ಅಳಿಸಿಹೋಗಿದೆ. ವಾಜಿವಂಶಜರಂತೆ ಕಾಳಿಮಯ್ಯನೂ ಚಾಳುಕ್ಯರ ದಂಡನಾಯಕನಾಗಿರುವುದು ಕೂಡ ವಿಶೇಷ ಗಮನಿಕೆಗೆ ತಕ್ಕುದಾಗಿದೆ.

ಮೇಲಿನ ಶಾಸನದಲ್ಲಿ ಅಳಿಸಿಹೋಗಿರುವ ಸಾಲಿನಲ್ಲಿ ಕಳಚಿಹೋಗಿರುವ ಕೊಂಡಿಯನ್ನು ಕೂಡಿಸಿ ಸರಿಪಡಿಸಲು ಬೇಕಾದ ಮಾಹಿತಿ ಮತ್ತೊಂದು ಶಾಸನದಲ್ಲಿ ಉಪಲಬ್ಧವಿದೆ. ಅದೇ ನಾಂದೇಡ್ ಜಿಲ್ಲಾ ಶಾಸನ ಸಂಪುಟದಲ್ಲಿರುವ ಎಕ್ಲಾರಾ ಗ್ರಾಮದ ಶಾಸನದಲ್ಲಿ ಹೀಗಿದೆ :

12 ತ್ರೈಳೋಕ್ಯಮಲ್ಲದೇವರ ಮಹಾ ಸಾಮನ್ತ) ಅಮರಾವತೀ ಪುರವ

13 ರೇಶ್ವರ ಸಮರ ಮಹೇಶ್ವರಂ

14 ...ಕಾಮಂ ಭುಜಬಳ ಭೀಮಂ

15 ವೈರಿಭೇರುಣ್ಡಂ ನಿಗಳಂಕ ಮಲ್ಲಂ

16 ಕಟಕದ ಗೋವಂ ಅಣ್ಣನ ಸಿಂಗಂ

17 ಶ್ರೀಮತ್ರೈಳೋಕ್ಯಮಲ್ಲದೇವ

18 ರ ಪಾದಪಂಕಜ ಭ್ರಮರ ನಾ

19 ಮಾದಿ ಸಮಸ್ತ ಪ್ರಶಸ್ತಿ ಸಹಿತ ಶ್ರೀ

20 ಮನ್ಮಹಾ ಸಾಮನ್ತಂ ಕರ್ಕ್ಕಪರ

21 ಸ ಸಕವರ್ಷ ೯೮೬ ನೆಯ ಪ

22 ರಾಭವ ಸಂವತ್ಸರ... ...

[Inscriptions from Nanded District (1968), No. 6. 1066. ಎಕ್ಲಾರ (ನಾಂದೇಡ್ ಜಿ. ಮುಖೇಡ್ ತಾ.) ಪ್ರ. 15] ಇದೇ ಶಾಸನ ಸಂಕಲನ ಸಂಪುಟ ದಲ್ಲಿರುವ ಕರಡಿಕಲ್ ಶಾಸನದಲ್ಲೂ ಸಹ 'ಶ್ರೀಮನ್ಮಹಾಮಂಡಳೇಶ್ವರಂ ಕರ್ಕ್ಕರಸರು' ಎಂದಿದೆ. [ಅದೇ : ಸಂ. 10.1079 (ನಾಂದೇಡ್‌ಜಿ/ದೇಗಲೂರು ತಾ)]

ಆದ್ದರಿಂದ ತಡಕಲ್ಲು ಸಂ. 8ನೆಯ ಶಾಸನದಲ್ಲಿ ಪ್ರಸ್ತಾಪಿತನಾಗಿರುವ ಕಾಳಿ ಮಯ್ಯನು ದಂಡನಾಯಕನೇ ಹೊರತು ಮಹಾಮಂಡಲೇಶ್ವರನಲ್ಲ. ಆಗ ಅಮರಾ ವತೀ ಪುರವರೇಶ್ವರನೂ ಮಹಾಮಂಡಲೇಶ್ವರನೂ ಆಗಿದ್ದವನು ಕರ್ಕ್ಕಪರಸನು. ಕಟಕದ ಗೋಪ, ನಿಗಳಂಕ ಮಲ್ಲ ಮೊದಲಾದ ಪ್ರಶಸ್ತಿಗಳೆಲ್ಲ ಕರ್ಕ್ಕಪರಸನಿಗೆ ಸಂದಿವೆ. ಅಮರಾವತೀಪುರವೆಂಬುದು ಪ್ರಾಯಃ ನಾಂದೇಡ್ ಜಿಲ್ಲೆಯ ದೇಗಲೂರೇ ಇರಬೇಕು; ದೇಗಲೂರು ಎಂಬುದರ ಸಂಸ್ಕೃತೀಕರಣಗೊಳಿಸಿದ ರೂಪ ಅಮರಾವತಿಪುರ – ಎಂದು ನನಗೆ ತೋರುತ್ತದೆ. ಈ ಮಹಾಮಂಡಲೇಶ್ವರನ ಅಧಿಕಾರ ವ್ಯಾಪ್ತಿಯಲ್ಲಿ ದಂಡ ನಾಯಕನಾಗಿದ್ದವನು ವಾಜಿಕುಳಾಂಬರದ್ಯುಮಣಿ (ವಾಜಿವಂಶದ ಸೂರ್ಯ) ಕಾಳಿಮಯ್ಯ. ಈತನು ಅಲ್ಲಿಗೆ ಮಹಾಮಾತ್ಯಪದವಿಯಿಂದ ವಿರಾಜಮಾನನೂ ಆಗಿದ್ದನು. ಬುಧಜನ ಚಿಂತಾಮಣಿ ಎನಿಸಿದ ಕಾಳಿಮಯ್ಯನು ಕರಪಕಲ್ (ಕರಡಿ ಕಲ್) ಗ್ರಾಮದಲ್ಲಿ ಬಸದಿಯನ್ನು ಕಟ್ಟಿಸಿ, ಅದಕ್ಕೆ ಆ ಭಾಗದ ಆಗಿನ ಮಹಾ ಮಂಡಳೇಶ್ವರನಾದ ಕರ್ಕಪರಸನಿಗೆ ಇದ್ದ 'ನಿಗಳಂಕಮಲ್ಲ' ಬಿರುದಿನಿಂದ 'ನಿಗಳಂಕ ಮಲ್ಲ ಜಿನಾಲಯ'ವೆಂದು ನಾಮಕರಣ ಮಾಡಿದನು : ಇದು ಕ್ರಿ. ಶ. 1071ರಲ್ಲಿ ನಡೆದ ಕಾರ್ಯ.

ಹೊಯ್ಸಳರ ಪ್ರಸಿದ್ಧ ಅಧಿಕಾರಿ-ಭಂಡಾರಿ ಹುಳ್ಳನು ವಾಜಿವಂಶ ತಿಳಕನಾದ ಯಕ್ಷರಾಜ (ಜಕ್ಕಿರಾಜ)ನ ಮಗ ಎಂಬುದು ವಿಶೇಷ ಗಮನಿಕೆಗೆ ತಕ್ಕುದಾಗಿದೆ :

ಅಕಳಂಕಂ ಪಿತೃ ವಾಜಿವಂಶ ತಿಳಕ ಶ್ರೀಯಕ್ಷರಾಜಂ ನಿಜಾಂ
ಬಿಕೆ ಲೋಕಾಂಬಿಕೆ ಲೋಕವಂದಿತೆ ಸುಶೀಲಾಚಾರೆ ದೈವಂ ದಿವೀ
ಶಕ ಕದಂಬಸ್ತುತ ಪಾದಪದ್ಮನಮಳಂ ನಾಥಂ ಮದುಕ್ರೋಣಿ ಪಾ
ಳಕ ಚೂಡಾಮಣಿ ಭಾರತೀಂಗಭೀನಲಿಂ ಪೊಯ್ಸಳನೋ ಹುಳ್ಳಸಂ ॥

[EC. 11· 71 (64) 1163. ಪ್ರ. 30. ಶ್ರವಣಬೆಳುಗೊಳ (ಹಾಸನ ಜಿ./ಚನ್ನ ರಾಯಪಟ್ಟಣ ತಾ.)] ಇದೇ ಪದ್ಯ ಶ್ರವಣಬೆಳುಗೊಳ 476 (345) ಶಾಸನದಲ್ಲೂ ಪುನರಾವೃತ್ತಿ ಆಗಿದೆ. ಅಲ್ಲದೆ ಇನ್ನೊಂದು ಶಾಸನದಲ್ಲಿ ಇದೇ ವಿಷಯ ಕಂದಪದ್ಯ ದಲ್ಲಿ ಪಡಿ ಮೂಡಿದೆ.

ವಾಜಿಕುಳ ಕಳ್ಪಭೂಜಂ
ವಾಜಿಕುಳಾಂಭೋಜ ಲಕ್ಷ್ಮಿಹುಳ್ಳಚಮೂಪಂ
ವಾಜಿಕುಳತಿಳಕನೆಸೆದಂ
ರಾಜ ಸಭಾಯೋಗ್ಯನನುಪಮಂ ವಸುಮತಿಯೊಳು ॥

[EC. VII (1979) 63 (IV ನಾಮಂ 30) 1165. ಲಾಲನಕೆರೆ (ಮಂಡ್ಯ ಜಿ/ ನಾಗಮಂಗಲ ತಾ) ಪು. 43. ಸಾಲು : 30–31] ಇದೇ ರೀತಿಯಾಗಿ, ಹೊಯ್ಸಳರ ಮತ್ತೊಬ್ಬ ಅಧಿಕಾರಿಯಾದ ಪುಣಿಸಮಯ್ಯನೂ ಸಹ ವಾಜಿವಂಶಜನೆಂದು ತಿಳಿದು ಬರುತ್ತದೆ.

ವರ್ಧಮಾನ ಪುರಾಣವನ್ನು ಬರೆದ ಆಚಣ್ಣ ಕವಿಯ ಪೋಷಕನೂ, ಮಹಾ ಮಂತ್ರಿ ಮತ್ತು ಚಮೂಪನಾಗಿ ಕೀರ್ತಿಶಾಲಿಯಾದವನೂ ಆದ ವಸುಧೈಕ ಬಾಂಧವ ಬಿರುದಾಂಕಿತ ರೇಚರಸನು (ರೇಚಣ, ರೇಚವಿಭು, ರೇಚಿದಂಡಾದಿನಾಥ) ಕೂಡ ವಾಜಿವಂಶ ತಿಲಕನಾಗಿದ್ದನು :

ಕುಲಮಂ ಪೇೞ್ವೊಡೆ ವಾಜಿವಂಶ ತಿಲಕಂ ಸನ್ಮಂತ್ರ ಮಂತ್ರಿತ್ವದೊಳ್
ಪಲರುಂ ಜೀಯೆನೆ ದೇವ ಮಂತ್ರಿಯೊಲವಂ ಸಲ್ಲೀಲೆಯಿಂ ತೋಱುವಂ
ಚಲದಿಂದಾಂತರನಿಕ್ಕಿಮೆಟ್ಟಿ ಪಡೆವಂ ಸತ್ಕೀರ್ತಿಯಂ ಧಾತ್ರಿಯೊಳ್
ನಲವಿಂ ರೇಚಣಮಂತ್ರಿಯಾರ್ಗಮಧಿಕಂ ಸಾಹಿತ್ಯ ವಿದ್ಯಾಧರಂ ॥

[EC. V. ಅರಸೀಕೆರೆ 69. 1174] ರೇಚಣ ಚಮೂಪನ ಸಂಬಂಧವಾಗಿ ಅನೇಕ ಮಾಹಿತಿಗಳು ಉಪಲಬ್ಧವಿವೆ. ಶಾಸನಗಳಲ್ಲೂ ಕಾವ್ಯದಲ್ಲೂ ರೇಚವಿಭುವಿನ ಘನ ವ್ಯಕ್ತಿತ್ವ ಅರಳಿ ನಿಂತಿದೆ ; EC. VII–i. ಶಿಕಾರಿಪುರ 119, 123, 185. 197. 225 : EC V. ಅರಸೀಕೆರೆ 69 ಮತ್ತು 77 ; ಆಚಣ್ಣ ಕವಿಯ ವರ್ಧಮಾನ ಪುರಾಣಂ (1190) : ಮೈಸೂರು ಗೆಜಟೀರ್ ಸಂಪುಟ 2, ಭಾಗ 2 – ಮೊದ ಲಾದುವನ್ನು ಅವಲೋಕಿಸಬಹುದು.

ಹುಳ್ಳನು ಲೋಕಾಂಬಿಕೆಯ ಮಗ, ರೇಚಣನು ನಾಗಾಂಬಿಕೆಯ ಮಗ [EC. VII ಶಿಕಾರಿಪುರ 197. 1180. ಸಾಲು : 36]. ತೈಲಪನಿಗೂ ಚಾಳುಕ್ಯ ಕುಲಕ್ಕೂ ದಲ್ಲಪನು ಇದ್ದಂತೆ, ಬಿಜ್ಜಳ-ಆಹವಮಲ್ಲರಿಗೂ ಕಳಚೂರ್ಯರಿಗೂ ಈ ರೇಚಣನು ಆಧಾರಸ್ತಂಭವೆನಿಸಿದ್ದನು. ಈ ರೇಚಣನ ಚಾರಿತ್ರಿಕ ಸ್ಥಾನಮಾನ ಕುರಿತ ನಿರ್ದೇಶನ ಸಮರ್ಪಕವಾಗಿ ನಡೆದಿಲ್ಲ. ರೇಚರಸನು ಕಳಚೂರ್ಯರ (ಮೂಲತಃ ಕಾಳಾಂಜ ಪುರವರೇಶ್ವರರ) ಆಹವಮಲ್ಲನ (1180-83) ಮಹಾಪ್ರಧಾನನೂ ಬಾಹತ್ತರ ನಿಯೋಗಾಧಿಪತಿಯೂ ದಂಡಾಧಿನಾಥನೂ ಆಗಿದ್ದುದು ಮಾತ್ರವಲ್ಲದೆ ಅದಕ್ಕೂ ಮೊದಲಿನಿಂದ ಆ ಮನೆತನದ ಆಳ್ವಿಕೆಯಲ್ಲಿ ಮಹತ್ತರ ಪಾತ್ರ ವಹಿಸಿದ್ದನು.

ಇಮ್ಮಡಿ ಬಿಜ್ಜಳನಿಗೆ (1162-67) ಸಪ್ತಾಂಗ ಸಂಪತ್ತಿಯನ್ನು ಕ್ರಮದಿಂದ ಪಡೆದು ಕೊಟ್ಟವನೇ ರೇಚಣ ದಂಡನಾಯಕ. ಬಿಜ್ಜಳನನ್ನು ಚಕ್ರವರ್ತಿಯೆನಿಸಿ ಸಿಂಹಾಸನದಲ್ಲಿ ಕೂಡಿಸಿದ್ದಲ್ಲದೆ ಆತನ ಆರೂ ಜನ ಮಕ್ಕಳ ಮಾಣಿಕ್ಯವಾಗಿ ನಿಂತು ಧೈರ್ಯದಿಂದ ಮಾರ್ಗ ದರ್ಶನ ಮಾಡಿದವನೂ ರೇಚಣನೇ. ವಜ್ರದೇವನು ಆಳದಿದ್ದರೂ, ಸೋವಿದೇವ (1167-76), ಮಲ್ಲಿಕಾರ್ಜುನ (1176), ಸಂಕಮ (1176-80) ಮತ್ತು ಆಹವಮಲ್ಲರ (1180-83) ರಾಜ್ಯಾಡಳಿತದಲ್ಲಿ ರೇಚಣನೇ ಪ್ರಮುಖನಾಗಿದ್ದನು. ಸಿಂಘಣನ (1183-84) ಕಾಲದಲ್ಲಿ ರೇಚಣನು ಕಲಚೂರಿಗಳ ಆಸ್ಥಾನ ತೊರೆದು, ಅವರನ್ನು ಗೆದ್ದ ಹೊಯ್ಸಳರ ವೀರಬಲ್ಲಾಳ (1173-1220) ರಾಜನಲ್ಲಿ ಮಹಾ ಮಂತ್ರಿಯಾದನು.

ಅಂಗಜೋಪಮ, ಆರ್ಥಿಕ ಕಲ್ಪತರು, ಪುಣ್ಯಾಕರ, ಭೋಗಪುರಂದರ, ಭೀಕರ ವೈರಿವಿದಾರಣ ಕೇಸರಿ, ಮಿಕ್ಕಸುದಾನಿ, ಸತ್ಯಳಾಘ್ಯ, ಜಿನೇಂದ್ರಮತಾಬ್ಜಭಾನು— ಎಂಬಿತ್ಯಾದಿ ಹತ್ತಾರು ಬಿರುದು ಬಾವಲಿಗಳು ರೇಚಣನಿಗೆ ಇದ್ದುವು. ಈ ಪ್ರಶಸ್ತಿ ಗಳನ್ನೆಲ್ಲ ಹಿಂದೆ ಹಾಕಿ ಮುಂದೆ ನಿಂತದ್ದು ವಸುಧೈಕ ಬಾಂಧವ, ಆಚಣ್ಣ ಕವಿಗೆ ಆಶ್ರಯ ನೀಡಿ ರೇಚಣನು ವರ್ಧಮಾನ ಪುರಾಣವನ್ನು ಬರೆಸಿದನು. ಅಲ್ಲದೆ ರೇಚಣನು ಅರಸೀಕೆರೆಯಲ್ಲಿ ಸಹಸ್ರಕೂಟ ಜಿನಾಲಯವನ್ನು ಕಟ್ಟಿಸಿದನು. [EC.V. ಅರಸೀಕೆರೆ 77] ಜಿನನಾಥಪುರದಲ್ಲಿ ಶಾಂತಿನಾಥ ಜಿನನ ಬಿಂಬವನು ಮಾಡಿಸಿದನು.[E C. 11 (1973) 526 (380) 12 ಶ. (13ನೆಯ ಶ. ಅಲ್ಲ) ಪು. 325 ಜಿನನಾಥಪುರ (ಹಾಸನಜಿ/ ಚನ್ನರಾಯಪಟ್ಟಣ ತಾ.)]. ಹಾಗೆಯೇ ಲಕ್ಕುಂಡಿಯಲ್ಲಿದ್ದ ವಸುಧೈಕ ಬಾಂಧವ ಜಿನಾಲಯುವನ್ನು [SII. XV. 557, 12 ಶ. ಲಕ್ಕುಂಡಿ (ಧಾರವಾಡ/ಗದಗ ತಾ.) ಪು. 374: B K. No. 34 of 1926-27; ARSIE 1926-27. APP. E. No. 34] ಈ ರೇಚಣನೇ ಕಟ್ಟಿಸಿದನೆಂದು ಅಂತರ ಬಾಹ್ಯ ಪ್ರಮಾಣಗಳಿಂದ ಖಚಿತಪಡಿಸಬಹುದು.

ಕಾಳಿಮಯ್ಯನೂ, ಯಕ್ಷರಾಜನೂ, ಹುಳ್ಳನೂ, ರೇಚಣನೂ ಅತ್ತಿಮಬ್ಬೆಯ ಬಂಧುಗಳೆನ್ನಬಹುದು. ಧಲ್ಲಪನಿಗಿದ್ದ ಕಿರಿಯ ಮಗನ ಮತ್ತು ನಾಗದೇವನಿಗಿದ್ದ ಕಿರಿಯ ಮಗನ ಸಂತಾನಶ್ರೀಯ ಪರಂಪರೆಗೆ ಸೇರಿದವರು ಕಾಳಿಮಯ್ಯ, ಹುಳ್ಳ, ರೇಚಣರು ಇವರೆಲ್ಲರೂ ದಲ್ಲಪ, ನಾಗದೇವ, ಅಣ್ಣಿಗದೇವನಂತೆಯೇ ಸೇನಾಧಿಪತಿಗಳು. ಅಣ್ಣಿಗದೇವನ ತರುವಾಯ ಕಾಳಿಮಯ್ಯನವರೆಗೆ ವಾಜಿವಂಶದವರು ಚಾಳುಕ್ಯರ ಆಶ್ರಯವನ್ನು ತೊರೆಯಲಿಲ್ಲ. ವಿಕ್ರಮಾದಿತ್ಯ VI ಚಕ್ರಿಯ ಆಡಳಿತಾನಂತರ ಚಾಳುಕ್ಯರ ಒಲವು ಶೈವ ಪರವಾದಾಗ ಜೈನಪರವಾದ ವಾಜಿವಂಶದವರು ಅನ್ಯಾನ್ಯ ರಾಜಾಶ್ರಯಕ್ಕೆ ವಲಸೆ ಹೊರಟರು. ಯಕ್ಷರಾಜನು ಆದಷ್ಟೇ ಉದಯೋನ್ಮುಖ ವಾಗುತ್ತಿದ್ದ ಹೊಯ್ಸಳರ ಆಸರೆಗೆ ಬಂದನು. ತನ್ನ ವಾಜಿವಂಶದ ತೌರೂರಾದ ಲಕ್ಕುಂಡಿಯಲ್ಲಿ ವಸುಧೈಕ ಜಿನಾಲಯ ಮಾಡಿಸಿದ ರೇಚಣನು ಕಳಚೂರ್ಯರಿಗೆ ನಿಷ್ಠ

ಪರಾಕ್ರಮಗಳಿಂದ ಸೇವೆಗೈದನು; ಅನಂತರ ತನ್ನ ಬಂಧುವಾದ ಹುಳ್ಳನ ಸಲಹೆ ಸಹಾಯಗಳಿಂದ ಹೊಯ್ಸಳರನ್ನು ಸೇರಿದನು. ಮಲ್ಲಪ-ಪುನ್ನಮಯ್ಯ, ಅತ್ತಿಮಬ್ಬೆಯರ ಆದರ್ಶ-ಪರಂಪರೆಯನ್ನು ಮುಂದುವರಿಸಿ ರೇಚಣನು ಜಿನಗೃಹ ಕಟ್ಟಿಸಿ ಜೈನಪುರಾಣ ವನ್ನು ಬರೆಸಿದನು.

'ಧರ್ಮನಾಥ ಪುರಾಣ'ವೆಂಬ ಜೈನ ಚಂಪೂ ಕಾವ್ಯವನ್ನು ರಚಿಸಿರುವ ಮಧುರ ಕವಿ (1385) ಸಹ ವಾಜಿ ವಂಶಕ್ಕೆ ಸೇರಿದವನು; ಭಾರದ್ವಾಜ ಗೋತ್ರದವನು. ಮಧುರನು ತನ್ನನ್ನು 'ಭಾರತೀ ಮಾನಸ ಕೇಳಿ ರಾಜಹಂಸಂ ನೆಗಳ್ದ ನವನಿಂದೊಳ್ ವಾಜಿ ವಂಶಾವತಂಸಂ' ಎಂದು ಪರಿಚಯಿಸಿಕೊಂಡಿದ್ದಾನೆ [ಧರ್ಮನಾಥ ಪುರಾಣಂ, 1–79: (ಸಂ.) ಯಂ. ಸಿ. ಪದ್ಮನಾಭಶರ್ಮ, ಜಿ. ಬ್ರಹ್ಮಪ್ಪ (1955) ಪು. 12]. ಆಚಣ್ಣ ಕವಿಯೂ ಸಹ ಭಾರದ್ವಾಜ ಗೋತ್ರ ಸಂಜಾತನೆಂಬುದು ನೆನಪಾಗುತ್ತದೆ [ಭಾರದ್ವಾಜ ಪವಿತ್ರಗೋತ್ರ ತಿಳಕಂ: ವರ್ಧಮಾನ ಪುರಾಣಂ, 1-24: (ಸಂ.) ತ. ಸು. ಶಾಮರಾಯ, ಪ. ನಾಗರಾಜಯ್ಯ (1975) ಪು. 6.]

ಇದುವರೆಗಿನ ವಾಜಿವಂಶಜರ ಇತಿವೃತ್ತವನ್ನು ಗಮನಿಸಿ ಈ ಕುಲವು ಶುದ್ಧಾಂಗ ವಾಗಿ ಒಂದು ಜೈನಮನೆತನವೆಂದು ತೀರ್ಮಾನಿಸುವುದಕ್ಕೆ ಮನಸ್ಸು ಮೂಡುವುದು ಸಹಜ. ಆದರೆ ಶಾಸನಗಳಲ್ಲಿ ಜೈನೇತರ ಮಹಾಪುರುಷರು ಹಲವರು ಈ ವಾಜಿವಂಶ ಸಂಜಾತರೆಂಬ ವಿವರಗಳೂ ಇವೆ. ಇವುಗಳಲ್ಲಿ ಕೆಲವು ಅಜೈನ ವಾಜಿವಂಶ ತಿಲಕರನ್ನು ಪರಿಚಯಿಸುತ್ತೇನೆ.

ಈ ಸಂಪ್ರಬಂಧದಲ್ಲಿ ಈಗಾಗಲೇ ಪ್ರಸ್ತಾಪಿಸಲಾದ ರೋಣಶಾಸನೋಕ್ತನಾದ ಪಂಪಯ್ಯನನ್ನು ಕುರಿತು ವಿವೇಚಿಸುವಾಗ, ಆತನು ಜೈನ ಶಾಖೆಗೆ ಮತ್ತು ದಲ್ಲಪನ ಪೀಳಿಗೆಗೆ ಆದಿಪುರುಷ ಇರಬಹುದೆಂಬ ಸಂದೇಹದ ನೆಲೆಯ ಮಾತುಗಳನ್ನು ಬಳಸ ಲಾಗಿದೆ. ಏಕೆಂದರೆ ಆತನ ಜಾತಿ–ಧರ್ಮ ಸಂಬಂಧವಾದ ಸೂಚನೆಗಳು ಖಚಿತವಾಗಿಲ್ಲ. ಜೈನ ಶಾಖೆಯ ವಾಜಿವಂಶ ಇರುವಂತೆಯೇ ಶೈವಶಾಖೆಯ ವಾಜಿವಂಶವೂ ಶಾಸನೋಕ್ತ ವಾಗಿದೆ. ಅವುಗಳಲ್ಲಿ ಪ್ರಾಚೀನವಾದದ್ದು ಮಹಾರಾಷ್ಟ್ರದ ನಾಂದೇಡು ಜಿಲ್ಲೆಯ ದೇಗಲೂರು ತಾಲೂಕಿಗೆ ಸೇರಿದ ತಡಕಲ್ಲು ಶಾಸನ. ಸಕ್ಕರಗೆ–80ರೊಳಗಣ ತಡಕಲ್ಲು ಗ್ರಾಮವನ್ನು ಕ್ರಿ.ಶ. 1049ರಲ್ಲಿ ಚಾಳುಕ್ಯ ಚಕ್ರವರ್ತಿ ತ್ರೈಳೋಕ್ಯಮಲ್ಲನು ತನ್ನ ಸೇನಾಧಿಪತಿ ದಂಡನಾಯಕ ನಾಗವರ್ಮಯ್ಯನಿಗೆ ವಿವಾಹ ಮಾಡಿ ಧಾರಾಪೂರ್ವಕವಾಗಿ ದಾನ ಕೊಟ್ಟನು. ಆ ನಾಗವರ್ಮಯ್ಯನ ಹಿರಿಯರು ಪ್ರಖ್ಯಾತರು.

ಕೌಂಡಿಣ್ಯಗೋತ್ರ ಪ್ರಭಾವದವರು ವಾಜಿವಂಶಾರ್ಣವದಲ್ಲಿ ಹುಟ್ಟಿದರು. ಆದಿತ್ಯನೂ, ಆತನ ಮಗ ಗೋವಿಂದನೂ, ಆತನ ಸೂನು ನಾಗಾದಿತ್ಯನೂ, ಆತನ

ಅನುಜರಾದ ಕಾಳಿದಾಸ, ನಾರಾಯಣ, ಆಯ್ಯಪಾರ್ಯರೂ ಖ್ಯಾತನಾಮರು. ಇವರಲ್ಲಿ ನಾರಾಯಣ ಮತ್ತು ಸಾಯಿಕಬ್ಬೆ ದಂಪತಿಗಳಿಗೆ ನಾಗವರ್ಮ ಮತ್ತು ಮಾದಿರಾಜರು ಮಗಂದಿರು. ದಕ್ಷನೂ ಸ್ವಾಮಿಭಕ್ತನೂ ಅಜೇಯನೂ ಆದ ನಾಗವರ್ಮನು ಚಾಳುಕ್ಯ ದಂಡಾಧಿನಾಥನಾಗಿ ಯುದ್ಧಗಳಲ್ಲಿ ತ್ರೈಲೋಕ್ಯಮಲ್ಲನಿಗೆ ದಕ್ಷಿಣ ವಿಜಯ ಭುಜಾದಂಡ ವೆನಿಸಿದ್ದನು. ವಾಜಿ ವಂಶಾಂಬರ ಹಿಮಕಿರಣನಾದ ನಾಗವರ್ಮನು ಭೃತ್ಯ ಚಿಂತಾಮಣಿ ಯಾಗಿದ್ದನು. ಈತನ ಮಗ ನಾರಾಯಣ II ವಾಜಿ ಕುಳತಿಳಕನಾದ ನಾಗವರ್ಮನು ಮಹಾಪ್ರಚಣ್ಡ ದಣ್ಡನಾಯಕನಾಗಿದ್ದುದಲ್ಲದೆ ಮಹಾಸಾಮನ್ತಾಧಿಪತಿಯೂ ಆಗಿದ್ದನು. ಈತನು ಕಾಳಾಮುಖಿ ಶೈವಗುರುಗಳಾದ ಶ್ರೀ ವಾಗೇಶ್ವರ ಪಂಡಿತರ ಭಕ್ತನಾಗಿದ್ದನು. ನಾಗವರ್ಮನು ತನ್ನ ತಂದೆಗೆ ನಾರಾಯಣ ದೇವರನ್ನೂ, ತಾಯಿಗೆ ಆದಿತ್ಯದೇವರನ್ನೂ, ಕಿರಿಯಯ್ಯನಿಗೆ (ಚಿಕ್ಕಪ್ಪ) ಅಯ್ಯೇಶ್ವರ ದೇವರನ್ನೂ, ತನ್ನ ಹೆಸರಲ್ಲಿ ನಾಗೇಶ್ವರ ದೇವರನ್ನೂ, ತನ್ನ ಹೆಂಡತಿಯ ಹೆಸರಲ್ಲಿ ಸರಸ್ವತೀ ಮಂಟಪವನ್ನೂ, ಮಗನಿಗೆ ಭೈರವ ದೇವರನ್ನೂ, ತಂಗಿಗೆ ಮಲ್ಲಿಕಾರ್ಜುನ ದೇವರನ್ನೂ, ಬೇರೆ ಬೇರೆ ದೇವಾಲಯ ಗಳನ್ನೂ ಮಾಡಿಸಿದನು. ಈತನ ಸಾಹಸವನ್ನು ಶಾಸನ ಪರಿಣಾಮಕಾರಿಯಾಗಿ ಕಂಡರಿಸಿದೆ. ಮಾದರಿಗಾಗಿ ಮೂರು ಪದಗಳನ್ನು ಉದಾಹರಿಸುತ್ತೇನೆ :

ಕರಮಿಂದ ಸಾನ್ವಯಂ ಬೆಂಬ ಕೊಳಸಂ ಭುಜಗರ್ಬ್ಬದೆ ಕೊಂಡನುಗ್ರ ಸಂ
ಗರದೊಳು ನಾಗವರ್ಮ್ಮವಿಭು ಸಾಧಿಸಿದಂ ಸವಲಕ್ಕೆ ವಿಂಧ್ಯಮಂ
ಪರಿವರಿದೆಯ್ದಿ ಸಿಂಧುಪತಿ ಮಲ್ಲನನಾಜಿಯೊಳಾಂತು ಕೊಂದನಾ
ದ್ದುರ್ಗ್ಗಮಬಲನೊಂದೆ ಕೊಳ್ಳದೊಳೆ ಸೇವುಣದೇಶಮನೇಂ ಪ್ರತಾಪಿಯೋ ॥ 14

ಬಗೆದೊಡೆ ಪೇಳದೆಂತಿದೇನು ವೈರಿನೃಪಸರ್ವ್ವಸ್ವಂಗಳಂ ತಂದು ಚ
ಕ್ರಿಗೆ ಗೊಟ್ಟಂತದ ನಾಗವರ್ಮ್ಮನಳವಂ ಬೆಟ್ಟಾದನೇಂ ಬೊಕ್ಕರಾ
ಶಿಗಳಿಂ ಪೇಳವೆ ರತ್ನಭೂಷಣಂಗಳ್ ಪೇಳವೇ ವಾಜಿರಾ
ಜಿಗಳಿಂ ಪೇಳವೆ ಗಂಧಸಿಂಧುರಘಟಾನೀಕಂಗಳಿಂ ಪೇಳವೇ ॥ 16

ಮನಮೊಲ್ದಾಗ್ರಿಗಣ್ಯನಾರಿಂ ಪೊಗಳಿಸನಮೇ ಮುಂಡನಂ ವೀರಲಕ್ಷ್ಮೀ
ಸ್ತನಹಾರಂ ವಾಜಿ ವಂಶಾಂಬರ ಹಿಮಕಿರಣಂ ಸತ್ಯರಾಧೇಯನೆಂದಾ
ರ್ಜ್ಜನ್ಯನಿಧಾನಂ ಭೃತ್ಯ ಚಿಂತಾಮಣಿಯೆನಿಸಿದ ಪೆಂಪಿಂ ಸಮಸ್ತ ಕ್ಷಿತಿನಿಸ
ತ್ರ್ಯನ ನಾನಾ ಸಾಟ್ಯರಂಗೀಕೃತ ವಿಬುಧಜನಃ ಪ್ರಾಂಗಣಂ ನಾಗವರ್ಮ್ಮಂ ॥ 17

[Inscriptions from Nanded District, No.3. 1047, Tadkhel, Deglur Taluk, pp. 5–11]

ಅದೇ ನಾಂದೇಡು ಜಿಲ್ಲೆಯ ದೇಗಲೂರು ತಾ॥ ಬಿಮರಾ ಗ್ರಾಮದ ಶಾಸನದಲ್ಲಿ ಮತ್ತೊಂದು ಈ ವಾಜಿ ವಂಶಕ್ಕೆ ಸೇರಿದ ಕುಟುಂಬದ ಚಿತ್ರಣವಿದೆ. ತಡಕಲ್ಲು ಶಾಸನ ದಂತೆಯೇ ಈ ಬಿಮರಾದ ಶಾಸನದಲ್ಲೂ ಆರಂಭದಲ್ಲಿ ಚಾಳುಕ್ಯರ ವಂಶವೃಕ್ಷವನ್ನು

ಕೊಟ್ಟಿದೆ. ಅನಂತರ ಚಾಳುಕ್ಯಾಭರಣ ತ್ರಿಭುವನಮಲ್ಲದೇವ ಅರಸನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಟ್ಟ ಕಡೆಯ ಘಟ್ಟದಲ್ಲಿ ಇದ್ದ ವಾಜಿವಂಶದ ಕುಟುಂಬವನ್ನು ಪರಿಚಯಿಸಿದೆ. ಆ ಕಾಲದ ರೇವಣಯ್ಯನ ಮಗ ವಾಜಿ ಕುಳಾಳಂಕಾಗ ಮಧುಸೂಧನಭಟ್ಟ ಮತ್ತು ಗೋವಿಂದ ಕಬ್ಬೆಯರ ಮಗನಾದ ರೇವಣಯ್ಯನಾಯ್ಕನು ಉತ್ಕೃಷ್ಟ ವಾಜಿ ವಂಶೋದಯಾಚಳಕ್ಕೆ ದ್ಯುಮಣಿಯೆನಿಸಿದನು. ರೇವಣಯ್ಯನಾಯ್ಕನು ವಜಶ್ರೀವಧು ತೊಟ್ಟ ಮುದ್ರಿಕೆಯ ಪಕ್ಕದ ಕೇವಣದಂತೆ ಇದ್ದನು. ಈತನು ಪ್ರಭುತ್ವದ ಕಲ್ಲ ಕುಂಬರಿ ಗ್ರಾಮದಲ್ಲಿ ಚಂದ್ರಶೇಖರನಾದ ಈಶ್ವರನನ್ನು ಪ್ರತಿಷ್ಠಿಸಿದನು.

ರೇವಣಯ್ಯನಾಯ್ಕ ಮತ್ತು ನಾಲಿಕಬ್ಬೆ ದಂಪತಿಗಳಿಗೆ ದೇವಪಾರ್ಯ, ಮಧುಸೂದನ, ನಾಗರಾಜ, ರಾಮದೇವ, ಗೋವಿಂದ-ಎಂಬ ಅಯ್ವರು ಮಗಂದಿರು.

ಅವರೊಳಗೆ ನಾಗರಾಜಂ
ನವೀನ ಮನುವೆನಿಸಿ ಧರ್ಮ್ಮಪರನೆನಿಸಿ ಬುಧಾ
ರ್ಣವ ಚಂದ್ರನೆನಿಸಿ ವಾಜಿ
ಪ್ರವರೋತ್ತಮನೆನಿಸಿ ಧನ್ಯನೆನಿಸಿದನಲ್ತೆ ॥ 29

ರೂಢಿಗೆ ಸಂದ ಧರ್ಮ್ಮಮೆನೆ ತನ್ನಯ ತಂದೆ ಚಿರ ಪ್ರತಿಷ್ಠೆಯಂ
ಮಾಡಿದ ರೇವಣೇಶ್ವರ ನಿವಾಸಮನೊಪ್ಪಿರೆ ಮಾಡಿ ಕೂಡೆ ನಾ
ಪಾಡಿಗಳುಂಬಮಾದುದೆನೆ ಪೆರ್ಮ್ಮೆಯನಾರ್ಜ್ಜಿಸಿ ವಾಜಿ ವಂಶದ
ಚ್ಚಾಡುವಿನಂ ಜಸಂಬಡೆದನೆಂಬುದು ಧಾರಿಣಿ ನಾಗರಾಜನ ॥ 32

ಹೀಗೆ-'ವಾಜಿವಂಶ ಪ್ರಯುಕ್ತಾಶ್ರಯವಾದ ಖ್ಯಾತಿ ತನ್ನೊಳ್ ನಿಲೆ ಇಳಾ ಭಾಗದೊಳ್ ನೆಗಳ್ದ ನಾಗರಾಜ'ನು ಮಾಡಿಸಿದ ರೇವಣೇಶ್ವರ ದೇವಾಲಯಕ್ಕೆ ನೃಪಾಂಗನೆ ಸುಗ್ಗಲ ದೇವಿಯು ಕ್ರಿ.ಶ. 1122-23 ರಲ್ಲಿ 15 ಮತ್ತರು ನೆಲವಿತ್ತಳು, ಅಮರಾವತೀ ಪುರವರೇಶ್ವರ ಮಹಾಮಂಡಳೇಶ್ವರ ಎಚಿಯಮರಸನು ನಾಗರಹಾಳ ಗ್ರಾಮವನ್ನು ಸರ್ವ್ವನಮಸ್ಯವಾಗಿ ಬಿಟ್ಟರು.

[Inscriptions of Nanded District, No. 2·. 1122-23. Bimara, Deglur Taluk, pp. 38-45].

ಮೇಲ್ಕಂಡ ವಾಜಿ ವಂಶಜರು ಚಾಳುಕ್ಯ ಚಕ್ರವರ್ತಿಗಳಲ್ಲಿ ಅಧಿಕಾರಿಗಳಾಗಿದ್ದವರು, ತಮ್ಮ ರಾಜನಿಷ್ಠೆ ಹಾಗೂ ಕ್ಷಾತ್ರೋಚಿತ ಯುದ್ಧ ನೈಪುಣ್ಯ ತೋರಿ ದೇಶ ಭಕ್ತಿಯನ್ನು ಪ್ರಕಟಿಸಿದವರು. ಇವರಲ್ಲದೆ ಇನ್ನೂ ಕೆಲವು ವಾಜಿ ವಂಶಜರು ಕಂಡು ಬರುತ್ತಾರೆ. ಅರಸೀಕೆರೆಯ 71ನೆಯ ಶಾಸನವನ್ನು ಬರೆದಿರುವ ದೇವಪಾರ್ಯನೆಂಬುವನು ವಾಜಿ ವಂಶಕ್ಕೆ ಸೇರಿದವನೆಂದು ತಿಳಿದುಬರುತ್ತದೆ :

ಭುವನನುತ ವಾಜಿ ವಂಶೋ
ದ್ಭವಕರ ವಿಭು ಸೋಮನಾಥ ಪುತ್ರಂ ಪೇಟ್ದಂ
ಕವಿರಾಜಂ ಕಾಶ್ಯಪಗೋ
ತ್ರವರ್ಧನಂ ದೇವಪಾರ್ಯನೀ ಶಾಸನಮಂ ॥

[EC.V.71.1174. ಅರಸೀಕೆರೆ]

ಕಡೂರು ಶಾಸನದ ಕವಿ ನಾಗದೇವನು ತನ್ನನ್ನು ವಾಜಿ ವಂಶದ ಕಾಶ್ಯಪಗೋತ್ರ ವರ್ಧನನೆಂದೂ. ಹರಿಹರ-ಮಾಯಿದೇವಿಗಳ ಪುತ್ರನೆಂದೂ ನಿವೇದಿಸಿಕೊಂಡಿದ್ದಾನೆ :

ಹರಿಹರ ಮಾಯಿದೇವಿಗಳ ಪುತ್ರನಾನಂದಿತ ವಾಜಿವಂಶ ಶೇ
ಖರ ನಕಳಂಕಕೀರ್ತಿ ಕಲಿಕಾಲ ಬೃಹಸ್ಪತಿ ಸೋಮನಾಥ ಶಂ
ಕರನನುಜಂ ಬುಧರ್ ಪೊಗಳೆ[3] ನಿರ್ಮಿಸಿದಂ ಕವಿನಾಗದೇವನಿ
ಸ್ಥಿರತರಮಪ್ಪ ಶಾಸನ ಮನುತ್ತಮ ಕಾಶ್ಯಪಗೋತ್ರ ವರ್ಧನಂ ॥

[EC.VI. ಕಡೂರು 95. ಕ್ರಿ.ಶ. 1224. : ಕರ್ಣಾಟಕ ಕವಿಚರಿತೆ, ಸಂಪುಟ-1 (1963) ಪು. 400.] ನಾಗದೇವಕವಿ ಶೈವಸ್ಮಾರ್ತನೆಂದು ತೋರುತ್ತದೆ.

ಇದೇ ರೀತಿ ಇನ್ನೂ ಕೆಲವು ವಾಜಿ ವಂಶೋಲ್ಲೇಖಗಳನ್ನು ಉದಾಹರಿಸ ಬಹುದು : ಕ್ರಿ.ಶ. 1079ರಲ್ಲಿ ಮಾಚಿರಾಜ (ಮಾಚಿ ಪ್ರಭು) ನೆಂಬ ದಂಡಾಧಿಕಾರಿ ವಾಜಿ ವಂಶ ಖ್ಯಾತನಾಗಿದ್ದನು.

ವಾಜಿ ವಂಶದ ಪ್ರಸ್ತಾಪ ಹಲವು ಶಾಸನಗಳಲ್ಲಿದೆ, ಕಾವ್ಯಗಳಲ್ಲಿದೆ, ಇವೆಲ್ಲ ಒಂದೇ ಕಾಲಘಟ್ಟದ ಚೌಕಟ್ಟಿಗೆ ನಿಲ್ಲುವುದಿಲ್ಲ. ಇವುಗಳ ಪರಸ್ಪರ ಸಂಬಂಧ ಸ್ಥೂಲ ವಾಗಿ ತಿಳಿದುಬರುತ್ತದೆ. ಸೂಕ್ಷ್ಮವಾದ ಅಧ್ಯಯನಕ್ಕೆ ಇಳಿದಾಗ ಕೆಲವು ಕಡೆ ಸ್ಪಷ್ಟವಾಗುವುದಿಲ್ಲ. ಈ ವಾಜಿ ವಂಶದಲ್ಲಿ ಕೌಂಡಿನ್ಯಗೋತ್ರ, ಕಾಶ್ಯಪಗೋತ್ರ, ಭಾರದ್ವಾಜಗೋತ್ರ, ಮಾಂಧಾತಗೋತ್ರ,-ಎಂಬ ಗೋತ್ರಗಳ ಉಲ್ಲೇಖಗಳಿವೆ. ವಾಜಿ ವಂಶೇತರ ವಂಶಗಳಲ್ಲಿಯೂ ಈ ಗೋತ್ರಗಳಿದ್ದುವು. ಜನ್ನ ಕವಿ ತಾನು ತಮ್ಮ ವಂಶದ ಕಾಶ್ಯಪ ಗೋತ್ರದವನೆಂದು ಹೇಳಿಕೊಂಡಿದ್ದಾನೆ. [ಅನಂತನಾಥ ಪುರಾಣಂ, 1-52 : (ಸಂ) ಬಿ. ಎ. ಮಹೀಶವಾಡಿ (1975) ಪು. 12.] ಈ ಸಂಪ್ರಬಂಧದ ಪ್ರಾರಂಭದಲ್ಲಿ ವಾಜಿ ವಂಶದೊಳಗೆ ಲೋಕವಿಖ್ಯಾತರಾದ ಜೈನ ಮತಾವಲಂಬಿಗಳನ್ನು ಪರಿಚಯಿಸಿದೆ ; ಇದರ ಉತ್ತರಾರ್ಧದಲ್ಲಿ ಬ್ರಾಹ್ಮಣ-ಶೈವ ಮತಾವಲಂಬಿಗಳನ್ನು ಪರಿಚಯಿಸಿದೆ. ಬ್ರಾಹ್ಮಣ ಕವಿಗಳಲ್ಲಿ ಒಬ್ಬನೆಂದು ಭಾವಿಸ ಲಾಗಿರುವ ಚಂದ್ರರಾಜನು (ಸು. 1025) ವಾಜಿ ಗೋತ್ರಕ್ಕೆ ಸೇರಿದವನು. ಮದನ ತಿಲಕವೆಂಬ ಕಾವ್ಯದಲ್ಲಿ ಚಂದ್ರರಾಜನು ತನ್ನನ್ನು ವಿಪ್ರಕುಲಲಲಾಮನೆಂದೂ ದ್ವಿಜಾಂ ಭೋಧಿರಾಜನೆಂದೂ, ಮನು ಮುನೀಂದ್ರಾಚಾರನೆಂದೂ ಪರಿಚಯಿಸಿಕೊಂಡಿದ್ದಾನೆ.

ಶಾಸನಗಳ ಸಹಾಯದಿಂದ ಉಪಲಬ್ಧವಾಗಿರುವ ಇದುವರೆಗಿನ ವಿವರಗಳನ್ನು ಪರಿಗಣಿಸಿ ಕೆಲವು ತೀರ್ಮಾನಗಳಿಗೆ ತಲಪಬಹುದು.

1 ವಾಜಿ ವಂಶವು ಮೂಲತಃ ಶೈವ ಸ್ಮಾರ್ತ ಜಾತಿಯಾಗಿದೆ.

2 ಹತ್ತನೆಯ ಶತಮಾನದ ಆರಂಭದಿಂದ ವಾಜಿ ವಂಶದ ದಾಖಲೆಗಳು ದೊರೆಯುತ್ತವೆ.

3 ವಾಜಿ ವಂಶದ ಮೂಲ ನೆಲೆ, ತಲಕಾವೇರಿ ರೋಣದ ಪರಿಸರವೆಂದು ತಿಳಿಯಬಹುದು.

4 ವೆಂಗಿ ಮಂಡಲ, ಗಂಗವಾಡಿ, ಸಾಂತಳಿಗೆ, ಮಾನ್ಯಖೇಟ, ಮಾಸವಾಡಿ, ರೋಣ, ನಾಂದೇಡು ಜಿಲ್ಲೆ-ಹೀಗೆ ಒಂದು ವಿಶಾಲ ಭೌಗೋಳಿಕ ಹರಹಿನಲ್ಲಿ ವಾಜಿ ವಂಶದ ಚಿಗುರು ಪಲ್ಲವಿಸಿ ದಾಂಗುಡಿಯಿಟ್ಟಿದೆ.

5 ರಾಷ್ಟ್ರಕೂಟರು, ಚಾಳುಕ್ಯರು, ಕಲಚುರ್ಯರು, ಹೊಯ್ಸಳರು ಮತ್ತು ವಿಜಯನಗರ ಸಾಮ್ರಾಜ್ಯಗಳವರೆಗೆ ವಾಜಿ ವಂಶದ ರಾಜಕೀಯ ಪಾತ್ರ ಕಂಡು ಬರುತ್ತದೆ.

6 ವಾಜಿ ವಂಶದ ಅನೇಕ ಗಣ್ಯಪುರುಷರ ಧಾರ್ಮಿಕ ಚಟುವಟಿಕೆಯೊಂದಿಗೆ ಅವರಿಗಿದ್ದ ಸಾಮಾಜಿಕ ಸ್ಥಾನಮಾನದ ಸ್ವರೂಪವೂ ತಿಳಿದು ಬರುತ್ತದೆ. ಅನೇಕ ದೇವಾಲಯ ಕಟ್ಟಿಸಿದ್ದಾರೆ.

7 ವಾಜಿ ವಂಶದಲ್ಲಿ ಚಮೂಪತಿಗಳೂ, ಮಂತ್ರಿಗಳೂ, ಭಂಡಾರಿಗಳೂ, ಬಾಹತ್ತರ ನಿಯೋಗ ಅಧಿಪತಿಗಳೂ ಕಂಡು ಬರುತ್ತಾರೆ. ಅವರೆಲ್ಲ ರಣರಂಗದಲ್ಲಿ ಮಹಾ ಸಾಹಸ ತೋರಿದ ವೀರಕಲಿಗಳು.

8 ವಾಜಿ ವಂಶದವರು ಘನ ವಿದ್ವಾಂಸರೂ ಹೌದು. ಅವರ ಕಲಾಪ್ರೇಮ ಮತ್ತು ಸಾಹಿತ್ಯ ಪ್ರೇಮವನ್ನು ನಿರೂಪಿಸುವ ದಾಖಲೆಗಳಿವೆ. ಅತ್ತಿಮಬ್ಬೆಯ ಎರಡೂ ಕಡೆಯ ಮನೆತನ ಕವಿಗಳಿಗೂ, ಪಂಡಿತರಿಗೂ ತವರು ಮನೆಯಾಗಿತ್ತು.

9 ವಾಜಿ ವಂಶದ ಮಧುರ ಕವಿಯಂತೂ ಕನ್ನಡದ ಒಬ್ಬ ಮಹತ್ವದ ಕವಿಯಾಗಿ ಕಾವ್ಯ, ಶಾಸನ ಮತ್ತು ಗೊಮ್ಮಟ ಸ್ತುತಿ ಅಷ್ಟಕವನ್ನು ಬರೆದಿದ್ದಾನೆ ; ಕನ್ನಡ ಸಾಹಿತ್ಯದಲ್ಲಿ ಗಣ್ಯನಾಗಿದ್ದಾನೆ.

10 ವಾಜಿ ವಂಶದಲ್ಲಿ ಕಾಶ್ಯಪ ಗೋತ್ರ, ಕೌಂಡಿನ್ಯಗೋತ್ರ, ಭಾರದ್ವಾಜ ಗೋತ್ರ, ಮಾಂಧಾತ ಗೋತ್ರ – ಎಂಬ ನಾಲ್ಕು ಗೋತ್ರಗಳಿದ್ದುವು.

11 ವಾಜಿವಂಶವು ಪ್ರಧಾನವಾಗಿ ಮತ್ತು ಮೂಲತಃ ಬ್ರಾಹ್ಮಣ ಮನೆತನ. ಆದರೆ ಅದರಲ್ಲಿ ಎರಡು ಶಾಖೆಗಳಾದುವು; ಒಂದು, ಬ್ರಾಹ್ಮಣರಾಗಿಯೇ ಉಳಿದು ಬಂದ ಶೈವಪಂಗಡ; ಇನ್ನೊಂದು ಜೈನರಾಗಿ ಮತಾಂತರ ಮಾಡಿದ ಜೈನ ಶಾಖೆ.

12 ಜೈನ ವಾಜಿವಂಶದವರೂ, ಶೈವ ವಾಜಿವಂಶದವರೂ ಕಲ್ಯಾಣ ಚಾಳುಕ್ಯ ಸಾಮ್ರಾಜ್ಯ ಪ್ರಬಲವಾಗಿ ಉಳಿದು ಬೆಳೆಯಲು ತುಂಬ ಸಹಾಯ ಮಾಡಿದ್ದಾರೆ. ಚಾಳುಕ್ಯ ಸೇನೆಯಲ್ಲಿ ವಾಜಿಕುಲದವರು ಚಮೂಪತಿಗಳಾಗಿ ಮುಂಚೂಣಿಯಲ್ಲಿದ್ದರು.

13 ವಾಜಿವಂಶದಲ್ಲಿನ ಕೌಂಡಿನ್ಯ ಗೋತ್ರದವರು ಹತ್ತನೆಯ ಶತಮಾನದ ವೇಳೆಗೇನೆ ಜೈನರಾಗಿ ಪರಿವರ್ತನಗೊಂಡಿದ್ದರು. ರೋಣ ಶಾಸನೋಕ್ತನಾದ ಪಂಪಯ್ಯನೂ ಈ ಪ್ರಕ್ರಿಯೆಯನ್ನು ಆರಂಭಿಸಿರಬಹುದು. ಪಂಪಯ್ಯನ ಹೆಸರನ್ನು ನೋಡಿದರೆ, ಕನ್ನಡದ ಆದಿಕವಿ ಪಂಪನ ನೆನಪು ಆಗುವುದು ಸಹಜ. ಪಂಪನ ತಂದೆ ಭಿಮಪಯ್ಯನು ಜೈನನಾಗುವ ಮೊದಲು ಶೈವಸ್ಮಾರ್ತನಾಗಿದ್ದನು. ಪಂಪನ ಮೂಲ ಹೆಸರು ಪಂಪಯ್ಯ ಎಂದಿದ್ದಿರಬಹುದು. ಪಂಪನ ವತ್ಸ ಗೋತ್ರವೂ ಇದೇ ವಾಜಿ ವಂಶದ ಕುಡಿ ಇದ್ದಿರಬಹುದು; ಪಂಪನ ತಾಯಿ ಅಬ್ಬಣಬ್ಬೆಯ ತಂದೆ-ತಾತ ಜೋಯಿಸಸಿಂಘನೂ ವಾಜಿವಂಶಜನೇ ಇರಬೇಕು.

14 ಜೈನ ಪರವಾದ ವಾಜಿವಂಶವು ಕ್ರಿ.ಶ. 10 ರಿಂದ 14ನೆಯ ಶತಮಾನದವರೆಗೆ ಐದುನೂರು ವರ್ಷಗಳ ಚರಿತ್ರೆಯನ್ನು ಗರ್ಭೀಕರಿಸಿದೆ.

15 ಈ ಜೈನ ವಾಜಿವಂಶವು ಕನ್ನಡ ಸಾಹಿತ್ಯಕ್ಕೂ, ಕರ್ನಾಟಕದ ವಾಸ್ತುಶಿಲ್ಪಕ್ಕೂ, ರಾಜಕೀಯ ಇತಿಹಾಸಕ್ಕೂ ಮಾಡಿರುವ ಮಹದುಪಕಾರವು ಉಲ್ಲೇಖಾರ್ಹವಾದದ್ದು, ಅವರ ಚರಿತ್ರಾರ್ಹ ಸಾಧನೆಗಳನ್ನು ಅತಿ ಸಂಕ್ಷೇಪವಾಗಿ ಹೀಗೆ ಹೇಳಬಹುದು :

i. ಮಲ್ಲಪಯ್ಯ - ಪುನ್ನಮಯ್ಯ ಸೋದರರು ಪೊನ್ನಕವಿಯಿಂದ ಶಾಂತಿ ಪುರಾಣ ಕಾವ್ಯವನ್ನು ಬರೆಸಿದರು.

ii. ದಾನಚಿಂತಾಮಣಿ ಕವಿವರ ಕಾಮಧೇನು ಅತ್ತಿಮಬ್ಬೆಯು ತನ್ನ ತಂದೆ ಮತ್ತು ಚಿಕ್ಕಪ್ಪ ಬರೆಸಿದ ಪೊನ್ನನ ಶಾಂತಿಪುರಾಣದ ಒಂದು ಸಾವಿರ ಓಲೆಗರಿ ಪ್ರತಿಗಳನ್ನು ಮಾಡಿಸಿ ಉಚಿತವಾಗಿ ಹಂಚಿ ಶಾಸ್ತ್ರದಾನ ಮಾಡಿದಳು.

iii. ಅತ್ತಿಮಬ್ಬೆ ಮತ್ತು ಅಣ್ಣಿಗದೇವ, ತಾಯಿ–ಮಗ ಸೇರಿ ರನ್ನಕವಿಗೆ ಆಶ್ರಯ ನೀಡಿ ಅಜಿತ ಪುರಾಣ ಕಾವ್ಯವನ್ನು ಬರೆಸಿದರು.

iv. ಅಣ್ಣಿಗದೇವನು ರನ್ನನಿಂದ ಲಕ್ಕುಂಡಿಯ ಶಾಸನವನ್ನು ಬರೆಸಿದನು.

v. ಅತ್ತಿಮಬ್ಬೆ 1501 ಜಿನಗೃಹಗಳನ್ನೂ, 1500 ಜಿನಬಿಂಬಗಳನ್ನೂ, ಮಂದಾಸನ ಜಯಘಂಟೆ ಮಣಿ ತೋರಣಗಳನ್ನೂ ಮಾಡಿಸಿದಳು.

vi. ಅತ್ತಿಮಬ್ಬೆಯು ಕವಿಗಳಿಗೇ ಅಲ್ಲದೆ ಕಥಕರಿಗೆ, ಗಾಯಕರಿಗೆ, ವಾದಕರಿಗೆ, ನಗ್ನರಿಗೆ, ಭಗ್ನರಿಗೆ, ಅನಾಥರಿಗೆ, ಶಿಷ್ಟರಿಗೆ, ನಟರಿಗೆ - ಹೀಗೆ ನಾನಾ ವೃತ್ತಿಕಲಾವಿದರಿಗೆ ಉದಾರ ಆಶ್ರಯ ನೀಡಿ, ಕಲಾವಿದರ ಬಾಳಿಗೆ ಅಭಿಲಷಿತ ದಾನ ವಿನೋದ ಎಂದೆನಿಸಿದಳು.

vii. ಕನ್ನಡನಾಡಿನ ಪ್ರಥಮ ಅಧಿಕೃತ ವೀರವನಿತೆ ಅತ್ತಿಮಬ್ಬೆ ; ಯುದ್ಧದಲ್ಲಿ ಭಾಗವಹಿಸಿ ಶತ್ರುಸೈನ್ಯವನ್ನು ಸೋಲಿಸಿ ತನ್ನ ಕಡೆಯ ಭಟರನು ಕಾಪಾಡಿದ ಸಾಹಸಿ ಅತ್ತಿಮಬ್ಬೆ.

viii. ದಲ್ಲಪಯ್ಯ, ನಾಗದೇವ, ಅಣ್ಣಿಗದೇವ ಕರ್ನಾಟಕದ ಪ್ರಸಿದ್ಧ ಚಾಳುಕ್ಯ ಚಕ್ರಾಧಿಪತ್ಯಕ್ಕೆ ಸುಸ್ಥಿರವಾದ ಅಸ್ತಿಭಾರ ಹಾಕಿದರು.

ix. ದಂಡನಾಯಕ ಕಾಳಿಮಯ್ಯನು ಜಿನಾಲಯ ಕಟ್ಟಿಸಿದನು.

x. ದಣ್ಡನಾಯಕ ರೇಚಣನು ಜಿನಗೃಹಗಳನ್ನು ಕಟ್ಟಿಸಿದನು ; ಆಚಣ್ಣಕವಿಗೆ ನೆರವು ನೀಡಿ ವರ್ಧಮಾನ ಪುರಾಣ ಕಾವ್ಯವನ್ನು ಬರೆಸಿದನು : ಜೈನ ಧರ್ಮಕ್ಕೆ ರೇಚಣನು ಮರುಹುಟ್ಟು ಕೊಟ್ಟನು.

xi. ಭಂಡಾರಿ ಹುಳ್ಳನು ಹಳೆಯ ಜಿನಾಲಯಗಳನ್ನು ಜೀರ್ಣೋದ್ಧಾರ ಮಾಡಿದ್ದಲ್ಲದೆ ಹೊಸ ಬಸದಿಗಳನ್ನು ಕಟ್ಟಿಸಿದನು.

16. ವೈದಿಕ ವಾಜಿವಂಶದವರು ಪ್ರಮುಖರು ನೀಡಿದ ಕೊಡುಗೆಯೂ ಗಣನೀಯ ಪ್ರಮಾಣದಲ್ಲಿದೆ.

i. ತೈಲಪ-ಇರಿವಬೆಡಂಗ ಸತ್ಯಾಶ್ರಯ ಚಕ್ರವರ್ತಿಗಳಿಗೆ ದಲ್ಲಪ, ನಾಗದೇವ, ಅಣ್ಣಿಗದೇವ ನೀಡಿದ ಭುಜಬಲ ಚರಿತ್ರೆಯಲ್ಲಿ ಪ್ರಾಮುಖ್ಯ ಪಡೆದಿದೆ. ವೈದಿಕ ವಾಜಿಕುಲಜರಾದ ಮಾದಿರಾಜ (ಮಾಧವ) ಮತ್ತು ನಾಗವರ್ಮರು ತ್ರೈಲೋಕ್ಯಮಲ್ಲ ಸೋಮೇಶ್ವರನ ಅಧಿಕಾರಿಗಳಾಗಿ ಆನೆಬಲ-ಸಿಂಹಬಲ ನೀಡಿದರು. ನಾಗವರ್ಮನಂತೂ ಚಾಳುಕ್ಯರಾಜ್ಯ ವಿಭೂತಿಗೆ ನೆಲೆಯಾಗಿದ್ದನು :

ಏನಗೀತಂ ಯುದ್ಧ ಕೊಳ್ ದಕ್ಷಿಣ ವಿಜಯ ಭುಜಾದಣ್ಡಮೆಂದರ್ಕ್ಕಜಿಂದಾ
ಳ್ದನೃಪಂ ತ್ರೈಳೋಕ್ಯಮಲ್ಲಂ ಕುಡೆ ಚಮರರುಹಚ್ಛತ್ರತೂರ್ಯ್ಯಾವಳೀ ನಿ
ಸ್ವನ ನಾನಾ ಕೇತನಾಳಂಕೃತಮನಸಮದಣ್ಡಾಧಿನಾಥತ್ವಮಂ ಪೆ
ತ್ತನಜೇಯಂ ನಾಗವರ್ಮಂ ಸ್ಫುರದಸಿದಳಿತೋಗ್ರಾಸುಹಿನಾಗವರ್ಮ್ಮ (೦) ॥

ಆ ನಾಗದೇವನು ತೈಲಪನಿಗೆ ಅನೇಕ ವಿಜಯಗಳನ್ನು ತಂದುಕೊಟ್ಟನು ; ಈ ನಾಗವರ್ಮನು ತ್ರೈಳೋಕ್ಯಮಲ್ಲನಿಗೆ ನಾನಾ ಗೆಲುವುಗಳ ಸರಮಾಲೆ ಹಾಕಿದನು ; ಅವುಗಳಲ್ಲಿ ಸವಲಕ್ಕೆಯನ್ನು (ಪಂಪನ ಆಶ್ರಯದಾತರು ಆಳಿದ ಸಪಾದಲಕ್ಷಕ್ಷಿತಿ ಪ್ರದೇಶ) ಗೆದ್ದುದು ಪ್ರಮುಖವೆನಿಸಿದೆ.

ii. ನಾಗವರ್ಮನು ಬಂಧುಜನ ಚಿಂತಾಮಣಿ. ಈತ ತನ್ನ ತಂದೆ, ತಾಯಿ, ಚಿಕ್ಕಪ್ಪ, ಮಡದಿ ಹಾಗೂ ತಂಗಿಯರ ಹೆಸರಲ್ಲಿ, ತನ್ನ ಹೆಸರಲ್ಲಿ ನಾನಾ ದೇಗುಲಗಳನ್ನು ಮಾಡಿಸಿದನು.

iii. ಇದೇ ನಾಗವರ್ಮನು ಘಳಿಗೆ ಬಾಗಿಲ್ವಾಡ ಸಂಧ್ಯಾಮಠ ಗಣಪತೀ ಭಗವತೀ ಸಪ್ತಮಾತೃಕೆ ನಂದಿನಾಗರ-ಸಮಸ್ತ ದೇವತಾ ಪ್ರತಿಷ್ಠೆ ಮಾಡಿಸಿದನು. ಅಲ್ಲದೆ ದೇವರ ತ್ರಿಕಾಲ ಪೂಜೆ, ತಪೋಧನರ ವಿದ್ಯಾರ್ಥಿ ಮಾಣಿಗಳ ಆಹಾರದಾನಕ್ಕೆ, ಪರಿವಾರದ ಜೀವಿತಕ್ಕೆ ಐವತ್ತು ಮತ್ತರು ಭೂಮಿಯಿತ್ತನು.

iv. ನಾಗರಾಜನು ರೇವಣೇಶ್ವರ ದೇವರಿಗೆ ರಾಣಿ ಸುಗ್ಗಲದೇವಿಯರಿಂದ 15 ಮತ್ತರು ದಾನ ಕೊಡಿಸಿವನಲ್ಲದೆ ತಾನೂ ಅನೇಕ ಬಗೆಯ ದಾನಗಳನ್ನು ನೀಡಿದನು.

v. ನಾಗರಾಜನು ತಂದೆ ರೇವಣಯ್ಯ ನಾಯಕನು ರೇವಣೇಶ್ವರ ದೇವಾಲಯ ವನ್ನು ಕಟ್ಟಿಸಿದನು.

ವಾಜಿವಂಶದ ಕೌಂಡಿನ್ಯಗೋತ್ರ ಶಾಖೆಯವರು ಜೈನರಾಗಿ ಧರ್ಮಾಂತರ ಮಾಡಿದ ಹಿನ್ನೆಲೆಯಲ್ಲಿ ಇಲ್ಲಿ ಉಲ್ಲೇಖಿಸಬೇಕಾದ ಇನ್ನೊಂದು ಮಾತಿದೆ. ಅದೆಂದರೆ ಹುಳ್ಳನೇ ಅಲ್ಲದೆ ಒಂದೇ ಮನೆತನದಲ್ಲಿ ಹುಟ್ಟಿಬೆಳೆದ ಕೆಲವು ಧೀರರು ಹೊಯ್ಸಳರ ಆಧಿಪತ್ಯದಲ್ಲಿ ಸೇನಾನಿಗಳಾಗಿ ಶೋಭಿಸಿದರು. ಹಾಗೆ ಪರಾಕ್ರಮವನ್ನು ಮೆರೆದ ನಿಷ್ಠಾವಂತ ಜೈನ ಸೇನಾಪತಿಗಳಲ್ಲಿ ಕೌಂಡಿನ್ಯ ಗೋತ್ರೋದ್ಭವರೂ ಇದ್ದಾರೆ : 'ಇಂತು ಪೊಗಳ್ತೆಗೆ ನೆಲೆಯಾದ ಕೌಂಡಿಲ್ಯಗೋತ್ರದ ಡಾಕರಸ ದಂಡನಾಯಕನ ಏಚವೆದಣ್ಣಾಯಕಿತಿಯ ಮಕ್ಕಳು ನಾಕಣ ದಂಡನಾಯಕನುಂ ಮಜಿಯಾನೆ ದಂಡ ನಾಯಕನುಂ ಅವರ ಮಕ್ಕಳು ಮಾಚಣದಂಡನಾಯಕನ್. . . ' – ಎಂದು ಮುಂತಾಗಿ

ನಾಲ್ಕೈದು ತಲೆಮಾರಿನ ತಂದೆ ಮಗ ಮೊಮ್ಮಗ ಮರಿಮಗ ಆದಿಯಾಗಿ ಹೊಯ್ಸಳ ದಂಡನಾಯಕರ ದೊಡ್ಡಯಾದಿಯಿದೆ. [EC· VII (1979) 72 (IV ನಾಮಂ 32) 1048, 1103, 1182–83, ಅಳೀಸಂದ್ರ (ಮಂಡ್ಯ ಜಿ/ನಾಗಮಂಗಲ ತಾ) ಪು. 53–60]. ಪ್ರಾಯಃ ಇವರೆಲ್ಲರೂ ವಾಜಿವಂಶಜರು.

ವಾಜಿವಂಶಜರಲ್ಲಿ ಮೂರು ದೊಡ್ಡ ಪ್ರತಿಷ್ಠಿತ ಕುಟುಂಬಗಳ ವಂಶವೃಕ್ಷವನ್ನು ಅನುಬಂಧವಾಗಿ ಕೊಟ್ಟಿದ್ದೇನೆ, ಆದರೆ ತೀರ ಪ್ರಮುಖರಾದ ವಾಜಿವಂಶ ಸಂಭೂತರು ಇವರು :

1 ಪಂಪಯ್ಯ : ಕ್ರಿ. ಶ. 942 ; ರೋಣ ಶಾಸನೋಕ್ತ

2 ದಲ್ಲಪಯ ; 965 ; ಲಕ್ಕುಂಡಿ ಶಾಸನೋಕ್ತ

3 ನಾಗದೇವ : 980 ; ಅತ್ತಿಮಬ್ಬೆಯ ಪತಿ

4 ಅಣ್ಣಿಗದೇವ : 1007 ; ನಾಗದೇವ ಮತ್ತು ಅತ್ತಿಮಬ್ಬೆಯರ ಮಗ

5 ಚಂದ್ರರಾಜ : 10025 : ಮದನ ತಿಲಕ ಕಾವ್ಯದ ಕವಿ

6 ನಾಗವರ್ಮ : 1049 : ತಡಕಲ್ಲು ಶಾಸನೋಕ್ತ

7 ಕಾಳಿಮಯ್ಯ ; 1071 : ತಡಕಲ್ಲು ಶಾಸನೋಕ್ತ

8 ಮಾಚಿರಾಜ (ಪ್ರಭುಮಾಚಿ) : 1079 ; ಶಾಸನೋಕ್ತ

9 ನಾಗರಾಜ : 1122–23 : ಶಾಸನೋಕ್ತ

10 ಹುಳ್ಳಮಯ್ಯ : 1163 : ಶ್ರವಣಬೆಳುಗೊಳ ಶಾಸನೋಕ್ತ

11 ದೇವಪಯ್ಯ : 1174 ; ಶಾಸನಕವಿ

12 ರೇಚಣ (ರೇಚರಸ) ; 1180: ಶಾಸನೋಕ್ತ , ಕಾವ್ಯೋಕ್ತ

13 ಮಧುರಕವಿ ; 1385 ; ಚಂಪೂಕವಿ, ಶಾಸನ ಕವಿ

ಈ ಸಂಪ್ರಬಂಧವನ್ನು ಮುಗಿಸುವ ಮೊದಲು ವಾಜಿವಂಶದ ನಿಷ್ಪತ್ತಿ ಮತ್ತು ಶಬ್ದಾರ್ಥ ಕುರಿತು ಪರಾಮರ್ಶಿಸಬಹುದು. ಸಂಸ್ಕೃತದ ಉಪಾಧ್ಯಾಯ ಎಂಬ ಶಬ್ದದ ತದ್ಭವ ರೂಪವಾಗಿ ಪ್ರಾಕೃತದ ಮೂಲಕ ಇದು ಬೆಳೆದು ಬಂದಿರಬಹುದು ; ಉಪಾಧ್ಯಾಯ (ಸಂಸ್ಕೃತ) ಉವಜ್ಝಾಯ (ಪ್ರಾಕೃತ)-ಉವಜ-ಓಜ-ವಾಜ ಆಗಿದೆ. ವಾಜ ಎಂದರೆ ಉಪಾಧ್ಯಾಯ ಎಂದಷ್ಟೇ ವಾಚ್ಯಾರ್ಥವಲ್ಲ ; ವಿದ್ವಾಂಸ, ಬಲ್ಲಿದ ಎಂಬರ್ಥವೂ ಉಂಟು. ವಾಜರು ಇರುವ ವಂಶವೇ ವಾಜಿ ವಂಶವೆಂದು ತಿಳಿಯಬಹುದು.

ಉಪಾಧ್ಯಾಯರು ಎಂಬುದು ಮೂಲಾರ್ಥದಲ್ಲಿ ವಿದ್ಯೆಯನ್ನು ಬೋಧಿಸುವವರು ಎಂದಿದ್ದರೂ, ಜೈನರಲ್ಲಿ ಅದು ದೇವರ ಪೂಜಾಕಾರ್ಯ ಮಾಡುವ ವೃತ್ತಿಯವರಿಗೆ ಅನ್ವಯವಾಗಿದೆ. ಉತ್ತರ ಕರ್ನಾಟಕದ ಜೈನ ಸಮಾಜದಲ್ಲಿ ಅರ್ಚಕರು (ಪೂಜಾರರು) ಎಂಬರ್ಥದಲ್ಲಿ ಉಪಾಧ್ಯೆ, ಉಪಾದ್ರಿ ಎಂದು ಬಳಸುತ್ತಾರೆ. ವಿಶ್ವವಿಖ್ಯಾತ ವಿದ್ವಾಂಸ ರಾದ ಡಾ. ಆ. ನೇ. ಉಪಾಧ್ಯೆ ಅವರೂ ಸಹ ಈ ರೀತಿ ಉಪಾಧ್ಯೆ ಮನೆತನಕ್ಕೆ ಸೇರಿದವರು. ದಕ್ಷಿಣ ಕನ್ನಡ ಜಿಲ್ಲೆಯ ಜೈನ ಸಮಾಜದಲ್ಲಿ ಅರ್ಚಕರನ್ನು 'ಇಂದ್ರರು' ಎಂದು ಕರೆಯುತ್ತಾರೆ. ಹಳೆಯ ಮೈಸೂರು ಭಾಗದ ಜೈನ ಸಮಾಜದಲ್ಲಿ ಪುರೋಹಿತರು ಎಂಬ ಶಬ್ದ ಉಪಯೋಗದಲ್ಲಿದೆ. ವಾಜಿವಂಶವೂ ಮೂಲತಃ ಇಂತಹ ಒಂದು ಪೂಜಾದಿಗಳಿಗೆ ನೆರವಾಗುತ್ತಿದ್ದ ಉಪಾಧ್ಯಾಯ ಮನೆತನವಿರಬಹುದು. ಆದರೂ ಈ ಬಗ್ಗೆ ಇನ್ನೂ ಚರ್ಚೆಗೆ ಅವಕಾಶವಿರುವುದರಿಂದ ಇದೇ ಕಡೆಯ ಮಾತಾಗಲಾರದು.

ಅನುಬಂಧ–1

ಲಕ್ಕುಂಡಿ ಶಾಸನ ಸಂಖ್ಯೆ 52 : ಕ್ರಿ.ಶ. 1007

ವಾಜಿವಂಶ

ದಲ್ಲಪ(ಯ್ಯ)

(ಪಿರಿಯಮಗ) ನಾಗದೇವ — (ಕಿರಿಯ ಮಗ)

ನಾಗದೇವ: (ಪಿರಿಯ ಮಗ) ಅಣ್ಣಿಗದೇವ — (ಕಿರಿಯ ಮಗ)

ಅನುಬಂಧ–2

ಪಡಕಲ್ಲು ಶಾಸನ ಸಂಖ್ಯೆ 3 : ಕ್ರಿ.ಶ. 1047

ವಾಜಿವಂಶ

ಆದಿತ್ಯ

ನಾಗಾದಿತ್ಯ I

ಗೋವಿಂದ

ನಾಗಾದಿತ್ಯ II

ಕಾಲಿದಾಸ — ನಾರಾಯಣ I (= ಸಾಯಿಕಬ್ಬೆ) — ಆಯ್ಚಪಾರ್ಯ

ನಾರಾಯಣ I: ನಾಗವರ್ಮಯ್ಯ ದಂಡನಾಯಕ (= ಅಕ್ಕಾಂಬಿಕೆ) — ಮಾದಿರಾಜದಣ್ಣಾಧೀಶ (ಮಾಧವ) — ಮಗಳು

ನಾಗವರ್ಮಯ್ಯ: ನಾರಾಯಣ II

ಅನುಬಂಧ–3

ಬಿಮರಾ ಶಾಸನ ಸಂಖ್ಯೆ 23 : ಕ್ರಿ.ಶ. 1122-23

ವಾಜಿವಂಶ

(ಸಾಯಿರಬಾಡ—ಅವರವಾಡಿ 700, ಕಲ್ಲ ಕುಂಬರಿಗಾವೆ)

ಗೋಪಾಳ ಕ್ರಮಿತ

|

ರೇವಣ ಭಟ್ಟ (ರೇವಣಾರ್ಯ/ರೇವಣಯ್ಯ)

|

ಮಧುಸೂದನ ಭಟ್ಟ (=ಗೋವಿನ್ದ ಕಬ್ಬೆ)

|

ರೇವಣಯ್ಯ ನಾಯಕ (=ನಾಲಿಕಬ್ಬೆ) ॥

|

ದೇವಪಾರ್ಯ | ಮಧುಸೂದನ | ನಾಗರಾಜ | ರಾಮದೇವ | ಗೋವಿಂದ

ಪರಿಜೆ : ಪರಿಚೆ-ಎಂದರೇನು ?

ಪರಿಜೆಯನಂಟು ಕೆನ್ನೆಗಳನೊಯ್ಯನೆ ನೀವುವ ಚಿನ್ನಪೂವ ನೋ
ಸರಿಸುವ ಹಾರಮಂ ಪಿಡಿದು ನೋಡುವ ಕಟ್ಟಿದ ನೂಲ ತೊಂಗಲಂ
ತಿರಿಪುವ ಕೆಯ್ತುದೊಂದು ನೆವದಿಂ ಲಲಿತಾಂಗಿಯ ಶಂಕೆಯುಂ ಭಯಂ
ಬೆರಸಿದ ನಾಣುಮಂಕ್ರಮದೆ ಪಿಂಗಿಸು ಬೇಸಱದಿರ್ ಗುಣಾರ್ಣವಾ॥[1]

ಈ ಪದ್ಯದಲ್ಲಿ ಬರುವ ವಿಶಿಷ್ಟವಾದ ಶಬ್ದವೊಂದು 'ಪರಿಜೆ' ಎಂಬುದು. ಇದರ ವಿಷಯದಲ್ಲಿ ದೀಪಿಕೆಯ ಹೇಳಿಕೆ ಹೀಗಿದೆ–"ಇಲ್ಲಿ ಪರಿಜೆಯನಂಟು" ಎಂಬ ಪದಗಳಿಗೆ ಅರ್ಥವಾಗುವುದಿಲ್ಲ. ಪರಿಜೆ ಇರಬೇಕೊ : ಪರಿಚೆ ಇರಬೇಕೋ ? ಎರಡಕ್ಕೂ ಅರ್ಥ ದುರವಗಾಹವಾಗಿರುವುದರಿಂದ ನಿರ್ಣಯಿಸಲಾಗದು. ಪರಿಜು ಎಂದರೆ ಆಕಾರ, ರೂಪ, ಎಂಬರ್ಥವಿದೆ. ಅದೇ ಶಬ್ದ ಇಲ್ಲಿರಬಹುದೆ? "ತೀವಿದ ಕೊಗ್ಗಿಯ ಕತ್ತುರಿಯುಂ, ಕತ್ತುರಿಯೊಳೆ ಅಂಟ ಪರಿಚೆಯುಂ, ಪರಿಚೆಯೊಳ್ ಪರಿಚಯಂ ಬಡೆದ ಮದವಟ್ಟೆಯುಂ...ಎಸೆಯೆ ಕೈಗೆಯ್ದಾಗಳ್" (ಆದಿಪು ೪.೪೧) ಎಂಬಲ್ಲಿ ಪರಿಚೆ ಶಬ್ದ ಪ್ರಯೋಗವಿದೆ ಇದಕ್ಕೆ ಅಜ್ಞಾತವಿದೆ. 'ಪರಿಚೆ' ಎಂದು ಸರಿಯಾದ ಪಾಠವಿರಬಹುದು"[2]

ಪಂಪಭಾರತದ ಕ್ಲಿಷ್ಟಪದಗಳ ನಿಘಂಟುವಿನಲ್ಲಿ ಪರಿಜೆ-ದೇಹ, ಮೈ(.) ಎಂದು ಹೇಳಿ ಶಬ್ದಾರ್ಥದ ಬಗೆಗೆ ಸಂದೇಹ ವ್ಯಕ್ತಪಡಿಸಲಾಗಿದೆ. ಕಿಟ್ಟೆಲ್ ಕೋಷದಲ್ಲಿಯೂ ಶ್ರೀ ಮರಿಯಪ್ಪ ಭಟ್ಟರು ಪರಿಜೆಯೆಂದೇ ಗುರುತಿಸಿ 'ಪರಿಜೆ–ಪರಿಜು, ಪರಿಜೆಯನಂಟು ಕೆನ್ನೆಗಳನೊಯ್ಯನೆ ನೀವುವ ಚಿನ್ನಪೂವನೋಸರಿಸುವ Pb 3.77 AP 4.9 ಎಂದೂ ಪರಿಚೆ–quality, nature, ಎಱಗಿದ ಮಱದುಮ್ಬಿಯನ್ತೆ ಸೊಗಯಿಸೆ ತೀವಿದ ಕೊಗ್ಗಿಯ ಕತ್ತುರಿಯುಂ ಕತ್ತುರಿಯೊಳಣ್ಟ ಪರಿಚೆಯುಂ AP. 4.41 Va (T M ಪರಿಚು ; Te ಪರುಸು, ef ಪರಿಜು) ಎಂದು ತೋರಿಸಿಕೊಟ್ಟಿದ್ದಾರೆ. ಅಂದರೆ ಶ್ರೀ ಮರಿಯಪ್ಪ ಭಟ್ಟರು ಪಂಪಭಾರತದ ಶಬ್ದ 'ಪರಿಜೆ' ಎಂದೇ ಗುರುತಿಸಿದಂತಾಗಿದೆ. ಆದರೆ ಇದು ಸರಿಯಲ್ಲ. ದೀಪಿಕೆ ಲೇಖಕರು ಈ ಶಬ್ದದ ಸರಿಯಾದ

---

1 ಪಂಪಭಾರತ ೩.೭೭.

2 ಪಂಪಭಾರತ ದೀಪಿಕೆ ಪು. ೧೨೫.

ರೂಪ 'ಪರಿಚೆ' ಎಂದು ಗುರುತಿಸಿರುವುದು ಸಾಧುವಾಗಿದೆ, ಏಕೆಂದರೆ ನಾಗವರ್ಮನು ತನ್ನ ವರ್ಧಮಾನ ಪುರಾಣದಲ್ಲಿ 'ಪರಿಚೆಯುನೊಗ್ಗುಡಿಸುವ'[3] ಎಂಬಲ್ಲಿ ಈ ಶಬ್ದದ ಸರಿಯಾದ ರೂಪವನ್ನು ಪ್ರಯೋಗಿಸಿದ್ದುಂಟು. ಹಾಗೆಯೇ ಜಗನ್ನಾಥ ವಿಜಯದ "ತೆಗೆಯುತ್ತುಂ ಮೇಲುದಂ ಪೆರ್ಮೊಲೆಗೆ, ಪರಿಜೆಯುಂ ಹಸ್ತದಿಂದೊತ್ತುತುಂ"[4] ಎಂಬ ಪದ್ಯದಲ್ಲಿ ಪರಿಜೆಯುಂ ಎಂದಿದೆಯಾದರೂ ಅದು ಲಿಪಿಕಾರನ ದೋಷದಿಂದ ಹಾಗೆ ಲಿಖಿತವಾಗಿದೆ ಎಂಬುದಂತೂ ಸ್ಪಷ್ಟವೆಂಬುದು ಕಾವ್ಯಸಾರದಲ್ಲಿ ಈ ಪದ್ಯ ಸಂಕಲಿತವಾಗಿದ್ದು, ಅಲ್ಲಿ "ತೆಗೆಯುತ್ತುಂ ಮೇಲುದಂ ಪೆರ್ಮೊಲೆಗೆ, ಪರಿಚೆಯುಂ ಹಸ್ತದಿಂದೊತ್ತುತಂ"[5] ಎಂದು ಲಿಖಿತವಾಗಿರುವುದರಿಂದ ತಿಳಿದು ಬರುತ್ತದೆ. ಹೀಗಾಗಿ ಪರಿಜು ಮತ್ತು ಪರಿಚೆ ಎಂಬುದು ಎರಡು ಬೇರೆ-ಬೇರೆ ಶಬ್ದಗಳಾಗಿದ್ದು ಪಂಪಭಾರತ ಮೇಲಿನ ಪದ್ಯದಲ್ಲಿ 'ಪರಿಚೆ' ಎಂಬುವೇ ಸರಿಯಾದ ರೂಪ ಎಂಬುದಕ್ಕೆ ಯಾವ ಅನುಮಾನವೂ ಇಲ್ಲ.

ಆದರೆ ಈ ಶಬ್ದದ ಅರ್ಥ ಏನು ಎಂಬುದನ್ನು ಅರಿಯುವುದು ಮಾತ್ರ ಸಮಸ್ಯೆಯಾಗಿದೆ. ಶ್ರೀ ಮರಿಯಪ್ಪ ಭಟ್ಟರು quality nature ಎಂದು ತಮಿಳು, ಮಲಯಾಳ ತೆಲುಗುಗಳಲ್ಲಿ ಇರುವ ಸಂವಾದಿ ಶಬ್ದವನ್ನು ಗುರುತಿಸಿ ನಿಷ್ಕರ್ಷಪಡಿಸಿದ್ದಾರೇನೋ ನಿಜ. ಆದರೆ ಅದು ಪ್ರಕೃತ ಸಂದರ್ಭಕ್ಕೆ ಅನ್ವಯಿಸಲಾಗುವುದಿಲ್ಲ. ಈ ಶಬ್ದಕ್ಕೆ ನಿಷ್ಕರ್ಷವಾದ ಅರ್ಥ ಏನಿರಬಹುದು ಎಂಬುದನ್ನು ತಿಳಿಯಲು ಮೊತ್ತ ಮೊದಲು ಆ ಶಬ್ದ ಪ್ರಯೋಗವಾದ ಸಂದರ್ಭವನ್ನು ಗಮನಿಸಬೇಕಾಗುತ್ತದೆ.

ಪರಿಚೆ ಎಂಬ ಈ ಶಬ್ದ ಪಂಪಭಾರತದಲ್ಲಿ ನವ ವಿವಾಹಿತ ವಧುವಿನ ಲಜ್ಜೆಯನ್ನು ಭೀತಿಯನ್ನು ಹಿಂಗಿಸುವುದಕ್ಕಾಗಿ ವಧುವಿನ ದೇಹದ ಯಾವ-ಯಾವ ಭಾಗಗಳನ್ನು ಸ್ಪರ್ಶಿಸಬೇಕೆಂದು ಹೇಳುವಲ್ಲಿ ದೇಹದ ಯಾವುದೋ ಒಂದು ಭಾಗವನ್ನು ಸೂಚಿಸುವಂತಹುದಾಗಿದೆ. ಆದಿಪುರಾಣದಲ್ಲಿ ಹೆಣ್ಣನ್ನು ಅಲಂಕರಿಸುವ ಸಂದರ್ಭದಲ್ಲಿ ಪ್ರಯೋಗವಾಗಿದೆ. ಜಗನ್ನಾಥ ವಿಜಯದಲ್ಲಿಯೂ ವನವಿಹಾರಕ್ಕೆ ಹೊರಡುವ ಹೆಂಗಸರು ಸಿದ್ಧಗೊಂಡ ಬಗೆಯನ್ನು ವರ್ಣಿಸುವಲ್ಲಿ ಬಂದಿದೆ. ವರ್ಧಮಾನ ಪುರಾಣದಲ್ಲಿ ಸ್ವಾಧೀನ ಪತಿತೆಯ ಚೇಷ್ಟೆಗಳನ್ನು ಹೇಳುವಲ್ಲಿ ಪ್ರಯೋಗವಾಗಿದೆ ಒಟ್ಟಿನಲ್ಲಿ ಪರಿಚೆ ಎಂಬ ಶಬ್ದದ ಪ್ರಯೋಗ ಹೆಣ್ಣಿಗೆ ಸಂಬಂಧಪಟ್ಟ ಪ್ರಯೋಗವಾಗಿದ್ದು, ಅವಳ ಯಾವುದೋ ಒಂದು ಅಲಂಕರಿಸಬೇಕಾದ ಪ್ರಿಯವಾದ ಭಾಗವನ್ನು ಕುರಿತು ಹೇಳುವುದಾಗಿದೆ. ಅದು ಯಾವುದು ಎಂದು ತಿಳಿಯಬೇಕಾಗಿದೆ.

---

3 ವರ್ಧಮಾನ ಪುರಾಣ. ನಾಗವರ್ಮ ೮.೮೬.

4 ಜಗನ್ನಾಥ ವಿಜಯಂ, ರುದ್ರಭಟ್ಟ ೧೪.೪೭.

5 ಮಲ್ಲಕವಿಯ ಕಾವ್ಯಸಾರ ಪುಟ ೫೧೯ ಪದ್ಯ ೧೨.

ಸ್ವಾಭಾವಿಕವಾಗಿ ಕುಳಿತುಕೊಂಡಿರುವ ಹೆಣ್ಣೊಬ್ಬಳು ಎಲ್ಲಿಗಾದರೂ ಎದ್ದು ಹೊರಡಬೇಕೆನ್ನುವಾಗ ಕೂಡಲೇ ಏನೇನುಮಾಡುತ್ತಾಳೆ ಎಂಬುದನ್ನು ಜಗನ್ನಾಥ ವಿಜಯದ ಪದ್ಯದಿಂದ ತಿಳಿದುಕೊಳ್ಳಬಹುದಾಗಿದೆ. ಇಲ್ಲಿ ಹೆಣ್ಣಿನ ಸಹಜ ಚರ್ಯೆ ಚಿತ್ರಿತ ವಾಗಿದೆ ಒಂದೆಡೆ ಕುಳಿತಿದ್ದ ಹೆಣ್ಣನ್ನು ಒಮ್ಮೆಲೆ ಹೊರಡು ಎಂದರೆ ಅವಳು ಮೊತ್ತ ಮೊದಲು ತನ್ನ ಸೆರಗನ್ನು ಸರಿಪಡಿಸಿಕೊಳ್ಳುವಳಲ್ಲವೆ! ಅದನ್ನೇ ರುದ್ರಭಟ್ಟನು "ತೆಗೆಯುತ್ತುಂ ಮೇಲುದಂ ಪೆರ್ವೊಲೆಗೆ" ಎಂದು ತಿಳಿಸಿಬಿಟ್ಟ. ಸೆರಗನ್ನು ಸರಿಪಡಿಸಿ ಕೊಂಡ ಅನಂತರ ಸ್ವಾಭಾವಿಕವಾಗಿಯೇ ಅವಳ ಕೈಗಳು ಗಾಳಿಯ ಸ್ಪರ್ಶದಿಂದಾಗಿ ಅಸ್ತವ್ಯಸ್ತವಾಗಿ ಹಣೆಯ ಮೇಲೆ ಚೆಲ್ಲಿದಂತಿರುವ ಕೇಶಗಳನ್ನು ತಿದ್ದುವತ್ತ ಸಾಗುತ್ತವೆ ಎಂಬುದು ಸ್ತ್ರೀಯರ ಚಲನವಲನವನ್ನು ಗಮನಿಸಿದವರಿಗೆಲ್ಲ ತಿಳಿದ ವಿಷಯವೇ ಆಗಿದೆ. ಅದನ್ನೇ ಕವಿ "ಪರಿಚೆಯುಂ ಹಸ್ತದಿಂದೊತ್ತುತಂ" ಎಂದು ವರ್ಣಿಸಿದ್ದಾನಲ್ಲವೆ; ಮುಂದೆ ಆ ಹೆಣ್ಣು ಏನೇನು ಮಾಡುತ್ತಾಳೆ-ಜೋಲ್ದ ಧಮ್ಮಿಲ್ಲವಂ ಸಾವಗಿಸುತ್ತುಂ, ಕುರುಳೊಂಗಲಂ ಅಳವಡಿಸುತ್ತುಂ, ಕಾಂಚೀದಾಮುವುಂ ನೀವಿಗೆ ಸಾರ್ಚುತುಂ ಇತ್ಯಾದಿ. ಈ ಭಾವವನ್ನೇ ರುದ್ರಭಟ್ಟನು ಮುಂದೆ ೧೬-೮೨ರಲ್ಲಿ "ಜಗಜ್ಜಿತ್ತಂಸಮನೊತ್ತು ಸೂಸುವಳಕಾನೀಶಂಗಳಂ ತಿರ್ದು——" ಎಂದು ವರ್ಣಿಸಿದ್ದಾನೆ. ಅಂದ ಮೇಲೆ 'ಪರಿಚೆ' ಎಂದರೆ ಹಣೆಯ ಮೇಲೆ ಕೆದರಿದ, ಸುತ್ತಲೂ ಹಾರಾಡುವ, ಅಸ್ತವ್ಯಸ್ತವಾದ ಕೂದಲು ಎಂದಾಯಿತಲ್ಲವೆ!

ಜನ್ನಕವಿಯ ಅನಂತನಾಥ ಪುರಾಣದ "——ಉದ್ಯತ್ಕುಚಾನನದಿಂ ಜಾಱುವ ಮೇಲುದಂ ನಿಲಿಸುತುಂ, ಸಯ್ತೊತ್ತುತುಂ ನುಣ್ಗುರುಳ್ಗೊನೆಯುಂ, ವಾಮಕರಾಗ್ರದಿಂ ಸಚಲ ವೇಣಾಭಾರಮಂ ತಾಳ್ದಿ, ಕರ್ಬಿನ ಬಿಲ್ಲ ರತಿ ತಾಳಿ ಬರ್ಪ ತೆಱದಿಂ ತನ್ವಂಗಿ ಕಣ್ಗೊಪ್ಪಿದಳ್"[6] ಎಂಬುದನ್ನೂ ಕಾವ್ಯಸಾರದ "ಪರೆದ ಕುರುಳ್ಗಳಂ ನಿಜ ಕರಾಂಗುಲಿಯಿಂ ತಡವುತ್ತ ಮೇಲುದೋಸರಿಸೆ ಕುಚಂಗಳಂ ಬಿಗಿದು—"[7] ಹಾಗೂ "ಬಿಡುಮುಡಿಯಂ ತೊಡರ್ಚಿ ಪರೆದಿರ್ದಳಕಂಗಳನೊತ್ತುತಂ ಸಡಿಲ್ದುಡುಗೆಯಂ ಸುತ್ತುತುಂ"[8] ಎಂಬುದನ್ನೂ, ಲೀಲಾವತಿ ಪ್ರಬಂಧದ "ತಾಱುವಱಾದ ಕೇಶಮನುಂಗುರ್ಗೊನೆಯಿಂ ತೆಗೆದೊತ್ತಿ"[9] ಜೀವಂಧರ ಚರಿತೆಯ "ಉನ್ನತ ಕುಚಕೆ ಮೇಲುದ ಸರಿಸುತೇಕಾವಳಿಯ ನಳವಡಿಸುತ್ತ ಬೆರಳಿನಲಿ ಕುರುಳಗಳ ತಿದ್ದುತ",[10] ಎಂಬುದನ್ನೂ ನಳಚಮ್ಪುವಿನ "ನಿಮಿರ್ದ ಸಳ್ಳುಗುರ್ಗಳಿ ನೊಯ್ಯ ನೊಯ್ಯ ನಳಕಾಳಿಯನಂಟು ತುಂ......ನಡೆ ತಂದಳ್"[11] ಎಂಬದನ್ನು ಹೋಲಿಸಿ ನೋಡಿ ಇಲ್ಲಿ 'ಅಂಟುತುಂ' ಎಂಬುದು ಗಮನಾರ್ಹ ಪಂಪನೂ 'ಅಂಟು' ಎಂದು ಹೇಳಿರುವನಲ್ಲವೆ!

---

6 ಅನಂತನಾಥ ಪುರಾಣ ಜನ್ನ ೪.೯೫
7 ಕಾವ್ಯಸಾರ ಪುಟ ೧೧೩, ಪದ್ಯ ೧೧೩
8 ಅಲ್ಲೇ ಪುಟ ೩೫೫, ಪದ್ಯ ೧೫೦
9 ಲೀಲಾವತೀ ಪ್ರಬಂಧ ೫.೧೩೬
10 ಜೀವಂಧರ ಚರಿತೆ ೮.೬೦
11 ನಳಚಮ್ಪು ೩.೨೫

ಇರಲಿ, ವರ್ಧಮಾನ ಪುರಾಣದ ಪದ್ಯವನ್ನು ಅವಲೋಕಿಸಿ. ಇದರಲ್ಲಿ ಸ್ವಾಧೀನ ಪತಿತೆಯೊಬ್ಬಳು ಹೇಗೆ ಪುರುಷನನ್ನು ಬಗೆಗೊಂಡಳು ಎಂಬುದನ್ನು ವರ್ಣಿಸಲಾಗಿದೆ. ಪುರುಷನ ಬಗೆಯನ್ನು (ಒಲವನ್ನು) ಕೊಳ್ಳಲು ಅವಳು ತನ್ನ ಇಂಗಿತವನ್ನು ಹೇಗೆ ವ್ಯಕ್ತಪಡಿಸಿದಳು ಎಂಬುದೇ ಇಲ್ಲಿಯ ಅಂಶ– ಪರಿಚೆಯುಂ ಒಗ್ಗೂಡಿಸುವ, ಕತ್ತುರಿಯಿಂದ ಮದಪಟ್ಟ ತೆಗೆವ, ಬೊಟ್ಟಿಡುವ, ಕುಚಾಂತರದೊಳ್ ಹಾರವಂ ಎಳೆಸುವ ಇರವಿನಿಂದ ಆ ಸ್ವಾಧೀನ ಪತಿತೆ ಬಗೆಗೊಂಡಳ್ ಎನ್ನುವಾಗ 'ಪರಿಚೆಯುಂ ಒಗ್ಗುಡಿಸುವ' ಎಂದು ಹೇಳಲಾಗಿದೆ. ಒಗ್ಗುಡಿಸು ಎಂದರೆ ಒಂದೆಡೆಗೆ ಬಾಗಿಸು ಎಂದರ್ಥ. ಪರಿಚೆಯನ್ನು ಒಂದೆಡೆಗೆ ಬಾಗಿಸುವ ಎನ್ನುವಾಗ ಅವಳ ದೇಹದಲ್ಲಿ ಒಂದೆಡೆಗೆ ಬಾಗಿಸಲು ಇರುವಂತಹುದು ಯಾವುದು ಎಂದು ಯೋಚಿಸಿದರೆ ಕಂಡುಬರುವ ಅಂಶ ಕೂದಲು ಎಂಬುದೇ ಅಲ್ಲವೆ! ಗಾಳಿಗೆ ಅಸ್ತವ್ಯಸ್ತವಾಗಿ ಹಣೆಯ ಮೇಲೆ ಕೆದರಿದ ಕೂದಲನ್ನೆಲ್ಲ ಒಂದೇ ಕಡೆಗೆ ಬಾಗಿಸುವುದು ಸಹಜವಲ್ಲವೆ! ಇದನ್ನೇ "ನಿಮಿರ್ದ ಕುರುಳ್ಗಳಂ ಸಯ್ಯೊತ್ತುತಂ" ಎಂದೋ "ಸಮೀಚೀನ ಪವನ ಪರಿವರ್ತಾಯಮಾನ ನಿಟಿಲಾವಲಕ್ಷ ಕುಟಿಲ ಕುಂತಳಮನೊಯ್ಯನೋಸರಿಸುವ" ಎಂದೋ ಹೇಳುವುದು.

ಆದಿ ಪುರಾಣದಲ್ಲಿಯೂ ಇದೇ ಅರ್ಥದಲ್ಲಿ ಪ್ರಯೋಗವಾಗಿದೆ. ವಿವಾಹಕ್ಕಾಗಿ ವಧುವನ್ನು ಸಿಂಗರಿಸುತ್ತ ಕರ್ಣಪೂರಕ್ಕೆ ಬಂದು ಮುತ್ತಿದ ದುಂಬಿಯಂತೆ ಕಸ್ತೂರಿಯ ಬೊಟ್ಟಿಡುತ್ತಾರೆ. ಆ ಬೊಟ್ಟಿನ ಕಸ್ತೂರಿಯಲ್ಲಿ ಅಂಟಿದ ಪರಿಚೆ ಎಂದು ಹೇಳು ವಲ್ಲಿಯೂ ಹಣೆಯಮೇಲೆ ಹಾರಾಡುವ ಕೂದಲು ಎಂದೇ ಸ್ಪಷ್ಟವಾಗುತ್ತದೆ.

ಇನ್ನು ಪಂಪಭಾರತದತ್ತ ಹೊರಳೋಣ. ಇಲ್ಲಿ ನವವಧುವಿನ ಲಜ್ಜೆಯನ್ನು ಭೀತಿಯನ್ನೂ ಹಿಂಗಿಸುವುದಕ್ಕಾಗಿ ಅವಳ ದೇಹದ ಯಾವ ಯಾವ ಭಾಗಗಳನ್ನು ಸ್ಪರ್ಶಿಸಬೇಕು ಎಂದು ಹೇಳುತ್ತ 'ಪರಿಚೆಯುಮಂಟು' ಎಂದು ಹೇಳಿದೆ. ಅಂಟು ಎಂದರೆ ಸ್ಪರ್ಶಿಸು ಎಂದು ಅರ್ಥ. ಯಾವುದನ್ನು ಸ್ಪರ್ಶಿಸಬೇಕು ಎಂದರೆ 'ಪರಿಚೆಯುಂ' ಎಂದು ಹೇಳಿದೆ. ಕಾಮಶಾಸ್ತ್ರದ ಪ್ರಕಾರ ಹೆಣ್ಣಿನ ಲಜ್ಜೆಯನ್ನೂ ಭೀತಿ ಯನ್ನೂ ಹೋಗಲಾಡಿಸಲು ಅವಳ ದೇಹದ ಯಾವ-ಯಾವ ಅವಯವಗಳನ್ನು ಸ್ಪರ್ಶಿಸಬೇಕೆಂದು ತಿಳಿಸುವಲ್ಲಿ ಕೂದಲನ್ನು ಸ್ಪರ್ಶಿಸಬೇಕೆಂದು ಹೇಳಿದ್ದುಂಟು. ಒಲವನ್ನು ಗಳಿಸಲು ಕೇಶಸ್ಪರ್ಶ ಅತ್ಯಂತ ಅವಶ್ಯಕ. ಹೀಗಾಗಿ ಪ್ರಕೃತ ಪದ್ಯದಲ್ಲಿ -ಪರಿಚೆಯುಂ ಅಂಟು-ಕೂದಲನ್ನು ಸ್ಪರ್ಶಿಸು ಎಂದೇ ಅರ್ಥ. ಸಾಮಾನ್ಯವಾಗಿ ಎಲ್ಲ ಕಾವ್ಯಗಳಲ್ಲಿಯೂ ಹೆಣ್ಣಿನ ಲಜ್ಜೆಯನ್ನು ಭೀತಿಯನ್ನು ಹಿಂಗಿಸುವುದಕ್ಕಾಗಿ ಮಾಡ ಬೇಕಾದ ಕಾರ್ಯಗಳಲ್ಲಿ ಕೇಶಸ್ಪರ್ಶವೂ ಒಂದು ಎಂಬುದನ್ನು ವರ್ಣಿಸುವುದುಂಟು–

"ಕಾಮಕೇಳಿಗೆ ಮನಂದಂದೊಯ್ಯನೆ ಕೈಯ್ಯಂ ಪಿಡಿದು ರಯ್ಯಮೆನೆ ಮೆಯ್ಯಂ ಸೋಂಕಿ ಕುರುಳಂ ನೇವರಿಸಿ...ಲಜ್ಜೆ ಪಜ್ಜೆದೆಗೆವಂತೆ ಜಾಣ್ಮೆಯುಂ ಮೆಱೆದುಂ"[12]

"ಪುಳಿನನಿತಂಬಮುಂ ಪಡೆಮ ಸೋಂಕಿ...ಮದಾಳಿಮಾಲೆಯೆಂಬಳಕಮ ನೊತ್ತಿ ನೇರ್ಪಡಿಸಿ"[13]

> "ಕುರುಳನೊತ್ತುವ ನೆವದಿಂದೆಳಸಿ ..ಸಾಧ್ವಸಮುಸರಸ ನೊಯ್ಯನೆ ಕಳೆದಂ"[14]
> "ಒಳ್ಗುರುಳಂ ನೇರ್ಪಡೆ ತಿರ್ದುವೀ ನೆವದಿಂ ಕೃಷ್ಣಂ ನಲ್ಲಳಂ ಪೊರ್ದಿರ್ದಂ"[15]
> "ಹೃದಯಾಧೀಶಂ ಕುರುಳ್ಗವ್ವಳಿಸೆ ನುಡಿಸೆ, ಮೇಲ್ವಾಯೆ..."[16]

ನಾಗವರ್ಮನ ವರ್ಧಮಾನ ಪುರಾಣದ ೧೧ನೆಯ ಆಶ್ವಾಸದಲ್ಲಿ ಇಂದ್ರನಿಂದ ಕಳುಹಿಸಲ್ಪಟ್ಟ ಮಹತ್ತರದೇವಿಯರು ಜಿನಜನನಿಯ ಸೇವೆ ಮಾಡುವುದನ್ನು ವರ್ಣಿಸಿದ ಭಾಗ ಹೀಗಿದೆ– "ಮತ್ತಮಾ ಮಹೋದಾತ್ತ ಸುರವರ ಪ್ರೇಯಸೀ ಮಹತ್ತತೆಯರಾ ವಸುಂಧರಾವಳಿಯ ಪಾವನ ಪರಮ ಸುಚರಿತ್ರೆಗೆ ಪಾವಡೆಯುಂ, ಪಾಸಲು ಮಾ ಜಗಜ್ಜನ ಪ್ರಣುತ ವಿತತ ಕೀರ್ತಿಗೆ ಸೆಜ್ಜೆಯನಿಂಬು ಮಾಡಲುಮಾ ಲಾವಣ್ಯ ಪುಣ್ಯನದೀಪ್ರವಾಹೆಯ ಮನೆಗೆ ಪುಣ್ಯೋದಕದಿಂ ಮಜ್ಜನಮುಂ ತೀರ್ಚ ಉಮಪರಾರ್ಧ ಪ್ರಗುಣ ಗುಣರತ್ನ ಪ್ರಸಾಧನೆಗೆ ಸಮುಚಿತ ಪ್ರಸಾದನಂಗೊಳಿಸಲು ಮಾಪರಿಚಯ ಪ್ರತಿಪಾಳನ ಸ್ವಭಾವಶೀಲೆಗೆ ಪರಿಚಯುಂ [ತೀರ್ಚಲು]ಮಾ ಮನೋಹರೋದಾರ ಮಧುರ ವ್ಯಾಹಾರಿಗೆ ಬೋನಮುಂ ಪವೆಯಿಸಲು..."[17].

ಈ ಗದ್ಯಭಾಗದಲ್ಲಿ ಕವಿ ಪ್ರಾಸಬದ್ಧವಾಗಿ ಸಂಸ್ಕೃತ-ತದ್ಭವ ಶಬ್ದಗಳನ್ನು ಹೊಂದಿಸಿಕೊಂಡಂತೆ ತೋರುತ್ತದೆ. ಅಲ್ಲದೆ ಮಾಡಿದ ಸೇವೆಯ ವಸ್ತುಗಳೆಲ್ಲವನ್ನು- ಪಾವಡೆ, ಸಜ್ಜೆ, ಮಜ್ಜನ, ಎಂಬಿತ್ಯಾದಿ ತದ್ಭವ ಶಬ್ದಗಳಿಂದ ಸೂಚಿಸಿರುವುದನ್ನು ಗಮನಿಸಿದಾಗ 'ಪರಿಚಯುಂ [ತೀರ್ಚಲು]ಂ' ಎಂಬಲ್ಲಿಯೂ 'ಪರಿಚೆ' ಎಂಬುದೂ ತದ್ಭವ ಶಬ್ದವಾಗಿರಲೇಬೇಕು ಇದನ್ನು ಸಂಸ್ಕೃತದ 'ಪರಿಚಯ' ಎಂಬ ಶಬ್ದವೆಂದು ತಿಳಿದು ಆ ಗ್ರಂಥದ ಸಂಪಾದಕರು 'ತಿರ್ದಲು' ಎಂಬುದನ್ನು 'ತೀರ್ಚಲು' ಎಂದು ತಿದ್ದಿಕೊಂಡಿದ್ದಾರೆ. ಇದಕ್ಕೆ 'ತಿರ್ದಲು' ಎಂಬ ಪಾಠವಿದೆ. ಇದು 'ತಿರ್ದಲು' ಎಂಬುದಾಗಿದ್ದು ಲಿಪಿಕಾರನ ದೋಷದಿಂದ ತಿರ್ದಲು ಎಂದಾಗಿದೆಯೇ ಹೊರತು

---

12 ರಾಜಶೇಖರ ವಿಳಾಸ ೮.೮೨ವ
13 ಶಬರಶಂಕರವಿಳಾಸ ೨.೬೦
14 ರಸರತ್ನಾಕರ, ಸಾಳ್ವ ೧೫೫
15 ಜಗನ್ನಾಥ ವಿಜಯಂ ೧೦.೧೩
16 ನೇಮಿನಾಥ ಪುರಾಣಂ ೩.೧೦೬
17 ವರ್ಧಮಾನ ಪುರಾಣಂ ೧೧.೫೨ವ

ಅನ್ಯಥಾ ಅಲ್ಲ. ಆದುದರಿಂದ 'ಪರಿಚಯಂ [ತೀರ್ಚಲು]ಂ' ಎಂಬ ಸಂಪಾದಕ ಪಾಠ ಸರ್ವಥಾ ಸರಿಯಲ್ಲ. ಅಲ್ಲಿ 'ಪರಿಚಯಂ ತಿರ್ದ[ಲುಂ]' ಎಂಬುದೇ ಸರಿಯಾದ ಪಾಠ. ಹಾಗೆನೇ 'ಪರಿಚಯಂ' ಎಂಬುದು ಪಂಪ, ರುದ್ರಭಟ್ಟಾದಿ ಕವಿಗಳೂ ಸ್ವತಃ ನಾಗ ವರ್ಮನೂ ೮.೮೬ ರಲ್ಲಿ ಪ್ರಯೋಗಿಸಿದ 'ಪರಿಚೆಯಂ' ಎಂಬ ಶಬ್ದವೇ ಆಗಿದ್ದು ಅದರ ಅರ್ಥ 'ಮುಂಗುರುಳನ್ನು ತಿದ್ದಲೂ' ಎಂದಾಗಿದೆ.

ಈ ಗದ್ಯಭಾಗದಿಂದ ಪರಿಚೆ ಶಬ್ದದ ಬಗ್ಗೆ ಒಂದು ನಿರ್ಣಯಕ್ಕೆ ಬರಬಹು ದೇನೊ! ಇಲ್ಲಿ ಪ್ರಯೋಗವಾಗಿರುವ ಪಾವಡೆ (<ಪ್ರಾವೃತ), ಮಜ್ಜನ (<ಮಾರ್ಜನ) ಸೆಜ್ಜೆ (<ಶಯ್ಯಾ), ಪ್ರಸಾದನ (<ಪ್ರಸಾಧನ), ಬೋಜನ (<ಭೋಜನ) ಎಂಬ ಶಬ್ದಗಳೆಲ್ಲ ತದ್ಭವವಾಗಿರುವಾಗ ಪರಿಚೆಯೆಂಬುದೂ ತದ್ಭವ ಶಬ್ದವಾಗಿದೆ ಎಂಬುದು.

ಸಂಸ್ಕೃತದಲ್ಲಿ ಪರೀಸಾರ, ಪರಿಸಾರ, ಪರಿಸರ್ಯಾ ಎಂಬಿತ್ಯಾದಿ ಶಬ್ದಗಳಿದ್ದು ಅವುಗಳಿಗೆಲ್ಲ ಎಲ್ಲೆಡೆ ಸುಳಿಯುವ, ಚಲಿಸುವ ಎಂಬುದು ಅರ್ಥ. ಹಾಗೆಯೇ 'ಪರುಷ' ಎಂಬ ಒಂದು ಶಬ್ದವಿದೆ. ಇದಕ್ಕೆ ಕಠಿಣ ಎಂಬ ಅರ್ಥದ ಜೊತೆಗೆ ಒಣಗೂದಲು ಎಂಬ ಅರ್ಥವೂ ಇದೆ. ಸಹಜವಾಗಿಯೇ ಕೂದಲು ಹಾರುತ್ತಿರುತ್ತದೆ. ಇನ್ನು ಒಣಗಿದ ಕೂದಲಾದರೆ ಹೇಳಬೇಕೆ? ಅವನ್ನು ಒಂದೆಡೆಗೆ ಬಾಗಿಸಿ ಕಟ್ಟಬೇಕಾಗುತ್ತದೆ. ಇಲ್ಲವೆ ಗಳಿಗೆ-ಗಳಿಗೆಗೆ ಸವರುತ್ತ, ನೇವರಿಸುತ್ತ, ತಿದ್ದುತ್ತ, ಅಂಟುತ್ತ ಇರಬೇಕು. ಇದನ್ನೇ ಪಂಪ ಆದಿಪುರಾಣದಲ್ಲಿ 'ರೂಕ್ಷಾಳಕಂಗಳನೋ ಸರಿಸುತ್ತಂ"[18] ಎಂದು ಹೇಳಿದ್ದಾನೆ.

ಹೀಗೆ ಪರೀಸಾರ, ಪರಿಸಾರ, ಪರಿಸರ್ಯಾ, ಪರುಷ ಎಂಬೆಲ್ಲ ಶಬ್ದಗಳಂತೆ ಪರಿಚಃ ಎಂಬುದೂ ಒಂದು. ಇದು ಸಂಸ್ಕೃತದ 'ಕಟ್ಯತೇ ಆತ್ಮಾನಾಮ್—ಕಟ (=ತನ್ನಿಂದ ತಾನೇ ಕಟ್ಟಲ್ಪಡುತ್ತದೆ) ಎಂಬಂತೆ. ಪರಿ—ಚೀಯತೇಇತಿ=ಪರಿಚಃ= ಸುತ್ತಲಿನಿಂದ ಸಂಗ್ರಹಿಸಿ ಕಟ್ಟಲ್ಪಡುತ್ತದೆ-ಎಂಬ ವ್ಯುತ್ಪತ್ತಿಯುಳ್ಳ ಶಬ್ದದ ತದ್ಭವ ರೂಪ (ಪರಿಚೆ) ವಾಗಿದ್ದು, ಚಂಚರೀಕ, ಭ್ರಮರಕ ಎಂಬ ಸಂಸ್ಕೃತ ಶಬ್ದಗಳ ಸಂವಾದಿ ರೂಪವಾಗಿದೆ ಮತ್ತು ಅದರ ಅರ್ಥ ಸುತ್ತಲೂ ಹಾರಾಡುವ ಕೂದಲು ಎಂದಾಗಿದೆ.

ಈ ಪರಿಚ ಶಬ್ದ ನಡುಗನ್ನಡ ಕಾಲದಲ್ಲಿ ಪರಿಚ > ಪರ್ಚ > ಪಚ್ಚ ಎಂಬ ರೂಪ ತಾಳಿರಬೇಕು—

"ಭ್ರಮರ್ದುಗೆನೆಯೊಳಿನಿದೊಡಲೊಳಗುಸಿರುತ್ತಮು ಸಿರಪಚ್ಚೆಯೊಳಿಂಗುಳಿ ರಸಂ..."[19].

---

18 ಆದಿಪುರಾಣ ೩.೩೦
19 ಉದ್ಭಟದೇವ ಚರಿತೆ ೩.೭

"ಚಿಲುಪಾಲೊಳೆಸೆವ ತವರಾಜ ಪನಿನೀರೊಳೊಡಗಲಿಸಿರ್ದ ಸಿರಪಚ್ಚೆ..."[20] ಪನ್ನೀರು, ಇಂಗುಳಿರಸ ಇತ್ಯಾದಿ ಕೂದಲಿಗೆ ಹಚ್ಚುವುದುಂಟಲ್ಲವೆ.

ಈ ಎಲ್ಲ ಆಧಾರಾಂಶಗಳಿಂದ ಪರಿಚೆ ಎಂದರೆ ಸುತ್ತಲೂ ಹಾರಾಡುವ ಮುಂಗುರುಳು ಎಂಬರ್ಥವೆಂಬುದರಲ್ಲಿ ಸಂದೇಹವಿಲ್ಲ.

—ಎಂ. ಮಾಧವ ಪೈ

---

20 ಮಲ್ಲಣಾರ್ಯನ ಭಾವ ಚಿಂತಾರತ್ನ ಸಂಗ್ರಹ ೩.೧೦

ಈ ಸಂಚಿಕೆಯ ಲೇಖಕರು

ಡಾ॥ ಸರಸ್ವತಿ ವಿಜಯಕುಮಾರ್	ಟೈಪ್ 3—23 ರೀಜನಲ್ ಕಾಲೇಜ್ ವಸತಿ ಗೃಹಗಳು, ಮಾನಸಗಂಗೋತ್ರಿ, ಮೈಸೂರು-570 006
ವಸಂತಕುಮಾರ್ ಪೆರ್ಲ	ಪ್ರೋಗ್ರಾಮ್ ಎಗ್ಸಿಕ್ಯುಟಿವ್ ಆಲ್ ಇಂಡಿಯಾ ರೇಡಿಯೋ ಮಂಗಳೂರು-575 004
ಎಂ. ಎಲ್. ಶಿವಶಂಕರ	ಉಪನಿರ್ದೇಶಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ, ಮೈಸೂರು-570 001
ಡಾ॥ ಎಂ. ಚಿದಾನಂದಮೂರ್ತಿ	6—ಎ 'ಮಿಂಚು' 11ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ವಿಜಯನಗರ 2ನೇ ಹಂತ, ಬೆಂಗಳೂರು-560 040
ರಾಮಚಂದ್ರದೇವ	
ಎಸ್. ಶಿವಣ್ಣ	ಸಂಪಾದಕರು ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056
ಎಂ. ಜಿ. ಮಂಜುನಾಥ	ಸಂಶೋಧನಾ ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056
ಶ್ರೀಮತಿ ಎಸ್. ಜಿ. ಪಾಟೀಲ್	ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ-580 003

ಶ್ರೀಮತಿ ಬಿ. ಜಿ. ಶ್ರೀ ಲಕ್ಷ್ಮೀ ಮತ್ತು ಸರಸ್ವತೀ ಕೆ. ಹೆಗಡೆ	ಸಂಸ್ಕೃತ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-560 056
ಪ್ರೊ. ವಸಂತಕುಮಾರಿ	ಇತಿಹಾಸ ವಿಭಾಗ ಮಹಾರಾಣಿ ಕಲಾ ಕಾಲೇಜು, ಮೈಸೂರು
ಡಾ॥ ಹಂಪ ನಾಗರಾಜಯ್ಯ	ಪ್ರಾಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು–560 056
ಎಂ. ಮಾಧವ ಪೈ	

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560 056